1952-53

ಸ್ಥಾಪನೆ : ೧೮೭೫

ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯು

ಶತಮಾನೋತ್ತರ ಬೆಳ್ಳಿ ಹಬ್ಬವ

ಪುಸ್ತಕ ಪ್ರದರ್ಶನ ೧೯೭೯

1952-53

ಶತಮಾನೋತ್ತರ ಬೆಳ್ಳಿ ಹಬ್ಬ

(ಏಪ್ರಿಲ್ ೧೯೭೯ ರಿಂದ)

ವರ್ಷ 1952

ಜೆ. ಚೆನ್ನಬಸಪ್ಪನವರು

(೧೮೩೩–೧೮೮೧)

ನಯ ಸಂಪುಟ

ಕನ್ನಡ ಪ್ರಾಥಮಿಕ ಶಿಕ್ಷಣ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚನ್ನಬಸಪ್ಪ ವೃತ್ತ, ರೊದ್ದರಸ್ತೆ, ಧಾರವಾಡ – ೮

ಲೇಖಗಳು

ತಿಂಗಳು	ವಿವರ	ಪುಟ
ಮೊದಲ ಗಣಿಕೆ	ಸಾರಾಂಡ ಕೇಂದ್ರದ ಗಂಡು ಮಕ್ಕಳ ಪ್ರೌಢಶಾಲೆಗೆ ಕಾರ್ಯದರ್ಶಿಗಳ ಲಿಖಿತ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು (ಬಿಕ್ಕಟ್ಟಿನಿಂದ ಬಿಡುಗಡೆ)	೯-೧೩
ಜೂಲೈ ಗಣಿಕೆ	ಶ್ರೀಗಂಧಲಲಿತ ಕಲಿಸುವ ಬಗೆಗಳು ಲೇಖಾಂಕ-(೩)	೧೨-೧೫
ಆಗಷ್ಟ ಗಣಿಕೆ	" ಲೇಖಾಂಕ-(೬)	೮-೯
ಸೆಪ್ಟೆಂಬರ ಗಣಿಕೆ	ಹಬ್ಬ-ಹರಿದಿನಗಳನ್ನು ಆಚರಿಸುವ ವಿಧಾನದ ಬಗೆಗಿನ ಲೇಖಾಂಕ-(೩)	೩-೬
ಅಕ್ಟೋಬರ ಗಣಿಕೆ	ಶ್ರೀಗಂಧಲಲಿತ್ಯಾಂದ ಮಾಡಿಸಲಾದ ಮೂರು ಗಣಿತದ ಪ್ರಶ್ನೆಪತ್ರಿಕೆಗಳು.	೧೨
ನವಂಬರ ಗಣಿಕೆ	ಕಾರ್ಯ ನಿರ್ವಹಿಸಿದ ರಾಜೀನಾಮೆಪತ್ರಗಳು	೧೦-೧೧
ಡಿಸೆಂಬರ ಗಣಿಕೆ	ಮಂಗಳಪ್ರಭಾ ಕಂಠೀಕರಣ	೮-೯
ಜನವರಿ ಗಣಿಕೆ	ನೇಮಕಾತಿಪತ್ರಗಳು ಜಿಲ್ಲಾಧಿಕಾರಿ ಕಛೇರಿಯಿಂದ ಬಿಡುಗಡೆಯಾದ ಮುಖ್ಯ ಸೈನ್ಯಾಧಿಕಾರಿ)	೮-೯
ಫೆಬ್ರುವರಿ ಗಣಿಕೆ	ವಿಂಡಿಯ ಔಷಧಾಲಯಗಳ ನಕಾಶೆ ಲೇಖಾಂಕ-(೧)	೯-೧೧

ಲೇಖಗಳು

ಅಂಗಳ್ಳು	ಲೇಖ	ಪುಟ
ಜೂನ ಗಣಿತ	ಸ್ಥಳಾಂತರದ ಕೇಂದ್ರದ ಗಂಡು ಮಕ್ಕಳ ಪ್ರೌಢಶಾಲೆಯ ಕಾರ್ಯಕ್ರಮ. ವಿದ್ಯಾರ್ಥಿಗಳು ಪಾಠಗಳು (ಚಿತ್ರದುರ್ಗ ವಿಮರ್ಶೆ)	೯-೧೩
ಜುಲೈ ಗಣಿತ	ಶ್ರೀಗುರುಲಿಂಗೇಶ್ವರ ಕಲಿಸುವ ಬಗೆಗಳು ಲೇಖಾಂಕ-(೫)	೧೨-೧೬
ಆಗಸ್ಟ್ ಗಣಿತ	〃 ಲೇಖಾಂಕ-(೬)	೮-೯
ಸೆಪ್ಟೆಂಬರ ಗಣಿತ	ಹುಬ್ಬಿ-ಹಾಲ್ಗೊಬಳ್ಳಿಯ ಉಪಾಧ್ಯಾಯರ ದಿನಾಚರಣೆಯಂದು ಲೇಖಾಂಕ-(೭)	೫-೬
ಅಕ್ಟೋಬರ ಗಣಿತ	ಶ್ರೀಗುರುಲಿಂಗೇಶ್ವರ ಪ್ರೌಢಶಾಲಾ ಮುಖ್ಯೋಪಾಧ್ಯಾಯರು ಮತ್ತು ಸಹಶಿಕ್ಷಕರ ಪರಿಚಯ.	೧೨
ನವಂಬರ ಗಣಿತ	ಕಾರ್ತಿಕ ನಿರ್ಜಲಪಟ್ಟಣ ರಾಷ್ಟ್ರೀಯ ಪ್ರಶಸ್ತಿಗೆ	೧೦-೧೧
ಡಿಸೆಂಬರ ಗಣಿತ	ಅಂಗಳ್ಳಲ್ಲಿ ಆಟೋಟ	೮-೯
ಜನವರಿ ಗಣಿತ	ಸೇವಾನಿವೃತ್ತರಾದ ಶಿಕ್ಷಕರಿಗೆ ಶ್ರೀ. ಬಿ.ಎಸ್. ಶಶಿಧರಪ್ಪನವರಿಗೆ ಬೀಳ್ಕೊಡುಗೆ (ಶ್ರೀಗುರುಲಿಂಗೇಶ್ವರ ಪ್ರೌಢಶಾಲೆ)	೮-೯
ಫೆಬ್ರುವರಿ ಗಣಿತ	ಪಂಡಿತ ಓಬಾರಾಲಾಲ ನೆಹರು ಲೇಖಾಂಕ-(೧)	೯-೧೦

లేఖగళు

ఆంగ్లపద్ధతి	లే ఖ.	మేలిబ
మూర్ధన్య గకార	పండిత ఉపాధ్యాయుల వేషధారణ గేయాంశ (ఖ)	ఖ-ఒ
లుప్తాక్షర గకార	కేంద్రీకృత మూర్ధన్య జ్యోతిష్ నిర్మాణ (విశేష శ్రేష్ఠ మూల్యార్థి)	౧౧-౧౩
లఘు గకార	మూలాంకోష్ఠ	ఎ-ఔ
ఠగమ్యు గకార	గం. మ. కరణ ప్రాణిజాతులుల్లేఖదల్లి శిష్ట-విశిష్ట-ముఖ్య మూల్యమండలిగ ఉష్ట్రపాత.	౧౪
నవీన్ గకార	శ్రీ మ. వి. ప్ర. గాంధీనగర నిర్మాణిగళు లంగ్రేక్రాంగద్ది (శ.ఇ.వి)	౪
ద్వీపవర్తి గకార	శిష్ట-శిష్టేతర కవుట్టలిద — ఉల్లేఖనీయ	౧౩
మూర్ధన్య గకార	బీళగు (శబ్ద) — శ. శి. ఉగ్రమత	౨
మేళ గకార	నవీన శిష్టర వర్గ — ఉల్లేఖనీయ	౧౩

ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು :
ಶ್ರೀ. ಎಂ. ಜಿ. ಹಂದ್ರಾಳ.

ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರವರು

—ಪಡಿಯಚ್ಚು "ಜಯಕರ್ನಾಟಕ"ದ ಕೃಪೆಯಿ

ವಾ. ಚ. ೪ ರೂಪಾಯಿ] ಜೂನ ೧೯೫೨ [ಬಿಡಿ ಸಂಚಿಕೆ ೬ ಆಣೆ

ಮುಂಬಯಿ ವಿದ್ಯಾಖಾತೆಯ ಪಠ್ಯ ಪುಸ್ತಕ ಸಮಿತಿಯಿಂದ ಮಂಜೂರಾಗಿ, ಈಗಾಗಲೇ ವಿಜಾಪುರ ಜಿಲ್ಲೆಯ ಮಾಧ್ಯಮಿಕ ಶಾಲೆಗಳಲ್ಲಿಯೂ, ಧಾರವಾಡ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿಯೂ ಉಪಯೋಗದಲ್ಲಿರುವ ಹಾಗೂ **ಕರ್ನಾಟಕ ವಿದ್ಯಾವರ್ಧಕ ಸಂಘ** ಧಾರವಾಡ ಇವರಿಂದ ಪಾರಿತೋಷಕ ಪಡೆದ ಗ್ರಂಥ.

ಮಹಾತ್ಮಾ ಗಾಂಧಿ

(ಮಹಾತ್ಮರ ಜೀವನ ಚರಿತ್ರೆ ಹಾಗೂ ವಿಚಾರ ಸಂಗ್ರಹ)

ದ್ವಿತೀಯ ಮುದ್ರಣ.

ಲೇಖಕರು:—**ಸ. ವೀ. ಹಂಜಿ,** ಎಂ. ಎ., ಬಿ. ಟಿ., ಡಿ. ಬಿ. ಈ.

೭೯ ವರ್ಷಗಳ ತ್ಯಾಗಪೂರ್ಣ, ತಪಸ್ಸಿನ ಹಾಗೂ ಸೇವಾಮಯ ಮಹಾನ್ ಜೀವನದ ಪ್ರಮಾಣ ಗ್ರಂಥ.

ಮಹಾತ್ಮರ ಸಮಗ್ರ ಜೀವನವನ್ನು ಸರಳ ಶೈಲಿಯಲ್ಲಿ ಚಿತ್ರಿಸುವ ಮೊದಲನೆಯ ಗ್ರಂಥ.

ಪ್ರೊ. **ಶಿ. ಶಿ. ಬಸವನಾಳ** ಅವರ ಮುನ್ನುಡಿ ಹಾಗೂ ಮಾನ್ಯ ಶ್ರೀ **ಆರ್. ಆರ್. ದಿವಾಕರ** ಅವರ ಅಭಿನಂದನೆಯೊಡನೆ **ಮಿನುಗುವ ಗ್ರಂಥ.**

ಪ್ರತಿಯೊಬ್ಬ ಕನ್ನಡಿಗನು ಅವಶ್ಯವಾಗಿ ಓದಬೇಕೆಂದು ಬಿನ್ನಹ.

ಕ್ರೌನ್ ಅ. ಪ. ಪುಟ. ೧೮೪೨೦೦

ಬೆಲೆ, ಉತ್ತಮ ಪ್ರತಿ. ರೂ ೨—೦—೦

ಸಾದಾ ಪ್ರತಿ ರೂ ೧—೮—೦ (ವಿದ್ಯಾರ್ಥಿಗಳ ಸಲುವಾಗಿ)

ಗ್ರಂಥಗಳು ಸಿಗುವ ವಿಳಾಸಃ -

ಎಸ್. ವ್ಹಿ. ಹಂಜಿ,

ಬಸವೇಶ್ವರ ಟ್ರೇನಿಂಗ ಕಾಲೇಜ, ಬಾಗಲಕೋಟ.

ಪುಟ ೨೬೦) **ಮೂಲ ಶಿಕ್ಷಣ** (ಬೆಲೆ: ೩-೦-೦

ಲೇಖಕರು:— **ಶ್ರೀ. ಮ. ಗು. ಹಂದ್ರಾಳ,** ಬಿ. ಎ., (ಆನರ್ಸ) ಬಿ. ಟಿ.

(ಪಿನ್ಸಿಪಾಲ, ಸರಕಾರಿ ಕ. ಗಂ. ಟ್ರೇ. ಕಾ. ಧಾರವಾಡ.)

ಮೂಲ ಶಿಕ್ಷಣದ ಬಗೆಗೆ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಹೊತ್ತಿಕೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ.

ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ.

ಶ್ರೀ ಕಳವಾಡಿ ಬುಕ್ ಡಿಪೋ, ಧಾರವಾಡ.

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಡಿ. ವ್ಹಿ. ಚಿಕ್ಕರಮನೆ, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ
ಪ್ರಧಾನ ಸಂಪಾದಕರು : ಶ್ರೀ. ಎಂ. ಜಿ. ಹಂದ್ರಾಳ ಬಿ.ಎ.(ಆನರ್ಸ)ಬಿ. ಟಿ., ಡಿ. ಪಿ. ಇಡಿ;ಡಿ. ಬಿ. ಇ
ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಸಹಸಂಪಾದಕರು:

ಶ್ರೀಯಮುನಾಬಾಯಿ ನಾಡಕರ್ಣಿ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ಕಟ್ಟಿ, ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೨	ಜೂನ ೧೯೫೨	ಸಂಚಿಕೆ

ವಿಷಯ

ಪ ರಿ ವಿ ಡಿ

ಪು

೧. ಪ್ರಾಥಮಿಕ ಶಿಕ್ಷಣದ ಬಗೆಗೆ ಚಿಕ್ಕ ಹಳ್ಳಿಯವರ ಆಸ್ಥೆ ....
೨. ಸಂಪಾದಕೀಯ ....
೩. ಶಿಕ್ಷಣದಲ್ಲಿ ಕೌಟುಂಬಿಕ ಜೀವನದ ಸ್ಥಾನ – ಶ್ರೀ. ನೀ. ರೇ. ಹಿರೇಮಠ ....
೪. ಪರೀಕ್ಷೆಯ ಪಾಠಗಳು – ಶ್ರೀಯುತ ಶಿಂತ್ರಿ ಬಸಪ್ಪನವರು ....
೫. ಕನ್ನಡಿಗರು ಒಗ್ಗೂಡಿ ದುಡಿಯಬೇಕು (ಅಧ್ಯಕ್ಷೆಯ ಭಾಷಣ) ಶ್ರೀ. ಶಿ. ಚ. ನಂದೀಮಠ ೧
೬. ಶಾಂತಿಕ ಶಿಕ್ಷಣ (ಲೇಖಾಂಕ ೧) – ಶ್ರೀ. ಯಶವಂತ ವೆಂಕಟೇಶ ಜಾವಡೇಕರ ೧
೭. ಬಿಡುವಿನ ಸದುಪಯೋಗ – ಶ್ರೀ. ಡಿ. ವ್ಹಿ. ಚಿಕ್ಕರಮನೆ ೨
೮. ಸಮಾಜ ಶಿಕ್ಷಣ – ಡಾ|| ವ್ಹಿ. ಕೆ. ಜವಳಿ ೨

ಪ್ರಾಥಮಿಕ ಶಿಕ್ಷಣದ ಬಗೆಗೆ ಚಿಕ್ಕ ಹಳ್ಳಿಯವರ ಆಸ್ಥೆ

(ಎಡ್ಮಿನಿಸ್ಟೆಟಿವ್ ಆಫೀಸರ, ಡಿ. ಸ್ಕೂ. ಬೋರ್ಡ, ಧಾರವಾಡ ಇವರಿಂದ)

ಪ್ರಾಥಮಿಕ ಶಿಕ್ಷಣ ಪ್ರಸಾರದಲ್ಲಿ ಹಳ್ಳಿಗರು ಸರಕಾರಕ್ಕೆ ಸಹಾಯ ಸಲ್ಲಿಸಿ, ಈ ಸಂಬಂಧದಲ್ಲಿ ಸರಕಾರದ ಧೋರಣೆಯನ್ನು ಯಶಸ್ವಿಯಾಗಿ ಮಾಡಲು ಹೇಗೆ ಸಹಾಯ ಮಾಡಬಲ್ಲರೆಂಬ ಬಗ್ಗೆ ಒಂದು ಅನುಕರಣೀಯ ಮಾದರಿಯನ್ನು ಧಾರವಾಡ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಶಡಗರವಳ್ಳಿ ಗ್ರಾಮದ ನಿವಾಸಿಗಳು ತೋರಿಸಿ ಕೊಟ್ಟಿದ್ದಾರೆ. ಅವರಂತೆ ಉಳಿದ ಹಳ್ಳಿಗರು ಸಹ ಮುಂದೆ ಬಂದು ಕಾರ್ಯ ಮಾಡಿದಲ್ಲಿ ಭಾರತದ ಭಾವೀ ನಾಗರಿಕರ ಉದ್ಧಾರವಾಗುವದರಲ್ಲಿ ಸಂದೇಹವಿಲ್ಲ.

ಶಡಗರವಳ್ಳಿಯು ಸುಮಾರು ೫೦೦ ಜನಸಂಖ್ಯೆ ಇಪ್ಪ ಒಂದು ಚಿಕ್ಕ ಹಳ್ಳಿಯಾಗಿದ್ದು ತೀರ ಹಿಂದುಳಿದ ಕ್ಷೇತ್ರದಲ್ಲಿದೆ. ಅಲ್ಲಿ ಒಂದು ಖಾಸಗಿ ಪ್ರಾಥಮಿಕ ಶಾಲೆಯಿದ್ದು ಶಿಕ್ಷಕರು (ಒಬ್ಬರು) ಪ್ರಾ. ಶಾ. ಪ್ರ. ಪರೀಕ್ಷೆ ಪಾಸಾದವರಿರುವರಲ್ಲದೆ ಶಾಲೆಯನ್ನು ಉತ್ತಮ ರೀತಿಯಿಂದ ನಡೆಯಿಸುತ್ತಿರುವರು. ಹಳ್ಳಿಗರೊಡನೆ ಶಿಕ್ಷಕರ ಸಹಕಾರವು ಅನುಕರಣೀಯವಾಗಿದ್ದು ಶಿಕ್ಷಕರ ಪ್ರತಿಷ್ಠೆಯೂ ಜನ್ನಾಗಿದೆ ಹಳ್ಳಿಗರಾದರೂ ತಮ್ಮ ಹಳ್ಳಿಯ ಸುಧಾರಣೆಯ ಬಗ್ಗೆ ಹಾಗು ತಮ್ಮ ಮಕ್ಕಳ ಶಿಕ್ಷಣದ ಬಗೆಗೆ ತುಂಬಾ ಆಸ್ಥೆಯುಳ್ಳವರಾಗಿದ್ದಾರೆ.

ಈ ಹಳ್ಳಿಯ ನಿವಾಸಿಗಳು ಪರಸ್ಪರ ಸಹಾಯ, ಸಹಕಾರಗಳಿಂದ ಒಂದು ದೇವಾಲಯವನ್ನೂ ಹಾಗೂ ಒಂದು ಗರಡೀಮನೆಯನ್ನೂ ಕಟ್ಟಿರುವರಲ್ಲದೆ, ದೇವಾಲಯದ ಪಕ್ಕದಲ್ಲಿಯೇ ಮೂರು ಕೋಣೆಗಳುಳ್ಳ ಒಂದು ಶಾಲಾಕಟ್ಟಡವನ್ನು ಕಟ್ಟಿದ್ದಾರೆ. ಈ ಶಾಲಾಕಟ್ಟಡಕ್ಕೆ ಸುಮಾರು ರೂ. ೫೦೦೦/- ವೆಚ್ಚ ತಗಲಿದ್ದು ಎಲ್ಲ ವೆಚ್ಚವನ್ನೂ ಊರಜನರೇ ವಂತಿಗೆ . ಕಟ್ಟಡ ಕಟ್ಟುವ ಕೆಲಸದಲ್ಲಿ ಊರಲ್ಲಿಯ ಪ್ರತಿಯೊಂದು ಮನೆತನದವರು ತನು, ಮನ, ಧನದಿಂದ ಸಹಾಯ ಮಾಡಿರುವರಲ್ಲದೆ ಶಿಕ್ಷಕರು ಹಾಗೂ ಅವರ ಕುಟುಂಬದವರು ಸಹ ಸ್ವತಃ ಅನೇಕ ದೈಹಿಕ ಶ್ರಮದ ಕೆಲಸಗಳನ್ನು ಮಾಡಿರುತ್ತಾರೆ. ಇದಲ್ಲದೆ ಶಾಲೆಯಲ್ಲಿ ಒಂದು ವಾಚನಾಲಯವನ್ನು ಸ್ಥಾಪಿಸಲಾಗಿದ್ದು ಅದರ ಲಾಭವನ್ನು ವಿದ್ಯಾರ್ಥಿಗಳೂ ಹಾಗೂ ಇತರರೂ ಪಡೆಯುತ್ತಿರುವರು.

ಸದರ ಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಶ್ರೀ. ರಾ. ರು. ಕುಪ್ಪಸದ, ಎ. ಓ ಡಿ. ಎಸ್ ಬಿ. ಧಾರವಾಡ, ಇವರ ಹಸ್ತದಿಂದ ದಿನಾಂಕ ೨-೬-೩೨ ರಂದು ಜರುಗಿತು. ಆಗ ಊರವರು ಹಾಗು ಶಿಕ್ಷಕರು ತಮ್ಮ ಹಳ್ಳಿಯ ಏಳ್ಗೆಗೆ ಮತ್ತು ತಮ್ಮ ಮಕ್ಕಳ ಶಿಕ್ಷಣದ ಬಗೆಗೆ ಎಷ್ಟೊಂದು ಆಸ್ಥೆಯುಳ್ಳವರಾಗಿದ್ದಾರೆಂಬುದನ್ನು ನೆರೆದ ಜನರ ನಿದರ್ಶನಕ್ಕೆ ಬಂದಿತು. ಈ ಹಳ್ಳಿಯು ಕಳೆದ ಕೆಲವು ವರ್ಷಗಳಿಂದ ಸಾಧಿಸುತ್ತ ಬಂದ ಪ್ರಗತಿಯನ್ನು ತಿಳಿದು ಎಲ್ಲರಿಗೂ ಆತ್ಯಾನಂದವಾಯಿತು. ಬೇರೆಯವರ ಪ್ರೇರಣೆ ಅಥವಾ ಮಾರ್ಗದರ್ಶನವಿಲ್ಲದೆ ಈ ಹಳ್ಳಿಯವರು ಸ್ವಯಂಸ್ಫೂರ್ತಿಯಿಂದ ಮಾಡಿದ ಈ ಸಾಹಸದ ಕೆಲಸವನ್ನು ನೋಡಿ ನೆರೆದವರೆಲ್ಲರು ಆಶ್ಚರ್ಯಪಡಬೇಕಾಗಿದೆ.

ಶಾಲೆಯ ಉದ್ಘಾಟನೆಯ ಸಮಾರಂಭದಲ್ಲಿ ಶಾಲೆಯ ಮಕ್ಕಳು ಮಾಡಿ ತೋರಿಸಿದ ಶಾರೀರಿಕ ಜಟುವಟಿಕೆಗಳು, ಅನುಕರಣಗಳು, ಹಾಡುಗಳು, ಮುಂ. ಉತ್ತಮ ತರಗತಿಯವಾಗಿದ್ದವು. ಶಿಕ್ಷಕರು ಶಿಕ್ಷಣ ಕಲೆಯಲ್ಲಿಯಷ್ಟೇ ಅಲ್ಲದೆ ಊದುವದು, ಬಾರಿಸುವದು, ಹಾಡುವದು, ಮುಂ. ಲಲಿತ ಕಲೆಗಳಲ್ಲಿ ಸಹ ಸಾಕಷ್ಟು ಪ್ರವೀಣರಿದ್ದು ಆ ಕಲೆಗಳನ್ನು ಕಲಿಯ ಬಯಸುವವರಿಗೆ ಸ್ವತಃ ಶಿಕ್ಷಣವನ್ನು ಕೊಡುತ್ತಿರುವರು.

ಹೀಗೆ ಒಂದು ತೀರ ಚಿಕ್ಕ ಹಳ್ಳಿಯ ನಿವಾಸಿಗಳು ಹಾಕಿಕೊಟ್ಟ ಮಾದರಿಯನ್ನು ಉಳಿದ ಹಳ್ಳಿಯವರೂ ಅನುಕರಣ ಮಾಡಲು ಮುಂದೆ ಬಂದರೆ ಸರಕಾರವು ಪ್ರಾಥಮಿಕ ಶಿಕ್ಷಣದ ಸಂಬಂಧದಲ್ಲಿ ಸಾಧಿಸಬೇಕೆನ್ನುವ ಗುರಿಯನ್ನು ಮುಟ್ಟುವದು ಅಷ್ಟೊಂದು ಕಠಿಣವಾಗಲಿಕ್ಕಿಲ್ಲ. ಆದುದರಿಂದ ಉಳಿದ ಹಳ್ಳಿಗರು ಶಡಗರವಳ್ಳಿಯ ನಿವಾಸಿಗಳ ಈ ಉದಾಹರಣೆಯನ್ನು ಅನುಕರಿಸಿ ತಮ್ಮ ಹಳ್ಳಿಗಳ ಹಾಗು ತಮ್ಮ ಮಕ್ಕಳ ಶಿಕ್ಷಣದ ಏಳ್ಗೆಗಾಗಿ ಪ್ರಯತ್ನಿಸುವರೆಂದು ಆಶಿಸಲಾಗಿದೆ.

ಸಂಪಾದಕೀಯ

ನಮ್ಮ ಹೊಸ ವರುಷ

ಕನ್ನಡ ಪ್ರಾಥಮಿಕ ಶಿಕ್ಷಣವು ತನ್ನ ಆಯುಷ್ಯದ ೬೧ ವರುಷಗಳನ್ನು ಪೂರ್ತಿಗೊಳಿಸಿ ೬೨ನೆಯ ವರುಷದಲ್ಲಿ ಇಂದು ಹೆಜ್ಜೆಯಿಡುತ್ತಿದೆ. ಗತಿಸಿ ಹೋದ ಈ ೬೧ ವರ್ಷಗಳ ಅದರ ಜೀವನದ ಸಂಕ್ಷಿಪ್ತ ವಿಮರ್ಶೆಯನ್ನು ಪರಾಮರ್ಶಿಸಿದರೆ ಅದು ಪ್ರಾಥಮಿಕ ಶಿಕ್ಷಣದ ವಿವಿಧ ಅಂಗಗಳ ವಿಸ್ತರಣದ ಬಗೆಗೆ, ತನ್ಮೂಲಕ ಕನ್ನಡ ಸಂಸ್ಕೃತಿಯ ಏಳ್ಗೆಯ ಬಗೆಗೆ ಗೈದ ಕಾರ್ಯದ ನೆನವು ಬರದಿರದಾರದು.

೧೮೬೬ನೆಯ ಮೇ ತಿಂಗಳು ಬೆಳಗಾಂವಿಯಲ್ಲಿ 'ಮಿತ್ರ' ಪತ್ರಿಕೆ' ಎಂಬ ಅಭಿದಾನದಿಂದ ಜನ್ಮತಾಳಿದ ಈ ಪತ್ರಿಕೆಯು ೧೮೭೭ನೆಯ ಅಕ್ಟೋಬರದಿಂದ 'ಶಾಲಾ ಪತ್ರಿಕೆ' ಎಂಬ ಹೊಸ ಹೆಸರನ್ನು ಧರಿಸಿತು. ಮುಂದೆ ಅದೇ ವರ್ಷ ಡಿಸೆಂಬರದಲ್ಲಿ ತನ್ನ ಪ್ರಕಾಶನ ಸ್ಥಳವನ್ನು ಬೆಳಗಾಂವಿಯಿಂದ ಧಾರವಾಡಕ್ಕೆ ಬದಲಿಸಿತು. ೧೯೨೯ನೆಯ ಎಪ್ರಿಲ ತಿಂಗಳಲ್ಲಿ 'ಕನ್ನಡ ಶಿಕ್ಷಿಕೆ'ಯು ಇದರಲ್ಲಿ ವಿಲೀನವಾಯಿತು. ಅಂದಿನಿಂದ ಇದಕ್ಕೆ 'ಪ್ರಾಥಮಿಕ ಶಿಕ್ಷಣ'ವೆಂಬ ಈಗಿನ ಹೆಸರನ್ನು ಇರಿಸಲಾಯಿತು. ಜನ್ಮತಾಳಿದಂದಿನಿಂದ ನಾಲ್ಕು ವರ್ಷಗಳ ವರೆಗೆ, ಅಂದರೆ, ೧೮೭೦ರ ವರೆಗೆ ಇದು ಲಿಥೋ ಪದ್ಧತಿಯಿಂದ ಕೈಯಿಂದ ಬರೆಯಲ್ಪಟ್ಟು ಮುದ್ರಿತವಾಗುತ್ತಿತ್ತು. ೧೮೭೦ನೆಯ ಅಕ್ಟೋಬರದಿಂದ ಈಗಿನಂತೆ ಮುದ್ರಿತವಾಗ ತೊಡಗಿತು. ಇದನ್ನು ಕಾರ್ಯಾಲಯದಲ್ಲಿಯ ಹಳೆಯ ಕಾಗದ-ಪತ್ರಗಳ ಆಧಾರದಿಂದ ದೊರಕಬಹುದಾದ ಅದರ ಈ ಗತ-ಚರಿತ್ರೆಯನ್ನು ಪರೀಶಿಲಿಸಿದರೆ ಅದರ ಪ್ರಾಚೀನತೆ, ಕಾರ್ಯ ವಿಸ್ತೃತಿ, ಸೇವಾತತ್ಪರತೆಗಳು ವಾಚಕರಿಗೆ ಹೊಳೆಯದೆ ಇರವು.

ವ್ಯಕ್ತಿಯ ಜೀವನಕ್ಕಿಂತ ಪತ್ರಿಕೆಯ ಜೀವನದಲ್ಲಿ ಆತಂಕ-ವಿತಂಕಗಳು, ತೊಡಕು-ತೊಂದರೆಗಳು, ಆಪತ್ತು-ವಿಪತ್ತುಗಳು ಅಧಿಕವೆಂದು ಬೇರೆ ಹೇಳಬೇಕಿಲ್ಲ. ಕಾಲ ಪರಿಸ್ಥಿತಿ, ಆರ್ಥಿಕ ದುರವಸ್ಥೆ, ಪ್ರಪಂಚವನ್ನೇ ಪಲ್ಲಟಿಸುವ ಆಕಸ್ಮಿಕವಾದ ದುರ್ಧರ ಘಟನೆ ಮೊದಲಾದುವು ಸಾಮಾನ್ಯವಾಗಿ ಪತ್ರಿಕೆಯ ಆಗು-ಹೋಗುಗಳ ಮೇಲೆ ಪರಿಣಾಮವನ್ನುಂಟುಮಾಡದೆ ಬಿಡವು. ಒಂದು ಶತಮಾನಕ್ಕೆ ಕೇವಲ ಒಂಬತ್ತು ವರುಷ ಕಡಿಮೆ ಇರುವಷ್ಟು ಸುದೀರ್ಘಾವಧಿಯಲ್ಲಂತೂ ಅನೇಕ ಪ್ರಕಾರದ ಆಪತ್ತಿನ ಸಮಯಗಳು, ನಿಸರ್ಗ ಕೋಪಗಳು, ಅಘಟಿತ ಘಟನೆಗಳು ಸಹ ಬಂದಿರುವುದು ಸಹಜ. 'ಪ್ರಾಥಮಿಕ ಶಿಕ್ಷಣ'ವು ಇಂತಹ ಹಲವಾರು ದುರ್ಗಮ ಪ್ರಸಂಗಗಳನ್ನು ಎದುರಿಸಿ, ಒಮ್ಮೆ ಸಣ್ಣದಾಗಿ, ಇನ್ನೊಮ್ಮೆ ದೊಡ್ಡದಾಗಿ ಒಮ್ಮೆ ಪರಿಶೋಭಾಯಮಾನವಾಗಿ ಮತ್ತೊಮ್ಮೆ ನಿರಾಭರಣ ಸೌಂದರ್ಯದಿಂದ ಮಾತ್ರ ಒಡಗೂಡಿ ಸಿಹಿ-ಕಹಿ ಮಿಶ್ರಿತ ಕಾಲ ಪ್ರವಾಹವನ್ನು ಈಸಿ ಯಶಸ್ವಿಯಾಗಿ ದಾಟಿ ಬಂದಿದೆ; ತನ್ನತನವನ್ನು ಕಾಯ್ದುಕೊಂಡಿದೆ; ಸೇವಾ ಬುದ್ಧಿಯನ್ನು ಉಳಿಸಿ, ಬೆಳಿಸಿಕೊಂಡು ಬಂದಿದೆ. ಪ್ರಾಥಮಿಕ ಶಿಕ್ಷಣದಲ್ಲಿ ತನ್ನ ಅಖಿಲ ಸೇವೆಗೈವ ಭಾಗ್ಯ

ವನ್ನು ಕಾಯ್ದುಕೊಂಡಿದೆ. ಈ ಅದರ ಎಲ್ಲ ಶ್ರೇಯಸ್ಸು ಶಿಕ್ಷಣಾಧಿಕಾರಿಗಳಿಗೆ ಹಿತಚಿಂತಕರಿಗೆ, ಶಿಕ್ಷಣಾಭಿಮಾನಿಗಳಲ್ಲಿ ಚಂದಾದಾರರಿಗೆ ಸಲ್ಲುವುದೆಂದು ಹೇಳಬಯಸುತ್ತೇವೆ. ಈ ಎಲ್ಲ ಮಹನೀಯರು ನಮ್ಮ ಪತ್ರಿಕೆಯನ್ನು ತೋಳ ತೊಟ್ಟಲನ್ನಾಗಿ ಮಾಡಿಕೊಂಡಿರದಿದ್ದರೆ ಇದು ಇಷ್ಟೊಂದು ದೀರ್ಘಕಾಲ ಬಾಳಿ ಬದಕುವದು ಅಸಂಭವ ವಾಗುತ್ತಿತ್ತು. ಆದುದರಿಂದ ತನ್ನ ಈ ೬೨ ನೆಯ ಜಯಂತಿಯ ಶುಭ ಸಮಯದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರೆಲ್ಲರಿಗೆ, ಅಭಿಮಾನಿಗಳೆಲ್ಲರಿಗೆ ಹಾಗೂ ಹಿತಾಭಿಲಾಷಿಗಳಿಗೆ ಇನ್ನುಳಿದ ವಾಚಕರಿಗೆ ತನ್ನಧನ್ಯತೆಗಳನ್ನು ಸಲ್ಲಿಸುತ್ತದೆ. ಮುಂದೆಯೂ ಇದೇ ತರಹದ ಮಮತೆ-ಮಮಕಾರಗಳನ್ನು, ಸಹೃದಯತೆಯನ್ನು, ಔದಾರ್ಯವನ್ನು ಅಪೇಕ್ಷಿಸುತ್ತದೆ.

ಇದೇ ಸುಸ್ಸಂಗದಲ್ಲಿ ಭವಿಷತ್ತಿನಲ್ಲಿ ತಾನು ಇಟ್ಟುಕೊಂಡ ಧ್ಯೇಯ-ಧೋರಣೆಗಳನ್ನು, ಆಶೆ-ಆಕಾಂಕ್ಷೆಗಳನ್ನು ಸ್ಪಷ್ಟಪಡಿಸಲೆಳಸುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ, ವಿಶೇಷವಾಗಿ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿರುವ ಯಾವತ್ತು ಜನರಿಗೆ— ಪ್ರಾಥಮಿಕ ಶಾಲೆಯ ಬಾಲ-ಬಾಲಿಕೆಯರನ್ನು ಮೊದಲು ಮಾಡಿಕೊಂಡು ಸಕಲರಿಗೆ–ಉಪಯುಕ್ತವಾಗುವ ರೀತಿಯಲ್ಲಿ ತನ್ನ ವಿಷಯಾಂಗಗಳನ್ನು ರೂಪಿಸಿಗೊಳ್ಳಲಿದೆ. ಪ್ರಾಥಮಿಕ ಶಿಕ್ಷಣವು ಇಡೀ ಶಿಕ್ಷಣದ ತಳಹದಿಯೆಂಬುದನ್ನು, ಪ್ರಾಥಮಿಕ ಶಿಕ್ಷಕರು ರಾಷ್ಟ್ರದ ಭವಿಷತ್ತನ್ನು ರೂಪಿಸತಕ್ಕ ಕುಶಲ ಶಿಲ್ಪಿಗರೆಂಬುದನ್ನೂ ಮನದಲ್ಲಿಟ್ಟುಕೊಂಡು ಆ ಕೆಲಸದಲ್ಲಿ ಬಾಲಕರಿಗೆ, ಪಾಲಕರಿಗೆ, ಶಿಕ್ಷಕರಿಗೆ–ಎಲ್ಲರಿಗೂ ಪೋಷಕವಾಗುವ ದಿಶೆಯಲ್ಲಿ ಸಾಗಬೇಕೆಂದು ಇಚ್ಛಿಸುತ್ತದೆ. ಹೊಸ ಶಿಕ್ಷಣ, ಸಮಾಜ ಶಿಕ್ಷಣ, ಸಕ್ತಿ ಶಿಕ್ಷಣ, ಶಾರೀರಿಕ ಶಿಕ್ಷಣ, ಮೊದಲಾದವುಗಳನ್ನು ಕುರಿತು ತಜ್ಞರ ಲೇಖನಗಳನ್ನು, ಕವನಗಳನ್ನು, ಪಾಠದ ಟಿಪ್ಪಣಿಗಳನ್ನು ಒಳಗೊಳ್ಳಲಿದೆ. ಹೊಸ ಹೊಸ ಪ್ರಯೋಗಗಳನ್ನು ಪ್ರಾಥಮಿಕ ಶಿಕ್ಷಣದಲ್ಲಿ ಮಾಡಿ ಅವುಗಳನ್ನು ಚರ್ಚಿಸಬೇಕೆಂಬ ಬಲವಾದ ಆಶೆಯೂ ಇದೆ.

ಈ ಎಲ್ಲ ಆಶೆ-ಆಕಾಂಕ್ಷೆಗಳು ಈಡೇರಬೇಕಾದರೆ ವಾಚಕರ, ಚಂದಾದಾರರ, ಹಿತಚಿಂತಕರ, ಶಿಕ್ಷಣಾಧಿಕಾರಿಗಳ, ಶಿಕ್ಷಕರ, ಶಿಕ್ಷಕ-ವಿದ್ಯಾರ್ಥಿಗಳ, ಶಿಕ್ಷಣಾಭಿಮಾನಿಗಳ, ಹಾರ್ದಿಕ, ಸಕ್ರಿಯ ನೆರವು ಅವಶ್ಯ. ಇವರೆಲ್ಲರ ವಾತ್ಸಲ್ಯ, ಸಹಕಾರ, ಸಹಾನುಭೂತಿಗಳು ಒಂದಾಗಿ ಬರಲಿ; ಪತ್ರಿಕೆಯ ಮುಂಬರುವ ಜೀವನವು ಹೆಚ್ಚು ಸುಂದರವಾಗಿ, ಸುಗಮವಾಗಿ ಸಾಗಿ ಪ್ರಾಥಮಿಕ ಶಿಕ್ಷಣವು ಇದರ ಮೂಲಕ ಹೆಚ್ಚಿಗೆ ಮುನ್ನಡೆಯಲೆಂದು ಹಾರೈಸುವೆವು.

ಕಂಬನಿ

ದಿನಾಂಕ ೧೩–೨–೧೯೫೩ ನೇ ದಿನ ಪ್ರೊಫೆಸರ ಎಂ. ಎಸ್. ಚಂದಾವರಕರ ಇವರು ಸ್ವರ್ಗಸ್ಥರಾದ ಸುದ್ದಿಯು ಕನ್ನಡಿಗರಿಗೆ ತುಂಬಿಬಾರದ ಹಾನಿಯನ್ನುಂಟುಮಾಡಿದೆ. ಇವರು ಬೆಳಗಾವಿಯ ಎಸ್. ಟಿ. ಕಾಲೇಜದಲ್ಲಿ ಪ್ರೊಫೆಸರರಾಗಿದ್ದರು. ೩೦ ವರುಷಗಳ ದೀರ್ಘಾವಧಿಯ ಸೇವೆಯನ್ನು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿ ಇದೀಗ ನಿವೃತ್ತಿ ಹೊಂದಿದ್ದರು.

ಹಾಯಸ್ಕೂಲಿನಲ್ಲಿ ಶಿಕ್ಷಕರಾಗಿ ಹಾಗೂ ಕಾಲೇಜದಲ್ಲಿ ಪ್ರಾಧ್ಯಾಪಕರಾಗಿ ಕೆಲಸಮಾಡುತ್ತಿರುವಾಗ ಅವರು ತೋರಿಸಿದ ಅಮಿತ ಉತ್ಸಾಹ, ಕರ್ತವ್ಯ ನಿಷ್ಠೆ, ಅಪರಿಮಿತ ಸಂಘಟನಾಶಕ್ತಿ, ಇವು ಕಣ್ಮುಂದೆ ಕಟ್ಟಿವೆ. ಅವರು ನಿಷ್ಠಾವಂತ ಸ್ಕೌಟ ಆಗಿದ್ದರು; ಮೆಟ್ರಿಗೆಯ ಮೆಡಲ್‌ನ್ನೂ ಗಳಿಸಿದ್ದರು. ಅವರ ವಿವಿಧ ವಿಶಿಷ್ಟ ಸಾಧನ–ಸಿದ್ಧಿಗಳಲ್ಲಿ ಕರ್ನಲ್ ಡಿಗ್ಬಿ ಬೆಸ್ಟ ಇವರ ನೇತೃತ್ವದಲ್ಲಿ ಕಾರವಾರ ದಲ್ಲಿ ಸಂಘಟಿಸಲ್ಪಟ್ಟ ಸಮುದ್ರ ಸ್ಕೌಟರ ಕ್ಯಾಂಪು (Sea scouter camp)ಒಂದು. ಕಾರವಾರದಲ್ಲಿ ಕಟ್ಟಲ್ಪಟ್ಟ ಸ್ಕೌಟ ಸದನವು (Scout Building) ಅವರ ನಿಷ್ಕಾರ್ಥ ಸೇವೆಯ ದ್ಯೋತಕವಾಗಿ ನಿಂತಿದೆ.

ಬೆಳಗಾವಿಯ ಎಸ್. ಟಿ. ಕಾಲೇಜದಲ್ಲಿ ವಿಜ್ಞಾನವಿಜ್ಞಾನದ ಉಪನ್ಯಾಸಗಳಿಗಾಗಿ ಅವರು ಹೆಸರಾಗಿದ್ದರು, ಪ್ರಾಯೋಗಿಕ ವಿಜ್ಞಾನಶಾಸ್ತ್ರದ ಪ್ರಾಧ್ಯಾಪಕರೆಂದು ನಿಷ್ಣ ವಿದ್ಯಾಲಯದಿಂದ ಮಾನ್ಯತೆ ಪಡೆದಿದ್ದರು. ದೃಕ್ ಶಿಕ್ಷಣ (Visual Instruction) ವಿಷಯದ ಅಭಿವೃದ್ಧಿಗೆ ಅವರು ಕಾರಣರಾಗಿದ್ದರು. ಅವರ ವಿಯೋಗದಿಂದ ಕರ್ನಾಟಕದ ತುಂಬಾ ಹರಡಿಕೊಳ್ಳಲ್ಪಟ್ಟ ಅವರ ಶಿಷ್ಯವೃಂದಕ್ಕೆ ಮಿತ್ರಮಂಡಳಿಗೆ, ಮನೆಯಾರೆ ಮೆಚ್ಚಿದ ಸುಹೃದಯಿಗಳಿಗೆ ಅಪರಿಮಿತ ದುಃಖವಾಗಿದೆ. ಕರ್ನಾಟಕವು ಶಿಕ್ಷಣ ತಜ್ಞರೊಬ್ಬರನ್ನು ಕಳೆದುಕೊಂಡಂತಾಗಿದೆ. ದುಃಖಸಾಗರದಲ್ಲಿ ಸೇರಿದ ಅವರ ಕುಟುಂಬದವರಿಗೆ ನಮ್ಮ ಪಾಲನ್ನು ಮೀಸಲಿರಿಸಿದ್ದೇವೆ. ಮೃತರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನೀಯಲಿ!

ಶಿಕ್ಷಣದಲ್ಲಿ ಕೌಟುಂಬಿಕ ಜೀವನದ ಸ್ಥಾನ

(ತಾತ್ವಿಕ ವಿವೇಚನೆ)

ಲೇಖಕರು:— ಶ್ರೀ. ನೀ. ರೇ. ಹಿರೇಮಠ, ಪ್ರಾಧ್ಯಾಪಕ, ಪದವೀಧರರ ಜೀವನ ಶಿಕ್ಷಣ ಕೇಂದ್ರ, ಧಾರವಾಡ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

ಕೌಟುಂಬಿಕ ಜೀವನದ ಅವಶ್ಯಕತೆ

೧) ಶಿಕ್ಷಣದ ಉದ್ದೇಶ

ಶಿಕ್ಷಣಕ್ಕೆ ಹಲವು ಉದ್ದೇಶಗಳನ್ನು ಎಂದಿನಿಂದಲೂ ಕೇಳಲಾಗುತ್ತಿದೆ. ನಾಗರಿಕತೆಗಾಗಿ ಶಿಕ್ಷಣ, ಸಂಸ್ಕೃತಿಗಾಗಿ ಶಿಕ್ಷಣ ವ್ಯಕ್ತಿವಿಕಾಸಕ್ಕಾಗಿ ಶಿಕ್ಷಣ, ಪ್ರಜಾಪ್ರಭುತ್ವ, ಕ್ಕಾಗಿ ಶಿಕ್ಷಣ, ಸಾಮಾಜಿಕ ಜೀವನಕ್ಕಾಗಿ ಶಿಕ್ಷಣ,ಎಂದು ಅನೇಕ ವಿಧವಾಗಿ ಪೌರಾತ್ಯ ಹಾಗೂ ಪಾಶ್ಚಿಮಾತ್ಯ ಶಿಕ್ಷಣ-ತಜ್ಞರು ಪ್ರತಿಪಾದಿಸುತ್ತ ಬಂದಿದ್ದಾರೆ. ಇನ್ನೆಲ್ಲವುಗಳಲ್ಲಿ ಸೂತ್ರರೂಪವಾಗಿ ಕಂಡು ಬರುವದೆಂದರೆ ಸಾಮಾಜಿಕ ವ್ಯಕ್ತಿ-ವಿಕಾಸ, ಸಾಮಾಜಿಕ ಜೀವನದಲ್ಲಿ ಭಾಗವಹಿಸಲು ಕಲಿಸುವದೇ ಶಿಕ್ಷಣದ ಮುಖ್ಯ ಗುರಿ.

ಸಹಜ ಪ್ರವೃತ್ತಿಗಳ ಪ್ರಬಲ ಬೇಡಿಕೆಗಳಂತೆ ನಡಿಯುವ ಮಗುವಿಗೆ ಆ ಬೇಡಿಕೆಗಳನ್ನು ಸಮಾಜದ ಮುಖಾಂತರ ಅಂದರೆ ಸಮಾಜವು ಸರಿಯೆಂದು ಒಪ್ಪಿಕೆ ಕೊಡಿಸಿದ ನ್ಯಾಯಬದ್ಧವಾದ, ನೀತಿ-ನಿಯಮಗಳಂತೆ ಹೊಂದಿಸಿಕೊಳ್ಳಲು ಕಲಿಸಬೇಕು ಮಗುವಿನ ಶರೀರ ಬುದ್ಧಿಗಳು ನಿಸರ್ಗದ ನಿಯಮದಂತೆ ಕಾರ್ಯ ಮಾಡುವವು. ಆದರೆ ಅವುಗಳ ಬೇಡಿಕೆಗಳು ಪೂರೈಸಲ್ಪಡುವದು ಮಾತ್ರ ಮಾನವ ನಿರ್ಮಿತ ನಿಯಮಗಳಂತೆ. ಇವೆರಡರ ಜೋಡಣೆ ಸಾಧಿಸಿದಾಗ ಮಗುವಿನ ಜೀವನ ಸುಖಮಯವಾಗುವದು; ಅಲ್ಲದೆ ನಿಸರ್ಗದ ನಿಯಮಗಳಂತೆ ಕೆರಳುವ ಸಹಜ ಪ್ರವೃತ್ತಿಗಳನ್ನು ಅರಳಿಸಿ ತನ್ನ ಹಾಗೂ ಸಮಾಜದ ಹಿತವಾಗುವ ಮಾರ್ಗಗಳಲ್ಲಿ ಹರಿಬಿಡಲು ಬರಬೇಕು. ಇದೇ ವ್ಯಕ್ತಿ-ವಿಕಾಸದ ಬೀಜಮಂತ್ರ. ಹೀಗೆ ಸರ್ವತೋಮುಖ ಸಮತೋಲ ವ್ಯಕ್ತಿ-ವಿಕಾಸವು ಸಾಮಾಜಿಕ ವಾತಾವರಣದ ಮುಖಾಂತರ ಜರುಗುವದು. ಇಂತಹ ನಿಸ್ಪೃಹ ವ್ಯಕ್ತಿಗಳ ಮುಖಾಂತರವಾಗಿಯೇ ಸಮಾಜವೂ ವಿಕಸಿಸುವದು.

ವ್ಯಕ್ತಿಯನ್ನು ಸುತ್ತುಗಟ್ಟಿದ ಸಾಮಾಜಿಕ ಆವರಣವು ಅನೈಸರ್ಗಿಕ ಮತ್ತು ಹಿಂದಿನಿಂದ ಬಂದುದಾದರೂ ಪ್ರಾಣಿ ಜೀವನದ ಮೂಲ ಬೇಡಿಕೆಗಳಷ್ಟೇ ಪ್ರಬಲವೂ ಅವಶ್ಯಕವೂ ಆಗಿದೆ. ವ್ಯಕ್ತಿಯು ಸಾಮಾಜಿಕ ವ್ಯಕ್ತಿಯಾಗಿ ಮಾರ್ಪಡದ ವಿನಃ ಮುಕ್ತಿ ಇಲ್ಲ. ಇಹದಲ್ಲಿ ಯಾವ ಸೌಖ್ಯವೂ ಪೌರುಷವೂ ಸಾಧಿಸದು. "ಮರ್ತ್ಯಲೋಕವೆಂಬ ಕರ್ತಾರನ ಕಮ್ಮಟದಲ್ಲಿ" ಸಲ್ಲುವವರೆಲ್ಲ ಪರದಲ್ಲಿಯೂ ಸಲ್ಲುವರೆಂಬ ಶರಣರ ನುಡಿಯು ಇದೇ ಸತ್ಯವನ್ನು ಉಸರುತ್ತದೆ. ಘಟವಾಗಿ (ಏಕಾಕಿಯಾಗಿ) ಜೀವಧಾರಣೆ ಮಾಡಿದ ಮಗು ಸಾಮಾಜಿಕ ಘಟಿಕವಾಗಿ ಮಾರ್ಪಡಬೇಕು.

ವಿಕಾಸವು ಎಡಬಿಡದೆ ನಡೆಯುವ ಕ್ರಿಯೆ.

ಶಾಲೆಯ ಸ್ಥಾನ

ಸಾಮಾಜಿಕ ವ್ಯಕ್ತಿ-ವಿಕಾಸವು ಹುಟ್ಟಿದಂದಿನಿಂದ ಸಾಯುವ ವರೆಗೆ ಪ್ರತಿಕ್ಷಣವೂ ಪ್ರತಿದಿನವೂ ನಡೆದಿರುತ್ತದೆ. ಮನೆ ಸುತ್ತಲಿನ ಧಾರ್ಮಿಕ, (ಹಬ್ಬ, ಹುಣ್ಣಿಮೆ ಉತ್ಸವ) ರಾಜಕೀಯ, ಆರ್ಥಿಕ, ಸಾಮಾಜಿಕ ಕಾರ್ಯಗಳ ಮುಖಾಂತರ ಅವುಗಳಲ್ಲಿ ಪ್ರತ್ಯಕ್ಷ ಭಾಗವಹಿಸಿ ಇಲ್ಲವೇ ನಿರೀಕ್ಷಿಸಿ, ಓರಿಗೆಯ ಗೆಳೆಯರೊಡನೆ ಒಡ-

ವನ್ನು ಕಾಯ್ದುಕೊಂಡಿದೆ. ಈ ಆದರ ಎಲ್ಲ ಶ್ರೇಯಸ್ಸು ಶಿಕ್ಷಣಾಧಿಕಾರಿಗಳಿಗೆ ಹಿತಚಿಂತಕರಿಗೆ, ಶಿಕ್ಷಣಾಭಿಮಾನಿಗಳಲ್ಲಿ ಚಂದಾದಾರರಿಗೆ ಸಲ್ಲುವುದೆಂದು ಹೇಳಬಯಸುತ್ತೇವೆ. ಈ ಎಲ್ಲ ಮಹನೀಯರು ನಮ್ಮ ಪತ್ರಿಕೆಯನ್ನು ತೋಳ ತೊಟ್ಟಿಲನ್ನಾಗಿ ಮಾಡಿಕೊಂಡಿರದಿದ್ದರೆ ಇದು ಇಷ್ಟೊಂದು ದೀರ್ಘಕಾಲ ಬಾಳಿ ಬದಕುವದು ಅಸಂಭವ ವಾಗುತ್ತಿತ್ತು. ಆದುದರಿಂದ ತನ್ನ ಈ ೯೨ ನೆಯ ಜಯಂತಿಯ ಶುಭ ಸಮಯದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರೆಲ್ಲರಿಗೆ, ಅಭಿಮಾನಿಗಳೆಲ್ಲರಿಗೆ ಹಾಗೂ ಹಿತಾಭಿಲಾಷಿಗಳಿಗೆ ಇನ್ನುಳಿದ ವಾಚಕರಿಗೆ ತನ್ನಧನ್ಯವಾದಗಳನ್ನು ಸಲ್ಲಿಸುತ್ತದೆ. ಮುಂದೆಯೂ ಇದೇ ತರಹದ ಮಮತೆ-ಮಮಕಾರಗಳನ್ನು, ಸಹೃದಯತೆಯನ್ನು, ಔದಾರ್ಯವನ್ನು ಅಪೇಕ್ಷಿಸುತ್ತದೆ.

ಇದೇ ಸುಪ್ರಸಂಗದಲ್ಲಿ ಭವಿಷತ್ತಿನಲ್ಲಿ ತಾನು ಇಟ್ಟುಕೊಂಡ ಧ್ಯೇಯ-ಧೋರಣೆಗಳನ್ನು, ಆಶೆ-ಆಕಾಂಕ್ಷೆಗಳನ್ನು ಸ್ಪಷ್ಟಪಡಿಸಲೆಳಸುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ, ವಿಶೇಷವಾಗಿ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿರುವ ಯಾವತ್ತು ಜನರಿಗೆ— ಪ್ರಾಥಮಿಕ ಸಾಲೆಯ ಬಾಲ-ಬಾಲಿಕೆಯರನ್ನು ಮೊದಲು ಮಾಡಿಕೊಂಡು ಸಕಲರಿಗೆ—ಉಪಯುಕ್ತವಾಗುವ ರೀತಿಯಲ್ಲಿ ತನ್ನ ವಿಷಯಾಂಗಗಳನ್ನು ರೂಪಿಸಿಗೊಳ್ಳಲಿದೆ. ಪ್ರಾಥಮಿಕ ಶಿಕ್ಷಣವು ಇಡೀ ಶಿಕ್ಷಣದ ತಳಹದಿಯೆಂಬುದನ್ನು, ಪ್ರಾಥಮಿಕ ಶಿಕ್ಷಕರು ರಾಷ್ಟ್ರದ ಭವಿಷತ್ತನ್ನು ರೂಪಿಸಶಕ್ಯ ಕುಶಲ ಶಿಲ್ಪಿಗರೆಂಬುದನ್ನೂ ಮನದಲ್ಲಿಟ್ಟುಕೊಂಡು ಆ ಕೆಲಸದಲ್ಲಿ ಬಾಲಕರಿಗೆ, ಪಾಲಕರಿಗೆ, ಶಿಕ್ಷಕರಿಗೆ—ಎಲ್ಲರಿಗೂ ಪೋಷಕವಾಗುವ ದಿಶೆಯಲ್ಲಿ ಸಾಗಬೇಕೆಂದು ಇಚ್ಛಿಸುತ್ತದೆ. ಹೊಸ ಶಿಕ್ಷಣ, ಸಮಾಜ ಶಿಕ್ಷಣ, ಪಕ್ಕೆ ಶಿಕ್ಷಣ, ಶಾರೀರಿಕ ಶಿಕ್ಷಣ, ಮೊದಲಾದವುಗಳನ್ನು ಕುರಿತು ತಜ್ಞರ ಲೇಖಗಳನ್ನು, ಕವನಗಳನ್ನು, ಪಾಠದ ಟಿಪ್ಪಣಿಗಳನ್ನು ಒಳಗೊಳ್ಳಲಿದೆ. ಹೊಸ ಹೊಸ ಪ್ರಯೋಗಗಳನ್ನು ಪ್ರಾಥಮಿಕ ಶಿಕ್ಷಣದಲ್ಲಿ ಮಾಡಿ ಅವುಗಳನ್ನು ಚರ್ಚಿಸಬೇಕೆಂಬ ಬಲವಾದ ಆಶೆಯೂ ಇದೆ.

ಈ ಎಲ್ಲ ಆಶೆ-ಆಕಾಂಕ್ಷೆಗಳು ಈಡೇರಬೇಕಾದರೆ ವಾಚಕರ, ಚಂದಾದಾರರ, ಹಿತಚಿಂತಕರ, ಶಿಕ್ಷಣಾಧಿಕಾರಿಗಳ, ಶಿಕ್ಷಕರ, ಶಿಕ್ಷಕ-ವಿದ್ಯಾರ್ಥಿಗಳ, ಶಿಕ್ಷಣಾಭಿಮಾನಿಗಳ, ಹಾರ್ದಿಕ, ಸಕ್ರಿಯ ನೆರವು ಅವಶ್ಯ. ಇವರೆಲ್ಲರ ವಾತ್ಸಲ್ಯ, ಸಹಕಾರ, ಸಹಾನುಭೂತಿಗಳು ಒಂದಾಗಿ ಬರಲಿ; ಪತ್ರಿಕೆಯ ಮುಂಬರುವ ಜೀವನವು ಹೆಚ್ಚು ಸುಂದರವಾಗಿ, ಸುಗಮವಾಗಿ ಸಾಗಿ ಪ್ರಾಥಮಿಕ ಶಿಕ್ಷಣವು ಇದರ ಮೂಲಕ ಹೆಚ್ಚಿಗೆ ಮುನ್ನಡೆಯಲೆಂದು ಹಾರೈಸುವೆವು.

ಕಂಬನಿ

ದಿನಾಂಕ ೧೩-೫-೧೯೫೩ ನೇ ದಿನ ಪ್ರೊಫೆಸರ ಎಂ. ಎಸ್. ಚಂದಾವರಕರ ಇವರು ಸ್ವರ್ಗಸ್ಥರಾಪ ಸುದ್ದಿಯು ಕನ್ನಡಿಗರಿಗೆ ತುಂಬಿಬಾರದ ಹಾನಿಯನ್ನುಂಟುಮಾಡಿದೆ. ಇವರು ಬೆಳಗಾವಿಯ ಎಸ್. ಟಿ. ಕಾಲೇಜದಲ್ಲಿ ಪ್ರೊಫೆಸರರಾಗಿದ್ದರು. ೩೦ ವರುಷಗಳ ದೀರ್ಘಾವಧಿಯ ಸೇವೆಯನ್ನು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿ ಇದೀಗ ನಿವೃತ್ತಿ ಹೊಂದಿದ್ದರು.

ಹಾಯಸ್ಕೂಲಿನಲ್ಲಿ ಶಿಕ್ಷಕರಾಗಿ ಹಾಗೂ ಕಾಲೇಜದಲ್ಲಿ ಪ್ರಾಧ್ಯಾಪಕರಾಗಿ ಕೆಲಸಮಾಡುತ್ತಿರುವಾಗ ಅವರು ತೋರಿಸಿದ ಅಮಿತ ಉತ್ಸಾಹ, ಕರ್ತವ್ಯ ನಿಷ್ಠೆ, ಅಪರಿಮಿತ ಸಂಘಟನಾಶಕ್ತಿ, ಇವು ಕಣ್ಮುಂದೆ ಕಟ್ಟಿವೆ. ಅವರು ನಿಷ್ಕಾಮಂತ ಸ್ಕೌಟ ಆಗಿದ್ದರು; ಮೆಚ್ಚಿಗೆಯ ಮೆಡಲ್‌ನ್ನು ಗಳಿಸಿದ್ದರು. ಅವರ ವಿವಿಧ ವಿಶಿಷ್ಟ ಸಾಧನೆ-ಸಿದ್ಧಿಗಳಲ್ಲಿ ಕರ್ನಲ್ ಡಿಗ್ಬಿ ಬಿಸ್ಸ ಇವರ ನೇತೃತ್ವದಲ್ಲಿ ಕಾರವಾರ ದಲ್ಲಿ ಸಂಘಟಿಸಲ್ಪಟ್ಟ ಸಮುದ್ರ ಸ್ಕೌಟರ ಕ್ಯಾಂಪು (Sea scouter camp) ಒಂದು. ಕಾರವಾರದಲ್ಲಿ ಕಟ್ಟಲ್ಪಟ್ಟ ಸ್ಕೌಟ ಸದನವು (Scout Building) ಅವರ ನಿಸ್ವಾರ್ಥ ಸೇವೆಯ ದ್ಯೋತಕವಾಗಿ ನಿಂತಿದೆ.

ಬೆಳಗಾವಿಯ ಎಸ್. ಟಿ. ಕಾಲೇಜದಲ್ಲಿ ಮನೋವಿಜ್ಞಾನದ ಉಪನ್ಯಾಸಗಳಿಗಾಗಿ ಅವರು ಹೆಸರಾಗಿದ್ದರು, ಪ್ರಾಯೋಗಿಕ ಮನಶ್ಶಾಸ್ತ್ರದ ಪ್ರಾಧ್ಯಾಪಕರೆಂದು ವಿಶ್ವ ವಿದ್ಯಾಲಯದಿಂದ ಮಾನ್ಯತೆ ಪಡೆದಿದ್ದರು. ದೃಕ್ ಶಿಕ್ಷಣ (Visual Instruction) ವಿಭಾಗದ ಅಭಿವೃದ್ಧಿಗೆ ಅವರು ಕಾರಣರಾಗಿದ್ದರು. ಅವರ ನಿಯೋಗದಿಂದ ಕರ್ನಾಟಕದ ತುಂಬಾ ಹಸರಿಸಲ್ಪಟ್ಟ ಅವರ ಶಿಷ್ಯವೃಂದ ಕ್ಕೆ ಮಿತ್ರಮಂಡಳಿಗೆ, ಮನವಾರೆ ಮೆಚ್ಚಿದ ಸಾಹೃದಯಿಗಳಿಗೆ ಅಪಾರವಾದ ವ್ಯಸನವಾಗಿದೆ. ಕರ್ನಾಟಕವು ಶಿಕ್ಷಣ ತಜ್ಞರೊಬ್ಬರನ್ನು ಕಳೆದುಕೊಂಡಂತಾಗಿದೆ. ದುಃಖಸಾಗರದಲ್ಲಿ ಸೇರಿದ ಅವರ ಕುಟುಂಬದವರಿಗೆ ನಮ್ಮ ಪಾಲನ್ನು ಮೀಸಲಿರಿಸಿದ್ದೇವೆ. ಮೃತರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನೀಯಲಿ!

ಶಿಕ್ಷಣದಲ್ಲಿ ಕೌಟುಂಬಿಕ ಜೀವನದ ಸ್ಥಾನ

(ತಾತ್ವಿಕ ವಿವೇಚನೆ)

ಲೇಖಕರು:— ಶ್ರೀ. ನೀ. ರೇ. ಹಿರೇಮಠ, ಪ್ರಾಧ್ಯಾಪಕ, ವಯಸ್ಕರ ಜೀವನ ಶಿಕ್ಷಣ ಕೇಂದ್ರ, ಧಾರವಾಡ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

ಕೌಟುಂಬಿಕ ಜೀವನದ ಅವಶ್ಯಕತೆ

೧) ಶಿಕ್ಷಣದ ಉದ್ದೇಶ

ಶಿಕ್ಷಣಕ್ಕೆ ಹಲವು ಉದ್ದೇಶಗಳನ್ನು ಎಂದಿನಿಂದಲೂ ಕೇಳಲಾಗುತ್ತಿದೆ. ನಾಗರಿಕತೆಗಾಗಿ ಶಿಕ್ಷಣ, ಸಂಸ್ಕೃತಿಗಾಗಿ ಶಿಕ್ಷಣ ವ್ಯಕ್ತಿವಿಕಾಸಕ್ಕಾಗಿ ಶಿಕ್ಷಣ, ಪ್ರಜಾಪ್ರಭುತ್ವ, ಕ್ಕಾಗಿ ಶಿಕ್ಷಣ, ಸಾಮಾಜಿಕ ಜೀವನಕ್ಕಾಗಿ ಶಿಕ್ಷಣ, ಎಂದು ಅನೇಕ ವಿಧವಾಗಿ ಪೌರಾತ್ಯ ಹಾಗೂ ಪಾಶ್ಚಿಮಾತ್ಯ ಶಿಕ್ಷಣ-ತಜ್ಞರು ಪ್ರತಿಪಾದಿಸುತ್ತ ಬಂದಿದ್ದಾರೆ. ಇನೆಲ್ಲವುಗಳಲ್ಲಿ ಸೂತ್ರರೂಪವಾಗಿ ಕಂಡು ಬರುವದೆಂದರೆ ಸಾಮಾಜಿಕ ವ್ಯಕ್ತಿ-ವಿಕಾಸ, ಸಾಮಾಜಿಕ ಜೀವನದಲ್ಲಿ ಸಾಗವಹಿಸಲು ಕಲಿಸುವದೇ ಶಿಕ್ಷಣದ ಮುಖ್ಯ ಗುರಿ.

ಸಹಜ ಪ್ರವೃತ್ತಿಗಳ ಪ್ರಬಲ ಬೇಡಿಕೆಗಳಂತೆ ನಡೆಯುವ ಮಗುವಿಗೆ ಆ ಬೇಡಿಕೆಗಳನ್ನು ಸಮಾಜದ ಮುಖಾಂತರ ಅಂದರೆ ಸಮಾಜವು ಸರಿಯೆಂದು ಅಪ್ಪಣೆ ಕೊಡಿಸಿದ ನ್ಯಾಯಬದ್ಧವಾದ ನೀತಿ-ನಿಯಮಗಳಂತೆ ತೃಪ್ತಿಪಡಿಸಿಕೊಳ್ಳಲು ಕಲಿಸಬೇಕು ಮಗುವಿನ ಶರೀರ ಬುದ್ಧಿಗಳು ನಿಸರ್ಗದ ನಿಯಮದಂತೆ ಕಾರ್ಯ ಮಾಡುವವು. ಆದರೆ ಅವುಗಳ ಬೇಡಿಕೆಗಳು ಪೂರೈಸಲ್ಪಡುವದು ಮಾತ್ರ ಮಾನವ ನಿರ್ಮಿತ ನಿಯಮಗಳಂತೆ. ಇವೆರಡರ ಪೋಷಣೆ ಸಾಧಿಸಿದಾಗ ಮಗುವಿನ ಜೀವನ ಸುಖಮಯವಾಗುವದು; ಅಲ್ಲದೆ ನಿಸರ್ಗದ ನಿಯಮಗಳಂತೆ ಕೆರಳುವ ಸಹಜ ಪ್ರವೃತ್ತಿಗಳನ್ನು ಅರಳಿಸಿ ತನ್ನ ಹಾಗೂ ಸಮಾಜದ ಹಿತವಾಗುವ ಮಾರ್ಗಗಳಲ್ಲಿ ಹರಿಬಿಡಲು ಬರಬೇಕು. ಇದೇ ವ್ಯಕ್ತಿ-ವಿಕಾಸದ ಬೀಜಮಂತ್ರ. ಹೀಗೆ ಸರ್ವತೋಮುಖ ಸಮತೋಲ ವ್ಯಕ್ತಿ-ವಿಕಾಸವು ಸಾಮಾಜಿಕ ವಾತಾವರಣದ ಮುಖಾಂತರ ಜರುಗುವದು. ಇಂತಹ ನಿಸ್ಪೃಹ ವ್ಯಕ್ತಿಗಳ ಮುಖಾಂತರವಾಗಿಯೇ ಸಮಾಜವೂ ವಿಕಸಿಸುವದು.

ವ್ಯಕ್ತಿಯನ್ನು ಸುತ್ತುಗಟ್ಟಿದ ಸಾಮಾಜಿಕ ಆವರಣವು ಅನೈಸರ್ಗಿಕ ಮತ್ತು ಹಿಂದಿನಿಂದ ಬಂದುದಾದರೂ ಪ್ರಾಣಿ ಜೀವನದ ಮೂಲ ಬೇಡಿಕೆಗಳಷ್ಟೇ ಪ್ರಬಲವೂ ಅವಶ್ಯಕವೂ ಆಗಿದೆ. ವ್ಯಕ್ತಿಯು ಸಾಮಾಜಿಕ ವ್ಯಕ್ತಿಯಾಗಿ ಮಾರ್ಪಡದ ವಿನಃ ಮುಕ್ತಿ ಇಲ್ಲ. ಇಹದಲ್ಲಿ ಯಾವ ಸೌಖ್ಯವೂ ಪೌರುಷವೂ ಸಾಧಿಸದು. "ಮರ್ತ್ಯಲೋಕವೆಂಬ ಕರ್ತಾರನ ಕಮ್ಮಟದಲ್ಲಿ" ಸಲ್ಲುವವರೆಲ್ಲ ಪರದಲ್ಲಿಯೂ ಸಲ್ಲುವರೆಂಬ ಶರಣರ ನುಡಿಯು ಇದೇ ಸತ್ಯವನ್ನು ಅನುರುತ್ತದೆ. ಘಟವಾಗಿ (ವಿಕಾಶೆಯಾಗಿ) ಜೀವಧಾರಣೆ ಮಾಡಿದ ಮಗು ಸಾಮಾಜಿಕ ಘಟಕವಾಗಿ ಮಾರ್ಪಡಬೇಕು.

ವಿಕಾಸವು ಎಡಬಿಡದೆ ನಡೆಯುವ ಕ್ರಿಯೆ.

ಶಾಲೆಯ ಸ್ಥಾನ

ಸಾಮಾಜಿಕ ವ್ಯಕ್ತಿ-ವಿಕಾಸವು ಹುಟ್ಟಿದಂದಿನಿಂದ ಸಾಯುವ ವರೆಗೆ ಪ್ರತಿಕ್ಷಣವೂ ಪ್ರತಿದಿನವೂ ನಡೆದಿರುತ್ತದೆ. ಮನೆ ಸುತ್ತಲಿನ ಧಾರ್ಮಿಕ, (ಹಬ್ಬ, ಹುಣ್ಣಿಮೆ ಉತ್ಸವ) ರಾಜಕೀಯ, ಆರ್ಥಿಕ, ಸಾಮಾಜಿಕ ಕಾರ್ಯಗಳ ಮುಖಾಂತರ ಅವುಗಳಲ್ಲಿ ಪ್ರತ್ಯಕ್ಷ ಭಾಗವಹಿಸಿ ಇಲ್ಲವೇ ನಿರೀಕ್ಷಿಸಿ, ಓರಿಗೆಯ ಗೆಳೆಯರೊಡನೆ ಒಡ-

ನಾಡಿ ಮಗವು ಸಾಮಾಜಿಕ ವ್ಯವಹಾರಗಳನ್ನು ಕಲಿಯುತ್ತದೆ. ಇಲ್ಲಿ ನಡೆಯುವ ಶಿಕ್ಷಣವು ಪ್ರಾಸಂಗಿಕವೂ ನಿರ್ದಿಷ್ಟ ಗುರಿಯಿಲ್ಲದ್ದೂ ಆಗಿರುವದು. ಆದರೆ ಶಾಲೆಯಲ್ಲಿ ಮೊತ್ರ ಅದಕ್ಕೊಂದು ಗುರಿ ಮತ್ತು ಪದ್ಧತಿಗಳಿಂದ ಸುವ್ಯವಸ್ಥಿತವಾಗಿ ಅನುಭವಿಕರ ಮಾರ್ಗದರ್ಶನದಲ್ಲಿ ನಡೆಯುತ್ತದೆ. ಶಾಲೆಯು ಕೊಡುವ ಅನುಭವಪೂರ್ಣವಾದ ಮಾರ್ಗದರ್ಶನದ ಮುಖಾಂತರ ಸಮಾಜವು ಉಳಿಯಬೇಕು ಮತ್ತು ಬೆಳೆಯಬೇಕು. ಅದರ ಸತ್ವ ಪೂರ್ಣವಾದ ಅನುಭವಗಳು ಸ್ಥಿರಗೊಂಡು ಮುಂದುವರಿಯಬೇಕು. ಮೂಢ ನಂಬುಗೆಗಳು, ಪ್ರತಿಗಾಮಿ ಶಕ್ತಿಗಳು ಲಯವಾಗಬೇಕು. ಅಂತೆಯೇ " ಸಮಾಜವು ತಾನುಳಿದು ಬೆಳೆಯಲು ಮಾಡಿಕೊಂಡು ಉದ್ದಿಶ್ಯ ಪೂರ್ವವಾದ ಯೋಜನೆಯೇ ಶಿಕ್ಷಣ " ವೆಂದು ಡಾ ॥ ಝಾಕೀರ ಹುಸೇನ ಅವರು ಅಭಿಪ್ರಾಯ ಪಟ್ಟಿದ್ದಾರೆ. ಶಾಲೆಯನ್ನು ಸ್ಥಾಪಿಸಿದ ಸಮಾಜವು ಅದರಿಂದ ಈ ಬಗೆಯ ಕಾರ್ಯ ಜರಗಬೇಕೆಂದು ಇಷ್ಟ ಪಡುವದೂ ಸ್ವಾಭಾವಿಕ. ಆದುದರಿಂದ ಶಾಲೆಯಲ್ಲಿ ದೊರೆಯುವ ಶಿಕ್ಷಣದಿಂದ,

(೧) ಸಮಾಜದ ವ್ಯವಸ್ಥೆಯ ಜ್ಞಾನವಾಗಬೇಕು.

(೨) ಸಮಾಜದಲ್ಲಿ ಬೆರೆತು ಸಹಕಾರ ಪ್ರೇಮದಿಂದ ನಡೆದುಕೊಳ್ಳಲು ಬರಬೇಕು; ಕೂಡಿ ಬಾಳುವ ಕಲೆ ಕರಗತವಾಗಬೇಕು.

(೩) ದೇವರು ದಯಪಾಲಿಸಿ ವಿಶಿಷ್ಟವಾದ ಶಕ್ತಿಗಳನ್ನು ಸಮಾಜಕ್ಕೆ ಉಪಯೋಗವಾಗುವ ರೀತಿಯಲ್ಲಿ ಬೆಳಿಸಿಕೊಂಡು ತನ್ನಜೀವನ ಸಾರ್ಥಕವಾಗುವಂತೆ ಅನುವು ಮಾಡಿಕೊಡಬೇಕು.

(೪) ಸಮಾಜದ ಸತ್ವಪೂರ್ಣವಾದ ಅನುಭವಗಳನ್ನು ಪರಂಪರೆಗಳನ್ನು ಅರಗಿಸಿಕೊಂಡು ಮುಂದಿನ ತಲೆಮಾರಿಗೆ ಸಾಗಿಸಲು ಬರಬೇಕು. ಸಾಂಸ್ಕೃತಿಕ ಪುನರುಜ್ಜೀವನವಾಗಬೇಕು.

(೫) ಸಮಾಜದಲ್ಲಿಯ ಕೊಳೆಯನ್ನು ಕಿತ್ತೊಗೆಯಲು ಪ್ರತಿಗಾಮಿ ಶಕ್ತಿಗಳಿದುರು ಧೈರ್ಯದಿಂದ ಮತ್ತು ಚಾಣಾಕ್ಷತನದಿಂದ ಹೋರಾಡಿ ಅವುಗಳನ್ನು ಸುಧಾರಿಸುವ ಶಕ್ತಿ ಬರಬೇಕು.

(೬) ಸಮಾಜದ ಸುವ್ಯವಸ್ಥಿತ ಆಡಳಿತಕ್ಕೆ ಬೇಕಾಗುವ ನಾಯಕತ್ವ (ಮುಂದಾಳುತನ) ದ ತರಬೇತಿ ಸಿಗಬೇಕು. ಅದರ ಜೊತಗೆ ಯೋಗ್ಯ ಮುಂದಾಳುಗಳನ್ನು ಆಯ್ದುಕೊಂಡು ಹಿಂದು ಹಿಂಬಾಲಿಸುವ ಜಾಣತನವು ಬೆಳೆಯಬೇಕು.

(೭) ಸಮಾಜದಲ್ಲಿ ತಮ್ಮ ಕರ್ತವ್ಯ ಹಕ್ಕು ಹೊಣೆಗಾರಿಕೆಗಳನ್ನು ಅರಿತು ಹಕ್ಕಿಗಿಂತ ಕರ್ತವ್ಯ ಹಿರಿದೆಂಬ ಭಾವನೆಬೆಳೆಯಬೇಕು. ಸೇವಾಬುದ್ಧಿ ಜಾಗ್ರತವಾಗಬೇಕು

(೮) ಸಮಾಜದ ಕಾರ್ಯ-ಕಲಾಪಗಳ ಸಾಧನಗಳಾದ ಭಾಷೆ, ಗಣಿತ, ವಿಜ್ಞಾನ ಮತ್ತು ತಂತ್ರಗಳಲ್ಲಿ ಪರಿಣತಿ ದೊರೆಯಬೇಕು.

(೯) ಕಲಾದೃಷ್ಟಿ ಕಲಾಭಿರುಚಿಗಳು ಬೆಳೆಯಬೇಕು. " ಸತ್ಯ ಶಿವಂ ಸುಂದರಂ " ಎಂಬಂತೆ ತ್ರಿಕಾಲಾಬಾಧಿತವಾದ ನಿತ್ಯವಾದ, ಮಂಗಳಕರವಾದ ಸೌಂದರ್ಯದತ್ತ ಮನಸ್ಸು ಹರಿಯಬೇಕು.

ಇವು ಶಾಲೆ ಕಾಲೇಜುಗಳ ಸಸ್ಯದ ಪರೀಕ್ಷೆಗಳ ಗುರಿಗಳಾಗಿಲ್ಲ. ಅದರೂ ಜೀವನದ ಪರೀಕ್ಷೆಯಾಗುವದು ಇವುಗಳಲ್ಲಿ ಮಾತ್ರ.

ಈ ಆದರ್ಶವನ್ನು ಮುಟ್ಟುವ ಬಗೆ

ಶಿಕ್ಷಣವು ಮುಟ್ಟಬೇಕೆಂದಿರುವ ಉದ್ದೇಶಗಳನ್ನು ಸಾಧಿಸುವ ಬಗೆಗೆ ವಿವಿಧ ಪ್ರಕಾರದ ಪ್ರಯೋಗಗಳು ನಡೆದಿವೆ. ಕಾಡುಸ್ಥಿತಿಯಲ್ಲಿ ಮಾನವನಿದ್ದಾಗ ಕಲಿಯಲು ಅವನು ನೈಸರ್ಗಿಕವಾದ ಪದ್ಧತಿಯನ್ನು ಅನುಸರಿಸುತ್ತಿದ್ದನು. ಕಲಿಯುವಿಕೆಯಲ್ಲಿ ಮೂರು ಮೆಟ್ಟಿಲುಗಳಿವೆ. ಕಲಿಯುವಿಕೆಗೆ ಒಂದು ಪ್ರಬಲವಾದ ಉದ್ದೇಶ ವಿರಬೇಕು. ಅದನ್ನು ಸಾಧಿಸುವ ಬಗೆ ಅಥವಾ ಜ್ಞಾನ ಬೇಕು. ನಂತರ ಅದರ ಸಾಧನೆ ನಡೆದು ಅದು ರೂಢಿಯಾಗಬೇಕು. ಮನುಷ್ಯನು ಮೊದಲು ಗಿಡ ಹತ್ತಲು ಕಲಿತ ಬಗೆಯನ್ನು ಸ್ವಲ್ಪ ವಿಚಾರಿಸುವಾ, ಗಿಡಹತ್ತುವದರಿಂದ ಹುಲಿ ಸಿಂಹ ಮುಂತಾದ ಕೆಲವು ಕ್ರೂರ ಪ್ರಾಣಿಗಳಿಂದ ಪ್ರಾಣರಕ್ಷಣೆ ಮಾಡಿಕೊಳ್ಳಬಹುದೆಂದು ಮೊದಲು ಅನುಭವಿಸಿದವನು ತನ್ನ ಪರಿವಾರಕ್ಕೆಲ್ಲ ಶಿಕ್ಷಕನಾಗಿ ಕಲಿಸಿದ ಬಗೆಯೂ ಇದೇ. ಇಲ್ಲಿ ಶಿಕ್ಷಣದ ಗುರಿ: ಕಾಡುಪಶುಗಳಿಂದ ಆತ್ಮರಕ್ಷಣೆ ಮಾಡಿ

ಕೊಳ್ಳುವದು.

ಜ್ಞಾನಃ—ಗಿಡ ಹತ್ತುವದರಿಂದ ಇದು ಸಾಧ್ಯವಾದ

ಸಾಧನ:— ಗಿಡ ಹತ್ತಲು ರೂಢಿ ಮಾಡುವದು; ಅಲ್ಪ ಸಮಯದಲ್ಲಿಯೇ ಸರಸರನೆ ಗಿಡ ಹತ್ತಲು ರೂಢಿ ಮಾಡುವದು.

ಗಿಡ ಹತ್ತುವದರಿಂದ ಆತ್ಮರಕ್ಷಣೆಯಾಗುತ್ತದೆಂದು ತಿಳಿದ ಮಾತ್ರಕ್ಕೆ ಅವನು ಕಾಡು ಮೃಗಗಳು ಓಡಿ ಬರಲು ಆತ್ಮರಕ್ಷಣೆ ಮಾಡಿಕೊಳ್ಳಲಾರ ಅಂಥ ಪ್ರಸಂಗದಲ್ಲಿ ಸರ್ರನೆ ಗಿಡ ಹತ್ತಲು ಬರಬೇಕು. ಸಾಮಾಜಿಕ ವ್ಯವಹಾರಗಳನ್ನು ಮೊದಲು ಮಾನವನು ಕಲಿತದ್ದು ಇದೇ. ನೈಸರ್ಗಿಕ ಪದ್ಧತಿಯಿಂದ. ಈಸುವದು, ಬಾಣ ಬಿಡುವದು, ಯುದ್ಧಕಲೆ, ವಿಮಾನ ನಡೆಸುವದು, ಸಂಗೀತ ಮುಂತಾದ ಕಲೆಗಳಲ್ಲಿಯೂ ಈ ಮೂರೂ ಅಂಗಗಳು ಇದ್ದು ಸಾಧನೆಯು ಸ್ಫುಟವಾಗಿರುತ್ತದೆ. ವೈಮಾನಿಕ ಶಿಕ್ಷಣದಲ್ಲಿಯೂ ಈ ಮೂರೂ ಅಂಗಗಳಿವೆ. ಹವೆಯಲ್ಲಿ ವಿಮಾನವನ್ನು ನಡೆಸುವದೇ ಗುರಿ. ಅದಕ್ಕೆ ವಿಮಾನ ಯಂತ್ರದ ಜ್ಞಾನ ಮಾಡಿಕೊಡಲಾಗುವದು. ತರಬೇತಿ ಕೊಡುವವನು ವಿದ್ಯಾರ್ಥಿಯೊಂದಿಗೆ ಇಬ್ಬರು ವೈಮಾನಿಕರು ನಡಿಸಲು ಬರುವ ಎರಡು ಯಂತ್ರಗಳುಳ್ಳ ವಿಮಾನದಲ್ಲಿ ಕುಳಿತು ಯಂತ್ರವನ್ನು ನಡೆಸುವವನ್ನು ಕಲಿಸುವನು. ಯಂತ್ರದ ಹತೋಟಿಯನ್ನು ವಿದ್ಯಾರ್ಥಿಯ ಕೈಯಲ್ಲಿ ಕೊಟ್ಟು ಮಾರ್ಗದರ್ಶನ ಮಾಡುತ್ತಲೂ, ತಪ್ಪಿದಲ್ಲಿ ತಾನು ಸ್ವತಃ ನಡಿಸುತ್ತಲೂ ಹೋಗುವನು. ವಿಮಾನ ನಡೆಸುವ ಕಲೆಯು ಕರಗತವಾಗಿದೆ ಎಂಬ ಭರವಸೆಯಾದ ಮೇಲೆ ಒಬ್ಬನೇ ನಡೆಸುವ ವಿಮಾನದಲ್ಲಿ ವಿದ್ಯಾರ್ಥಿಯನ್ನು ಬಿಡುವನು. ತಾನು ಬೇರೊಂದು ವಿಮಾನದಿಂದ ಮಾರ್ಗದರ್ಶನ ಮಾಡುವನು. ಆ ಮೇಲೆ ಸ್ವತಂತ್ರವಾಗಿ ವಿಮಾನ ನಡೆಸಲು ಅಪ್ಪಣೆ ಸಿಗುವದು. ಹವೆಯಲ್ಲಿ ಹಾರಾಡುವ ಉದ್ದೇಶ ಮತ್ತು ಯಂತ್ರದ ಅಂಗಾಂಗಳ ಜ್ಞಾನ ಮಾಡಿಕೊಟ್ಟು, ಒಂದು ವಿಮಾನದಲ್ಲಿ ಮೇಲಕ್ಕೆ ಹಾರಿ ವಿದ್ಯಾರ್ಥಿಯ ಕೈಯಲ್ಲಿ ಅದರ ಸೂತ್ರ ಕೊಟ್ಟರೆ ಪರಿಣಾಮವೇನಾಗಬಹುದು? ಜ್ಞಾನದ ಪ್ರತ್ಯಕ್ಷ ಸಾಧನೆ ಬಹು ಮುಖ್ಯವಾದುದು.

ಪುಸ್ತಕೀಯ ಜ್ಞಾನದ ಜೊಳ್ಳುತನ

ಸಾಮಾನ್ಯ ಶಿಕ್ಷಣದ ಉದ್ದೇಶವು ಸಾಮಾಜಿಕ ವ್ಯಕ್ತಿಯನ್ನು ನಿರ್ಮಿಸುವದಾಗಿದೆ. ಆದರೆ ಅದು ಪುಸ್ತಕೀಯ ಜ್ಞಾನದಿಂದ ಸಾಧ್ಯವಾಗುವದೆಂಬ ಕುರುಡು ಸಿದ್ಧಾಂತಕ್ಕೆ ಶಿಕ್ಷಣ ತಜ್ಞರು ಹೇಗೋ ಬಂದು ಮುಟ್ಟಿದ್ದಾರೆ. ಇತಿಹಾಸ, ಭೂಗೋಲ, ಪೌರನೀತಿ, ನೀತಿಶಾಸ್ತ್ರ, ಧರ್ಮಶಾಸ್ತ್ರಗಳ ಪುಸ್ತಕಗಳ ಓದಿನಿಂದ ಜಗತ್ತಿನ ಹಿಂದು-ಮುಂದು-ಇಂದಿನ ವ್ಯವಹಾರ ಚತುರರನ್ನು ನೀತಿ ನಿಪುಣರನ್ನೂ ಧರ್ಮಾತ್ಮರನ್ನೂ ನಿರ್ಮಿಸಬಹುದೆಂದು ನಂಬಿದ್ದಾರೆ. ಗಣಿತ, ವ್ಯಾಕರಣ, ಸಂಸ್ಕೃತ, ಲ್ಯಾಟಿನ್, ಗ್ರೀಕ ಮುಂತಾದ ಗಡುಚಾದ ವಿಷಯಗಳ ಅಭ್ಯಾಸದಿಂದ ಮಾನಸಿಕ ಶಿಸ್ತು, ಶ್ರಮ, ಸಹಿಷ್ಣುತೆ, ನೆಲೆಗೊಂಡು ಜೀವನದ ಎಲ್ಲ ಕಾರ್ಯಗಳಲ್ಲಿಯೂ ಕಾರ್ಯಕ್ಷಮತೆ, ದೃಢನಿಶ್ಚಯ, ಸತತೋದ್ಯೋಗ, ಕರ್ತೃತ್ವ ಶಕ್ತಿಗಳು ಬೆಳೆದು ಪಸರಿಸುವದೆಂದು ನಂಬಿದರು. ಪರಿಣಾಮವು ವಿಪರೀತವಾಯಿತು. "ಓದಿ ಕೆಟ್ಟ ಕೂಚ ಭಟ್ಟ" ಎಂಬಂತೆ ಮೂರ್ಖ ಪಂಡಿತರು ಹೊರಟರು. ಒಂದು ವಿಷಯದಲ್ಲಿ ಪಡೆದ ಪರಿಣತಿಯೂ ಭಿನ್ನವಾದ ಇತರ ವಿಷಯಗಳಲ್ಲಿ ನಿರುಪಯೋಗಿಯಾದುದೆಂದೂ "Transfer of Training" ತತ್ವವು ಬುಡವಿಲ್ಲದ್ದೆಂದೂ ಮಾನಸ ಶಾಸ್ತ್ರಜ್ಞರು ಕಂಡ ಮೇಲೆ ಪ್ರತಿಯೊಂದು ಕಲಿಯುವಿಕೆಗೆ ಸಾಧನೆಯು ಆಗತ್ಯವಾದುದೆಂದು ಮನಗಂಡರು. ಕೇವಲ ಗುರಿ ಮತ್ತು ಅದನ್ನು ಸಾಧಿಸುವ ವಿಧಾನದ ತಿಳುವಳಿಕೆ ಸಾಲದು. ಅದು ಜೀವನದಲ್ಲಿ ಉಪಯೋಗಿಯಾಗಲು ಅದರ ಸಾಧನೆ ನಡೆದು ಕರಗತವಾಗಬೇಕು. ಈ ಅರಿವಿನಿಂದಲೇ ಜೀವನಕಲೆ ಅಳವಡಬೇಕಾದರೆ ಜೀವನವೇ ಸಾಧನವಾಗಬೇಕು. ಜೀವಿಸಿಯೇ ಕಲಿಯಬೇಕು. "It is life that educates" ಎಂದು ಬಾಬಿಟ್ ಅವರೂ "All education is habit forming" ಎಂದು ಪೀಟರ ಅವರೂ ಪ್ರತಿಪಾದಿಸಿದ್ದಾರೆ. ಶಿಕ್ಷಣಾಲಯವೇ ಮಾದರಿಯ ಮನೆಯಾಗಿ, ಸಮಾಜವಾಗಿ, ಮಾದರಿಯ ನಾಗರಿಕನ ತರಬೇತಿಯಾಗಬೇಕೆಂದು ಶ್ರೀ. ಡೂಯಿ

ವರ ಅಭಿಪ್ರಾಯವಾಗಿದೆ. ಈ ಎಲ್ಲ ಉದ್ದೇಶಗಳ-ನ್ನಿಟ್ಟುಕೊಂಡೇ ಆಧುನಿಕ ಪ್ರಪಂಚದಲ್ಲೆಲ್ಲ ಶಿಕ್ಷಣ ಸಂಸ್ಥೆಯು ಒಂದು ಆದರ್ಶ ಕುಟುಂಬವಾಗಿ, ಮನೆ-ರುವಾಗಿ, ಸಮಾಜವಾಗಿ ಕಾರ್ಯಮಾಡಿ ತೋರಿಬಾಳುವ ಲೆಯನ್ನು ಪ್ರತ್ಯಕ್ಷ ಜೀವಿಸಿ ಕಲಿಸಬೇಕೆಂಬ ಕೂಗು ೇಳಬರುತ್ತಿದೆ. ವರ್ಧಾ ಶಿಕ್ಷಣದಲ್ಲಿ ಪ್ರಮುಖ ಪಾತ್ರ ಹಿಸುವ ಕೌಟುಂಬಿಕ ಜೀವನವು ಇದೇ ಉದ್ದೇಶ-ಂದಲೇ ಜಾರಿಯಲ್ಲಿ ಬಂದಿದೆ.

ಶಾಲೆಯಲ್ಲಿಯ ಕೌಟುಂಬಿಕ ಜೀವನದ ತಾತ್ಕಾಲಿಕ ಲಾಭಗಳು:—

ಶಿಕ್ಷಣದಲ್ಲಿ ಈ ಬಗೆಯ ಕೌಟುಂಬಿಕ ಜೀವನದಿಂದ ತಾತ್ಕಾಲಿಕ ಹಾಗೂ ಶಾಸ್ವತ ಲಾಭಗಳಿವೆಯೆಂದು ್ಯಾಕ ಕೌನ್ ಅವರ ಅಭಿಪ್ರಾಯವಾಗಿದೆ.

(೧) ಯೋಗ್ಯವಾದ ಸಾಮಾಜಿಕ ಸಂಬಂಧಗಳನ್ನು ಳಿದುಕೊಂಡು ಆಚರಿಸಲು ಬರುವದು.

(೨) ಪ್ರಜಾಪ್ರಭುತ್ವದ ಯೋಜನೆಗಳಲ್ಲಿ ಭಾಗ ಹಿಸಲು ಕಲಿಸುವದು.

(೩) ಯೋಗ್ಯವಾದ ವೈಯಕ್ತಿಕ ಮತ್ತು ಸಾಮಾ-ಜಿಕ ಚಟಗಳನ್ನು ಮತ್ತು ಒಲವುಗಳನ್ನು ಕಂಡು ಹಿಡಿದು ಳೆಸಲು ಅವಕಾಶ ಕೊಡುವದು.

(೪) ಶಾಲೆಯಲ್ಲಿ ಮಗುವಿನ ಅಭಿರುಚಿ ಬೆಳೆಸು-ವದು

(೫) ಶಾಲೆಯ ಶಿಸ್ತು ಮತ್ತು ನೈತಿಕ ದೃಷ್ಟಿ-ಗಳನ್ನು ಸುಧಾರಿಸುವದು. "ಶಾಲೆ ನಮ್ಮದು" ಎಂಬ ಾವನೆ ಬೆಳೆಸುವದು.

ಮನುಷ್ಯನು ಸಮಾಜ ಜೀವಿಯೇನೋ ನಿಜ. ಾದರೆ ಅವನ ಸಮಾಜದ ಕಲ್ಪನೆಯು ಸ್ವಾರ್ಥದಿಂದ ೂರಿಸಲ್ಪಟ್ಟಿರುತ್ತದೆ. ತನ್ನ ಹಾಗೂ ತನ್ನ ಮಕ್ಕಳು-ನುರಿಗಳ ಸಂರಕ್ಷಣೆಯು ಸಮಾಜದ ಮುಖಾಂತರ ಸೋರೆಯದೆಂದೇ ಮೊದಲು ಪ್ರಾಣಿಗಳೆಲ್ಲ ಸಂಘ ಗುಂಪಿನ) ಜೀವನಕ್ಕಾಗಿ ಹಾತೊರೆದವು. ಮನುಷ್ಯ-ನಲ್ಲಿ ಸಂರಕ್ಷಣೆಯ ತಂತ್ರವು ಸಂಸ್ಕೃತಿಯಲ್ಲಿ ರೂಪಾಂತರ ೊಂದಿದರೂ ಅದರ ಅಂತರಾಳದಲ್ಲಿ ಸ್ವಾರ್ಥವು ತಾಂಡವ ಾಡುತ್ತಿದೆ. ಇದೇ ಸಮಾಜದಲ್ಲಿಯ ಅನೇಕ ತೊಂದರೆ ತಕ್ಕಾಟಗಳಿಗೆ ಕಾರಣವಾಗಿದೆ. ಸಂಕುಚಿತ ದೃಷ್ಟಿ-ಯನ್ನು ವಿಶಾಲಗೊಳಿಸಿ ಎಲ್ಲರ ಹಿತ-ಸಂಬಂಧಗಳ ಕಡೆಗೂ ಮನಸ್ಸು ಹರಿಯುವಂತೆ ಮಾಡುವದು ಮತ್ತು ಸಾಮಾಜಿಕ ಜೀವನದಲ್ಲಿ ಹೆಜ್ಜೆ ಹೆಜ್ಜೆಗೂ ಬರುವ ಘರ್ಷಣೆಗಳಿಗೆ ಎಡೆಗೊಡದೆ ಪರಸ್ಪರ ಹೊಂದಿಕೊಂಡು ಹೋಗಲು ಕಲಿಸುವದೇ ಕೌಟುಂಬಿಕ ಜೀವನದ ಗುರಿ ಎಂದು ಫ್ರಾನ್ಸಿಸ್ ಪಾರ್ಕರ ಎಂಬವರು ಕೆಳಗಿನ ಶಬ್ದ-ಗಳಲ್ಲಿ ನುಡಿದಿದ್ದಾರೆ.

Character constantly realising itself in practical cityzenship, in community life in complete living is the immediate, everlasting and the only aim of the School."

(ಮುಂದುವರಿದುದು)

ಪ್ರಕಟನೆ.

ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಅರ್ಹತೆಯನ್ನು ಪಡೆಯದೆ ಇರುವ ಶಿಕ್ಷಕರಿಗೆ ಅವರು ಪ್ರಾ. ಶಾ. ವ. ಪತ್ರ ಪರೀಕ್ಷೆಯನ್ನು ಪಾಸಾಗುವ ಅವಧಿಯನ್ನು ಸರಕಾರದವರು ವಿಶಿಷ್ಟ ನಿಯಮವೆಂದು ಗಣಿಸಿ ೧೯೩೩ ಮೇ ೩೧ ರವರೆಗೆ ಜಿಲ್ಲಿಸಿದ್ದಾರೆ.

ಧಾರವಾಡ
೧೪-೫-೧೯೩೨.

(ಸಹಿ) ಡಿ. ವ್ಹಿ. ಚಿಕ್ಕರಮನೆ.
ಎಜ್ಯುಕೇಶನಲ್ ಇನಸ್ಪೆಕ್ಟರ್,
ಧಾರವಾಡ ವಿಭಾಗ
ಧಾರವಾಡ

ಧಾರವಾಡ ಕೇಂದ್ರದ
ಗಂಡು ಮಕ್ಕಳ ಟ್ರೈನಿಂಗ ಕಾಲೇಜುಗಳ
ಪರೀಕ್ಷೆಯ ಪಾಠಗಳು

(ಚಿಕ್ಕದೊಂದು ವಿಮರ್ಶೆ)

ಲೇಖಕರು:— ಶ್ರೀಯುತ ಶಿಂತ್ರಿ ಬಸಪ್ಪನವರು ಬಿ. ಎ. ಬಿ. ಟಿ.
(ನಿವೃತ್ತ ಆಸಿಸ್ಟಂಟ, ಎಜ್ಯುಕೇಶನಲ್, ಇನ್‌ಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ.)

ಪರೀಕ್ಷಕರ ಮಂಡಲ.

ಶಿಕ್ಷಣ ಖಾತೆಯವರಿಂದ ಈ ವಿಭಾಗದ ಎಲ್ಲ ಕೇಂದ್ರ ಗಳಿಗೆ ಪರೀಕ್ಷಕರ ಮಂಡಲವೊಂದು ನಿಯಮಿಸಲ್ಪಟ್ಟಿಂತೆ ಈ ಕೆಂದ್ರಕ್ಕೂ ಅಂತಹದೊಂದು ಮಂಡಲವು ನಿಯಮಿಸಲ್ಪಟ್ಟಿತ್ತು. ಈ ಮಂಡಲದಲ್ಲಿ ಕೆಲವು ಸರಕಾರೇತರ ಸದಸ್ಯರಿದ್ದರು. ಅವರಲ್ಲಿ ನಾನೊಬ್ಬನು. ನನ್ನನ್ನು ಹೊರತುಪಡಿಸಿ ಉಳಿದ ಸರಕಾರೇತರ ಸದಸ್ಯರು ಇಲ್ಲಿಯ ಖಾಸಗಿ ಸಂಸ್ಥೆಗಳ ಮುಖ್ಯಾಧ್ಯಾಪಕರಿದ್ದರು. ನಾನಂತೂ ತೀರಾ ಹೊರಗಿನವನು. ಯಾವ ಸಂಸ್ಥೆಗೂ ಹೊಂದಿಕೊಂಡವನಲ್ಲ. ಇಲ್ಲಿಯ ಗಂಡುಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜದ ಮುಖ್ಯಾಧ್ಯಾಪಕರಾದ ಶ್ರೀಯುತ ಮ. ಗು. ಹಂದ್ರಾಳರವರು ಈ ಮಂಡಲದ ಅಧ್ಯಕ್ಷರು. ಪ್ರತಿವರುಷದಂತೆ ಈ ಸಲವೂ ಆಯಾ ಸಂಸ್ಥೆಯ ಉಮೇದುವಾರರ ಪರೀಕ್ಷೆಯು ಆಯಾ ಸಂಸ್ಥೆಯಲ್ಲಿಯೇ ಜರಗುವ ಏರ್ಪಾಡಾಗಿತ್ತು. ಬಾಸೆಲ್ ಮಿಶನ್ ಕಾಲೇಜದಲ್ಲಿ ಮಾರ್ಚ ತಿಂಗಳ ೬, ೭, ೮ ನೆಯ ತಾರೀಖುಗಳಲ್ಲಿ; ಜೆ. ಈ. ಬೋರ್ಡ ಕಾಲೇಜದಲ್ಲಿ ೧೩, ೧೪, ೧೫ನೆಯ ತಾರೀಖುಗಳಲ್ಲಿ ಮತ್ತು ಸರಕಾರೀ ಕಾಲೇಜದಲ್ಲಿ ೨೪, ೨೫, ೨೭, ೨೮ ನೆಯ ತಾರೀಖುಗಳಲ್ಲಿ ಪರೀಕ್ಷೆಯು ನಡೆಯಿತು. ಪ್ರತಿವರುಷದ ಕಾರ್ಯಕ್ರಮವು ಅಧ್ಯಕ್ಷರಿಂದಲೇ ನಿರ್ಧರಿಸಲ್ಪಡುತ್ತಿತ್ತು.

ಕಾರ್ಯಕ್ರಮವು

ದಿನಾಲು ಪರೀಕ್ಷೆಯ ಪಾಠಗಳು ಮಧ್ಯಾಹ್ನ ೧೫ ಗಂಟೆಗೆ ಸರಿಯಾಗಿ ಪ್ರಾರಂಭವಾಗುತ್ತಿದ್ದವು. ಮೊದಲಿನವೆರಡು ಪಾಠಗಳು ಸಮವಾಯ ಪದ್ಧತಿಯಂತೆ ಕೊಡಲ್ಪಡುತ್ತಿದ್ದವು. ಬೇಸಿಕ್ ಪಾಠದ ಅವಧಿಯು ೭೦ ನಿಮಿಷಗಳ ವರೆಗೆ ಇರುತ್ತಿತ್ತು. ಮೊದಲನೆಯ ಪಾಠದ ನಂತರ ಮಕ್ಕಳ ಸಲುವಾಗಿ ೧೦ ನಿಮಿಷಗಳ ಚಿಕ್ಕದೊಂದು ವಿಶ್ರಾಂತಿಯಿರುತ್ತಿತ್ತು. ಈ ವಿಶ್ರಾಂತಿಯಲ್ಲಿ ಮುಂದೆ ಪಾಠ ಕೊಡುವ ಉಮೇದುವಾರನು ತನ್ನ ವರ್ಗದ ಕೋಣೆಗೆ ಹೋಗಿ ತನ್ನ ಪಾಠಕ್ಕೆ ಬೇಕಾದ ಉಪಕರಣಗಳನ್ನೂ ಬೇರೆ ವ್ಯವಸ್ಥೆಯನ್ನೂ ಸಜ್ಜಾಗಿ ಮಾಡಿಟ್ಟುಕೊಂಡಿರುತ್ತಿದ್ದನು. ಎರಡನೆಯ ಬೇಸಿಕ್ ಪಾಠವು ಮುಗಿದ ನಂತರ ಮಕ್ಕಳ ಸಲುವಾಗಿ ೪೦ ನಿಮಿಷಗಳ ದೀರ್ಘವಾದೊಂದು ವಿಶ್ರಾಂತಿಯಿರುತ್ತಿತ್ತು. ಈ ದೀರ್ಘ ವಿಶ್ರಾಂತಿಯ ನಂತರ ೩೦ ನಿಮಿಷಗಳ ಅವಧಿಯ ಸಾದಾ ಪಾಠಗಳೂ ಬಹು ವರ್ಗದ ಪಾಠಗಳೂ ಯೋಜಿಲ್ಪಟ್ಟಿದ್ದವು. ಇಂತಹ ಪ್ರತಿಯೊಂದು ಪಾಠದ ಕೊನೆಗೆ ೫ ಇಲ್ಲವೆ ೧೦ ನಿಮಿಷಗಳ ಚಿಕ್ಕದೊಂದು ವಿಶ್ರಾಂತಿಯು ಇರುತಿತ್ತು. ಈ ಕಾರ್ಯಕ್ರಮವು ಮಂಡಲದ ಸದಸ್ಯರೆಲ್ಲರ ವೇಳ್ಚುಗೆಗೆ ತುಂಬಾ ಪಾತ್ರವಾಗಿತ್ತು. ಈ ಯೋಜನೆಯಿಂದ ಬೇಸಿಕ್ ಮತ್ತು ಬೇಸಿಕ್ಕೇತರ

ಪಾಠಗಳ ಯೋಗ್ಯತೆಯನ್ನು ತುಲನಾತ್ಮಕ ದೃಷ್ಟಿಯಿಂದ ಒರೆಗೆ ಹಚ್ಚಿನೋಡಲು ಮುಂಡಲದ ಸದಸ್ಯರಿಗೊಂದು ಸುಸಂದರ್ಭವನ್ನು ಮುಂಡಲದ ಅಧ್ಯಕ್ಷರು ಅಪ್ರತ್ಯಕ್ಷವಾಗಿ ಒದಗಿಸಿ ಕೊಟ್ಟಂತಾಗಿತ್ತು.

ಬೇಸಿಕ್ (ಸಮವಾಯ) ಪಾಠಗಳು.

ಯೋಜನಾ ಪದ್ಧತಿ ಮತ್ತು ಕೃತಿಪ್ರಧಾನ ಪದ್ಧತಿ ಇವೆರಡರ ಜೋಡಣೆಯಿಂದ ಈ ಪಾಠಗಳೆಲ್ಲ ಹೆಣೆಯಲ್ಪಟ್ಟಿದ್ದವು. ಆದುದರಿಂದ ಈ ಪಾಠಗಳಲ್ಲಿ ಮಕ್ಕಳು ತೋರಿಸಿದಷ್ಟು ಆಸ್ಥೆಯನ್ನು ಬೇಸಿಕ್ಕೇತರ ಪಾಠಗಳಲ್ಲಿ ತೋರಿಸಿದುದು ಕಂಡು ಬರಲಿಲ್ಲ. ಈ ಸಂಗತಿಯು ಬೆಸಿಕ್ ಪಾಠಗಳ ಹಿರಿಮೆಯನ್ನೂ ಅವುಗಳಲ್ಲಿ ಹಾಸುಹೊಕ್ಕಾಗಿ ಹೆಣೆಯಲ್ಪಟ್ಟಿರುವ ಯೋಜನಾ ಮತ್ತು ಕೃತಿಪ್ರಧಾನ ಪದ್ಧತಿಗಳ ಪ್ರೌಢಿಮೆಯನ್ನೂ ಕೈಯೆತ್ತಿ ತೋರಿಸಿತು ಈ ಪಾಠಗಳ ಮೊದಲನೆಯ ಮೆಟ್ಟಿಂದರೆ **ಯೋಜನೆಯ ಅವಶ್ಯಕತೆ ಮತ್ತು ಪ್ರೇರಣೆ.** ಇದಕ್ಕೆ ಸಮವಾಯ ಪಾಠದ ತಳಹದಿಯೆಂದು ಕರೆಯಬಹುದು. ಮುಂದೆ ಕೊಡಬಹದಾದ ಚಟುವಟಿಕೆಯ ಬಗೆಗೆ ಮಕ್ಕಳ ಮನಸ್ಸನ್ನು ಹದಗೊಳಿಸುವದೂ ಸಜ್ಜುಗೊಳಿಸುವದೂ ಪ್ರೇರೇಪಿಸುವದೂ ಇದೇ ಮೆಟ್ಟಿನಲ್ಲಿಯೇ ಎಂಬ ಸಂಗತಿಯನ್ನು ಓದುಗರು ಗಮನಿಸಬೇಕು. ಈ ಮೆಟ್ಟಿನ ಯಶಾಪಯಶಗಳ ಮೇಲೆ ಇಡಿಯ ಪಾಠದ ಆಗು-ಹೋಗುಗಳು ಅವಲಂಬಿಸಿವೆ. ಈ ಮೆಟ್ಟನ್ನು ಬಹುತರವಾಗಿ ಎಲ್ಲ ಉಮೇದುವಾರರು ಸಮಾಧಾನಕರವಾಗಿ ಮಾಡಿದ್ದುದು ಕಂಡು ಬಂದಿತು. ಒಂದೆರಡು ಅಪವಾದಗಳೂ ಇದ್ದವು. ಕೆಲವರಂತೂ ಅತ್ಯುತ್ತಮವಾಗಿ ಮಾಡಿ ತೋರಿಸಿದರು. ಉದಾಹರಣಾರ್ಥವಾಗಿ ಹೋಳಿ-ಹುಣ್ಣಿಮೆಯು ಬರುವದಿದೆ ಯಾದುದರಿಂದ ಬಣ್ಣ ವಾಡಲು ಜೀಕಳಿಯೆನ್ನು ತಯಾರಿಸುವ ಅವಶ್ಯಕತೆ, ಸ್ವಲ್ಪೇ ದಿನಗಳಲ್ಲಿ ಬಸವ ಜಯಂತಿಯು ಬರುವದಿದೆ ಯಾದುದರಿಂದ ಪೂಜಿಸಲು ಬಣ್ಣವನ್ನು ಸಿಂಪಡಿಸಿ ಬಸವಣ್ಣನವರ ಭಾವಚಿತ್ರವನ್ನು ತಯಾರಿಸುವ ಅವಶ್ಯಕತೆ; ಬಿಸಿಲಿನ ಪ್ರಖರತೆಯು ಹೆಚ್ಚಾಗಿರುವದರಿಂದ ಬೀಸಿ ಕೊಳ್ಳಲು ಬೇಕಾಗುವ ಬೀಸಣಿಕೆಯನ್ನು ತಯಾರಿಸುವ ಅವಶ್ಯಕತೆ, ವರ್ಗದ ಕೊಣೆಯನ್ನೂ ಮನೆಯನ್ನೂ ಸ್ವಚ್ಛವಾಗಿಡಲು ಬೇಕಾಗುವ ಕಸಬರಿಗೆಯನ್ನು ತಯಾರಿಸುವ ಅವಶ್ಯಕತೆ, ಮುಂತಾದವುಗಳು. **ಎರಡನೆಯ ಮೆಟ್ಟು ಕಾರ್ಯ-ವಿವರಣೆ.** ಇದರಲ್ಲಿ ಚಟುವಟಿಕೆಗೆ ಹತ್ತು-ವಸಾಧನ-ಸಾಮಗ್ರಿಗಳು, ಅವುಗಳನ್ನು ಹಂಚುವ ವಿವರಗಳು, ಚಟುವಟಿಕೆಯನ್ನು ಮಾಡುವಾಗ ನೆನಪಿನಲ್ಲಿ ಇಡ ತಕ್ಕ ಸಂಗತಿಗಳು, ಮೊದಲಾದ ವಿವರಗಳನ್ನೆಲ್ಲ ಉಮೇದುವಾರರು ಮಕ್ಕಳಗೂಡ ಚರ್ಚಿಸುತ್ತಿದ್ದರು. **ಮೂರನೆಯ ಮೆಟ್ಟು ಕಾರ್ಯ-ನಿರ್ವಹಣೆ.** ಎಷ್ಟೊ ಉಮೇದುವಾರರು ಸಾಧನ–ಸಾಮಗ್ರಿಗಳನ್ನು ಹಂಚಲು ಪ್ರತಿಯೊಂದಕ್ಕೆ ಒಬ್ಬೊಬ್ಬ ಮಂತ್ರಿಯನ್ನು ನಿಯಮಿಸುತ್ತಿದ್ದರು. ಆಯಾ ಮಂತ್ರಿಗಳು ತಾವು ಹಂಚಬೇಕಾದ ಸಾಮಗ್ರಿಯನ್ನು ಪ್ರತಿಯೊಬ್ಬ ಮಗುವಿಗೆ ಕೊಡುತ್ತ ಹೋಗುತ್ತಿದ್ದರು. ಇದರಿಂದ ಉಳಿದ ಮಕ್ಕಳು ಕೆಲಸವಿಲ್ಲದಂತಾಗಿ ತಮ್ಮ ತಮ್ಮೊಳಗೆ ಮಾತಾಡುತ್ತ ಗದ್ದಲವೆಬ್ಬಿಸುವದು ಕಂಡು ಬರುತ್ತಿತ್ತು. ಕೆಲವು ಉಮೇದುವಾರರು ಸಾಗಿಸುವ ಪದ್ಧತಿಯನ್ನು ಕೈಕೊಂಡಿದ್ದರು. ಉಮೇದುವಾರನು ಮೊದಲನೆಯ ಮಗುವಿನ ಹತ್ತರ ಎಲ್ಲ ಸಾಮಗ್ರಿಗಳನ್ನಿಟ್ಟು ಒಂದೊಂದರಂತೆ ಸಾಗಿಸಲು ಹೇಳುತ್ತಿದ್ದನು. ಮಕ್ಕಳೆಲ್ಲರು ಒಂದೊಂದರಂತೆ ಸಾಮಾನುಗಳನ್ನೆಲ್ಲ ಸಾಗಿಸುತ್ತಿದ್ದರು. ಹಂಚಲಿಕ್ಕೆ ಹತ್ತು ವಷ್ಟೇ ವೇಳೆಯು ಸಾಗಿಸಲಿಕ್ಕೂ ಹತ್ತಿತ್ತು. ಪ್ರತಿಯೊಂದು ಮಗುವು ಸಾಗಿಸುವ ಕ್ರಮದಲ್ಲಿ ತೊಡಗಿದ್ದುದರಿಂದ ಮಾತಾಡಲು ಇಲ್ಲವೆ ಗದ್ದಲ ಮಾಡಲು ಅಸ್ಪದವೇ ಸಿಕ್ಕಲಿಲ್ಲ. ಶಿಶ್ತು ತಾನಾಗಿಯೇ ವರ್ಗದ ಕೋಣೆಯಲ್ಲಿ ನೆಲಸಿದ್ದುದು ಒಡೆದೆದ್ದು ಕಂಡಿತು. ಆದುದರಿಂದ, ಎಲ್ಲ ಸಂಸ್ಥೆಗಳು ಹಂಚುವಾಗಲೂ ತಿರುಗಿ ಕೂಡಿಸುವಾಗಲೂ ಸಾಗಿಸುವ ಪದ್ಧತಿಯನ್ನು ಬಳಕೆಯಲ್ಲಿ ತರುವದು ವಿಹಿತವೆಂದು ತೋರುತ್ತದೆ. ಕೆಲವು ಉಮೇದುವಾರರು ತಾವು ಮಾಡಲಿರಿ ಕೃತಿಯನ್ನು ಮಾಡಿ ತೋರಿಸುವ ಮೊದಲೇ ಎಷ್ಟು ವೇಳೆಯು ಚಟುವಟಿಕೆಗೆ ಹತ್ತಬಹುದೆಂಬುದನ್ನು ಅಂದಾಜ ಮಾಡಿ ಹೇಳಲು ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುತ್ತಿದ್ದರು. ಮಕ್ಕಳು ಮನಸ್ಸಿಗೆ ಬಂದ ಹಾಗೆ ಉತ್ತರಗಳನ್ನು ಕೊಡುತ್ತಿದ್ದರು. ಒಬ್ಬನು ೫ ನಿಮಿಷ, ಮತ್ತೊಬ್ಬನು ೪ ನಿಮಿಷ, ಮಗದೊಬ್ಬನು ೫೦ ನಿಮಿಷಗಳೆಂದು ಉತ್ತರ ಕೊಡುತ್ತಿದ್ದರು. ಈ ಕ್ರಮವು

ಶಾಸ್ತ್ರಸಮ್ಮತವಲ್ಲವೆಂದು ಒತ್ತೆದೆದ್ದು ಕಂಡಿತು. ಮಕ್ಕಳಿಗೆ ಆಂದಾಜು ಮಾಡಲು ಯಾವದಾದರೊಂದು ಆಧಾರವು ಇಲ್ಲವೆ ಅಳತೆಗೋಲು ಬೇಕಲ್ಲವೆ ? ಚಟುವಟಿಕೆಯನ್ನು ಒಬ್ಬರು ಮಾಡಿದ್ದನ್ನು ನೋಡಿದ ಹೊರತು ತಮಗೆಷ್ಟು ವೇಳೆಯು ಹತ್ತಬಹುದೆಂಬುದನ್ನು ಅವರು ಹೇಗೆ ತರ್ಕ ಮಾಡಿ ಹೇಳಬೇಕು ? ಕೆಲವು ಉಮೇದುವಾರರು ಮಾದರಿ ಕೃತಿಯನ್ನು ಮಾಡಿ ತೋರಿಸಿದ ನಂತರ ಮಕ್ಕಳಿಗೆ ತಮಗೆಷ್ಟು ವೇಳೆಯು ಹತ್ತಬಹುದೆಂಬುದನ್ನು ಆಂದಾಜು ಮಾಡಿ ಹೇಳಲು ಪ್ರಶ್ನೆಗಳನ್ನು ಕೇಳುತ್ತಿದ್ದರು. ಇಂತಹ ಪ್ರಶ್ನೆಗಳಿಗೆ ಸರಿಯಾಗಿ ಅಂದಾಜು ಮಾಡಿದ ಉತ್ತರಗಳು ಮಕ್ಕಳ ಕಡೆಯಿಂದ ಬರುತ್ತಿದ್ದುದು ಕಂಡು ಬಂದಿತು. ಆದುದರಿಂದ, ಎಲ್ಲ ಸಂಸ್ಥೆಗಳು ಈ ಕ್ರಮವನ್ನು ಕೈಕೊಳ್ಳುವದು ಲೇಸು.

ನಾಲ್ಕನೆಯ ಮೆಟ್ಟು ಕ್ಷಾರ್ಯಸ್ವಯಂಸ್ಫೂರ್ತಿ ಹಾಗೂ ಪರಿಶೀಲನೆ. ಈ ಮೆಟ್ಟಿನ್ನು ಸಾಮಾನ್ಯವಾಗಿ ಎಲ್ಲ ಉಮೇದುವಾರರು ಚನ್ನಾಗಿ ಮಾಡಿದರು. ಐದನೆಯ ಮೆಟ್ಟು **ದೃಢೀಕರಣ.** ಈ ಮೆಟ್ಟಿಗೆ ಹೋದ ವರುಷ ಜ್ಞಾನಸಾಧನದ ಸುಸ್ಪಸಂಗಗಳೆಂದು ನಾಮಕರಣವಾಗಿತ್ತು. ಈ ವರುಷ ಇದಕ್ಕೆ ದೃಢೀಕರಣವೆಂದು ಹೆಸರಿಡಲಾಗಿದೆ. ಚಟುವಟಿಕೆಯನ್ನು ಮಾಡುವಾಗ ಮಕ್ಕಳು ಪಡೆದ ಅನುಭವಗಳನ್ನೆಲ್ಲ ಕ್ರೋಢೀಕರಿಸಿ ಸುಸಂಬದ್ಧವಾಗುವಂತೆ ಹೊಂದಿಸುವದು ಮತ್ತು ಅವು ಮಕ್ಕಳ ನೆನಪಿನಲ್ಲಿ ಶಾಶ್ವತವಾಗಿ ಉಳಿಯುವಂತೆ ಮಾಡುವದು ಈ ಮೆಟ್ಟಿನ ಉದ್ದೇಶವಾಗಿರಲು ಸಾಕು. ಆದುದರಿಂದ ಈ ಮೆಟ್ಟಿಗೆ ದೃಢೀಕರಣವೆಂದು ನಾಮಕರಣ ಮಾಡಿದುದು ಹೆಚ್ಚು ಯೋಗ್ಯವೆಂದು ನಮ್ಮ ಮತ. ಸಮನ್ವಿತ ವಿಷಯಗಳ ಚರ್ಚೆಯಾಗುವದು ಇದೇ ಮೆಟ್ಟಿನಲ್ಲಿ. ಪ್ರತಿಯೊಂದು ಸಮನ್ವಿತ ವಿಷಯದ ಕೊನೆಗೆ ಕ್ರೀಡಾಪದ್ಧತಿಗನುಸರಿಸಿ ರಚಿಸಿದ ಕೆಲವು ಅಭ್ಯಸನಗಳು ಇರುವದೊಳಿತು. ಇವುಗಳ ಮಹತ್ವವು ಶಿಕ್ಷಣಶಾಸ್ತ್ರದಲ್ಲಿ ಅಷ್ಟಿಷ್ಟಲ್ಲ. ಮಕ್ಕಳು ಹೊಸ ಜ್ಞಾನವನ್ನು ಎಷ್ಟರ ಮಟ್ಟಿಗೆ ಅಳವಡಿಸಿಕೊಂಡರೆಂಬುದನ್ನು ಕಂಡು ಹಿಡಿಯಲು ಇವು ಒರೆಗಲ್ಲುಗಳಾಗಿವೆ ಹರ್ಬಾರ್ಟನು ಗೊತ್ತುಪಡಿಸಿದ ಮೆಟ್ಟುಗಳಂತೆ ಇಲ್ಲಿಯೂ ಐದು ಮೆಟ್ಟುಗಳವೆ. ಪ್ರತಿಯೊಂದು ಮೆಟ್ಟಿನಲ್ಲಿ ಕೆಲವು ಅವಾಂತರ ಮೆಟ್ಟುಗಳವೆ. ಪಾಠವನ್ನು ಕೊಡಲು ಅದಕ್ಕೊಂದು ನಿಶ್ಚಿತ ಸ್ವರೂಪವು ಬೇಕಲ್ಲವೆ ? ಅದಿಲ್ಲದಿದ್ದರೆ ಶಿಕ್ಷಕ-ಶಿಕ್ಷಕಿಯರು ತಮ್ಮ ಮನಸ್ಸಿಗೆ ಬಂದ ಹಾಗೆ ಪಾಠಗಳನ್ನು ಕೊಡಬಹುದು. ಆದುದರಿಂದ ಪಾಠದಲ್ಲಿ ಕೆಲವು ಮೆಟ್ಟುಗಳನ್ನು ರಚಿಸಿ ಅವುಗಳನ್ನು ಶಿಕ್ಷಣ-ಶಾಸ್ತ್ರಕ್ಕೆ ಸರಿಹೋಗುವಂತೆ ಕ್ರಮಬದ್ಧವಾಗಿ ಹೊಂದಿಸಿ ಒಂದು ಚೌಕಟ್ಟಿನಲ್ಲಿ ಹಾಕಿಡುವ ಪರಿಪಾಠವಿದೆ. ಹರ್ಬಾರ್ಟನು ಇದೇ ತತ್ವಕ್ಕನುಸರಿಸಿ ತನ್ನ ಮೆಟ್ಟುಗಳನ್ನು ಕಂಡು ಹಿಡಿದನು. ಅದರಂತೆಯೇ ಬೆಸಿಕ್ ಪಾಠದ ಮೆಟ್ಟುಗಳನ್ನು ರಚಿಸಿ ಕ್ರಮಬದ್ಧವಾಗಿ ಹೊಂದಿಸಿ ಒಂದು ಚೌಕಟ್ಟಿನಲ್ಲಿ ಹಾಕಿಟ್ಟಿದ್ದಾಗಿದೆ. ಶಿಕ್ಷಕ-ಶಿಕ್ಷಕಿಯರು ತಮ್ಮ ಪಾಠಗಳನ್ನು ಆ ಮೆಟ್ಟುಗಳಿಗನುಸರಿಸಿ ತಯಾರಿಸಿಕೊಳ್ಳಬೇಕು.

ಬೇಸಿಕ್ಕೇತರ ಪಾಠಗಳು.

ಬೇಸಿಕ್ ಪಾಠಗಳಲ್ಲಿ ಮಕ್ಕಳು ತೋರಿಸಿದಷ್ಟು ಅಭಿರುಚಿ ಆಸಕ್ತಿಗಳು ಈ ಪಾಠಗಳಲ್ಲಿ ಕಂಡು ಬರಲಿಲ್ಲ. ಇದರ ಮೂಲಕಾರಣವು ಚಟುವಟಿಕೆಯ ಅಭಾವವೆಂದು ತೋರುತ್ತಿದೆ. ಹರ್ಬಾರ್ಟನು ಗೊತ್ತುಪಡಿಸಿದ ಮೆಟ್ಟುಗಳಿಗನುಸರಿಸಿ ಪಾಠಗಳು ಚನ್ನಾಗಿ ಕೊಡಲ್ಪಟ್ಟವು. ಇತಿಹಾಸದ ಇಲ್ಲವೆ ಭೂಗೋಲದ ಪಾಠಗಳಲ್ಲಿ ನಕಾಶೆದ ಪ್ರತಿಗಳನ್ನು ಹಂಚುವಾಗ ಮೇಲೆ ಹೇಳಿದಂತೆ ಸಾಗಿಸುವ ಪದ್ಧತಿಯನ್ನು ಅಂಗೀಕರಿಸುವದು ವಿಹಿತವು. ಬಹುವರ್ಣದ ಪಾಠಗಳಾದರೂ ಸಮಾಧಾನಕರವಾಗಿದ್ದವು. ಆದರೆ, ಅವುಗಳಲ್ಲಿ ಗಣಿತ - ಗದ್ಯಗಳ ಜೋಡಣೆಯು ಹೆಚ್ಚಾಗಿ ಕಂಡು ಬಂದಿತು. ಮೇಲೆ ಹೇಳಿದಂತೆ ಪ್ರತಿಯೊಂದು ಪಾಠದ ಕೊನೆಗೆ ಕ್ರೀಡಾಪದ್ಧತಿಗನುಸರಿಸಿ ರಚಿಸಿದ ಕೆಲವು ಅಭ್ಯಸನಗಳು ಅವಶ್ಯವಾಗಿ ಇರಬೇಕು. ಇವು ಪರೀಕ್ಷಕರ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮವನ್ನುಂಟು ಮಾಡುವವು

ಕೆಲವು ಸಾಮಾನ್ಯ ಲೋಪ-ದೋಷಗಳು.

ಎಲ್ಲ ತರಹದ ಪಾಠಗಳಲ್ಲಿ ಕಂಡುಬಂದ ಕೆಲವು ತಪ್ಪು-ತಡೆಗಳನ್ನು ಶೇಖರಿಸಿ ಇಲ್ಲಿ ಕೊಡಲಾಗಿದೆ. ಇವುಗಳನ್ನು ಟ್ರೈನಿಂಗ ಸಂಸ್ಥೆಗಳಲ್ಲಿ ಕೆಲಸ ಮಾಡುವವರು ಗಮನಿಸುವದೊಳಿತು.

(ಅ) ಉಮೇದುವಾರರು ಕರಿ ಹಲಿಗೆಯ ಮೇಲೆ ಬರೆಯುವಾಗ ಕಿರ್ರೆಂದು ಸಪ್ಪಳ ಮಾಡುವದು ಕೆಲವರ ಪಾಠಗಳಲ್ಲಿ ಕಂಡುಬಂದಿತು. ಖಡುವನ್ನು ಸರಿಯಾಗಿ ಹಿಡಿದು ಬರೆಯುವ ಪದ್ಧತಿಯು ಅವರಿಗೆ ಗೊತ್ತಿರಲಿಲ್ಲ. ಕರಿ ಹಲಿಗೆಯ ಪಾತಳಿಗೆ ಸುಮಾರು ೨೨ ಅಂಶಗಳ ಕೋನ ಮಾಡಿಕೊಂಡು ಬರೆದರೆ ಕಿರ್ ಕಿರ್ ಎಂದು ಸಪ್ಪಳವಾಗುವದಿಲ್ಲ.

(ಆ) ಕರಿ ಹಲಿಗೆಯ ಮೇಲೆ ಬರೆದದ್ದನ್ನು ವರಿಸುವ ಸರಿಯಾದ ಪದ್ಧತಿಯು ಕೆಲ ಉಮೇದುವಾರರಿಗೆ ಗೊತ್ತಿರಲಿಲ್ಲ. ವರಿಸಲು ಅರಿವೆಯು ಇದ್ದರು ಸಹ ಕೆಲವರು ತಮ್ಮ ಬೆರಳುಗಳಿಂದಲೂ ಕೈಯಿಂದಲೂ ವರಿಸಿದರು. ಕೆಲವರು ಮೇಲಿನಿಂದ ಕೆಳಗೂ ಕೆಳಗಿನಿಂದ ಮೇಲೂ ಛಳ ವರಿಸುವ ಅರಿವೆಯಿಂದ ಸರ ಸರ ತಿಕ್ಕಿ ಖಡುವಿನ ಸಂಣ ಸಂಣ ಕಣಗಳನ್ನೆಲ್ಲ ಹವೆಯಲ್ಲಿ ಸ್ವಚ್ಛಂದವಾಗಿ ತೇಲಾಡಲು ಅನುವುಮಾಡಿಕೊಟ್ಟರು. ಕೆಲವರು ಎಡದಿಂದ ಬಲಕ್ಕೂ ಬಲದಿಂದ ಎಡಕ್ಕೂ ಗಸ ಗಸ ತಿಕ್ಕಿ ಕರೇ ಹಲಿಗೆಗೆ ಅಂಟಿಕೊಂಡಿದ್ದ ಕಣಗಳನ್ನೆಲ್ಲ ಹೊಡೆದೆಬ್ಬಿಸಿದಂತೆ ಮಾಡಿ ಅವುಗಳನ್ನು ಮನ ಬಂದಂತೆ ಹವೆಯಲ್ಲಿ ಹಾರಾಡಲು ಹಚ್ಚಿದರು. ನಿಜವಾದ ಪದ್ಧತಿಯೆಂದರೆ ಮೇಲಿನಿಂದ ಕೆಳಗೆ ಸಾವಕಾಶವಾಗಿ ವರಿಸಬೇಕು. ಹೀಗೆ ವರಿಸುವದರಿಂದ ಕಣಗಳೆಲ್ಲ ಕೆಳಗೆ ನೆಲದ ಮೇಲೆ ಬೀಳುತ್ತವೆ ಮತ್ತು ಅವುಗಳಿಗೆ ಹವೆಯಲ್ಲಿ ಹಾರಾಡಲು ಆಸ್ಪದವೇ ಸಿಗುವದಿಲ್ಲ. ತಪ್ಪು ಪದ್ಧತಿಯಿಂದ ಕರೇ ಹಲಿಗೆಯನ್ನು ವರಿಸಿದರೆ ಕಣಗಳೆಲ್ಲ ನಮ್ಮ ಸುತ್ತಲಿನ ಹವೆಯಲ್ಲಿ ಹಾರಾಡುವವು ಮತ್ತು ಉಸರಾಡಿಸುವಾಗ ಅವು ನಮ್ಮ ಪುಪ್ಪುಸದಲ್ಲಿ ಸೇರಿ ಅಪಾಯವನ್ನು ಉಂಟು ಮಾಡುವವು. ಆದುದರಿಂದ ಕರಿ ಹಲಿಗೆಯನ್ನು ಸರಿಯಾದ ಪದ್ಧತಿಯಿಂದ ವರಿಸುವದನ್ನು ಉಮೇದುವಾರರು ಮರೆಯಬಾರದು.

(ಇ) ನಕಾಶ, ಚಿತ್ರ ಇಲ್ಲವೆ ಪಟವನ್ನು ತೋರಿಸಲು ಕೆಲ ಉಮೇದುವಾರರು ಕೈಬೆರಳುಗಳನ್ನು ಉಪಯೋಗಿಸಿದರು. ಕಾಗದ ಸುರುಳಿ ಇಲ್ಲವೆ ಮೊಂಡ ತುದಿಯ ಬಿದರಿನ ಇಲ್ಲವೆ ಬೆತ್ತದಕಡ್ಡಿಯಂತಹ ಸಾಧನವನ್ನು ಉಪಯೋಗಿಸಬೇಕು. ಸಾದಾ ಪಾಠದ ಉಮೇದುವಾರನೊಬ್ಬನು ಕಾಗದದ ಸರುಳಿಯನ್ನು ತಂದಿಟ್ಟಿದ್ದರೂ ಮೊದಲನೆಯ ಸಲ ಮಾತ್ರ ಅದರಿಂದ ತೋರಿಸಿ ಮುಂದೆ ಕಡೆತನಕ ಕೈಬೆರಳಿನಿಂದಲೇ ತೋರಿಸಿ ಪಾಠವನ್ನು ಸಾಗಿಸಿದನು. ಸುರುಳಿಯಿಂದ ತೋರಿಸುವ ರೂಢಿಯು ಅವನಲ್ಲಿ ನೆಲಸಿರಲಿಲ್ಲವೆಂಬುದು ಇದರಿಂದ ಸ್ಪಷ್ಟವಾಯಿತಲ್ಲವೆ ? ಬೆವರಿನಿಂದ ಇಲ್ಲವೆ ಧೂಳ ಮುಕರಿದ ಎಷ್ಟೋ ಸಾಮಾನುಗಳನ್ನು ಕ್ಷಣ ಕ್ಷಣಕ್ಕೆ ಹಿಡಿದಾಗ ನಮ್ಮ ಕೈ ಬೆರಳುಗಳು ಹೊಲಸಾಗಿರುವ ಸಂಭವ ಹೆಚ್ಚು. ಇಂತಹ ಹೊಲಸಿನಿಂದ ಬೆರಳುಗಳಿಂದ ನಕಾಶಗಳನ್ನೂ ಚಿತ್ರಗಳನ್ನೂ ಪಟಗಳನ್ನೂ ತೋರಿಸಿದರೆ, ಅವು ಬೇಗನೆ ಹೊಲಸಾಗಿ ಕೆಟ್ಟು ಹೋಗುತ್ತವೆ. ಆದುದರಿಂದ ಕಾಗದದ ಸುರುಳಿಯಂತಹ ತೋರಿಸುವ ಸಾಧನವನ್ನು ಉಮೇದುವಾರರು ಉಪಯೋಗಿಸುವದೊಳಿತು. ಸುರುಳಿಯನ್ನು ತಯಾರಿಸಲು ಏನೂ ರೊಕ್ಕ ಬೀಳುವದಿಲ್ಲ.

(ಈ) ಪಾಠದಲ್ಲಿ ಮಕ್ಕಳಿಗೆ ತೋರಿಸಬೇಕಾದ ಚಿತ್ರ ಮೊದಲಾದ ಉಪಕರಣಗಳನ್ನು ಉಮೇದುವಾರರು ಮೊದಲೇ ಕ್ರಮಬದ್ಧವಾಗಿ ಹೊಂದಿಸಿಟ್ಟುಕೊಂಡಿರಬೇಕು ಕೆಲವು ಉಮೇದುವಾರರು ಈ ಪ್ರಕಾರ ವ್ಯವಸ್ಥೆಯನ್ನು ಮಾಡಿಟ್ಟುಕೊಂಡಿದುದು ಕಂಡು ಬರಲಿಲ್ಲ. ಪಾಠ ನಡೆದಾಗ ಅವುಗಳನ್ನು ಹುಡುಕುತ್ತಲೂ ಕಿತ್ತಾಡುತ್ತಲೂ ಕುಳಿತರು. ಇದರಿಂದ ಮಕ್ಕಳ ಅವಧಾನವು ಹೊರಟೆದ್ದು ಹೋಗಿ ಅವರು ತಮ್ಮ ತಮ್ಮಲ್ಲಿಗೆ ಮಾತಾಡುತ್ತ ಗದ್ದಲವೆಬ್ಬಿಸಿದರು. ಒಮ್ಮೆ ಕೈಬಿಟ್ಟು ಹೋದ ಮಕ್ಕಳ ಅವಧಾನವನ್ನು ಪುನಃ ಜಗ್ಗಿ ತರುವದು ಬಲು ಪ್ರಯಾಸದ ಕೆಲಸವು. ಈ ದ್ರೋಷವು ಬೆಸಿಕ್ ಪಾಠಗಳಲ್ಲಿ ಎಳ್ಳಷ್ಟು ಕಂಡು ಬರಲಿಲ್ಲ. ಸ್ವಲ್ಪೆ ಬೇಸಿಕ್ಕೇತರ ಪಾಠಗಳಲ್ಲಿ ಮಾತ್ರ ಈ ಅವ್ಯವಸ್ಥೆಯು ಕಂಡು ಬಂದಿತು.

(ಉ) ಗ್ರಾಮ್ಯ ಶಬ್ದಗಳ ಉಪಯೋಗವನ್ನು ಉಮೇದುವಾರರು ತಮ್ಮ ಪಾಠದಲ್ಲಿ ಮಾಡಬಾರದು. ಶಕ್ಯವಿದ್ದಷ್ಟು ಶುದ್ಧ ಶಬ್ದಗಳನ್ನು ಪಯೋಗಿಸಬೇಕು. ಈ ದ್ರೋಷವು ಸ್ವಲ್ಪೇ ಉಮೇದುವಾರರಿಗೆ ಮಾತ್ರ ಸಂಬಂಧಿಸಿದೆ.

(ಊ) ಬಹಳಷ್ಟು ಉಮೇದುವಾರರು ತಮ್ಮ ಪಾಠದ ಟಿಪ್ಪಣಿ ಬುಕ್ಕುಗಳಲ್ಲಿ ಕೊನೆಯ ಮೆಟ್ಟಿಗೆ 'ಪುನರಾವಲೋಕನ' ಎಂದು ಬರೆದಿದ್ದಾರೆ. ನಿಜವಾದ ಶಬ್ದವು 'ಪುನರವಲೋಕನ' (ಪುನ: + ಅವಲೋಕನ, ಪುನರ್+ ಅವಲೋಕನ) ಎಂದು ಇದೆ.

ಕೊನೆಯ ಮಾತು.

ಹೋದ ವರುಷವೂ ನಾನು ಪರೀಕ್ಷಕರ ಮಂಡಲದ ಸದಸ್ಯನಾಗಿದ್ದೆ. ಈ ವರುಷದ ಪಾಠಗಳಲ್ಲಿ ಪ್ರಗತಿಯನ್ನು ಹೊಂದಿದುದು ಕಂಡು ಬಂದಿತು. ಬೆಸಿಕ್ ಪಾಠಗಳನ್ನು ಕೊಟ್ಟ ಉಮೇದುವಾರರು ಆಯ್ದುಕೊಂಡ ಚಟುವಟಿಕೆಗಳಲ್ಲಿ ವಿವಿಧತೆಯೂ ಹೊಸತನವೂ ಕಂಡು ಬಂದವು. ಪ್ರಾರಂಭದಲ್ಲಿ ಬೆಸಿಕ್ ಪಾಠವನ್ನು ಕೊಟ್ಟ ಉಮೇದುವಾರರು ಆಯ್ದುಕೊಂಡ ಚಟುವಟಿಕೆಯಂದರೆ ನೂಲುವದಾಗಿತ್ತು. ಇದರಿಂದ ಪರೀಕ್ಷಕರಿಗೆ ತಲೆಬೇಸರವಾಗುವ ಸಂಭವವಿರುತ್ತಿತ್ತು. ಈಗ ಬೇಸಿಕ್ ಶಿಕ್ಷಣದ ದೃಷ್ಟಿಯು ವಿಶಾಲವಾಗುತ್ತ ನಡೆದಿದೆ. ನಿತ್ಯದ ಜೀವನದಲ್ಲಿ ಉಪಯೋಗಬೀಳುವ ಸಾಮಾನುಗಳನ್ನೆಲ್ಲ ತಯಾರಿಸಲು ನಮ್ಮ ಮಕ್ಕಳಿಗೆ ಕಲಿಸಲುಪಕ್ರಮಿಸಿದ್ದಾರೆ. , ಇದು ನಿಜಕ್ಕೂ ಆನಂದದ ಸಂಗತಿಯು. ಈ ದೃಷ್ಟಿಯು ದಿನದಿನಕ್ಕೆ ಇನ್ನೂ ವಿಶಾಲವಾಗುತ್ತ ಸಾಗಿತೆಂದರೆ ಅದು ಜನಪ್ರಿಯವಾಗುವದರಲ್ಲಿ ಸಂದೇಹವಿಲ್ಲ. ಹೋದ ವರುಷವೇ ಇಂತಹದೊಂದು ವಿಮರ್ಶೆಯನ್ನು ಬರೆಯಬೇಕೆಂಬ ಹಂಬಲವು ನನ್ನಲ್ಲಿ ಉದಯವಾಗಿತ್ತು. ಆದರೆ ಆಗಿನ ಕಾರ್ಯಬಾಹುಲ್ಯದ ಮೂಲಕ ಬರೆಯುವದಾಗಲಿಲ್ಲ. ಈ ವಿಮರ್ಶೆಯಲ್ಲಿ ಕೊಟ್ಟ ಮತಗಳು ಕೇವಲ ವೈಯಕ್ತಿಕವಾಗಿವೆ. ಉಳಿದ ಸದಸ್ಯರಿಗೆ ಅವು ಸಂಬಂಧವಿಲ್ಲ. ವೈಯಕ್ತಿಕವಾಗಿ ನನ್ನ ನಿರೀಕ್ಷಣೆಯಲ್ಲಿ ಕಂಡು ಬಂದ ಸಂಗತಿಗಳನ್ನಷ್ಟೇ ಬರೆಯಲಾಗಿದೆ. ಲೋಪ-ದೋಷಗಳನ್ನು ವಿವರಿಸಿ ಜೊತೆಗೆ ಸಲಹೆಸೂಚನೆಗಳನ್ನೂ ಕೊಡಲಾಗಿದೆ. ಹಂಸ ಕ್ಷೀರನ್ಯಾಯದಂತೆ ಅವುಗಳಲ್ಲಿ ಯೋಗ್ಯವೆಂದು ಕಂಡು ಬಂದವುಗಳನ್ನಷ್ಟೆ ಓದುಗರು ಸ್ವೀಕರಿಸಬಹುದು.

ಸುದ್ದಿ ಸಮಾಚಾರ

ವಿಜಾಪುರದ ಸರಕಾರೀ ಟ್ರೇನಿಂಗ ಕಾಲೇಜಿನಲ್ಲಿ ಸಮಾಜ ಶಿಕ್ಷಣ ಕಾರ್ಯಕರ್ತರ ತರಬೇತಿ ವರ್ಗವು ದಿನಾಂಕ ೧೫-೫-೫೨ ರಿಂದ ಹದಿನೈದು ದಿನಗಳ ವರೆಗೆ ನಡೆಯಿತು. ಶ್ರೀ ಗುಂಜೀಕರ ಎಜ್ಯುಕೇಶನಲ್ ಆಫೀಸರ ಡಿ. ಎಸ್. ಬಿ. ವಿಜಾಪುರ ಅವರು ಈ ವರ್ಗದ ಉದ್ಘಾಟನೆಯನ್ನು ಜರುಗಿಸಿದರು. ೫೦ ಜನ ಕಾರ್ಯಕರ್ತರು ಈ ವರ್ಗದಲ್ಲಿ ಹಾಜರಿದ್ದರು.

ಈ ತರಬೇತಿ ವರ್ಗದ ಮುಕ್ತಾಯ ಸಮಾರಂಭವು ದಿನಾಂಕ ೧೫-೫-೧೯೫೨ ನೆಯ ಗುರುವಾರ ಸಂಜೆಯ ೪-೦೦ ಗಂಟೆಗೆ ನೆರವೇರಿತು: ಶ್ರೀ ಚನ್ನಬಸಪ್ಪ ಅಂಬಲಿ, ಎಮ್. ಎಲ್. ಎ. ಅವರು ಮುಖ್ಯ ಅತಿಥಿಗಳಾಗಿದ್ದರು.

ಕಾಯಿಮು ಆಗದೆ ಇದ್ದ ಪ್ರಾಥಮಿಕ ಶಾಲಾ ಶಿಕ್ಷಕರು ಟ್ರೇನಿಂಗಕ್ಕೆ ಕಳಿಸಲ್ಪಟ್ಟಿದ್ದರೆ ಮತ್ತು ಟ್ರೇನಿಂಗ ಪಡೆಯುತ್ತಿರುವಾಗ ಟ್ರೇನಿಂಗದ ಅವಧಿಯನ್ನು ಹಿಡಿದು ಅವರ ನೌಕರಿಯ ಅವಧಿಯು ಮೂರು ವರ್ಷ ಪೂರ್ಣವಾಗುತ್ತಿದ್ದರೆ ಅಂಥ ಶಿಕ್ಷಕರು, ಸರಕಾರದವರ ಹೊಸ ಹುಕುಮಿನ ಪ್ರಕಾರ, ಶಿಷ್ಯ ವೃತ್ತಿಯ ಬದಲು ಪೂರ್ಣ ಪಗಾರಕ್ಕೆ ಅಂದಿನಿಂದ ಅರ್ಹರಾಗುವರು. ಆದರೆ ಅವರ ಪ್ರಗತಿಹಾಗೂ ರೀತಿ-ನಡಾವಳಿಗಳು ಸಮಾಧಾನಕರವಾಗಿರತಕ್ಕದ್ದು.

ಕನ್ನಡಿಗರು ಒಗ್ಗೂಡಿ ದುಡಿಯಬೇಕು

೩೫ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ
ಡಾ|| ಶಿ. ಚ. ನಂದೀಮಠರ ಭಾಷಣ

ಡಾ|| ಶಿ. ಚ. ನಂದೀಮಠರು

[ಬಾಗಿಲುಕೊಟೀಯ ಬಸವೇಶ್ವರ ಕಾಲೇಜಿನ ಪ್ರಿನ್ಸಿಪಾಲರಾದ ಡಾ|| ಶಿ. ಚ. ನಂದೀಮಠ, ಎಂ.ಎ. ಪಿ.ಎಚ್.ಡಿ. ಅವರು ಇತಿಹಾಸ ಪ್ರಸಿದ್ಧವಾದ, ಕನ್ನಡ ಕಲಾಕೌಶಲ್ಯದ ಆಗರವಾದ ಬೇಲೂರಿನಲ್ಲಿ ಜರುಗಿದ ೩೫ನೆಯ ಕನ್ನಡ ಸಾಹಿತ್ಯಸಮ್ಮೇಳನದ ಅಧ್ಯಕ್ಷ ಪೀಠದಿಂದ ಮಾಡಿದ ಭಾಷಣದ ಸಾರವನ್ನು ಪ್ರಾಥಮಿಕ ಶಿಕ್ಷಕರು ಕನ್ನಡದ ನಂದಾದೀಪವನ್ನು ಸದಾ ಪ್ರಕಾಶಮಾನವಾಗಿ ಇಡುವದರಿಂದ ಅವರ ಉಪಯೋಗಕ್ಕಾಗಿ ಮತ್ತು ಅವರ ಕಾರ್ಯಕ್ಕೆ ಹೆಚ್ಚು ಬೆಳಕು ದೊರೆಯಲೆಂಬ ಉದ್ದೇಶದಿಂದ ಇಲ್ಲಿ ಕೊಡಲಾಗಿದೆ.

—ಪ್ರ. ಸ.]

ಅಧ್ಯಕ್ಷರು ಕನ್ನಡದ ಮತ್ತು ಕನ್ನಡ ನಾಡಿನಮಿಂಚಿ ಹೋದ ಪ್ರೊ. ಶಿ. ಶಿ. ಬಸವನಾಳ ಶ್ರೀ ಎಂ. ಪಿ. ವಾಲಿ, ಶ್ರೀ. ಕೆ. ಕೃ. ಅಯ್ಯಂಗಾರ, ಪೂಣಿಂ ಚಿತ್ತಾಯ, ದಿ|| ಬಿ ರಾಮಸ್ವಾಮಿ, ಶ್ರೀಮತಿ ಡಿ| ಸಾಕಮ್ಮ ಅವರಿಗೆ ಶ್ರದ್ಧಾಂಜಲಿಗಳನ್ನು ಅರ್ಪಿಸಿ ಬೇಲೂರಿನ ಖ್ಯಾತಿಯನ್ನು ವಿವರಿಸುತ್ತ ಇಂತೆಂದರು.—

ಸ್ಥಾನ ಮಹಾತ್ಮೆ

ಕನ್ನಡ ನಾಡಿನ ಚರಿತ್ರೆಯಲ್ಲಿ ಹೊಯಸಳರ ಕಾಲವು ಅತಿ ಮಹತ್ವದ್ದು. ಕನ್ನಡ ಸಂಸ್ಕೃತಿ ಮತ್ತು ಶಿಲ್ಪ ಕಲೆಗಳು ಪರಮಾವಧಿ ಶಿಖರವನ್ನುಮುಟ್ಟಿದ್ದವು. ಬೇಲೂರ ಬಳಿಯಲ್ಲಿರುವ ಹಳೇಬೀಡು (ದ್ವಾರ ಸಮುದ್ರ) ಹೊಯಸಳರ ರಾಜಧಾನಿಯಾಗಿತ್ತು. ಹಳೇಬೀಡು ಬೇಲೂರಗಳಲ್ಲಿರುವ ಶೈವ, ವೈಷ್ಣವ, ಜೈನ ಗುಡಿಗಳು ಧಾರ್ಮಿಕ ಆಂದೋಲನದ ಹೆಗ್ಗುರುತುಗಳಾಗಿವೆ; ಮತ್ತು ಶಿಲ್ಪಕಲೆಯ ಉತ್ತಮ ಮಾದರಿಗಳಾಗಿವೆ ಸಾಹಿತ್ಯದ ದೃಷ್ಟಿಯಿಂದ ಈ ಸ್ಥಳವು ಮಹತ್ವವಾದುದು. ವಿಶೇಷತಃ ವೀರಶೈವ ಸಾಹಿತ್ಯಕ್ಕೆ ಆಕರ ಪ್ರಾಯರಾದ ಕಿರಿಯ ಪದ್ಮರಸ, ಹರಿಹರ, ರಾಘವಾಂಕ

ಮೊದಲಾದವರಿಗೆ ಆಶ್ರಯ, ಪ್ರೋತ್ಸಾಹ ಕೊಟ್ಟ ಸ್ಥಾನವು ಇದೇ. ಹೊಯಸಳ ರಾಜರು ಸರ್ವಧರ್ಮದ ಕವಿಗಳಿಗೆ ಆಶ್ರಯವಿತ್ತು ಪೋಷಿಸಿರುವರು. ನೇಮಚಂದ್ರ, ರುದ್ರಭಟ್ಟ ಮೊದಲಾದ ಕವಿಗಳಿಗೆ ಆಶ್ರಯವನ್ನು ಕೊಟ್ಟು ಕನ್ನಡ ಸಾಹಿತ್ಯವನ್ನು ಬೆಳೆಸಿದರು. ಹೀಗೆ ಧರ್ಮ, ಸಾಹಿತ್ಯ, ಸಂಸ್ಕೃತಿಗಳ ದೃಷ್ಟಿಯಿಂದ ಮಹತ್ವ ಪಡೆದ ಈ ಬೇಲೂರಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವು ನೆರೆವೇರುತ್ತಿರುವುದು ವೈಶಿಷ್ಟ್ಯಪೂರ್ಣವಾಗಿದೆ.

ಭಾರತ – ಕರ್ನಾಟಕ

ಪ್ರಾಚೀನ ಇತಿಹಾಸ, ಸಂಸ್ಕೃತಿ, ಧರ್ಮಗಳಲ್ಲಿ ಭಾರತವನ್ನು ಸರಿಗಟ್ಟುವ ದೇಶಗಳು ತೀರಕಡಿಮೆ. ಸಾವಿರ ವರುಷಗಳಿಂದ ಪರಕೀಯರ ಹಾವಳಿಗೊಳಗಾದ ಭಾರತವು ಸ್ವತಂತ್ರವಾಗಿ ಇಂದಿಗೆ ಐದು ವರುಷಗಳಾದವು. ಈ ಅವಧಿಯಲ್ಲಿ ನಮ್ಮ ಹಿರಿಯರು ಭರತಖಂಡದ ಸರ್ವತೋಮುಖವಾದ ಉನ್ನತಿಗಾಗಿ ಯತ್ನಿಸುತ್ತಿರುವರು; ಇಂತಹ ಸಮಯದಲ್ಲಿ ಭಾರತೀಯರೆಲ್ಲರೂ ದುಡಿಯುವದು ಅಗತ್ಯವಾಗಿದೆ. ಭಾರತದ ಘಟಕವಾದ ಕರ್ನಾಟಕವು ತನ್ನ ಪಾಲಿನ ಕರ್ತವ್ಯವನ್ನು ಮಾಡಬೇಕಾಗಿದೆ. ಪ್ರಾಚೀನಕಾಲದಿಂದಲೂ ಭಾರತಕ್ಕೆ ಕರ್ನಾಟಕವು ಸಲ್ಲಿಸುತ್ತ ಬಂದಿರುವ ಸಾಹಿತ್ಯಸಂಸ್ಕೃತಿಯಲ್ಲಿಯ ಸೇವೆಯು ಭರತಖಂಡದ ಯಾವ ಭಾಗಕ್ಕೂ ಕಡಿಮೆಯಾಗಿಲ್ಲ.

ಧರ್ಮದ ನಿಜವಾದ ಕಲ್ಪನೆ

ಕನ್ನಡ ನಾಡಿನಲ್ಲಿ ಧರ್ಮದ ನಿಜವಾದ ಕಲ್ಪನೆ ಬಿದ್ದಿತು. ಧರ್ಮ ವೈಯಕ್ತಿಕ ವಿಷಯವಾಗಿತ್ತು. ಒಂದೇ ಕುಟುಂಬದಲ್ಲಿ ಬೇರೆ ಬೇರೆ ಮತದ ಅನುಯಾಯಿಗಳು ಪರಸ್ಪರ ಪ್ರೀತಿ ಸಹಾನುಭೂತಿಯಿಂದ ಇರುತ್ತಿದ್ದರು ಎಂಬುದಕ್ಕೆ ಕನ್ನಡನಾಡಿನ ಇತಿಹಾಸದಲ್ಲಿ ಉದಾಹರಣೆಗಳನ್ನು ಕಾಣಬಹುದು.

ರಾಷ್ಟ್ರದ–ಇಂದಿನ ಜಾತ್ಯಾತೀತ ರಾಷ್ಟ್ರದ ಕಲ್ಪನೆ ಯಿಂದರೆ ಧಾರ್ಮಿಕ ಆಚಾರ ವಿಚಾರ ಸ್ವಾತಂತ್ರ್ಯ. ಜಾತ್ಯಾತೀತ ರಾಷ್ಟ್ರವೆಂದರೆ ಧರ್ಮವನ್ನು ಸಂಪೂರ್ಣವಾಗಿ ತ್ಯಜಿಸಿದ ರಾಷ್ಟ್ರವಲ್ಲ. ನಮ್ಮ ಘಟನೆಯಲ್ಲಿ ಮೂಲ ಭೂತ ಹಕ್ಕುಗಳಲ್ಲಿ ಧಾರ್ಮಿಕಸ್ವಾತಂತ್ರ್ಯವೂ ಒಂದಾಗಿದೆ. ಆದ್ದರಿಂದ ಸರಕಾರದ ಉದ್ದೇಶವು ವ್ಯಕ್ತಿಗಳ ಧರ್ಮದಲ್ಲಿ ಕೈಹಾಕುವದಾಗಿಲ್ಲ. ಆದರೆ ಧರ್ಮವು ಆಡಳಿತ, ಶಿಕ್ಷಣ, ರಾಜಕಾರಣ, ಸಾಮಾಜಿಕ ಜೀವನದಲ್ಲಿ ಬರಕೂಡದು; ಭಾರತೀಯರೆಲ್ಲ ಒಂದೇ ಎಂಬ ಭಾವನೆಗೆ ಈ ಧಾರ್ಮಿಕ ಕಲ್ಪನೆ ಅಡ್ಡಿಯನ್ನೊಡ್ಡಕೂಡದು. ಇಂತಹ ಉದಾತ್ತ ಕಲ್ಪನೆಯು ಕನ್ನಡನಾಡಿನಲ್ಲಿ ರೂಢವಾಗಿತ್ತೆಂಬುದಕ್ಕೆ ಐತಿಹಾಸಿಕ ಉದಾಹರಣೆಗಳು ದೊರೆಯುತ್ತವೆ.

ಕಲೆಗಳು

ಸಂಸ್ಕೃತಿದ್ಯೋತಕವಾದ ಶಿಲ್ಪಕಲೆ, ಸಂಗೀತ ಮೊದಲಾದವುಗಳಿಗೆ ಕನ್ನಡನಾಡು ಆಗರವಾಗಿದೆ ಬೇಲೂರಿನ ಚನ್ನಕೇಶವ ದೇವಾಲಯ, ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯ, ಬಾದಾಮಿಯ ಗವಿಗಳು, ಐಹೊಳೆ, ಪಟ್ಟದ ಕಲ್ಲುಗಳಲ್ಲಿರುವ ದೇವಾಲಯಗಳು, ವೇರೂಳಲ್ಲಿ ರಾಷ್ಟ್ರಕೂಟರು ಕೆತ್ತಿಸಿದ ಗುಡಿಗಳು, ಅಜಂತಾದ ಗುಡಿಯಲ್ಲಿರುವ ವರ್ಣಚಿತ್ರಗಳು ಜಗತ್ಪ್ರಸಿದ್ಧ ಕಲೆಯ ಮಾದರಿಯಾಗಿವೆ.

ಕನ್ನಡ–ಸಾಹಿತ್ಯ

ಕನ್ನಡ ಸಾಹಿತ್ಯವು ಪ್ರಾಚೀನವಾದುದಷ್ಟೇ ಅಲ್ಲ, ಕನ್ನಡ ಕವಿಗಳು ಮಹಾಕವಿಗಳ ಮಾಲಿಕೆಯಲ್ಲಿ ಸೇರಲರ್ಹರಾಗಿರುವರು. ಪಂಪ, ರನ್ನ, ನಾಗಚಂದ್ರರು ಬರೆದ ಕೃತಿಗಳನ್ನು ಪರಿಶೀಲಿಸಿದರೆ ಈ ಮಾತಿನ ಸತ್ಯತೆಯು ಮನವರಿಕೆಯಾಗದಿರದು. ಬಸವಯುಗದಲ್ಲಿ ಅಂದರೆ ಸು೧೦೦ ನೆಯ ಶತಮಾನದಲ್ಲಿ ತಲೆದೋರಿದ ವಚನಸಾಹಿತ್ಯಕ್ಕೆ ವಿಶ್ವಸಾಹಿತ್ಯದಲ್ಲಿಯೇ ಶಾಶ್ವತವಾದ ಸ್ಥಾನವಿದೆಯೆಂದು ಹೇಳಬಹುದು. ಇದು ಸತ್ಯಶರಣರ ಅನುಭವದ ಸಾಹಿತ್ಯ. ಧರ್ಮ, ತತ್ವಜ್ಞಾನ, ಸಮಾಜರಚನೆ ಮೊದಲಾದ ವಿಷಯಗಳಲ್ಲಿ ವಚನಕಾರರು ಹೊಸಬೆಳಕನ್ನು ಕಂಡು ಆ ಅನುಭವವನ್ನು ಲೋಕೋಪಕಾರಕ್ಕಾಗಿ ತಿಳಿಗನ್ನಡದಲ್ಲಿ ನುಡಿದು,ನುಡಿದಂತೆ ನಡೆದು ತೋರಿಸಿದರು. ಕನ್ನಡ ಕಾವ್ಯಪ್ರಪಂಚದಲ್ಲಿ ಹರಿಹರ, ರಾಘವಾಂಕ ಮೊದಲಾದವರು ಕಾವ್ಯದ ವಸ್ತುರೂಪಗಳಲ್ಲಿ ಹೊಸಹಾದಿಯನ್ನು ಕಂಡು ಹಿಡಿದರು. ಕನ್ನಡ ಸಾಹಿತ್ಯದ ವಸಂತಕಾಲವೆಂದರೆ

೧೫ನೆಯ ಶತಮಾನ. ವಿಜಯನಗರದ ದೊರೆಗಳ ಪ್ರೋತ್ಸಾಹದಿಂದ ಕನ್ನಡಸಾಹಿತ್ಯ ನಾನಾಮುಖವಾಗಿ ಬೆಳೆದಿದೆ. ೧೬ನೆಯ ಶತಮಾನದಲ್ಲಿ ಮೈಸೂರ ಅರಸರು ವೈಷ್ಣವ ಸಾಹಿತ್ಯ ಉಳಿಯುವಂತೆ ಮಾಡಿದರು. ೧೯ನೆಯ ಶತಮಾನದಲ್ಲಿ ನಂದಳಿಕೆಲಕ್ಷ್ಮಿ ನಾರಣಪ್ಪ, ಬಸಪ್ಪ ಶಾಸ್ತ್ರಿ ಮುಂತಾದ ಪ್ರತಿಭಾಶಾಲಿಗಳು ಕನ್ನಡ ಸಾಹಿತ್ಯವಾಹಿನಿಯನ್ನು ಮುಂದುವರಿಸಿದರು. ೨೦ನೆಯ ಶತಮಾನದಲ್ಲಿ ಕನ್ನಡದ ಸ್ವರೂಪ ಬಹಳ ಬದಲಾಗತೊಡಗಿತು. ಆಂಗ್ಲವಿದ್ಯಾವಂತರಾದ ಬಂಗಾಲಿ ತರುಣರು ತಮ್ಮ ಮಾತೃ ಭಾಷೆಯಲ್ಲಿ ಹೊಸಬಗೆಯ ಸಾಹಿತ್ಯ ನಿರ್ಮಿಸತೊಡಗಿದರು. ಅವರ ಅನುಕರಣವನ್ನು ಉಳಿದ ಪ್ರಾಂತದವರೂ ಮಾಡಲಾರಂಭಿಸಿದರು. ಕ್ರೈಸ್ತಧರ್ಮೋಪದೇಶಕರೂ ದೇಶದ ಭಾಷೆಗಳನ್ನು, ಅವುಗಳ ಸಾಹಿತ್ಯವನ್ನು ಬೆಳೆಯಿಸಿದರು. ಬಂಗಾಲಿ, ಮರಾಠಿ ಭಾಷೆಗಳಲ್ಲಿ ಪ್ರಖ್ಯಾತರಾದ ಸಾಹಿತಿಗಳ ಕೃತಿಗಳ ಅನುವಾದವು ಕನ್ನಡದಲ್ಲಿ ನಡೆಯಿತು. ಆಮೇಲೆ ಸಾಹಿತ್ಯದ ವಿವಿಧ ರೂಪಗಳಲ್ಲಿ ಸ್ವತಂತ್ರ ಗ್ರಂಥಗಳು ,ಕವನ, ಕಥೆ, ಕಾದಂಬರಿ, ನಾಟಕ, ವಿಮರ್ಶೆ ಮೊದಲಾದವು–ಹೊರಬೀಳಹತ್ತಿದವು, ಇವುಗಳಲ್ಲಿ ಕೆಲಮಟ್ಟಿಗೆ ಪ್ರಗತಿಯಾಗಿದೆ, ಇನ್ನೂ ಆಗಬೇಕಾಗುದುದು ಬಹಳವಿದೆ.

ಕರ್ನಾಟಕ ಏಕೀಕರಣ

ಮುಂಬಯಿ, ಮದ್ರಾಸ, ಹೈದರಾಬಾದ, ಕೊಡಗು, ಮೈಸೂರು, ಗೋವಾ ಇವೆಲ್ಲ ಕನ್ನಡ ಪ್ರದೇಶಗಳನ್ನು ಒಟ್ಟು ಗೂಡಿಸಿ ಆಡಳಿತೆಯ ಮತ್ತು ಸಾಂಸ್ಕೃತಿಕ ಸೌಕರ್ಯವನ್ನುಂಟು ಮಾಡಿಕೊಡುವದು ತೀರಅಗತ್ಯವಾಗಿದೆ. ಏಕೀಕರಣವಾದಾಗಲೇ ಎಷ್ಟೋ ಜಟಿಲ ಪ್ರಶ್ನೆಗಳನ್ನು ಬಿಡಿಸಲು ಸಾಧ್ಯವಾಗುವದೆಂದೂ ಅಲ್ಲಿಯ ವರೆಗೆ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಯು ಸಾಧ್ಯವಾಗದೆಂದೂ ಕನ್ನಡಿಗರೆಲ್ಲರಿಗೂ ಮನವರಿಕೆಯಾಗಿದೆ. ಕನ್ನಡಿಗರು ಬೇರೆ ಬೇರೆ ಆಡಳಿತಗಳಲ್ಲಿ ಹರಿದು ಹಂಚಿಹೋಗುವದರಿಂದ ಕರ್ನಾಟಕದ ಪ್ರತಿನಿಧಿಗಳು ಮೈಸೂರನ್ನು ಬಿಟ್ಟು ಎಲ್ಲ ಕಡೆಗೂ ಅಲ್ಪಸಂಖ್ಯಾಕರಾಗಿಯೆ ಉಳಿಯುವರು, ಆದುದರಿಂದ ಅವರ ಮಾತು ಅಲ್ಲೆಲ್ಲಿಯು ನಡೆಯುವ ಸಂಭವವಿಲ್ಲ. ಈ ಪರಿಸ್ಥಿತಿಯಲ್ಲಿ ಏಕೀಕರಣವು ಉಳಿದ ಪ್ರಾಂತಗಳಿಗಿಂತ ಕರ್ನಾಟಕಕ್ಕೆ ಹೆಚ್ಚು ಮಹತ್ವವಾದದ್ದು.

ವಿಶ್ವವಿದ್ಯಾಲಯ

ನಮ್ಮ ವಿಶ್ವವಿದ್ಯಾಲಯದ ಪ್ರಗತಿಗಾಗಿ ಕೇವಲ ಸರಕಾರವನ್ನು ಅವಲಂಬಿಸದೆ ಆಕ್ಸಫರ್ಡ, ಕೇಂಬ್ರಿಜ್ ವಿಶ್ವವಿದ್ಯಾಲಯಗಳು ಜನತೆಯ ಬೆಂಬಲದಿಂದ ಕಾರ್ಯ ಮಾಡುತ್ತಿರುವವೆಂಬುದನ್ನು ಮನಗಂಡು ಕೊಡುಗೈ ದೊರೆಗಳು ಮುಂದೆ ಬಂದು ಮುಕ್ತಹಸ್ತದಿಂದ ನೆರವಾಗಬೇಕು.

ರಾಷ್ಟ್ರಭಾಷೆ — ಬೋಧಭಾಷೆ

ಇಂಗ್ಲಿಷ

ಸದ್ಯದ ಪರಿಸ್ಥಿತಿಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಎಲ್ಲ ವಿಷಯದ ಮೇಲೆ ಮಹತ್ವದ ಗ್ರಂಥಗಳು ದೊರೆಯುವವು; ಇಷ್ಟು ಉಪಯುಕ್ತವಾದ ಭಾಷೆಯನ್ನು ನಾವು ಕಳೆದುಕೊಳ್ಳುವದು ವಿಹಿತವಲ್ಲ. ಈ ಭಾಷೆಗೆ ನಮ್ಮ ಶಾಲೆ ಕಾಲೇಜುಗಳಲ್ಲಿ ಸ್ಥಾನವಿರತಕ್ಕದ್ದು.

ಹಿಂದೀ

ಭರತಖಂಡಕ್ಕೆ ಒಂದು ರಾಷ್ಟ್ರಭಾಷೆ ಬೇಕೆಂದು ಎಲ್ಲರೂ ಒಪ್ಪ ಬೇಕಾದ ಮಾತು. ಭಾರತದಲ್ಲಿ ಪ್ರಚಲಿತ ವಿರುವ ಭಾಷೆಗಳ ಸಂಖ್ಯೆ ಲಂಕೆಗೆ ಮಿಕ್ಕಿದ್ದರೂ ಅವುಗಳಲ್ಲಿ ಹನ್ನೆರಡು ಭಾಷೆಗಳು ಸಾಕಷ್ಟು ಸಾಹಿತ್ಯ ಕೂಡಿದುವೂ ವಿಶ್ವವಿದ್ಯಾನಿಲಯಗಳಲ್ಲಿ ಬೋಧಭಾಷೆಯಾಗುವ ಯೋಗ್ಯತೆಯುಳ್ಳವೂ ಆಗಿವೆ:— ಹಿಂದೀ, ಬಂಗಾಲಿ, ತೆಲಗು, ಮರಾಠಿ, ತಮಿಳು, ಪಂಜಾಬಿ, ಕನ್ನಡ, ಓರಿಯಾ, ಗುಜರಾತಿ, ಮಲಿಯಾಳಿ, ಅಸಾಮಿ, ಕಾಶ್ಮೀರಿ. ಇವುಗಳಲ್ಲಿ ಸಾಹಿತ್ಯ ಸಂಸ್ಕೃತಿಗಳ ದೃಷ್ಟಿಯಿಂದ ತಮಿಳು, ಕನ್ನಡ, ಬಂಗಾಲಿ, ತೆಲಗು, ಮರಾಠಿ ಈ ಭಾಷೆಗಳು ಹಿಂದೀಗಿಂತ ಸತ್ವಯುತವಾಗಿದ್ದರೂ, ಆಗೂ ಭಾಷೆಗಳಾಡುವ ಜನರ ಸಂಖ್ಯೆಯ ದೃಷ್ಟಿಯಿಂದ ನೋಡುವದಾದರೆ ಹಿಂದೀಗೆ ಪ್ರಾಮುಖ್ಯತೆ ಕೊಡಬೇಕಾಗುವದು. ಹಿಂದೀಯನ್ನು ಮಾತನಾಡುವವರ ಸಂಖ್ಯೆ ಸುಮಾರು ೧೨ ಕೋಟಿ ಇರುವುದು. ಈ ಸಂಗತಿಯನ್ನು ಅನುಲಕ್ಷಿಸಿಯೇ ಹಿಂದೀ

ಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡಲಾಗಿದೆ. ಹಿಂದೀ ರಾಷ್ಟ್ರಭಾಷೆಯಾಗುವದರಿಂದ ದಕ್ಷಿಣ ಭಾರತದಲ್ಲಿಯ ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ತಡೆಯಾಗುವ ಸಂಭವವಿದೆ. ಆದರೂ ರಾಷ್ಟ್ರಹಿತದ ದೃಷ್ಟಿಯಿಂದ ಹಿಂದೀಯನ್ನು ರಾಷ್ಟ್ರಭಾಷೆಯೆಂದು ಒಪ್ಪಿಕೊಳ್ಳಬೇಕಾಗಿದೆ. ೧೨ ಪ್ರಾದೇಶಿಕ ಭಾಷೆಗಳು ವಿಶ್ವವಿದ್ಯಾಲಯಗಳಲ್ಲಿ ಬೋಧಭಾಷೆಯಾಗುವ ಅರ್ಹತೆ ಪಡೆದಿವೆ. ಇದನ್ನು ಸರ್ ರಾಧಾಕೃಷ್ಣನ್ ಸಮಿತಿಯು ಒಪ್ಪಿದ್ದೆ. ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡವೇ ಬೋಧ ಭಾಷೆಯಾಗಬೇಕು, ಏಕೆಂದರೆ ಕನ್ನಡಕ್ಕೇ ಬಹುಕಾಲ ದಿಂದ ಬಂದ ಸಂಸ್ಕೃತಿ ಇದೆ, ವಿಪುಲಸಾಹಿತ್ಯವಿದೆ, ಸತ್ವವಿದೆ, ಬೆಳೆಯುವ ಸಾಮರ್ಥ್ಯವೂ ಇದೆ.

ಆಗಬೇಕಾದ ಕಾರ್ಯ

ಪ್ರಾಚೀನ ಕನ್ನಡ ಗ್ರಂಥಗಳ ರಕ್ಷಣೆ, ಪ್ರಾಚೀನ ಪಟ್ಟಣಗಳ ವಿವರಣಾತ್ಮಕ ಗ್ರಂಥಗಳು, ಪ್ರಾಚೀನ ಗ್ರಂಥಗಳ ಪ್ರಕಟನೆ, ಸಾಹಿತ್ಯಚರಿತ್ರೆ ಮತ್ತು ಭಾಷಾ ಚರಿತ್ರೆ, ಶಬ್ದಕೋಶ, ವಿಶ್ವಕೋಶ, ವಿಜ್ಞಾನಗ್ರಂಥ ಗಳ ಕೊರತೆ ಕನ್ನಡದಲ್ಲಿದೆ. ಇದು ತುಂಬಿಬರಬೇಕು. ಸಂಶೋಧನೆಗೆ ಅನುಕೂಲವಾದ ಸಲಕರಣೆಗಳು ವಿಪುಲವಾಗಿವೆ ಆದುದರಿಂದ ಸಂಶೋಧನೆಯ ಕಾರ್ಯ ಮುಂದುವರಿಯಬೇಕಾಗುವುದು ಆವಶ್ಯಕ ವಿಚಾರ ಪರಿಶ್ಲತ ಗ್ರಂಥಗಳ ಕೊರತೆಯು ತುಂಬಿಬರಬೇಕಾಗಿದೆ. ನಮ್ಮ ನಾಡಿನ ಸರ್ವತೋಮುಖವಾದ ಪ್ರಗತಿಗೆ ಶಿಕ್ಷಣ ಪ್ರಚಾರವು ಅತ್ಯಾವಶ್ಯಕ. ವೃತ್ತ ಪತ್ರಿಕೆಗಳ ಮಟ್ಟವು ಏರಬೇಕು ಮತ್ತು ಅವು ಸಾಹಿತ್ಯ ಸಂಸ್ಕೃತಿಗಳ ಬಗೆಗೆ ಲೇಖನಗಳಲ್ಲಿ ತಜ್ಞರಿಂದ ಬರೆಯಿಸಿ ಪ್ರಕಟಿಸಬೇಕು. ನಮ್ಮ ಬಾನುಲಿ ಕೇಂದ್ರಗಳಲ್ಲಿ ಕನ್ನಡ ಸಂಸ್ಕೃತಿ, ಧರ್ಮ, ಸಾಹಿತ್ಯ, ಇತಿಹಾಸ, ಕಲೆ ಮೊದಲಾದ ವಿಷಯಗಳನ್ನೊಗೊಂಡು ಕಾರ್ಯಕ್ರಮಗಳನ್ನು ಏರ್ಪಡಿಸಬೇಕು ಮತ್ತು ಕರ್ನಾಟಕ ಸಂಗೀತಕ್ಕೆ ಪ್ರಾಧಾನ್ಯ ದೊರೆಯಬೇಕು.

ಕನ್ನಡಿಗರೆಲ್ಲರೂ ಒಂದುಗೂಡಿ ಹೃದಯ ಬೆರಸಿ, ವಿಚಾರ ಒಂದಾಗಿಸಿ ಒಮ್ಮನಸ್ಸಿನಿಂದ ಕಾರ್ಯ ಮಾಡಿದರೆ ಎಂತಹ ಜಟಿಲ ಪ್ರಶ್ನೆಗಳನ್ನೂ ಎದುರಿಸಬಲ್ಲೆವು. ನಮ್ಮ ಭವಿಷ್ಯ ಉಜ್ವಲವಾಗಿದೆ.

ಸುದ್ದಿ ಸಮಾಚಾರಗಳು.

೧

ಜಮಖಂಡಿಯ ಸರಕಾರಿ ಟ್ರೇನಿಂಗ ಕಾಲೇಜನಲ್ಲಿ ನಡೆದ ಸಮಾಜ ಶಿಕ್ಷಣ ಕಾರ್ಯಕರ್ತರ ತರಬೇತಿ ವರ್ಗದ ಸಮಾಪ್ತಿ ಸಮಾರಂಭವು ದಿನಾಂಕ ೨೫-೫-೧೯೫೨ ನೆಯ ದಿನ ಸಾಯಂಕಾಲ ೫ ಘಂಟೆಗೆ ನೆರವೇರಿತು.

ವಿಜಾಪುರ ಜಿಲ್ಲೆಯ ಕಲೆಕ್ಟರರಾದ ಶ್ರೀ. ಎಮ್ ಅಲಾಬಕ್ಷ ಅವರು ಅಧ್ಯಕ್ಷರಾಗಿದ್ದರು.

೨

ಅಸುಂಡಿ ಗ್ರಾಮದ ಜನರು ತಮ್ಮ ಹಳ್ಳಿಯ ಮೇಲೆ ದರೋಡೆ ಮಾಡಲೆಳಸಿದ ದರೋಡೆಖೋರರನ್ನು ಹಳ್ಳಿಯ ಪರಾಕ್ರಮದಿಂದ ಹೋರಾಡಿ ಹೊಡೆದೋಡಿಸಿದರು. ಇದರಿಂದ ಅವರಲ್ಲಿದ್ದ ನಾಗರಿಕತೆಯು ಸಹಕಾರಕ್ಕೆ ವ್ಯಕ್ತವಾಗುತ್ತದೆ. ಹಳ್ಳಿಗರ ಈ ಪರಾಕ್ರಮಕ್ಕೆ ಮೆಚ್ಚಿ ಸರಕಾರದವರು ಆ ಹಳ್ಳಿಗೆ ೪೫೫೦೦ ರೂಪಾಯಿ ಬಹುಮಾನವನ್ನು ಸಲ್ಲಿಸಿದ್ದಾರೆ. ಈ ಹಣವನ್ನು, ಸಾರ್ವಜನಿಕ ವರ್ಗಣಿಯೆಂದು ತಿಳಿದು, ಆ ಹಳ್ಳಿಯಲ್ಲಿ ಸಾಲೆಯ ಇಮಾರತಿಯನ್ನು ಕಟ್ಟಿಸುವದಕ್ಕೆ ಉಪಯೋಗಿಸಲಾಗುತ್ತಿದೆ.

೩

ಧಾರವಾಡ ವಿಭಾಗದ ಪ್ರಾಥಮಿಕ ಶಾಲಾ ಶಿಕ್ಷಕರ ಸಂತೋಷ ಶಿಬಿರವು ದಿನಾಂಕ ೧೯-೫-೧೯೫೨ ರಿಂದ ದಿನಾಂಕ ೨೮-೫-೫೨ ರ ವರೆಗೆ ಶ್ರೀ ಜೀವೂರ ೧ ನೆಯ ಅಸಿ. ಎ. ಇ. ಧಾರವಾಡ ಅವರ ನೇತೃತ್ವದಲ್ಲಿ ನಡೆಯಿತು. ಪ್ರಾಥಮಿಕ ಶಿಕ್ಷಕರಿಗೆ ಮನರಂಜನೆಯನ್ನು ವಿಶ್ರಾಂತಿಯನ್ನೂ ಕೊಡುವದಲ್ಲದೆ ಅದರ ಜೊತೆಗೆ ಅವರು ಕೈಕೊಂಡ ಶಿಕ್ಷಕ ವೃತ್ತಿಯಲ್ಲಿ ಕಂಡು ಬರುವ ಸಮಸ್ಯೆಗಳ ಬಗೆಗೆ ಹಾಗೂ ಅವರ ಹೊಣೆಗಾರಿಕೆಯ ಬಗ್ಗೆ ಚರ್ಚೆಗಳನ್ನು ಏರ್ಪಡಿಸುವದು ಆ ಸಂತೋಷ ಶಿಬಿರದ ಉದ್ದೇಶವಾಗಿತ್ತು. ಆ ಪ್ರಕಾರ ಕೆಲವು ಭಾಷಣಗಳ ವಿಷಯಾಹ್ವಾನವನ್ನು ಮಾಡಲಾಗಿತ್ತು. ಸಮೀಪದ ನೋಡತಕ್ಕ ಸ್ಥಳಗಳಾದ ಎಳ್ಳೂರಗಡ್ಡ, ಹಿಂಡಲಗಿ, ಜೇಲ, ರೇಶಿಮೆ ಕಾರಖಾನೆ, ಬೆಳಗಾಂವಿಯಲ್ಲಿಯ ಕೆಲವು ಸ್ಥಳಗಳು, ಗೋಕಾಕ ಜಲಪಾತ ಮೊದಲಾದವುಗಳ ಸಂದರ್ಶನವನ್ನು ಇಟ್ಟುಕೊಳ್ಳಲಾಗಿತ್ತು. ಇದಲ್ಲದೆ ಸಮಾಜ ಸೇವೆ ಹಾಗೂ ಮನರಂಜನೆಯ ಕಾರ್ಯಕ್ರಮಗಳೂ ಇದ್ದವು. ಈ ಶಿಬಿರದ ಸಮಾಪ್ತಿ ಸಮಾರಂಭವು ದಿನಾಂಕ ೨೮-೫-೫೨ ರಂದು ಸುರತ ಜಿಲ್ಲೆಯ ಕಲೆಕ್ಟರರಾದ ಶ್ರೀ ಜಿ. ಎಚ್. ಗುಗ್ಗಳಿ ಅವರ ಹಿರಿಯತನದಲ್ಲಿ ಜರುಗಿತು.

ಶಾರೀರಿಕ ಶಿಕ್ಷಣ

ಅರ್ಥ ಹಾಗೂ ವ್ಯಾಪ್ತಿ

(ಲೇಖಾಂಕ ೧)

ಲೇಖಕರು:– ಶ್ರೀ. ಯಶವಂತ ವೆಂಕಟೇಶ ಜಾವಡೇಕರ, ಎಮ್. ಎ., ಬಿ. ಟಿ.
ಶಾರೀರಿಕ ಶಿಕ್ಷಣ ಇನಸ್ಪೆಕ್ಟರ, ಮುಂಬಯಿ ರಾಜ್ಯ

ಅನುವಾದಕರು:– ಶ್ರೀ. ಆರ್. ಕೆ. ಕಲ್ಯಾಣಕರ, ಅ. ಡಿ ಎ. ಇ. (ಶಾರೀರಿಕ ಶಿಕ್ಷಣ) ಬೆಳಗಾಂವಿ
ಮತ್ತು
ಶ್ರೀ. ನು. ಗೆ. ಕೇದನೂರ, ಮು ಗು. ನಾಗಠಾಣ

"ತಾನೊಂದು ಬಗೆದರೆ ದೈವವೊಂದು ಬಗೆಯುವ" ಅನೇಕ ವಿಷಮ ಪ್ರಸಂಗಗಳು ಜೀವನದಲ್ಲಿ ಸಂಭವಿಸುತ್ತಿರುತ್ತವೆ ಅಥವಾ ದೈವವಾದವನ್ನುಳಿದು, ಇದೇ ಮಾತನ್ನು ಹೀಗೂ ಹೇಳಬಹುದು. "ಕಡುಬನ್ನು ಬಯಸಿದರೆ, ಕಲ್ಲು ಹಲ್ಲಿಗೆ ಬಡೆಯಿತು" ಎಂದು ನನಗೊದಗಿದ ಒಂದು ದಿನದ ಪ್ರಸಂಗವು ಇದೇತರದ್ದಿತ್ತು.

ಒದು ಶಿಕ್ಷಣ ಸಂಸ್ಥೆಗೆ ಅವಶ್ಯವಿದ್ದ ಒಂದು ಕ್ರೀಡಾಂಗಣದ ಸಲುವಾಗಿ, ಅದರ ಒಡೆಯರೊಡನೆ ಮಾತುಕತೆ ನಡೆಯಿಸಿದ್ದೆನು.

ಆಗ ಆ ಗೃಹಸ್ಥರು— "ಜಾವಡೇಕರ, ಆ ಸ್ಥಳದ ಮೇಲೆ ಸರಮನೆಯ ಅಧಿಕಾರಿಯ ಕಾಕದೃಷ್ಟಿಯಿಟ್ಟಿದ್ದಾಯಿದೆ. ಒಂದು ಕಾರಣದಿಂದ ನೋಡಲಾಗಿ ಸೆರೆಮನೆ

ಗಳನ್ನೂ ವಿಸ್ತರಿಸಬೇಕಾಗಿದೆ. ಆದ್ದರಿಂದ ತಾವೇ ಸ್ವಲ್ಪ ವಿಚಾರಿಸಿ ಹೇಳಿರಿ; ಆ ಜಾಗೆಯನ್ನು ಸೆರೆಮನೆಗಾಗಿ ಕೊಡಬೇಕೋ? ಶಿಕ್ಷಣಕ್ಕಾಗಿಯೋ?

ನಾನು—ಅಂದಮೇಲೆ ಅದನ್ನು ಶಿಕ್ಷಣ ಸಂಸ್ಥೆಗಾಗಿಯೇ ಕೊಡಿರಿ. ಈ ಸ್ಥಳವು ಕ್ರೀಡಾಂಗಣವೆಂದು ಉಪಯೋಗಿಸಲ್ಪಡುವದಾದ್ದರಿಂದ ಅದು ಭೂಷಣಾಸ್ಪದವೇ ಸೈ! ಇದರಿಂದ ಸೆರೆಮನೆಗಳನ್ನು ಬೆಳೆಯಿಸುವ ಆಗತ್ಯವೂ ಉಂಟಾಗಲಿಕ್ಕಿಲ್ಲ; ಅಂದರೆ "ಒಂದೇ ಬಾಣದಿಂದ ಎರಡು ಬೇಟೆಗಳನ್ನಾಡಿದಂತಾಗುವುದು."

'ಛೇ! ಛೇ!! ನನ್ನ ಅಭಿಪ್ರಾಯವು ಇದಕ್ಕೆ ತೀರ ವಿಪರೀತವಾಗಿದೆ. ವ್ಯಾಯಾಮದಿಂದ ಹುಡುಗರು ಲಠ್ಠಭಟ್ಟರಾಗುತ್ತಾರೆ. ಸೊಕ್ಕಿಗೆ ಬರುತ್ತಾರೆ. ದರೋಡೆ ಹಾಕಲು ಕಲಿಯುತ್ತಾರೆ. ವೇಗದಿಂದ ಓಡುವದಾಗಲಿ, ಎತ್ತರದಿಂದ ಜಿಗಿಯುವದಾಗಲಿ, ಇವೆಲ್ಲ ಯಾತಕ್ಕೆ? ಇಷ್ಟೇ ಅಲ್ಲ; ಎರಡನೆಯನರೊಡನೆ ಕುಸ್ತಿಯಾಡಿ, ಅವರಿಗೆ ನಕ್ಷತ್ರಗಳನ್ನು ಎಣಿಸಹಚ್ಚುವದಂತೂ ಮಾಟದ ಬಂಗಾಲಿ ಬಡಿಗೆಯಂತೆಯೇ ಆಗಿದೆ! ಇಂಥ ಜನರೇ ಕಳ್ಳರು, ದರೋಡೆಗಾರರು, ಲೂಟಿ ಮಾಡುವವರೂ ಆಗುತ್ತಾರೆ. ಆದ್ದರಿಂದ ಈ ಜನರಿಂದ ಸಂರಕ್ಷಣೆ ಹೊಂದುವದಕ್ಕಾಗಿಯೇ ಸೆರೆಮನೆಗಳ ಅವಶ್ಯಕತೆ ಇದೆ. ಸೌರಾಷ್ಟ್ರದ ಭೂಪತನು ಹೇಗೆ ಪ್ರವೀಣನಾದನೆಂಬುದನ್ನು ಅರಿತಿಲ್ಲವೆ ತಾವು? ಅವರು ಆಶ್ಚರ್ಯಚಕಿತ ಮುದ್ರೆಯಿಂದ' ಎಂದರು.

ನನಗೆ ಆವರ ಅಜ್ಞಾನದ ಬಗೆಗೆ ಕೊಂಚ ಕಳಕಳಿಯೂ ಜೊತೆಗೆ ಸ್ವಲ್ಪ ನಗೆಯೂ ಉಂಟಾಯಿತು; ಆದರೆ ಇದಕ್ಕೆ ನಗುವದಾದರೂ ಯಾಕೆ? ರಾಜ್ಯದಲ್ಲಿ ಸಂಚರಿಸುತ್ತಿರುವಾಗ ಎಷ್ಟೋ ಕಡೆಗಳಲ್ಲಿ ಇಂಥ ಅನೇಕ ಉದ್ಗಾರಗಳನ್ನೂ ಕೇಳಿದ್ದುಂಟು."

'ನಮ್ಮ ವ್ಯಾಯಾಮ ಶಾಲೆಯ (ಗರಡಿಮನೆಯ) ಸದಸ್ಯರು ನಿತ್ಯವೂ ಅಲ್ಲಿಗೆ ಬಂದು, ನಮಸ್ಕಾರ, ಕುಸ್ತಿ, ಮೆಲ್ಲಗಂಬವಾಡುವದು, ಗದೆ ತಿರುವುದು (ಲೋಡು) ಮುಂತಾದ ವ್ಯಾಯಾಮಗಳನ್ನು ಮಾಡಿದರೆ ಸಾಕು! ಹೊರಗಿನ ಅವರ ಕೃತಿ, ನಡತೆ ರೀತಿಗಳಿಗೆ ನಾವೇಕೆ ಹೊಣೆಗಾರರಾಗಬೇಕು? ಅದರ ಆಗತ್ಯವಾದರೂ ಏನು?" ಎಂದನು.

"ನಮಗೀಗ ಇದ್ದ ಒಂದೇ ಒಂದು ಅವಶ್ಯಕತೆಯೆಂದರೆ ಮುಟ್ಠಾಳರನ್ನು ಸಿದ್ಧಪಡಿಸುವದು" ಅವರೆಂದರು.

ಇಂಥ ಉದ್ಗಾರಗಳು ಏಕೆ ಹೊರಬೀಳುತ್ತವೆ? ಇದಕ್ಕೊಂದೇ ಕಾರಣವಿದೆ. ವ್ಯಾಯಾಮದ ಕೃತಿಯನ್ನು ಕಲಿಯುವಾಗ ಅಥವಾ ಕಲಿಸುವಾಗ ಪ್ರಾಪ್ತವಾಗುವ ಲಾಭದ ಕಲ್ಪನೆಯು ಬಹ್ವಂಶದಿಂದ ಯಾರಿಗೂ ಇರಲಾರದು ಅಥವಾ ಕಡಿಮೆ ಜನರಿಗೆ ಮಾತ್ರ ಇರುವದು. ಆದರೆ ಆವರ ಮುಂದೆ ಯಾವ ಉದ್ದೇಶವೂ ಇರಲಾರದೆಂದು ಹೇಳಲು ಬರುವದೋ? ಅದು ಹೇಗಾದೀತು? "ಪ್ರಯೋಜನ ಮನುದ್ದಿಶ್ಯ ಮಂದೋಪಿ ಪ್ರವರ್ತತೆ" ಯಾವ ಉದ್ದೇಶವನ್ನೂ ತನ್ನೆದುರಿಗೆ ಇಟ್ಟುಕೊಳ್ಳದ ವಿನಾ ಮೂರ್ಖನೂ ಸಹ ಕಾರ್ಯಾರಂಭ ಮಾಡನು. ಆದರೆ ಇಷ್ಟು ಮಾತ್ರ ಧೈರ್ಯವಾಗಿ ಹೇಳಬಹುದು; ಈ ಧೋರಣೆಯು (ಉದ್ದೇಶವು) ಸದೋಷವಾಗಿರಬಹುದು ಅಥವಾ ಸಂಕುಚಿತವಾಗಿರಬಹುದು."

ಈ ವಿಷಯದಲ್ಲಿ ನನ್ನ ಅಭಿಪ್ರಾಯ ಹೀಗಿದೆ ನಾವು ಆಟದ ಬೈಲಿನಲ್ಲಾಗಲಿ, ಗರಡಿ ಮನೆಯಲ್ಲಾಗಲಿ, ವ್ಯಾಯಾಮ ಮಂದಿರಗಳಲ್ಲಾಗಲಿ, ಪ್ರವಾಸದ ಸ್ಥಳದಲ್ಲಾಗಲಿ ಅಥವಾ ಬೀದಿ ಬಿಟ್ಟ ಸ್ಥಳದಲ್ಲಾಗಲಿ ಮಾಡುವ ವ್ಯಾಯಾಮದ ಆಗತ್ಯವೇನು? ಅಥವಾ ವ್ಯಾಯಾಮ ವಿಷಯಕ ಕೃತಿಗಳ ಅವಶ್ಯಕತೆಯೇನು? ಇವುಗಳಲ್ಲಿ ನನ್ನ ಇಚ್ಛಾನುಸಾರವಾಗಿ ಯಾವ ಸಾಧ್ಯಡವ್ಯಾಪ್ತಿಯಾಗಬೇಕಾಗಿದೆ? ಅಂಥ ಆ ಕೃತಿಯ ಧ್ಯೇಯವೇನು? ಆ ಕೃತಿಯು ಮಾರ್ಗದಿಂದ ಮುಟ್ಟಬೇಕಾದ ಗೊತ್ತುಗುರಿಯಾವುದು? ಇಂಥ ಎಲ್ಲ ಪ್ರಶ್ನೆಗಳ ಉತ್ತರವನ್ನು ನಾವು ಕೂಲಂಕುಷವಾಗಿ ತಿಳಿದಿರಬೇಕು. ಆ ಧ್ಯೇಯದಲ್ಲಿ ನಮ್ಮ ಸಂಪೂರ್ಣ ಶ್ರದ್ಧೆಯಿರಬೇಕು. ಆ ಧ್ಯೇಯದ ಮಾರ್ಗವನ್ನು ದೃಢಮನಸ್ಸಿನಿಂದಲೂ, ನಿಷ್ಠೆಯಿಂದಲೂ ಕ್ರಮಿಸಬೇಕು. ಇದರ ವಿರುದ್ಧ ದಿಸೆಯಲ್ಲಿ ಕ್ರಮಿಸುವ ಮಾರ್ಗವನ್ನು ನಾವು ಬಲಾತ್ಕಾರದಿಂದಲಾದರೂ ತಡೆಯಲಿಕ್ಕೆಬೇಕು.

ಈ ಧ್ಯೇಯದ ಬೋಧವಾಗುವಂತಹ ಯಾವ-

ದೊಂದು ಶಬ್ದ ಪ್ರಯೋಗವು, ಈ ಕೃತಿಯ ವಿಷಯದಲ್ಲಿ ಉಪಯೋಗಿಸಲ್ಪಡುವದೋ ಹೇಗೆಂಬುದನ್ನು ಮೊದಲಿಗೆ ವಿಚಾರಿಸುವಾ !

ಬೇರೆ ಬೇರೆ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಸಲ್ಪಡುವ ಈ ಕೃತಿಯ ದೈನಿಕ ವೇಳೆಯು ಬೇರೆ ಬೇರೆ ಹೆಸರಿನಿಂದ ನಿರೂಪಿಸಲ್ಪಡುತ್ತಿದೆಂಬುದು ಅವಲೋಕನದಿಂದ (ವಿಚಾರಾಂತ್ಯದಲ್ಲ) ಕಂಡು ಬರುತ್ತಿದೆ.

'ಆಟದ ತಾಸು' ಎಂದು ಒಬ್ಬರು ಬರೆದಿದ್ದರೆ, 'ವ್ಯಾಯಾಮದ ತಾಸು' ಎಂದು ಇನ್ನೊಬ್ಬರು, 'ಫಿಜಿಕಲ್ ಟ್ರೇನಿಂಗ ತಾಸು' ಎಂದು ಬೇರೊಬ್ಬರು, 'ಫಿಜಿಕಲ್ ಕಲ್ಚರದ ತಾಸು' ಎಂದು ಮತ್ತೊಬ್ಬರು, 'ಬಲ ವಿಕಾಸದ ತಾಸು' ಎಂದು ಮಗದೊಬ್ಬರು ಬರೆದುದನ್ನು ನಾನು ಬೇರೆ ಬೇರೆ ವೇಳಾ ಪತ್ರಿಕೆಗಳಲ್ಲಿ ಓದಿದ್ದುಂಟು. ಈ ಹೆಸರುಗಳಲ್ಲಿ ನಮ್ಮ ಧ್ಯೇಯದ ಸಾರ್ಥಕತೆಯ-ಬೋಧ ಮಾಡುವಂತಹದಾವುದೆಂಬುದರ ವಿಮಾಂಸೆಯ ಅವಶ್ಯಕತೆ ನಮಗಿದೆ.

ಆಟ, ಗರಡೀಸಾಧನೆ, ಕಸರತ್ತು ಈ ಶಬ್ದಗಳು ವ್ಯಾಯಾಮದ ನಾಮ ನಿರ್ದೇಶಕಗಳಾಗಿವೆ. ಅವು ಅಥವಾ ಅದರ ಬೇರೆ ಬೇರೆ ಪ್ರಕಾರದರ್ಶಕಗಳಾಗಿವೆಯೇ ಹೊರ್ತು ಧ್ಯೇಯ ದರ್ಶಕಗಳಾಗಿಲ್ಲ. 'ವ್ಯಾಯಾಮ' ಶಬ್ದವೂ ಕೂಡ ನಮ್ಮ ಕೃತಿಗಳ ಸಮುಚ್ಚಯ ದರ್ಶಕವಾಗಿದೆ, ಅಥವಾ ಬೋಧಕವಾಗಿದೆ. 'ಫಿಜಿಕಲ್ ಟ್ರೇನಿಂಗ' (P T) ಶಬ್ದವು ಒಳ್ಳೇ ಲೋಕಪ್ರಿಯವಾಗಿದೆ. ಪರಂತು ಈ ಟ್ರೇನಿಂಗ ಶಬ್ದದಿಂದ ಯಾವ ಧ್ಯೇಯದ ಬೋಧೆಯಾಗುತ್ತಿದೆ ? "ಕುದುರೆಗೆ ಪಂದ್ಯಾಟದ ಟ್ರೇನಿಂಗ ಕೊಡಬೇಕು." "ನಾಯಿಗೆ ಕರವಸ್ತ್ರ ಶೋಧಿಸಿ ತರುವಂತೆ ಟ್ರೇನಿಂಗ ಕೊಡಬೇಕು." ಈ ವಾಕ್ಯಗಳಿಂದ ಟ್ರೇನಿಂಗ ಶಬ್ದದ ಅಬೋಧವು ಲಕ್ಷದಲ್ಲಿ ಬರುವಂತಿದೆ. ಯಾವದೊಂದು ವಿಶಿಷ್ಟ ಕೌಶಲ್ಯದಲ್ಲಿ ಅಥವಾ ಯಾವದೊಂದು ಶಾರೀರಿಕ ಸುಧಾರಣೆಯಲ್ಲಿ ತರಬೇತಿ ಗೊಳಿಸುವದೆಂಬುದೇ ಈ ಶಬ್ದದಿಂದಾಗುವ ವಿಶೇಷ ಅರ್ಥಬೋಧೆ.

'ಶಿಕ್ಷಕರ' ಟ್ರೇನಿಂಗ ಕಾಲೇಜ ಎಂಬ ಪದ ಸವನಾದಾಯವೂ ಕೂಡ "ಆಯಾ ವರ್ಗದ ನಿರ್ದಿಷ್ಟ ವಿಷಯಗಳನ್ನು ಕಲಿಸುವ ಮಾರ್ಗವನ್ನು ತೊರಿಸುವದೆಂಬ ಸಂಕುಚಿತಾರ್ಥದಲ್ಲಿಯೇ" ಉಪಯೋಗಿಸಲ್ಪಡುತ್ತಿದೆ ಅಥವಾ ಹಾಗೆ ಅದರ ಅರ್ಥವಾಗುತ್ತದೆ.

'ಫಿಜಿಕಲ್ ಕಲ್ಚರ' ಈ ಸಾಮಾಜಿಕ ಪದದಲ್ಲಿಯ ಕಲ್ಚರ' ಶಬ್ದಕ್ಕೆ ವೈಯಕ್ತಿಕ ರೀತಿಯಾಗಿ ಅತ್ಯುತ್ತಮವಾದ 'ಸಂಸ್ಕೃತಿ' ಎಂಬ ಅರ್ಥವಾಗುತ್ತಿದೆ. ಪರಂತು ಇದಕ್ಕೆ ಫಿಜಿಕಲ್ ಶಬ್ದದ ಹೊಂದಿಕೆ ಯಾದ ಕೂಡಲೇ ಅದರ ವ್ಯಾಪಕವಾದ ಅರ್ಥವು ಅತಿ ಸಂಕುಚಿತ ವಾಗುತ್ತಿದೆ. ಯಾವ ಜನರಿಂದ ಈ ಸಾಮಾಜಿಕ ಶಬ್ದ ಪ್ರಯೋಗವು ರೂಢಿಗತವಾಯಿತೋ, ಆ ಜನರ ಕಣ್ ಮುಂದಿರುವ ಧೋರಣೆಯ ಸಂಕುಚಿತ ದೃಷ್ಟಿಯೇ ಇದಕ್ಕೆ ಕಾರಣವಾಯಿತು. 'ಫಿಜಿಕಲ್ ಕಲ್ಚರ ಇನ್‌ಸ್ಟಿಟ್ಯೂಟದ ಉದ್ದೇಶ ಕಥನದಿಂದ 'ಸ್ನಾಯುಬದ್ಧ ಮನುಷ್ಯನ ಸುಂದರ ಭಾವ ಚಿತ್ರವು ಎದುರಿಗೆ ನಿಲ್ಲುತ್ತದೆ. ಇವರ ಧ್ಯೇಯದಂತೆ ಪತ್ರವ್ಯವಹಾರದಿಂದಲೇ ಅಭ್ಯಾಸ ಕ್ರಮವನ್ನು ಪೂರ್ಣಗೊಳಿಸಬಹುದು; ಅದಕ್ಕಾಗಿ ನಿಶ್ಚಿತವಾದ ಶುಲ್ಕಧನ ಸಲ್ಲಿಸಬೇಕಾಗುವದು. ಹೀಗೆ ಮಾಡಿದಲ್ಲಿ ಶಾರೀರಿಕ ಸುಧಾರಣೆಯು ಸರ್ವಾಂಗ ಸುಂದರವಾಗುವದು. ಒಟ್ಟಿಗೆ ಈ ಸಂಸ್ಥೆಯ ಉದ್ದೇಶವು, "ಸುಸಂಬದ್ಧವಾದ ಪ್ರಮಾಣದಿಂದ ಸ್ನಾಯುಗಳನ್ನು ಬಲಪಡಿಸುವದೇ ಇರುತ್ತದೆಂದು" ಕಂಡು ಬರುತ್ತಿದೆ.

ಶಿಕ್ಷಣ ಕ್ಷೇತ್ರದಲ್ಲಿ ಬಹಳೀ ಪ್ರಗತಿಯನ್ನು ಪಡೆದ ಒಂದು ಶಿಕ್ಷಣ ಸಂಸ್ಥೆಯ ವೇಳಾ ಪತ್ರಿಕೆಯಲ್ಲಿ 'ಬಲ ವಿಕಾಸ' ಈ ಶಬ್ದ ಪ್ರಯೋಗ ಕಂಡು, ನನಗೆ ಅತ್ಯಾನಂದವಾಯಿತು. ವ್ಯಾಯಾಮ ವಿಷಯವನ್ನು ಕಲಿಸುವ ಪ್ರತಿ ವರ್ಗದಲ್ಲಿ ಈ ಶಬ್ದಪ್ರಯೋಗಿಸಲ್ಪಟ್ಟಿದೆ. ಯಾವ ಧ್ಯೇಯವನ್ನು ನಾವು ಆದರ್ಶವೆಂದು ನಮ್ಮ ಕಣ್ಣು ಮುಂದಿಟ್ಟು ಕೊಂಡಿರುವೆವೋ ಆ ಧ್ಯೇಯವೆಲ್ಲ ಇದರಲ್ಲಿ ಗುಂಪೀಕರಿಸಲ್ಪಟ್ಟಿದೆಯೋ ಅಥವಾ ಅದರಲ್ಲಿಯ ಒಂದು ಮಟ್ಟವನ್ನು ಮಾತ್ರ ಇದು ಸಂಪೂರ್ಣಗೊಳಿಸುವದೋ ಎಂಬುವದನ್ನು ವಿಮರ್ಶಿಸೋಣ ! ಈ ಸಾಮಾಸಿಕಪದ ಪ್ರಯೋಗದಲ್ಲಿಯ 'ಬಲ ಶಬ್ದದ ಅಭಿಪ್ರೇತಾರ್ಥವೇನು ? ಶಾರೀರಿಕ ಬಲವೆಂದೇ ಅದರ ಅರ್ಥ ಮಾಡಲ್ಪಡುತ್ತಿದ್ದರೆ, ಆದು ಆದರ್ಶಧ್ಯೇಯದ ಒಂದುಮಟ್ಟ

ಅಥವಾ ಮೆಟ್ಟು ಆಗ ಬಹುದಲ್ಲದೆ ಸಂಪೂರ್ಣ ಧ್ಯೇಯ ದರ್ಶಕವಾಗಲಾರದು.

ಎಲ್ಲ ದೃಷ್ಟಿಗಳಿಂದಲೂ ವಿಚಾರಮಾಡಿ, ಎಲ್ಲ ಧ್ಯೇಯಗಳನ್ನೂ ಒಳಗೊಂಡಿರುವ ಯಾವದೊಂದು ಶಬ್ದವನ್ನು ಉಪಯೋಗಿಸುವದು ತೃಪ್ತಿಕರತೆಗೆ ಒಪ್ಪುವ ಸಂಗತಿಯಾಗಿದೆ. ಈ ಸಂಬಂಧದಲ್ಲಿ ಈಗ ರೂಢಿಯನ್ನು ಪ್ರವೇಶಿಸಲಿರುವ 'ಶಾರೀರಿಕ ಶಿಕ್ಷಣ' ವೆಂಬ ಸಾಮಾಸಿಕವು ನನಗೆ ಹೆಚ್ಚು ಒಪ್ಪಿಗಿದೆ; ಒಪ್ಪಿಗೆಯದಾಗಿದೆ ಅಂತೆಯೇ ಇವೆರಡೂ ಪದಗಳ ಅರ್ಥ ಭೇದ, ಅವುಗಳ ಪರಸ್ಪರ ಸಂಬಂಧ, ಹಾಗೂ ಅವುಗಳ ವ್ಯಾಪ್ತಿ ಇವುಗಳನ್ನು ಕುರಿತು ಸೂಕ್ಷ್ಮವಾಗಿ ವಿಚಾರ ಮಾಡೋಣ !

'ಶಾರೀರಿಕ ಶಿಕ್ಷಣ' ಈ ಸಾಮಾಸಿಕ ಪದದಲ್ಲಿ ಮಹತ್ವದ ಪದವು ಯಾವುದು ? ಯಾವುದರ ಅರ್ಥವು ಹೆಚ್ಚು ಬಲವಂತವಾಗಿದೆ ? ಯಾವುದು ಯಾವುದನ್ನು ಅವಲಂಬಿಸಿದೆ ? ಎಂಬುದನ್ನರಿತು ಕೊಳ್ಳಬೇಕಾಗಿದೆ. ಶಾರೀರಿಕ ಹಾಗೂ ಶಿಕ್ಷಣ ಇವುಗಳಲ್ಲಿ 'ಶಿಕ್ಷಣ' ಶಬ್ದವು ನಾಮವಿನೆ. (ವಿಶೇಷ್ಯವಿದೆ) ಶಾರೀರಿಕ ಇದು ವಿಶೇಷಣವಾಗಿದೆ. 'ವಿಶೇಷಣಂ ವಿಶೇಷ್ಯಯೋಃ ವಿಶೇಷ್ಯಸ್ಯೈವ ಪ್ರಾಧಾನ್ಯಮ್' ! ಹೀಗೆ ಸರ್ವ ಸಾಮಾನ್ಯವಾದ ನೆಯಮವಿದೆ. ವಿಶೇಷಣಕ್ಕಿಂತ ವಿಶೇಷ್ಯವು ಮಹತ್ವದ್ದಿದೆ. ಆದ್ದರಿಂದಲೇ 'ಶಿಕ್ಷಣ' ದಿಂದ ಈ ಶಬ್ದದಿಂದ ಗ್ರಥಿತ ಮಥಿತ ವಾಗುವ ಕಲ್ಪನೆಯು ನಮಗೆ ತಿಳಿಯಲು ಬೇಕು. ಈ ಶಬ್ದವೇ ಧ್ಯೇಯ ಬೋಧಕವಾಗಿದೆ. ಅದು ಸಾಧ್ಯವನ್ನು ತೋರಿಸುತ್ತಿದೆ. ಎಲ್ಲಿಗೆ ಹೋಗಬೇಕಾಗಿದೆಯೆಂಬುದನ್ನು ತಿಳಿಸುತ್ತಿದೆ.

ಸಾಮಾನ್ಯವಾಗಿ ವ್ಯವಹಾರದಲ್ಲಿ ಶಿಕ್ಷಣ ಶಬ್ದವು ಅನೇಕಾರ್ಥಗಳಲ್ಲಿ ಪ್ರಯೋಗಿಸಲ್ಪಡುತ್ತಿದೆ. ಒಮ್ಮೆ ಒಂದು 'ಶಾರೀರಿಕ ಶಿಕ್ಷಣ' ಕೇಂದ್ರವಲ್ಲಿ ಪ್ರಸೌಪಚಾರಿಕವಾಗಿ ಸಂಚರಿಸುತ್ತಿರುವಾಗ ಒಂದು ಸಂವಾದವು ಸಹಜವಾಗಿ ಕಿವಿಯ ಮೇಲೆ ಬಿತ್ತು. ನಮ್ಮ ಕೇಂದ್ರದ ವಿದ್ಯಾರ್ಥಿಗಳು ವಿವಾಹಿತ ಶಿಕ್ಷಕರೇ ಆಗಿದ್ದರು

"ಏನು ಮಹಾಸ್ವಾಮಿಗಳು ಬಹಳೇ ಆನಂದದಲ್ಲಿದ್ದಾರೆ ? ಮನೆಯವರಿಂದ ಏನು ಪತ್ರ ಗಿತ್ರವೇನಾದರೂ ಬಂದಿರುವದೇ ?"

"ಛೇ ಮಹಾರಾಯಾ ! ಆ ಭಾಗ್ಯ ನನ್ನ ಹಣೆ ಬರೆಹದಲ್ಲಿ ಎಲ್ಲಿದೆ ? ಆಕೆಯೇನು ಸುಶಿಕ್ಷಿತಳಿದ್ದಾಳೋ ಪತ್ರ ಚೀಟಿ ಬರೆಯಲಿಕ್ಕೆ !"

"'ಆಕೆ' ಇದರ ವರ್ಣನೆ ಮಾಡುವ ಶಿಕ್ಷಕರಿಗೆ 'ಶಿಕ್ಷಣ' ಶಬ್ದದ ಯಾವ ಅಭಿಪ್ರೇತ ಪಾಗುತ್ತದೆ ? ಆಕೆಗೆ ಓದು-ಬರೆಹ ಬರುವದಿಲ್ಲೆಂಬುದಿಷ್ಟೇ ಅವರು ಹೇಳುವದರ ಆಶಯವಾಗಿತ್ತು."

ಎಷ್ಟೊ ಜನರು 'ಶಿಕ್ಷಣ' ಶಬ್ದದ ಅರ್ಥವನ್ನು 'ಶಾಲೆ ಕಾಲೇಜುಗಳಲ್ಲಿ ಕಲಿಯುವದು ! ಎಂದಿಷ್ಟೇ ಹೇಳುತ್ತಾರೆ. (ಮುಂದುವರಿಯುವದು)

ವ್ಯಾವಹಾರಿಕ ಗಣಿತವು

(ಭಾಗ ೧, ೨, ೩)

೫, ೬, ೭ನೆಯ ಇಯತ್ತೆಯವರಿಗಾಗಿ

"ಅನೇಕ ವರ್ಷಗಳಿಂದ ನನಗೆ ಚಿನ್ನಾಗಿ ಪರಿಚಿತರಾದ ಶ್ರೀಮಾನ್ ಆನಂತರಾವ ಬೋಧೆಯವರ "**ವ್ಯಾವಹಾರಿಕ ಗಣಿತ**"ದ ಎಲ್ಲ ಭಾಗಗಳನ್ನು ನಾನು ಕೂಲಂಕುಷನಾಗಿ ಓದಿ ನೋಡಿದೆನು. ಈ ಪುಸ್ತಕವು ಅವರ ೩೫ ವರ್ಷಗಳ ಶಿಕ್ಷಣಕಾರ್ಯದ ಮತ್ತು ಅನುಭವದ ಪರಿಪಕ್ವವಾದ ಫಲವಾಗಿರುವದೆಂದು ಹೇಳಲಿಕ್ಕೆ ನನಗೆ ಸಂತೋಷವಾಗುತ್ತದೆ. ಇದು ಒಳ್ಳೆಯ ಯೋಜನೆಯ ತಳಹದಿಯ ಮೇಲೆ ರಚಿಸಿದ್ದಾಗಿದೆ; ಮತ್ತು ಹೊಸ ಅಭ್ಯಾಸಪತ್ರಿಕೆಯಂತೆ ಎಲ್ಲ ಅಂಶಗಳನ್ನು ಒಳಗೊಂಡಿದೆ. ಅಲ್ಲದೆ ಸರಿಯಾದ ಅನುಕ್ರಮದಲ್ಲಿ ಕೊಡಲಾಗಿರುವ, ಉತ್ತಮವಾಗಿ ಆರಿಸಿದ ನಿತ್ಯಜೀವದಿಂದ ಆಯ್ದುಕೊಂಡ ಉದಾಹರಣೆಗಳನ್ನು ಕೊಡಲಾಗಿದೆ. ಇದು ಇಂದು ಯೋಜನೆಯ ತಳಹದಿಯ ಮೇಲೆ ರಚಿಸಲಾದ ಪಠ್ಯಪುಸ್ತಕಗಳ ವಿರಲತೆಯಿಂದ ಉಂಟಾಗಿರುವ ಪ್ರತಿಕೂಲತೆಯನ್ನು ಹೋಗಲಾಡಿಸಿ ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿ ಕಂಡುಬರುವದರಲ್ಲಿ ಸಂಶಯವಿಲ್ಲ." ಎಂದು ಎಸ್. ಟಿ. ಕಾಲೇಜಿನ ಗಣಿತ ವಿಷಯದ ಪ್ರಾಧ್ಯಾಪಕರಾದ **ಶ್ರೀಮಾನ್ ಪಿ. ಎಸ್. ಮಳಗಾವಕರರು** M. A., B. T., M. Ed. ಇವರು ಹೇಳುತ್ತಾರೆ.

ಪ್ರತಿಗಳು ದೊರೆಯುವ ಸ್ಥಳ : ಎ. ಪ್ಹಿ. ಬೋಧೆ ಫುಲಬಾಗ ೨೨೪/೮೭ ಬೆಳಗಾವಿ

ಬಿಡುವಿನ ಸದುಪಯೋಗ

ಡಾ. ಡಿ. ವ್ಹಿ. ಚಿಕ್ಕರಮನೆ

[೧೯೫೨ ಮೇ ಮೇ ತಿಂಗಳು ಬೆಸಿಗೆಯ ಬಿಡುವಿನದಾದರೂ ಶೈಕ್ಷಣಿಕ ಚಟುವಟಿಕೆಗಳಿಗೆ ಹೇಗೆ ಉಪಯೋಗಿಸಲ್ಪಟ್ಟಿತೆಂಬುದನ್ನು ಎಜ್ಯುಕೇಶನಲ್ ಇನಸ್ಪೆಕ್ಟರಾದ ಡಾ || ಚಿಕ್ಕರಮನೆಯವರು ಹೃದಯಂಗವಾಗಿ ಇಲ್ಲಿ ವರ್ಣಿಸಿದ್ದಾರೆ—ಪ್ರ. ಸ.]

ಬೇಸಿಗೆಯ ಬಿಡುವಿನ ಸಮಯವು ವಿಶ್ರಾಂತಿಯ ಅವಧಿಯೆಂದೂ, ಸಾಲೆಯ ಚಟುವಟಿಕೆಗಳಿಗೆ ವಿರಾಮದ ವೇಳೆಯೆಂದೂ ಗಣಿಸಲ್ಪಟ್ಟಿದೆ. ಆದರೆ ಈ ವಿರಾಮದ ಅವಧಿಯು ಸಹ ಅನೇಕ ಶೈಕ್ಷಣಿಕ ಮನೋರಂಜಕ ಹಾಗೂ ಪುನರ್ನೂತನ ಚಟುವಟಿಕೆಗಳ ಸಲುವಾಗಿ ವಿನಿಯೋಗಿಸಲ್ಪಟ್ಟಿತು. ಆದ ಕಾರಣ, ಶಿಕ್ಷಕರು, ಸಂಸ್ಥೆಗಳು ಮತ್ತು ಅಧಿಕಾರಸ್ಥರು ಈ ಬಿಡುವಿನಲ್ಲಿ ಕಾರ್ಯಪ್ರವೃತ್ತರಾಗಿದ್ದರು.

ಇಂತಹ ಚಟುವಟಿಕೆಗಳಲ್ಲಿ ಮೊದಲನೆಯದೆಂದರೆ ಅ. ಡೆ. ಎ. ಇ. ರವರ ಚರ್ಚಾತ್ಮಕ ಕಾರ್ಯಕ್ರಮ. ಅ. ಡೆ. ಎ. ಇ. ರವರು ಕಚೇರಿಯ ಕೆಲಸದ ಸಲುವಾಗಿ ೧-೫-೫೨ ರಿಂದ ೧೦-೫-೫೨ ರ ವರೆಗೆ ಜಿಲ್ಲೆಯ ಮುಖ್ಯ ಸ್ಥಳದಲ್ಲಿ ಇರಬೇಕಾಗುತ್ತದೆ. ಅವರು ತಮ್ಮ ಕಾರ್ಯ ಕ್ಷೇತ್ರದಲ್ಲಿ ಎದುರಿಸಬೇಕಾದ ಹಾಗೂ ಬಿಡಿಸಬೇಕಾದ ಮುಖ್ಯ ಶೈಕ್ಷಣಿಕ ಸಮಸ್ಯೆಗಳ ಚರ್ಚೆಯು ಈ ಹತ್ತು ದಿನಗಳ ಅವರ ವಾಸ್ತವ್ಯದಲ್ಲಿ ನಡೆಯಿತು. ನಾಲ್ಕು ಜಿಲ್ಲೆಗಳ ಮುಖ್ಯ ಪಟ್ಟಣಗಳಲ್ಲಿ ಪ್ರತಿದಿನ ಸಾಯಂಕಾಲದ ಅವಧಿಯಲ್ಲಿ ಈ ಚರ್ಚೆಗಳು ನಡೆಯುತ್ತಿದ್ದವು. ಆಯಾ ಸಮಸ್ಯೆಯಲ್ಲಿ ಅಥವಾ ವಿಷಯದಲ್ಲಿ ತಜ್ಞರಾದವರಿಂದ ಮತ್ತು ವಿಶೇಷ ಅಭ್ಯಾಸ ಮಾಡಿದವರಿಂದ ಆ ವಿಷಯದ ಚರ್ಚೆಯು ಆರಂಭವಾಗುತ್ತಿತ್ತು.

ಸಮಾಜ ಶಿಕ್ಷಣ ಕಾರ್ಯಕರ್ತರ ತರಬೇತಿಯ ವರ್ಗಗಳನ್ನು ನಡೆಯಿಸಿದ್ದು ಇಂತಹ ಎರಡನೆಯ ಚಟುವಟಿಕೆಯೆಂದು ಹೇಳಬಹುದು. ಈ ತರಬೇತಿ ವರ್ಗಗಳು ಧಾರವಾಡ, ವಿಜಾಪುರ, ಜಮಖಂಡಿ ಶಹರಗಳ ಟ್ರೇನಿಂಗ ಕಾಲೇಜುಗಳಲ್ಲಿಯೂ, ಬೆಳಗಾಂವಿಯ ಸರದಾರ ಹಾಯಸ್ಕೂಲಿನಲ್ಲಿಯೂ ನಡೆಯಿಸಲ್ಪಟ್ಟವು. ತರಬೇತಿಯ ಅವಧಿಯು ಹದಿನೈದು ದಿನಗಳಾಗಿದ್ದವು. ಸಮಾಜ ಶಿಕ್ಷಣದಲ್ಲಿ ದುಡಿದ, ನುರಿತ ತಜ್ಞರು ಸಮಾಜ ಶಿಕ್ಷಣಕ್ಕೆ ಸಂಬಂಧಿಸಿದ ವಿವಿಧ ವಿಷಯಗಳಬಗೆಗೆ ಭಾಷಣ ಮಾಡಿದರು. ತಾತ್ವಿಕ ವಿಷಯದ ಚರ್ಚೆಯಲ್ಲದೆ ಪ್ರಾಯೋಗಿಕ ಕೆಲಸವೂ ಸಾಗಿತು.

ಸಂತೋಷ ಶಿಬಿರಗಳನ್ನು ಸಂಘಟಿಸಿದ್ದುದು ಮೂರನೆಯ ಪ್ರಕಾರದ ಚಟುವಟಿಕೆಯೆಂದು ಹೇಳಬಹುದು. ಇಂತಹ ಒಂದು ಶಿಬಿರವು ಬಾಲೇಕುಂದ್ರಿಯಲ್ಲಿ ಸರಕಾರದವರಿಂದ ಸಂಘಟಿಸಿ ನಡೆಯಿಸಲ್ಪಟ್ಟಿತು, ಹತ್ತು ದಿನಗಳವರೆಗೆ ಎರಡನೆಯ ಶಿಬಿರವು ಬಾಗೇವಾಡಿ ಶಿಕ್ಷಣ ಪ್ರಸಾರಕ ಮಂಡಳದವರಿಂದ ನಡೆಯಿಸಲ್ಪಟ್ಟಿತು ಪಾಠಗಳು ಹಾಗು ಬೋಧಪ್ರದವಾದ ಸಂಗತಿಗಳು, ವಿಷಯಗಳು ಹಾಗೂ ಚಟುವಟಿಕೆಗಳು ಈ ಶಿಬಿರಗಳ ಮುಖ್ಯ ಕಾರ್ಯಕ್ರಮಗಳಾಗಿದ್ದವು. ಶಿಕ್ಷಕರು ಹಾಗೂ ಶಿಕ್ಷಣಾಧಿಕಾರಿಗಳು ಈ ಶಿಬಿರಗಳಿಗೆ ಹಾಜರಿದ್ದರು.

ಸಮಾಜ ಶಿಕ್ಷಣ

ಡಾ॥ ವ್ಹಿ. ಕೆ. ಜವಳಿ ಅವರ ವಿಚಾರಗಳು

[ನವ್ಯಟ್ರೇನಿಂಗ ಕಾಲೇಜದಲ್ಲಿ ನಡೆದ ಸಮಾಜ ಶಿಕ್ಷಣ ಕಾರ್ಯಕರ್ತರ ತರಬೇತಿ ವರ್ಗದ ಸಮಾಪ್ತಿ ಸಮಾರಂಭದ ಸಮಯದಲ್ಲಿ ಅಂದಿನ ಮುಖ್ಯ ಅತಿಥಿಗಳಾದ ಡಾ॥ ವ್ಹಿ. ಕೆ. ಜವಳಿ ಎಜ್ಯುಕೇಶನಲ್ ಇನಸ್ಪೆಕ್ಟರ ನಾಸಿಕ ಅವರು ಮಾಡಿದ ಭಾಷಣದ ಕಿರುಳನ್ನು ಇಲ್ಲಿ ಕೊಡಲಾಗಿದೆ. ಪ್ರ. ಸಂಪಾದಕರು.]

ಡಾ. ವ್ಹಿ. ಕೆ. ಜವಳಿಯವರು

ಸಮಾಜದ ಶಿಕ್ಷಣವೆಂದರೆ ಸಮಾಜದಲ್ಲಿ ಪರಂಪರಾಗತವಾಗಿ ಬಂದ ಕೆಟ್ಟ ರೂಢಿಗಳನ್ನು ತೆಗೆದು ಹಾಕಿ ಜನರನ್ನು ಹೊಸ ಮಾರ್ಗದಲ್ಲಿ, ಉನ್ನತಿಯ ದಾರಿಯಲ್ಲಿ ಕರೆದೊಯ್ಯುವದು; ಸಮಾಜ ಶಿಕ್ಷಣದ ಪ್ರತಿಫಲ ಎಲ್ಲರೂ ಸುಖಿಗಳಾಗಿ, ಸಮಭಾಗಿಗಳಾಗಿ ಬಾಳುವದರಿಂದ ಅಳೆಯಲ್ಪಡಬೇಕು. ಜನರು ವಿಚಾರವಂತರಾಗಿ ತಮ್ಮ ಇರುವಿಕೆ, ಆಗು – ಹೋಗುಗಳು, ಸುತ್ತಲಿನ ಸಮಾಜ–ಇವೇ ಮೊದಲಾದವುಗಳ ಜ್ಞಾನ ಮಾಡಿಕೊಳ್ಳಲು ಶಕ್ತರಾಗಬೇಕು. ಕಲಿಯುವವರಲ್ಲಿ ವಿಚಾರ ಶಕ್ತಿಯನ್ನು ಹುಟ್ಟಿಸಿ ಅವರು ಕಲಿಸುವವರಿಗೆ ವಿಚಾರಾತ್ಮಕ ಪ್ರಶ್ನೆಗಳನ್ನು ಕೇಳುವಂತಾಗಬೇಕು. ಶಿಷ್ಯನು ವಿಚಾರಾತ್ಮಕ ತಿಳಿವಿನ ಮೇಲೆ ನಿಂತು ಶಿಕ್ಷಕನೊಡನೆ ಯಾವದೊಂದು ವಿಷಯದ ಬಗೆಗೆ ವಾದಿಸಲಿ ಹೀಗೆ ಶಿಕ್ಷಣವು, ಸಾಮಾನ್ಯವಾಗಿ, ಕಲಿಯುವವರನ್ನು ಸುವಿಚಾರಿಗಳನ್ನಾಗಿ ಮಾಡಬೇಕು. ಸಮಾಜಶಿಕ್ಷಣವು ಅಜ್ಞ ಜನಸಾಮಾನ್ಯರಲ್ಲಿ ಹೊಸ ವಿಚಾರಗಳ ಹೊನಲನ್ನು ಹರಿಸಿದರೆ ಕ್ಷೇಮಕರ; ಆದರೆ ಈ ವಿಚಾರಗಳು ಸಮಾಜದ ಏಳ್ಗೆಗೆ ಕಾರಣವಾಗುವಂಥವಿರಬೇಕು.

ಶಿಕ್ಷಣಕ್ಕೆ ಸೀಮೆಯಿಲ್ಲ! ನಿಯತ ಬಂಧನಗಳು ಇರಕೂಡದು. ಸಮಾಜ ಶಿಕ್ಷಣಕ್ಕೆ ಈ ಮಾತು ಹೆಚ್ಚು ಅನ್ವಯಿಸುವದು. ಅದು ಎಲ್ಲರಲ್ಲಿ ಬಂಧು–ಪ್ರೇಮ, ಸ್ನೇಹ, ಸಹಕಾರಗಳನ್ನು ಹೆಣೆಯುವದು.

ಸ. ಶಿ. ಕಾರ್ಯಕರ್ತರು ಪ್ರೌಢರ ಸಂಗಡ ಶಿಕ್ಷಕರಂತೆ ವರ್ತಿಸದೆ ಅವರ ಹಿತಚಿಂತಕರಂತೆ ನಡೆಯಬೇಕು; ವರ್ಗಕ್ಕೆ ಬಂದ ಕೂಡಲೆ ಅವರೊಡನೆ ಸಲಿಗೆಯ-ಮಾತುಕತೆಗಳನ್ನಾಡಿ ಅವರ ಕ್ಷೇಮ ಸಮಾಚಾರವನ್ನು ತಿಳಿದುಕೊಳ್ಳಬೇಕು. ಹೀಗೆ ಮಾಡುವದರಿಂದ ಅವರಲ್ಲಿ ಆತ್ಮೀಯ ಭಾವನೆ ಬೆಳೆಯುವದು. ಇದಾಯಿತೆಂದರೆ ಅರ್ಧಕ್ಕಿಂತ ಹೆಚ್ಚು ಕೆಲಸ ಆಯಿತೆಂದು ಕಾರ್ಯಕರ್ತರು ತಿಳಿಯಬೇಕು. ಮುಂದೆ ವಿಷಯ ಕಲಿಸುವದಾಗಲಿ ಇಲ್ಲವೆ ಯಾವದೊಂದು ಸಂಗತಿಯ ಜ್ಞಾನ ಮಾಡಿಕೊಡವದಾಗಲಿ ಸುಲಭವಾಗುವದು.

ಪ್ರೌಢರಿಗೆ ಬಿಡಿ ಬಿಡಿ ಅಕ್ಷರಗಳನ್ನಾಗಲಿ, ಶಬ್ದಗಳನ್ನಾಗಲಿ ಕಲಿಸುವದು ಸರಿಯಾದ ಮಾರ್ಗವಲ್ಲ. ಅವರ ಜೀವನಕ್ಕೆ, ಉದ್ಯೋಗಕ್ಕೆ ಸಂಬಂಧಿಸಿದ ಸಂಗತಿಗಳನ್ನೇ ಕೇಂದ್ರವಾಗಿಟ್ಟುಕೊಂಡು ಮಾತುಗಳನ್ನು ಹೆಣೆಯಬೇಕು. ಇದರಿಂದ ಅವರಿಗೆ ಅಭಿರುಚಿ ಹುಟ್ಟಿ, ಗೊತ್ತಿದ್ದ ವಿಷಯಗಳ ಶಾಸ್ತ್ರೀಯ ಜ್ಞಾನ ಹೊಳೆದು ಅಕ್ಷರಗಳ ಕಲ್ಪನೆಯೂ ಆಗುವದು.

ಒಟ್ಟನಲ್ಲಿ ಸಮಾಜ ಶಿಕ್ಷಣದ ವ್ಯಾಪ್ತಿಯು ವಿಶಾಲವಿದೆ. ಮಹತಿಯು ಮಹತ್ತರವಿದೆ; ಕಾರ್ಯಕರ್ತರ ಹೊಣೆಯು ಅಪಾರವಿದೆ.

ಸತ್ಯ, ಅಹಿಂಸೆ, ಅಸ್ಪೃಶ್ಯತಾನಿವಾರಣೆ ಸ್ವದೇಶಪ್ರೇಮ ಇತ್ಯಾದಿ ರಾಷ್ಟ್ರೀಯ ಭಾವನೆಗಳ
ವಿಶೇಷತಃ ಗಾಂಧೀಜಿಯ ವಿಧಾಯಕ ವಿಚಾರಗಳ

ಭಾರತೀಯರ ಕಥೆಗಳು

ಕನ್ನಡ ಶಿಕ್ಷಣದ ವರ್ಗಕ್ಕೆ

ಲೇಖಕ:—ಶ್ರೀ ಹಿರೇಮಠ ಬೆಲೆ ೮ ಆಣೆ

ಮ. ಬುದ್ಧನಿಂದ ದಾದಾಭಾಯಿ ನವರೋಜಿ. ತಥಾ ಮ. ಗಾಂಧೀಜಿಯವರಿಗಿನ ಕಥೆಗಳನ್ನು
ಸುರಸ ಹಾಗು ಸರಳ ಶೈಲಿಯಲ್ಲಿ ರಚಿಸಿದೆ.

ಸಾಮಾನ್ಯ ಜ್ಞಾನ

ಮತ್ತು

ಧಾರವಾಡ ಜಿಲ್ಲೆಯ ಭೂಗೋಲ

ಪೌರನೀತಿ ಸಹಿತ ಬೆಲೆ ೧೦ ಆಣೆ.

ಶಿಕ್ಷಣದ ವರ್ಗಕ್ಕೆ ಪಠ್ಯಪುಸ್ತಕದ ಜೊತೆಗೆ ಈ ಎರಡೇ ಪುಸ್ತಕಗಳು ಸಾಕು!

ಮಾರಾಟಗಾರರು:—ಅಕಳವಾಡಿ ಬುಕ್‌ಡಿಪೋ, ಧಾರವಾಡ.

ವಿದ್ಯಾರ್ಥಿಗಳೇ ಪರೀಕ್ಷೆಯಲ್ಲಿ ನಿಮ್ಮ ಯಶವನ್ನು ನಿಶ್ಚಿತಗೊಳಿಸಬೇಕೇ?
ಹಾಗಿದ್ದರೆ

ಪ್ರಶ್ನೋತ್ತರ ದೀಪಿಕೆ

ಭೂಗೋಲ ಮತ್ತು ಇತಿಹಾಸ

ಇವುಗಳನ್ನು ತಪ್ಪದೇ ಓದಿರಿ!

ಈ ಪುಸ್ತಕಗಳು ಮುಲ್ಕೀ ಮತ್ತು ಸ್ಕಾಲರ್‌ಶಿಪ್ ಪರೀಕ್ಷೆಯ, ಹೊಸ ಅಭ್ಯಾಸ ಪತ್ರಿಕೆಯ ಪೂರ್ಣ ವಿಷಯಗಳನ್ನೊಳಗೊಂಡಿದ್ದು, ಇತ್ತೀಚಿನ ಭೌಗೋಲಿಕ, ರಾಜಕೀಯ, ಹಾಗು ಐತಿಹಾಸಿಕ ಬದಲಾವಣೆಗಳನ್ನೆಲ್ಲಾ ಒಳಗೊಂಡಿವೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಓದಲೇ ಬೇಕಾದ ಪುಸ್ತಕಗಳು.

ಬೆಲೆ ಪ್ರತಿಯೊಂದಕ್ಕೆ ೦—೧೫—೦. (ಅಂಚೇ ವೆಚ್ಚ ಪ್ರತ್ಯೇಕ).
ಇಂದೇ ನಿಮ್ಮಲ್ಲಿಯ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ. ಅಥವಾ ಕೆಳಗಿನ ಪತ್ತೆಗೆ ಬರೆಯಿರಿ—

ವೀಣಾ ಬುಕ್—ಡಿಪೋ.
ಮಾರುತೀ ಬೀದಿ, ಬೆಳಗಾವಿ

ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸುಸಂಧಿ!

೧೯೫೧ ಮತ್ತು ೧೯೫೨ನೆಯ ವರ್ಷಗಳ
ಮುಲ್ಕೀ ಪರೀಕ್ಷೆಯ ಎಲ್ಲ ವಿಷಯಗಳ
ಪ್ರಶ್ನೆಗಳನ್ನು ಬಿಡಿಸಿದ

"ಪ್ರಶ್ನೋತ್ತರ ದರ್ಪಣ"ವು

ಲೆ: ಆಯ್. ಎಸ್. ಅರಳಗುಪ್ಪಿ
ಬಿ. ಜಿ. ಸಿದ್ದನಗೌಡರ
ಎನ್. ಎಸ್. ಸವದಿ

ಸಿದ್ಧವಾಗಿದೆ ಅನುಭವಿಕ ಶಿಕ್ಷಕರಿಂದ ಬರೆದು,
ಶಿಕ್ಷಣ ತಜ್ಞರಿಂದ ಪರಿಶೋಧಿಸಿದೆ.
ತ್ವರೆ ಮಾಡಿರಿ.

ವಿಳಾಸ: ಎಲ್. ಜಿ. ಹೊಸಮನಿ
ದೀಕ್ಷಿತವಾಡೆ, ಲೈನಬಜಾರ, ಧಾರವಾಡ.

ಬೆಲೆ: ೧—೧೨—೦

೭ನೆಯ ಇಯತ್ತೆಯ ಹೊಸ ಅಭ್ಯಾಸಪತ್ರಿಕೆ
ಯಂತೆ ಹೊಸ ಮಾದರಿಯಿಂದ ರಚಿಸಿದ

ಭಾರತ ರಾಜ್ಯ ಘಟನೆ

(ಸಚಿತ್ರ)

ಸುಧಾರಿಸಿದ ಎರಡನೆಯ ಆವೃತ್ತಿ
ಫೆಬ್ರುವರಿ ೧೯೫೨
ಲೇಖಕರು:— ವಿ. ಕ. ನಂದಗಾಂವ

ಬೆಲೆ ೦—೧೨—೦

ಮಾನ್ಯರಾದ ಎಸ್.ಎನ್. ಅಂಗಡಿ, ಪ್ರಿ ರೆಡ್ಡಿ, ಪ್ರಿ. ಜೋಶಿ, ಪ್ರಿ. ಇಂಚಲ, ಪ್ರಿ. ವರ್ಟಿ, ಪ್ರಿ. ಚಿಕ್ಕರಮನೆ, ಶ್ರೀ. ಗೋಖಲೆ ಕೇಶವರಾಯರು, ಶ್ರೀ. ಶಾನಭಾಗ (ಡಿ.ಎಸ್.ಪಿ.) ಮುಂತಾದವರಿಂದಲೂ ಪಠ್ಯ ಪುಸ್ತಕ ಸಮಿತಿಯವರಿಂದಲೂ ಮಾನ್ಯ ಮಾಡಲ್ಪಟ್ಟಿದೆ.

ಪ್ರಕಾಶಕರು: ನಿ. ವಿ. ನಂದಗಾಂವ
೬೧೯ ಮರಗಲ್ಲಿ, ಬೆಳಗಾಂವ

ಅವಶ್ಯವಾಗಿ ಸಂಗ್ರಹಿಸಲೇಬೇಕಾದ ಪುಸ್ತಕಗಳು!

ಲೇಖಕ: ಗಲಗಲಿ

ನಮ್ಮ ರಾಜ್ಯಘಟನೆ

(ಬೆಲೆ: ೧೫ ಆಣೆ)

ಇಂದಿನ ಪರೀಕ್ಷೆಯ ಹೊಸ ಧೋರಣೆಯಂತೆ ಪುಸ್ತಕ ರಚಿಸಲಾಗಿದೆ. ಹೊಸ ಅಭ್ಯಾಸಪತ್ರಿಕೆಯ ಪ್ರಕಾರ ಎಲ್ಲ ವಿಷಯವನ್ನು ಮಕ್ಕಳಿಗೆ ತಿಳಿಯುವಂತೆ ತಿಳಿಯಾದ ಭಾಷೆಯಲ್ಲಿ ವಿವೇಚಿಸಲಾಗಿದೆ. ಪ್ರತಿ ಪ್ರಕರಣದ ಕೊನೆಗೆ ಉಪಯುಕ್ತ ಹಾಗೂ ಮಹತ್ವದ ಪ್ರಶ್ನೆಗಳನ್ನೂ ಕೊಟ್ಟಿದೆ. ಕಾರಣ ಈ ಪುಸ್ತಕವನ್ನು ಪ್ರಾ. ಶಾ. ಪ್ರ. ಪ. ಪರೀಕ್ಷೆಯ ವಿದ್ಯಾರ್ಥಿಗಳು ಕೂಡಲೇ ಸಂಗ್ರಹಿಸುವದು ಜಾಣತನವೆಂದು ಬೇರೆ ಹೇಳಬೇಕಿಲ್ಲ.

ಪ್ರಶ್ನೋತ್ತರ-ಕರ್ನಾಟಕ ಇತಿಹಾಸ

(ಬೆಲೆ: ೧೫ ಆಣೆ)

ಎಲ್ಲ ವಿಷಯಗಳನ್ನೊಳಗೊಂಡ ಇಂಥ ಪುಸ್ತಕ ಕರ್ನಾಟಕದಲ್ಲಿ ಇನ್ನೂವರೆಗೆ ಹೊರಬೀರಲಿಲ್ಲ. ಮಿ. ಸ್ಕೂಲ ಸ್ಕಾಲರಶಿಪ್ ಪರೀಕ್ಷೆಯ ನಿದ್ಯಾರ್ಥಿಗಳು ಈ ಪುಸ್ತಕವನ್ನು ಅಭ್ಯಸಿಸಿ ತಮ್ಮ ಯಶದ ಮಾರ್ಗವನ್ನು ಸುಗಮ ಮಾಡಿಕೊಳ್ಳುವರೆಂದು ಆಶಿಸಿದರೆ ಅದೇನೋ ಅತಿಶಯೋಕ್ತಿಯಲ್ಲ. ಪ್ರಾಥಮಿಕ ಶಾಲೆಯ ತರಗತಿಯ ಮಕ್ಕಳಿಗೆ ಇದು ಮಾರ್ಗದರ್ಶನ ಮಾಡಬಲ್ಲದು. ಆದ್ದರಿಂದ ಈ ಪುಸ್ತಕ ನಿಮ್ಮಲ್ಲಿರದಿದ್ದರೆ ಕೂಡಲೇ ಸಂಗ್ರಹಿಸಿರಿ.

ಇಂದೇ ನಿಮ್ಮ ಪ್ರತಿಗಳನ್ನು ತರಿಸಿಕೊಂಡು ಯಶಸ್ಸನ್ನು ಗಳಿಸಿರಿ!!

ವ್ಯಾಪಾರಸ್ಥರಿಗೆ ಧಾರಳ ಕಮೀಶನ್

ಆಕಳವಾಡಿ ಬುಕ್ ಡಿಪ್ಪೋ, (ವಿಜಯ ರೋಡ) ಧಾರವಾಡ

ತ್ವರೆ ಮಾಡಿರಿ ! ಇಂದೇ ಸಂಗ್ರಹಿಸಿರಿ !

ಹಬ್ಬ-ಹುಣ್ಣಿವೆಗಳು

ಬೆಲೆ: ೦—೧೨—೦

ಎಲ್ಲರಲ್ಲಿಯೂ ಇರಬೇಕಾದ ಪುಸ್ತಕ. ಹಬ್ಬಗಳು ರೂಢಿಯಲ್ಲಿ ಏಕೆ ಬಂದವು ?
ಅವುಗಳಿಗಿರತಕ್ಕ ಐತಿಹಾಸಿಕ ಹಿನ್ನೆಲೆ ಮತ್ತು ಮಹತ್ವ ಕುರಿತು
ಸರಳ ಶೈಲಿಯಲ್ಲಿ ವಿವೇಚಿಸಲಾಗಿದೆ.

ತ್ವರೆ ಮಾಡಿರಿ ! ಇದೀಗ ತಯಾರಾಗಿವೆ.

ಲಘುವಾರಮಾಲೆ-೧ ಇತಿಹಾಸ ಬೆಲೆ ೦—೬—೦
,, ೨ ಭೂಗೋಲ ಬೆಲೆ ೦-೬—೦
,, ೩ ಭೂಮಿತಿ-ಜಮಾಖರ್ಚು ೦-೬-೦
,, ೪ ವ್ಯಾಕರಣ (ಅಚ್ಚಿನಲ್ಲಿ)

ಈ ಚಿಕ್ಕ ಪುಸ್ತಕಗಳು ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೂ ೫-೬ನೇ ಇಯತ್ತೆಯ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯುಕ್ತವಾಗಿವೆ. ಈಗಾಗಲೆ ಈ ಮಾಲೆಯು ಬಹುಜನರಿಂದ ಮನ್ನಣೆ ಪಡೆದಿದೆ.

ಆಕಳವಾಡಿ ಬುಕ್-ಡಿಪೋ, ಧಾರವಾಡ

A. B. D.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು
ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು ಶ್ರೀ. ಜಿ. ಎ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಿಗಳ ಹತ್ತರ ದೊರೆಯುವದು. ಬೆಲೆ ೧—೧೨—೦, ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಅಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಜಿ. ವಾಯ್. ರಾಣೆ

ಪ್ರಕಾಶಕರು, ಖಳಖ, ಕಸಬಾ ಪೇಟೆ, ಪುಣೆ.

ಮಕ್ಕಳ ಸಚಿತ್ರ ಅಂಕಗಣಿತ

ಪ್ರಾಥಮಿಕ ೧, ೨, ೩ನೆಯ ತರಗತಿಗಳಿಗೆ

ಹೊಸ ಅಭ್ಯಾಸಪತ್ರಿಕೆಯಂತೆ ಬರೆಯಲ್ಪಟ್ಟುವು! ಹೊಸ ಶಿಕ್ಷಣಪದ್ಧತಿಗೆ ಹೊಂದಿಕೊಳ್ಳುವಂತೆ ವಿಷಯ ವಿವೇಚನೆಯನ್ನೊಳಗೊಂಡುವು! ದಿನ ನಿತ್ಯದ ಜೀವನಕ್ಕೆ ಸಂಬಂಧಿಸಿದ ಉದಾಹರಣೆಗಳು! ಸುಲಭವಾದ ಶೈಲಿ, ಮಕ್ಕಳ ಮನಸೆಳೆಯುವ, ಕಣ್ಣೆಳೆಸುವ ಸುಂದರ ಚಿತ್ರಗಳು !! ಮಕ್ಕಳಿಗೆ ಅತ್ಯುಪಯುಕ್ತ!

೧ನೆಯ ತರಗತಿಯ ಅಂಕಗಣಿತ: ಬೆಲೆ ೦-೫-೦

೨ನೆಯ ತರಗತಿಯ ಅಂಕಗಣಿತ: ಬೆಲೆ ೦-೭-೦

೩ನೆಯ ತರಗತಿಯ ಅಂಕಗಣಿತ: ಬೆಲೆ ೦-೧೦-೦

ರಾಮಾಶ್ರಯ ಬುಕ್-ಡಿಪೊ, ಧಾರವಾಡ.

ಸ್ವತಂತ್ರ ಭಾರತೀಯ ರಾಜ್ಯತಂತ್ರ

(ಸಚಿತ್ರ)

ಲೇಖಕರು: ಶ್ರೀ. ನಾರಾಯಣ ಶರ್ಮ

ಎಸ್. ಎಸ್. ಸಿ (ಮ್ಯಾಟ್ರಿಕ್), ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ (ಮುಲ್ಕಿ) ಹಾಗು ಪ್ರಾಥಮಿಕ ಶಿಕ್ಷಕರ ಪ್ರಮಾಣಪತ್ರ ಪರೀಕ್ಷೆ (ಪಿ. ಟಿ. ಸಿ.) ಗಳ ಹೊಸ ಅಭ್ಯಾಸ ಪತ್ರಿಕೆಗಳಿಗೆ ಅನುಸಾರವಾಗಿ ಬರೆಯಲ್ಪಟ್ಟುದು. ಇದೊಂದೇ ಪುಸ್ತಕದಲ್ಲಿ ಮೂರು ಪರೀಕ್ಷೆಗಳಿಗೆ ಅವಶ್ಯವಾದ ಭಾರತೀಯ ರಾಜ್ಯತಂತ್ರದ ತ್ರಿವೇಣೀ ಸಂಗಮ! ವಿಷಯಕ್ಕನುಗುಣವಾದ ಸುಂದರ ಚಿತ್ರಗಳು! ನಕಾಶೆಗಳು! ಚಿತ್ರಪಟಗಳು! ಗಹನವಾದ ವಿಷಯವನ್ನು ಸುಲಭವಾಗಿ ತಿಳಿಯುವ ಶೈಲಿಯಲ್ಲಿ ಪ್ರತಿಪಾದಿಸಲಾಗಿದೆ.

ಬೆಲೆ: ೧—೦—೦ ಮಾತ್ರ

ಪ್ರಕಾಶಕರು:

ರಾಮಾಶ್ರಯ ಬುಕ್-ಡಿಪೊ, ಧಾರವಾಡ.

Regd. No, B. 5375

ಗೌರೀಶ ಗ್ರಂಥ ಪ್ರಕಟನಾಲಯದಿಂದ ಪ್ರಕಟವಾದ
ಹೊಸ ಹೊತ್ತಿಗೆಗಳು

೧. **ಕರ್ನಾಟಕದ ಐತಿಹಾಸಿಕ ಕಥೆಗಳು.** ಏನೇ ಇಯತ್ತಿಗೆ — **ಬೆಲೆ ೦-೧೪-೦**
ಲೇಖಕರು :- ಶ್ರೀಯುತ ಬಸಪ್ಪ ಮಲ್ಲಪ್ಪ ಶಿಂತ್ರಿ ಬಿ ಎ.ಜಿ.ಟಿ.
ರಿಟಾಯರ್ಡ ಅ. ಎ. ಇ. ದಕ್ಷಿಣ ಭಾಗ, ಧಾರವಾಡ.

೨. **ಭೂಮಂಡಲ ಬೋಧಿನಿ ಭಾಗ ೧.** ಏನೆಯ ಇಯತ್ತಿಗೆ — **ಬೆಲೆ ೦-೧೨-೦**
ಲೇಖಕರು :- ಕೈ. ಶಿ. ಸೋ. ಕುಲಕರ್ಣಿ.

೩. **ಭೂಮಂಡಲ ಬೋಧಿನಿ ಭಾಗ ೨.** ಬನೆಯ ಇಯತ್ತಿಗೆ — **ಬೆಲೆ ೧ ೪-೦**
ಲೇಖಕರು :- ಶ್ರೀಯುತ ಎ ಜಿ. ಕುಲಕರ್ಣಿ ಬಿ.ಎ.ಬಿ.ಟಿ.
ಮತ್ತು ಶ್ರೀಯುತ ಕಾರಡಗಿ ಬಿ.ಎ.

೪. **ಭೂಮಂಡಲ ಬೋಧಿನಿ ಭಾಗ ೩.** ೬ನೆಯ ಇಯತ್ತಿಗೆ — **ಬೆಲೆ ೧-೧೦-೦**
ಲೇಖಕರು :- ಪದರೀಯವರು

೫. **ಭೂಮಂಡಲ ಬೋಧಿನಿ ಭಾಗ ೪.** ೭ನೆಯ ಇಯತ್ತಿಗೆ — **ಬೆಲೆ ೨-೨-೦**
ಲೇಖಕರು :- ಪದರೀಯವರು

೬. **ಸ್ವತಂತ್ರ ಭಾರತದ ಗಣರಾಜ್ಯ ಘಟನೆ.** ೭ನೆಯ ಇಯತ್ತಿಗೆ — **ಬೆಲೆ ೦-೧೨-೦**
ಲೇಖಕರು :- ಆಸ್ಥಾನ ರಂಗಾಚಾರ್ಯ ಎಂ. ಏ. (ಲಂಡನ)

೭. **ಭಾರತ ರಾಜ್ಯಘಟನೆಯ ತಿಳಿಸೋಟಿ.** ೬ನೆಯ, ೭ನೆಯ ಇಯತ್ತಿಗೆಗಳಿಗೆ — **ಬೆಲೆ ೦-೮-೦**
ಲೇಖಕರು :- ಶ್ರೀ. ಗ. ಸ. ಹಾಲಪ್ಪ ಎಂ. ಎ. ಮಹಾರಾಜಾ
ಕಾಲೇಜ, ಮೈಸೂರ.

ಮೇಲಿನ ಎಲ್ಲ ಪುಸ್ತಕಗಳು ಅವುಗಳ ಮುಂದೆ ಕಾಣಿಸಿದ ಇಯತ್ತಿಗೆಗಳಿಗೆ ೧೯೫೪ರ ವರೆಗೆ **ಪಠ್ಯ ಪುಸ್ತಕಗಳೆಂದು** ಸರಕಾರದವರಿಂದ ಮಂಜೂರಾಗಿವೆ.

೮. **ಮನಸ್ಸು ಮತ್ತು ಶಿಕ್ಷಣ** ನವುನೆ. ಟೀಚಿಂಗ ಕಾಲೇಜದ ೨ನೆಯ ವರ್ಷದವರಿಗೆ ಪೂರಕ-ವಾಚನನೆಂದು ಮಂಜೂರಾಗಿದೆ. **ಬೆಲೆ ೦-೧೨-೦**
ಲೇಖಕರು :- ಶ್ರೀ. ಕಾಮತಗಿ ವೀರಭದ್ರಪ್ಪನವರು ಎಂ. ಎ. ಎಲ್ ಎಲ್. ಬಿ.

೯. **ಮಾತಿನ ಮುನ್ನಡೆ.** ೬ನೆಯ ಇಯತ್ತಿಗೆ
೧೦. **ಮಾತಿನ ಮುನ್ನಡೆ.** ೭ನೆಯ ಇಯತ್ತಿಗೆ
೧೧. **ಮಾತಿನ ಮುನ್ನಡೆ.** ೮ನೆಯ ಇಯತ್ತಿಗೆ
೧೨. **ಮಾತಿನ ಮುನ್ನಡೆ.** ೯ನೆಯ ಇಯತ್ತಿಗೆ

೧೩. ಪತ್ರಗಳ ನಮೂನೆಗಳು. ೬-೭ನೆಯ ಇಯತ್ತಿಗೆಗಳಿಗೆ.
ಇವೆಲ್ಲವೂ ಪೂರಕ ವಾಚನಗಳೆಂದು ಮಂಜೂರಾಗಿವೆ.

ಪ್ರಕಾಶಕರು :
ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ, ಧಾರವಾಡ.

Printed by M. A. Kamat, B. sc. at Jai Hind Art Press, Javlipeth, Dharwar. Edited an Published by M. G. Handral B. M. Shintri, S. R. Tatti, & Y. D. Nadkarni Jointly at t Kannada Prathamik Shikshan Office, Govt. Training College for Men, Dharwar.

ಬೆಲೆ ೬ ಆಣೆ] ಕೃಪಾಧಾರ ಸಂಪುಟಗಳು : ೫೯. ಎಲ್. ಬಿ. ಹುಂಬ್ಯಾಳ [ಜುಲೈ ೧೯೫೨

ಮುಂಬಯಿ ವಿದ್ಯಾಖಾತೆಯ ಪಠ್ಯ ಪುಸ್ತಕ ಸಮಿತಿಯಿಂದ ಮಂಜೂರಾಗಿ, ಈಗಾಗಲೇ ವಿಜಾಪು ಜಿಲ್ಲೆಯ ಮಾಧ್ಯಮಿಕ ಶಾಲೆಗಳಲ್ಲಿಯೂ, ಧಾರವಾಡ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿಯು. ಉಪಯೋಗದಲ್ಲಿರುವ ಹಾಗೂ **ಕರ್ನಾಟಕ ವಿದ್ಯಾವರ್ಧಕ ಸಂಘ** ಧಾರವಾಡ ಇವರಿಂದ ಪಾರಿ ತೋಷಕ ಪಡೆದ ಗ್ರಂಥ.

ಮಹಾತ್ಮಾ ಗಾಂಧಿ

(ಮಹಾತ್ಮರ ಜೀವನ ಚರಿತ್ರೆ ಹಾಗೂ ವಿಚಾರ ಸಂಗ್ರಹ)

ದ್ವಿತೀಯ ಮುದ್ರಣ

ಲೇಖಕರು:—ಸ. ವೀ. ಹಂಜಿ, ಎಂ. ಎ., ಬಿ. ಟಿ., ಡಿ. ಬಿ. ಈ.

೭೯ ವರ್ಷಗಳ ತ್ಯಾಗಪೂರ್ಣ, ತಪಸ್ಸಿನ ಹಾಗೂ ಸೇವಾಮಯ ಮಹಾನ್ ಜೀವನದ ಪ್ರಮಾಣ ಗ್ರಂಥ

ಮಹಾತ್ಮರ ಸಮಗ್ರ ಜೀವನವನ್ನು ಸರಳ ಶೈಲಿಯಲ್ಲಿ ಚಿತ್ರಿಸುವ ಪೊದಲನೆಯ ಗ್ರಂಥ.

ಪ್ರೊ. **ಶಿ. ಶಿ. ಬಸನನಾಳ** ಅವರ ನುನ್ನುಡಿ ಹಾಗೂ ಮಾನ್ಯ ಶ್ರೀ **ಆರ್. ಆರ್. ದಿವಾಕ** ಅವರ ಅಭಿನಂದನೆಯೊಡನೆ ಮಿನುಗುವ ಗ್ರಂಥ.

ಪ್ರತಿಯೊಬ್ಬ ಕನ್ನಡಿಗನು ಅವಶ್ಯವಾಗಿ ಓದಬೇಕೆಂದು ಬಿನ್ನಹ.

ಕ್ರೌನ್ ೮. ಪ. ಪುಟ. ೧೮೪+೨೦೦

ಬೆಲೆ, ಉತ್ತಮ ಪ್ರತಿ. ರೂ ೨--೦—೦

ಸಾದಾ ಪ್ರತಿ ರೂ ೧—೮—೦ (ವಿದ್ಯಾರ್ಥಿಗಳ ಸಲುವಾಗಿ)

ಗ್ರಂಥಗಳು ಸಿಗುವ ವಿಳಾಸಃ —

ಎಸ್. ವ್ಹಿ. ಹಂಜಿ.

ಬಸವೇಶ್ವರ ಟ್ರೇನಿಂಗ ಕಾಲೇಜ, **ಬಾಗಲಕೋಟೆ.**

ಪುಟ ೨೬೦) **ಮೂಲ ಶಿಕ್ಷಣ** (ಬೆಲೆ: ೩-೦-೦

ಲೇಖಕರು:— **ಶ್ರೀ. ಮ. ಗು. ಹಂದ್ರಾಳ,** ಬಿ. ಎ., (ಆನರ್ಸ) ಬಿ. ಟಿ.

(ಪಿನ್ಸಿಪಾಲ, ಸರಕಾರಿ ಕ. ಗಂ. ಟ್ರೇ. ಕಾ. ಧಾರವಾಡ.)

ಮೂಲ ಶಿಕ್ಷಣದ ಬಗ್ಗೆ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಣ ಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಪೊತ್ತಿಕೆಯಾಗಿದೆ ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿ ಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ.

ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ.

ಆಕಳವಾಡಿ ಬುಕ್ ಡಿಪೋ, ಧಾರವಾಡ.

ಕನ್ನಡ ಪ್ರಾಥಮಿಕ ಶಿಕ್ಷಣ

17/7/57

ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಡಿ. ವ್ಹಿ. ಚಿಕ್ಕರಮನೆ, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ.
ಪ್ರಧಾನ ಸಂಪಾದಕರು : ಶ್ರೀ. ಎಂ. ಜಿ. ಹಂದ್ರಾಳ ಬಿ.ಎ.(ಆನರ್ಸ)ಬಿ. ಟಿ., ಡಿ. ಪಿ. ಇಡಿ;ಡಿ. ಬಿ. ಇ. ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಸಹಸಂಪಾದಕರು:

ಶ್ರೀಯಮುನಾಬಾಯಿ ನಾಡಕರ್ಣಿ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೨	ಜುಲೈ ೧೯೫೭	ಸಂಚಿಕೆ ೭

ವಿಷಯ

ಪರಿವಿಡಿ

ಪುಟ

೧. ಸಂಪಾದಕೀಯ ೩
೨. ಸಂಸ್ಕಾರ ಕೇಂದ್ರ ೫
೩. ಶಾರೀರಿಕ ಶಿಕ್ಷಣ (ಲೇಖಾಂಕ ೧) — ಶ್ರಿ. ಯ. ವೆಂ. ಜಾವಡೇಕರ ೯
೪. ಜ್ಞಾನಾರ್ಜನೆಯಲ್ಲಿ ಸಾಹಚರ್ಯದ ಕಾರ್ಯವು —ಶ್ರೀ. ತಟ್ಟಿ ಶ್ಯಾಮರಾಯರು ... ೧೪
೫. ಭೂಗೋಲವನ್ನು ಕಲಿಸುವ ಬಗೆಗಳು—(ಲೇಃ ೫) ಶ್ರೀ. ಬ. ಮ. ಶಿಂತ್ರಿ ೧೭
೬. ಪ್ರಾಥಮಿಕ ಶಿಕ್ಷಣದ ಕ್ಷಿತಿಜದ ಮೇಲೆ—(೧) ೨
,, ,, (೨) ೨೦
೭. ಪುಸ್ತಕ ವಿಮರ್ಶೆ ೨೧

ವಿಶೇಷ ಸುದ್ದಿ: (ಪುಟ—೧೯) ಲೇಖಕರಿಗೆ ವಿನಂತಿ (ಪುಟ ೧೬)

ಮುಖಪೃಷ್ಠದ ಪಡಿಯಚ್ಚು "ಜಯ ಕರ್ನಾಟಕ"ದ ಕೃಪೆಯಿಂದ

ಪ್ರಾಥಮಿಕ ಶಿಕ್ಷಣದ ಕ್ಷಿತಿಜದ ಮೇಲೆ (೧)

ಹುಬ್ಬಳ್ಳಿ:—ಸರಕಾರದಿಂದ ಪ್ರಸಿದ್ಧವಾದ ಪಠ್ಯ-ಪುಸ್ತಕಗಳನ್ನು ಕಲಿಸುವ ರೀತಿಯನ್ನು ಕುರಿತು ಚರ್ಚಿಸುವದಕ್ಕಾಗಿ ದಿನಾಂಕ ೩೦ ಮತ್ತು ೩೧-೫-೧೯೩೨ ಕ್ಕೆ ಹುಬಳ್ಳಿಯ ಮುನ್ಸಿಪಾಲಿಟಿಯ ಎಲ್ಲ ಸಾಲೆಗಳ ಶಿಕ್ಷಕರ ಸಭೆಯನ್ನು ಧಾರವಾಡ ಜಿಲ್ಲೆಯ ಡೆಪ್ಯೂಟಿ ಎಜ್ಯುಕೇಶನಲ್ ಇನ್ಸಪೆಕ್ಟರರಾದ ಶ್ರೀ. ಎ. ಎಚ್. ದಳವಾಯಿ ಯವರ ನೇತೃತ್ವದಲ್ಲಿ ಕರೆಯಲಾಗಿತ್ತು. ಸರಕಾರದವರೇ ಪಠ್ಯ ಪುಸ್ತಕಗಳನ್ನು ನಿರ್ಮಿಸಿದದುರ ಉದ್ದೇಶ ಪಠ್ಯ ಪುಸ್ತಕಗಳಲ್ಲಿ ಸೇರಿಸಲಾದ ಪಾಠಗಳ ಹಿನ್ನೆಲೆ ಹಾಗೂ ಅವುಗಳ ಔಚಿತ್ಯ, ಅವನ್ನು ಪ್ರಸಂಗ ಹಾಗೂ ಕಾಲಾನುಕ್ರಮದಿಂದ ಹೊಂದಿಸಿಕೊಂಡು ಕಲಿಸಬೇಕಾದ ರೀತಿ ಮತ್ತು ೧ ರಿಂದ ೪ ನೆಯ ಇಯತ್ತೆಯನರಿಗೆ ಯಾವ ಗುರಿ ಹಾಗೂ ಉದ್ದೇಶಗಳನ್ನು ಇಟ್ಟುಕೊಂಡು ಕಲಿಸಬೇಕೆಂಬುದನ್ನು ಬಹುಮಾರ್ಮಿಕವಾಗಿಯೂ ಹೃದಯಂಗಮವಾಗಿಯೂ ತಿಳಿಸಿ ಹೇಳಿದರು.

ತಲ್ಲೂರ ಸುದ್ದಿ

ತಲ್ಲೂರ ತಾ. ೩೦:— ಬೆಳಗಾಂವಿ ಜಿಲ್ಲೆಯ ಡೆ. ಎ. ಇ. ಸಾಹೇಬ ಶ್ರೀ. ರಾಯಣ್ಣನವರ ಅವರ ಅಧ್ಯಕ್ಷತೆಯಲ್ಲಿ ಮುಂದೆ ಕೊಟ್ಟಂತೆ ಕಾರ್ಯಕ್ರಮಗಳು ಜರುಗಿದವು.

(೧) ತಲ್ಲೂರ ಕ. ಗಂ. ಶಾಲೆಯ ಮುಖಪತ್ರಿಕೆಯಾದ "ಜ್ಞಾನಜ್ಯೋತಿ" ಯು ಸಾಹೇಬರಿಂದ ಉದ್ಘಾಟಿಸಲ್ಪಟ್ಟಿತು.

(೨) ಶಾಲೆಯ ಮಕ್ಕಳಿಂದ ಮೊದಲ ದಿನದ ರಾತ್ರಿ "ಹೊಸ ಬಾಳು" ಹಾಗೂ "ಬೆಳವಡಿ ಮಲ್ಲಮ್ಮ" ಎಂಬೆರಡು ಏಕಾಂಕ ನಾಟಕಗಳು ಅಭಿನಯಿಸಲ್ಪಟ್ಟವು.

(೩) ಪಾನನಿರೋಧಾಧಿಕಾರಿಗಳಿಂದ ಪ್ರಚಾರ ಚಲಚ್ಚಿತ್ರ ಕಾರ್ಯಕ್ರಮ ಜರುಗಿತು.

(೪) ಶಾಲೆಯ ಮಕ್ಕಳಿಂದ ಶಾರೀರಿಕ ಚಟುವಟಿಕೆಗಳ ಕಾರ್ಯಕ್ರಮ ಹಾಗೂ ಮೂಲೋದ್ಯೋಗದ ಕಾರ್ಯಕ್ರಮಗಳು ಮನೋಹರವಾಗಿ ಪ್ರದರ್ಶಿಸಲ್ಪಟ್ಟವು.

ಈ ಎಲ್ಲ ಕಾರ್ಯಕ್ರಮಗಳು ಬಹು ಯಶಸ್ವಿಯಾಗಿ ಕೊನೆಗೊಳ್ಳಲು ಈ ಊರ ಶ್ರೀಮಂತ ದೇಸಾಯಿ ಯವರ ನೆರವುಜಿನ್ನಾಗಿ ದೊರೆಯಿತು. ಈ ಬಗ್ಗೆ ಅವರನ್ನು ಎಷ್ಟು ಅಭಿನಂದಿಸಿದರೂ ಕಡಿಮೆಯೇ

ಪಳಿಯಾಳ:— ೨೭-೫-೩೨ ರಂದು ಕ್ರಿಶ್ಚಿಯನ್ ಗಲ್ಲಿಯ ಪೌಢರ ಸಭೆಯು ರೆ. ಫಾ. ಎ. ಗ್ರೇಸಿಯನ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ. ವ್ಹಿ. ಆರ್. ಐಗಳ, ಎ. ಡಿ. ಇ. ಆಯ್. ಅವರು ಬಂದಿದ್ದರು.

ಧಾರವಾಡ:— ೧೪-೧೫ ಜೂನ್ ೧೯೩೨ ರಂದು ಡಾ। ಜಿ. ಎಸ್ ಕೃಷ್ಣಯ್ಯ, ಪ್ರಿನ್ಸಿಪಾಲ್, ಬಿ. ಟಿ. ಕಾಲೇಜ, ಬೆಳಗಾಂವಿ, ಅವರ ಅಧ್ಯಕ್ಷತೆಯಲ್ಲಿ ಮುಂಬಯಿ ರಾಜ್ಯದ ಸ್ಕೌಟ ಮತ್ತು ಗೈಡ್ಸರ ೨ ನೆಯ ಸಮ್ಮೇಳನವು ಜರುಗಿತು.

———

17/7/52

ಸಂಪಾದಕೀಯ

ಶಿಕ್ಷಣದ ಉದ್ದೇಶ:—

" ಸ್ವಾತಂತ್ರ್ಯದ ತರುವಾಯ ನಮಗೆ ಬಂದ ದೂರುಗಳೆಲ್ಲ ಶೀಲಕ್ಕೆ ಸಂಬಂಧಿಸಿದವಿರುವವು. ಶಿಕ್ಷಣ ಸಂಸ್ಥೆಗಳಲ್ಲಿ ಶೀಲಸಂವರ್ಧನೆಗೆ ಲಕ್ಷ್ಯಕೊಡುವದು ಅತ್ಯಂತ ಜಗತ್ಯವು. ಇಲ್ಲವಾದರೆ ರಾಷ್ಟ್ರದ ಏಳ್ಗೆಯಾಗುವದಿಲ್ಲ" ಎಂದು ಭಾರತದ ಅಧ್ಯಕ್ಷರಾದ ಡಾ। ರಾಜೇಂದ್ರ ಪ್ರಸಾದರು ದಿನಾಂಕ ೧೫-೬-೧೯೫೨ ನೆಯ ದಿನ ನೈನಿತಾಲದಲ್ಲಿ ಭಾಷಣ ಮಾಡುತ್ತ ಶಿಕ್ಷಣದ ಮುಖ್ಯ ಉದ್ದೇಶವನ್ನು ಕುರಿತು ಹೇಳಿದ್ದಾರೆ. ಶಿಕ್ಷಣ ಸಂಸ್ಥೆಗಳಲ್ಲಿ ವಿಷಯಗಳಿಗಿಂತ ಮಕ್ಕಳಲ್ಲಿ ಸ್ವಯಂ ಶಿಸ್ತು, ಕರ್ತವ್ಯದಕ್ಷತೆ, ಸತ್ಯ. ಪ್ರಾಮಾಣಿಕತನ, ಸೇವಾ ಬುದ್ಧಿ, ಸಹಕಾರ ಮೊದಲಾದ ಆದರ್ಶ ಗುಣಗಳನ್ನು ಕಲಿಸಲಿಕ್ಕೆ ಯತ್ನಿಸುವದು ಮಹತ್ವದ್ದು. ಆಟದ ಬಯಲಿನಲ್ಲಿ, ವರ್ಗದ ಕೋಣೆಯಲ್ಲಿ, ಚರ್ಚೆಯ ಕೂಟದಲ್ಲಿ, ಅಭ್ಯಾಸದ ಚಟುವಟಿಕೆಗಳಲ್ಲಿ ಮಕ್ಕಳು ಪರಸ್ಪರ ಸಹಕಾರದಿಂದ ವರ್ತಿಸಿ ಶೀಲವನ್ನು ಬೆಳಿಸಿಕೊಳ್ಳುವದು ಸಾಧ್ಯವಿದೆ. ಶಿಕ್ಷಕರೂ ಪಾಲಕರೂ ಇತ್ತ ಗಮನಿಸಬೇಕು. ರಾಷ್ಟ್ರದ ಭಾವೀ ನಾಗರಿಕರಾಗಲಿರುವ ಇಂದಿನ ವಿದ್ಯಾರ್ಥಿಗಳು ಒಳ್ಳೆಯ ಗುಣಗಳನ್ನು ಅಳವಡಿಸಿಕೊಂಡು ಶೀಲವನ್ನು ಉಳಿಸಿ ಬೆಳಿಸಿಕೊಂಡರೆ ರಾಷ್ಟ್ರದ ಪ್ರಗತಿಯಾಗುವದರಲ್ಲಿ ಸಂದೇಹವಿಲ್ಲ.

ಸ್ಕೌಟ್ಸ ಮತ್ತು ಗೆರ್ಲ ಗಾಯಿಡ್ಸ:—

ಮುಂಬಯಿ ರಾಜ್ಯದ ಸ್ಕೌಟ ಮತ್ತು ಗಾಯಿಡ್ಸ ಸಂಸ್ಥೆಯ ದ್ವಿತೀಯ ಅಧಿವೇಶನದ ಅಧ್ಯಕ್ಷ ಸ್ಥಾನದಿಂದ ಡಾ। ಜಿ. ಎಸ್. ಕೃಷ್ಣಯ್ಯ ಅವರು ಇಂತಹ ಸಂಸ್ಥೆಗಳ ಮಹತ್ವವನ್ನು ಕೆಳಗಿನಂತೆ ಒಳ್ಳೆಯ ಮಾರ್ಮಿಕವಾಗಿ ಹೇಳಿದ್ದಾರೆ—

"ಇಂದು ನಾವು ರಾಜ್ಯದ ಅನೇಕ ಮುಖ್ಯ ಸಮಸ್ಯೆಗಳನ್ನು ಬಿಡಿಸಬೇಕಾಗಿದೆ. ಇಂದಿನ ಶಿಕ್ಷಣವು ಇವತ್ತಿನ ಜೀವನ ಸಮಸ್ಯೆಗಳನ್ನು ಬಿಡಿಸಲು ಸಹಾಯಕಾರಿಯಾಗಿಲ್ಲ. ನಾವು ಕೇವಲ ಜೀವಿಸಲು ಅನ್ನವನ್ನು ದೊರಕಿಸುವದರಲ್ಲಿಯೇ ವೇಳೆಯನ್ನು ಕಳೆಯುತ್ತಿದ್ದು ಜೀವನದಲ್ಲಿ ಮಾಡಬೇಕಾದ ಕಾರ್ಯಗಳಿಗೆ ವಿಶೇಷ ಮಹತ್ವ ಕೊಡುತ್ತಿಲ್ಲ. ಕಾರಣ ಇಂದು ಶಿಕ್ಷಕರು ಸಮಾಜ ಸುಧಾರಣೆಯ ಕಡೆಗೆ ಹೆಚ್ಚು ಲಕ್ಷ್ಯವಿಟ್ಟು ವಿದ್ಯಾರ್ಥಿಗಳಿಗೆ ರಾಷ್ಟ್ರದ ಬೆಳವಣಿಗೆಗೆ ಪೋಷಕವಾಗುವಂಥ ಶಿಕ್ಷಣವನ್ನೊದಗಿಸಬೇಕು. ಆದರ್ಶ ಶಿಕ್ಷಕ ಇಂಥ ಕೆಲಸ ಮಾಡಬಲ್ಲ.

"ಹಿಂದುಸ್ತಾನವು ಸುಖ ಸಮಾಧಾನದಿಂದ ಬಾಳಲು ನಮಗೆ ಧೈರ್ಯಶಾಲಿ, ತತ್ವನಿಷ್ಠ ನಾಗರಿಕರು ಅವಶ್ಯ. ಅಂಥ ನಾಗರಿಕರನ್ನು ಸಿದ್ಧಗೊಳಿಸುವದೇ ಇಂಥ ಸಂಸ್ಥೆಗಳ ಕರ್ತವ್ಯ. " ಇತ್ತೀಚೆಗೆ ಪ್ರಾಥಮಿಕ ಶಾಲೆಗಳಲ್ಲಿ

ಅಷ್ಟೊಂದು ಸ್ಕೌಟ ಶಿಕ್ಷಣದತ್ತ ಗಮನವೀಯುವದು ಕಂಡುಬರುವದಿಲ್ಲ. ಸ್ಕೌಟ ಶಿಕ್ಷಣದಲ್ಲಿ ಮಹತ್ವದ ಶೈಕ್ಷಣಿಕ ಗುಣಗಳು ಇರುವದರಿಂದ ಮಕ್ಕಳಲ್ಲಿ ಆ ಗುಣಗಳನ್ನು ಒಡಮೂಡಿಸುವದು ಅವಶ್ಯವಿದೆ. ಆದುದರಿಂದ ಸಾಲೆಗಳಲ್ಲಿ ಸ್ಕೌಟ ದಳವನ್ನೂ ಹಾಗೂ ಗಾಯಿಡ್ಸ ದಳಗಳನ್ನೂ ಸ್ಥಾಪಿಸಿ ಅವುಗಳ ಉದಾತ್ತ ನಿಯಮಗಳನ್ನು ಪ್ರತ್ಯಕ್ಷ ಆಚರಣೆಯಲ್ಲಿ ಮಕ್ಕಳು ತಂದರೆ ಅವರು ದೊಡ್ಡವರಾದ ಬಳಿಕ ಸಹಕಾರ ಮನೋವೃತ್ತಿಯ ಧೈರ್ಯಶಾಲಿ, ನಿಷ್ಠಾವಂತ ನಾಗರಿಕರಾಗಿ ತಮಗೂ ಹಾಗೂ ತಮ್ಮ ರಾಷ್ಟ್ರ ಬಾಂಧವರಿಗೂ ಸುಖ-ಸಮಾಧಾನಗಳನ್ನುಂಟು ಮಾಡುವರು. ಸ್ಕೌಟ ಹಾಗೂ ಗಾಯಿಡ್ಸ ಸಂಸ್ಥೆಗಳ ತತ್ವಗಳು ಇಂತಹ ಉದಾತ್ತ ತಳಹದಿಯ ಮೇಲೆ ನಿಂತಿವೆ.

ಮೂಲ ಶಿಕ್ಷಣ:—

ಮುಂಬಯಿ ರಾಜ್ಯದ ಸಹಕಾರಿ ಶಾಖೆಯ ಮಂತ್ರಿಗಳಾದ ಮಾನ್ಯ ಪಾಟೀಲ ಮಲ್ಲನಗೌಡರು ದಿನಾಂಕ ೧೪-೬-೧೯೫೨ ನೆಯ ದಿನ ಅಹಮ್ಮದಾಬಾದಿನಲ್ಲಿ ಒಂದು ಸಹಕಾರಿ ಸಾಲೆಯನ್ನು ಪ್ರಾರಂಭಿಸುವ ಸಮಯದಲ್ಲಿ— '' ದೇಶದಲ್ಲಿ ಲಕ್ಷಾವಧಿ ಜನರು ನಿರಕ್ಷರಿಗಳಾಗಿರುವದರಿಂದ ಮುಂಬಯಿ ಸರಕಾರವು ತನ್ನ ಪುನರ್ರಚನಾ ಕಾರ್ಯಕ್ರಮದಲ್ಲಿ ಜೀವನಾವಶ್ಯಕಗಳಾದ ಅನ್ನ, ಬಟ್ಟೆ, ಆಶ್ರಯಗಳಿಗಿತ್ತ ಪ್ರಾಶಸ್ತ್ಯ ಶಿಕ್ಷಣಕ್ಕೂ ಇತ್ತಿದೆ..... ... ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಮುಂಬಯಿ ರಾಜ್ಯವು ಪ್ರಗತಿ ಪಡೆದಿದೆ. ಅದರೆ ಸದ್ಯದ ಶಿಕ್ಷಣ ಪದ್ಧತಿಯು ಜನತೆಗೆ ಉಪಯುಕ್ತವಾಗಬೇಕೆಂಬ ಉದ್ದೇಶದಿಂದ ಮೂಲ ಶಿಕ್ಷಣ ವಿಸ್ತೃತ ಯೋಜನೆಯೊಂದನ್ನೂ ಸರಕಾರವು ಸಿದ್ಧಗೊಳಿಸಿದೆ. ಇದರನ್ವಯ ಕೈಕೆಲಸದ ಮುಖಾಂತರ ಮಕ್ಕಳಿಗೆ ಶಿಕ್ಷಣವೀಯಲಾಗುವದು ,, ಎಂದು ಮಾತನಾಡಿದರು. ಮುಂಬಯಿ ಸರಕಾರವು ಮೂಲ ಶಿಕ್ಷಣದ ಆವಶ್ಯಕತೆಯನ್ನು ಅರಿತು ಅದರ ವಿಸ್ತೃತ ಯೋಜನೆಯನ್ನು ಸಿದ್ಧಪಡಿಸಿದ್ದು ಸಂತೋಷ. ಉದ್ಯೋಗದ ಮುಖಾಂತರ ಶಿಕ್ಷಣವೀಯುವದರಿಂದ ಮಗುವು ಸ್ವಾವಲಂಬಿಯಾಗಿ ಜೀವನ ಸಾಗಿಸಲು ಸಮರ್ಥನಾಗುವನು; ಹಳ್ಳಿಯ ತನ್ನ ಬಾಂಧವರಿಗೆ ಉಪಯುಕ್ತ ವ್ಯಕ್ತಿಯಾಗುವನು. ಶಿಕ್ಷಣದ ಸಾಮಾನ್ಯ ತತ್ವಗಳು ಈ ಪದ್ಧತಿಯಲ್ಲಿ ಅಡಕವಾಗಿವೆ; ಹಳ್ಳಿಗರಿಗೆ ಉಪಯುಕ್ತವಾಗುವದರಿಂದ ಎಲ್ಲ ಕಡೆಗೆ ಇದನ್ನು ತೀವ್ರಗತಿಯಾಗಿ ಬಳಕೆಯಲ್ಲಿ ತರಲೆಂದೂ ಇದರ ಮುಖಾಂತರ ರಾಷ್ಟ್ರದ ಪ್ರಗತಿಯಾಗಲೆಂದೂ ಹಾರೈಸುವೆವು.

ಕಂಬನಿ

ಅಮೇರಿಕೆಯ ಜಗತ್ಪ್ರಸಿದ್ಧ ತತ್ವಜ್ಞಾನಿ ಹಾಗೂ ಶಿಕ್ಷಣ ತಜ್ಞ ಆಗಿದ್ದ ಡಾ. ಜಾನ್ ಡ್ಯೂಯಿ ಅವರು ಮೊನ್ನೆ ತಮ್ಮ ೯೨ ನೆಯ ವಯಸ್ಸಿನಲ್ಲಿ ನಿಧನ ಹೊಂದಿದ ವಾರ್ತೆಯು ವಿಶ್ವವನ್ನೇ ದುಃಖ ಸಾಗರದಲ್ಲಿ ಮುಳುಗಿಸಿದೆ. ೧೯೨೦ ರಲ್ಲಿ ಒಂದು ಪ್ರಾಯೋಗಿಕ ಶಾಲೆಯನ್ನು ಸ್ಥಾಪಿಸಿ, ತಮ್ಮ ಶೈಕ್ಷಣಿಕ ವಿಚಾರಗಳನ್ನು ಆಚಾರ ರಂಗಕ್ಕಿಳಿಸಿದ ಕೃತಿ ಶಾಲಿಗಳು ಅವರು. ಜೀವಿಯ ಶಿಕ್ಷಣವು ತನ್ನ ಪ್ರತ್ಯಕ್ಷ ಜೀವಿಕೆಯ ಮುಖಾಂತರ ಸಾಗಬೇಕು ಎಂದು ಸಾರಿ, ಅದನ್ನು ಪ್ರಯೋಗಿಸಿದ ಪ್ರಥಮ ಶ್ರೇಯಸ್ಸು ಅವರಿಗೇ ಸಲ್ಲುತ್ತದೆ.

'ವಿಷಯ ಜ್ಞಾನದಿಂದ ಮಗುವಿನ ಜ್ಞಾನದ ಕಡೆಗೆ, ವರ್ಗದ ಕೋಣೆಯಿಂದ ನಿಸರ್ಗದೆಡೆಗೆ, ಪುಸ್ತಕೀಯ ವಿದ್ಯೆಯಿಂದ ಜೀವಿಕೆಯ ಕಲೆಯ ಕಡೆಗೆ, ಕೃತಿಯಿಂದ ಸಂಸ್ಕೃತಿಯ ಕಡೆಗೆ' — ಮೊದಲಾದ ಆಧುನಿಕ ಶೈಕ್ಷಣಿಕ ವಿಚಾರಗಳ ಪುರಸ್ಕರ್ತರಾಗಿದ್ದರು. ಪ್ರೊಜೆಕ್ಟ, ಡಾಲ್ಟನ್ ಮೊದಲಾದ ನವೀನ ಪದ್ಧತಿಗಳು ಇವರ ವಿಚಾರ ಸೆಲೆಗಳಿಂದಲೇ ಹೊರ ಹೊಮ್ಮಿದುವೆಂದರೆ ಅತ್ಯುಕ್ತಿಯಲ್ಲ. ಜಗತ್ತಿನ ಪ್ರಮುಖ ರಾಷ್ಟ್ರಗಳಲ್ಲೆಲ್ಲ ಸಂಚರಿಸಿ, ಶೈಕ್ಷಣಿಕ ಸೂಕ್ತ ಸಲಹೆಗಳನ್ನು ಅಲ್ಲಲ್ಲಿ ನೀಡಿರುವರು. ಇಂಥ ವಯೋವೃದ್ಧರೂ, ಜ್ಞಾನವೃದ್ಧರೂ, ಶಿಕ್ಷಣ — ತತ್ವಜ್ಞಾನ — ಜೀವನಗಳನ್ನು ಸುಂದರವಾಗಿ ಹೆಣೆದು ಜಗತ್ತಿಗೆ ಬೆಳಕನ್ನು ಬೀರಿದವರೂ ಆದ ಡಾ. ಜಾನ್ ಡ್ಯೂಯಿ ಅವರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನೀಯಲಿ !

ಸಂಸ್ಕಾರ ಕೇಂದ್ರ

[ದಿನಾಂಕ ೫-೫-೫೨ರಿಂದ ೧೯-೫-೫೨ರ ವರೆಗೆ ನಮ್ಮ ಟ್ರೇ. ಕಾ. ದಲ್ಲಿ ನಡೆದ ಸಮಾಜ ಶಿಕ್ಷಣ ಕಾರ್ಯಕರ್ತರ ತರಬೇತಿ ವರ್ಗಕ್ಕೆ ಪಾಠಗಳ ಸಲುವಾಗಿ ಜೋಡಿಸಿದ ನಿರಕ್ಷರಿ ಪ್ರಬುದ್ಧರ ವರ್ಗಕ್ಕೆ ಹೊಸದೊಂದು ಯೋಜನೆಯಂತೆ ಕಲಸಲಾಯಿತು. ಆ ಪ್ರಯೋಗದ ರೂಪರೇಷೆಯನ್ನು ಇಲ್ಲಿ ಕೊಡಲಾಗಿದೆ.

ಪ್ರ. ಸಂಪಾದಕರು]

ಸಮಾಜ ಶಿಕ್ಷಣ ಕಾರ್ಯಕರ್ತರಿಗೆ ಪ್ರೌಢರಿಗೆ ಕಲಿಸುವ ೊಸ ವಿಧಾನವನ್ನು ತಿಳಿಸಿಕೊಡಬೇಕೆಂಬ ಉದ್ದೇಶ. ಂದ ಸ್ಥಳಿಕ ಎಲ್ಲ ಕಜೀರಿಗಳ ಳ ನೆಯ ದರ್ಜೆಯ ನಿರ. ರಿ ನೌಕರರನ್ನು ಬರಮಾಡಿಕೊಂಡು ಅವರದೇ ಆದ ಂದು ಸಮಾಜ ಶಿಕ್ಷಣ ವರ್ಗವನ್ನು ರಚಿಸಲಾಯಿತು. ಈ ವರ್ಗದಲ್ಲಿ ಕೇವಲ ಅಕ್ಷರಗಳ ಪರಿಚಯ ಮಾಡಿ. ೊಡುವ ಉದ್ದೇಶವಿಟ್ಟುಕೊಳ್ಳದೆ ದಿನಾಲು ಮನರಂಜನೆ ಾಗೂ ಸಾಮಾನ್ಯಜ್ಞಾನ ಮಾಡಿಕೊಡುವದು—ಇವೇ ೊದಲಾದ ಕಾರ್ಯಕ್ರಮಗಳು ನಡೆಯುತ್ತಿದ್ದವು. ಆದುದ ಂದ ಈ ವರ್ಗಕ್ಕೆ ಸಂಸ್ಕಾರ ಕೇಂದ್ರವೆಂಬ ಹೆಸರನ್ನು ಇಡಲಾಯಿತು. ಈ ಕೇಂದ್ರದ ನಿತ್ಯದ ಕಾರ್ಯಕ್ರಮವು ೆಳಗಿನಂತಿದ್ದಿತು:—

(೧) ಪ್ರಾರ್ಥನೆ

(೨) ಸುದ್ದಿ ವಿತರಣ

(೩) ಪ್ರೌಢರಿಗೆ ಸಂಬಂಧಿಸಿದ ಸಾಮಾನ್ಯ ವಿಷಯದ ಮಾಹಿತಿ.

(೪) ಲಾವಣಿ ಅಥವಾ ಮನರಂಜನೆಯ ಮಧ್ಯಂತರ ೀತಿ.

(೫) ಸಾಕ್ಷರತೆಯ ಪಾಠ—ಗುಂಪು ಳನ್ನು ಮಾಡಿ-

(೬) ಕೊನೆಯ ಪ್ರಾರ್ಥನೆ.

(೧) **ಪ್ರಾರ್ಥನೆ:—** ಪ್ರತಿ ದಿನ ಪ್ರೌಢರು ಬಂದ ೂಡಲೆ. ಪಾಠವನ್ನು ಹೇಳಿಕೊಡುವ ಕಾರ್ಯಕರ್ತನು ಾಗೂ ಪ್ರೌಢರು ಸಾಮೂಹಿಕವಾಗಿ ದೇವರ ಸ್ತುತಿಪರ ವಾದ ಗೀತೆಯನ್ನಾಗಲಿ, ಭಜನೆಯ ಪದವನ್ನಾಗಲಿ, ಹೇಳುತ್ತಿದ್ದರು. ಪ್ರಾರ್ಥನೆಯಿಂದ ಯಾವದೊಂದು ಕಾರ್ಯ ಆರಂಭವಾಗುವ ದೃಷ್ಟಿ ಬರುವದು.

(೨) **ಸುದ್ದಿ ವಿತರಣ:—** ಪ್ರಾರ್ಥನೆಯ ನಂತರ ಕಾರ್ಯಕರ್ತನು ಅಂದಿನ ಮುಖ್ಯ ಅಂದರೆ ಪ್ರೌಢರಿಗೆ ತೀವ್ರ ಹೊಳೆಯುವಂತಹ, ಅವರಿಗೆ ಸಮೀಪ ವರ್ತಿಯಾದ ಮತ್ತು ಅವರ ಮನಕ್ಕೆ ಆಕರ್ಷಕವಾಗುವಂತಹ ಸುದ್ದಿಗಳನ್ನಷ್ಟೇ ಪತ್ರಿಕೆಯಿಂದ ಓದಿ ಹೇಳುತ್ತಿದ್ದನು. ಯಾವ ಸುದ್ದಿಗಳು ಓದಿ ಹೇಳಲಿಕ್ಕೆ ಅರ್ಹವೆಂಬುವದನ್ನು ಕಾರ್ಯಕರ್ತನು ಮೊದಲೇ ನಿರ್ಧರಿಸಿ ವರ್ತಮಾನ ಪತ್ರದಲ್ಲಿ ಅವುಗಳಿಗೆ ಗುರುತು ಮಾಡಿಕೊಂಡು ಬರುತ್ತಿದ್ದನು.

(೩) **ಪ್ರೌಢರಿಗೆ ಸಂಬಂಧಿಸಿದ ಸಾಮಾನ್ಯ ವಿಷಯದ ಮಾಹಿತಿ:—** (ಮಾಡಿಕೊಡುವ ಯೋಜನೆಯನ್ನಿಟ್ಟುಕೊಂಡು) ಕೇವಲ ಸಾಕ್ಷರರನ್ನಾಗಿ ಮಾಡುವದಾಗಲಿ, ಇಲ್ಲವೆ ಮನರಂಜನೆ ಮಾಡುವದಾಗಲಿ ಸಮಾಜ ಶಿಕ್ಷಣದ ಉದ್ದೇಶವಲ್ಲ. ಮನರಂಜನೆ, ಸಾಕ್ಷರತೆ ಇವುಗಳ ಜೊತೆಗೆ ನಿರಕ್ಷರಿ ಪ್ರೌಢರಿಗೆ ತಮ್ಮ ಆರೋಗ್ಯ ಹಳ್ಳಿಯ ನೈರ್ಮಲ್ಯ, ಹಳ್ಳಿಯಲ್ಲಿ ಹಬ್ಬಬಹುದಾದ ಸಾಮಾನ್ಯ ರೋಗಗಳು, ಹಳ್ಳಿಯ ಪಂಚಾಯತಿ, ಉದ್ಯೋಗಗಳು—ಇವೇ ಮೊದಲಾದವುಗಳ ಜ್ಞಾನವನ್ನು ಮಾಡಿಕೊಡುವದು ಅವಶ್ಯ. ಆಂದರೆ ಮಾತ್ರ ಸಮಾಜ ಶಿಕ್ಷಣದ ಉದ್ದೇಶವು ಸಾಧಿಸುವಂತಾಗುವದು.

ಮೇಲೆ ಹೇಳಿದ ಮೂರು ಸಂಗತಿಗಳು ಮುಪ್ಪುರಿಗೊಂಡು ಪ್ರೌಢರಿಗೆ ಹೃದಯವನ್ನು ವಿಕಸಿಸಿದಾಗ ಸಮಾಜ ಶಿಕ್ಷಣದ ಧ್ಯೇಯವು ಈಡೇರಿದಂತೆ. ಈ ಉದ್ದೇಶದಿಂದ ಮೇಲೆ ಹೇಳಿದ ಒಂದೊಂದು ವಿಷಯದ ಬಗೆಗೆ ದಿನಾಲು ಜ್ಞಾನ ಮಾಡಿ ಕೊಡಲಾಗುತ್ತಿತ್ತು.

(೪) **ಮಧ್ಯಂತರ ಮನರಂಜನೆ** :— ಸಾಮಾನ್ಯ ವಿಷಯದ ಬಗೆಗೆ ಜ್ಞಾನ ಮಾಡಿಕೊಟ್ಟನಂತರ ಬೇಸರವನ್ನು ಕಳೆಯುವದಕ್ಕಾಗಿ ಪ್ರೌಢರಿಂದ ಲಾವಣಿಯನ್ನಾಗಲಿ, ಗೀ ಗೀ ಪದವನ್ನಾಗಲಿ, ಅನ್ನಿಸಬೇಕು. ವರ್ಗವು ಕೇವಲ ವರ್ಗವಲ್ಲ; ಆದರೆ ಮನರಂಜನೆಯ ಮನೆಯೂ ಆಹುದು ಎಂಬ ಭಾವನೆಯು ಪ್ರೌಢರಲ್ಲಿ ಮೂಡಬೇಕು. ಆದು ಸಾಧಿಸಬೇಕಾದರೆ ಅವರಿಗೆ ತಮಗೆ ಗೊತ್ತಿದ್ದ ಶ್ಲೀಲ ಮನರಂಜನೆಯ ಕಾರ್ಯಕ್ರಮಗಳನ್ನು ಮಾಡಲಿಕ್ಕೆ ಕೊಡಲಾಯಿತು.

(೫) **ಸಾಕ್ಷರತೆಯ ಪಾಠ**:— ಮೇಲಿನ ನಾಲ್ಕು ಮೆಟ್ಟಿಲುಗಳು ಓರ್ವನೇ ಕಾರ್ಯಕರ್ತನ ನೇತೃತ್ವದಲ್ಲಿ ನಡೆಯುವ ಏರ್ಪಾಡು ಮಾಡಿತ್ತು. ಸಾಕ್ಷರತೆಯ ಮೆಟ್ಟಿಲಿನಲ್ಲಿ ಪ್ರೌಢರ ವರ್ಗವು ಅವರವರ ಮಟ್ಟಕ್ಕೆ ತಕ್ಕಂತೆ ವಿಭಾಗಿಸಲ್ಪಡುತ್ತಿತ್ತು. ವರ್ಗದಲ್ಲಿಯ ಎಲ್ಲ ಪ್ರಬುದ್ಧರು ಸಾಕ್ಷರತೆಯ ಒಂದೇ ತರಗತಿಅಥವಾಮಟ್ಟದಲ್ಲಿರುವದು ಅಸಂಭವ, ಅಸಾಧ್ಯ. ಕೆಲವರು ಪೂರ್ಣ ನಿರಕ್ಷರಿಗಳಿದ್ದರೆ, ಕೆಲವರು ಸಹಿ ಮಾಡಲು ಬಲ್ಲವರಿರಬಹುದು; ಬೇರೆ ಕೆಲವರು ಸುಲಭ ಶಬ್ದಗಳನ್ನು ಓದುತ್ತಿರಬಹುದು; ಮತ್ತೆ ಕೆಲವರು ಮೂಲಾಕ್ಷರಗಳನ್ನು ಗುರುತಿಸುತ್ತಿರಬಹುದು. ಹೀಗಿರುವಾಗ ಎಲ್ಲರಿಗೂ ಒಂದೇ ಪಾಠ ಹೇಳಿದರೆ ಅದು ಸಮಂಜಸವಾಗದು. ಇದನ್ನು ಮನದಂದು ಈ ಸಂಸ್ಕಾರ ಕೇಂದ್ರದಲ್ಲಿ ಆವರವರು ಮುಟ್ಟಿದ ಸಾಕ್ಷರತೆಯ ಮಟ್ಟವನ್ನು ಪರೀಕ್ಷಿಸಿ ನಾಲ್ಕು ವಿಭಾಗಗಳನ್ನು ಮಾಡಲಾಗಿತ್ತು. ಈ ನಾಲ್ಕು ಭಾಗಗಳಿಗೆ ನಾಲ್ವರು ಕಾರ್ಯಕರ್ತರು ಪೂರ್ವಯೋಜನೆಯಂತೆ ಪಾಠಗಳನ್ನು ಕಲಿಸುತ್ತಿದ್ದರು. ಒಂದು ಗುಂಪಿನವರಿಗೆ ಅಕ್ಷರಗಳ ಜ್ಞಾನ ಮಾಡಿಕೊಡುವದು ನಡೆದಿದ್ದರೆ, ಇನ್ನೊಂದು ಗುಂಪಿನವರಿಗೆ ಪತ್ರ ಬರೆಹದ ಕಲ್ಪನೆಯನ್ನು, ಮತ್ತೊಂದು ಮಂಡಳದವರಿಗೆ ಗಣಿತದ ಜ್ಞಾನ ನಾಲ್ಕನೆಯ ಗುಂಪಿನವರಿಗೆ ಕ್ಯಾಲೆಂಡರದಲ್ಲಿ ತಾರೀಖುಗಳನ್ನು ಗುರುತಿಸುವದನ್ನೂ ಕಲಿಸಲಾಗುತ್ತಿತ್ತು. ಹೀಗೆ ಮಾಡುವದರಿಂದ ಪ್ರೌಢರಲ್ಲಿ ಅಭಿರುಚಿಯೂ, ವಿಚಾರ ಶಕ್ತಿಯೂ ಬೆಳೆಯುತ್ತಿದ್ದಿತಲ್ಲದೆ ವೈಯಕ್ತಿಕ ಲಕ್ಷ್ಯ ಕೊಡಲಿಕ್ಕೂ ಸಾಧ್ಯವಾಗುತ್ತಿತ್ತು. ಈ ಪದ್ಧತಿಯಿಂದ ಸಮಾಜ ಶಿಕ್ಷಣದ ಕಾರ್ಯವು ತೀವ್ರ ಗತಿಯಿಂದಸಾಗುವುದಲ್ಲದೆ ಪ್ರೌಢರಿಗೆಲ್ಲಕಲಿಯಬೇಕೆಂಬ ಹುಮ್ಮಸ್ಸು ಹುಟ್ಟುವದೆಂದು ಪ್ರತಿದಿನ ಬರುತ್ತಿದ್ದ ಪ್ರೌಢ ವಿದ್ಯಾರ್ಥಿಗಳ ಸಂಖ್ಯೆಯಿಂದ ತಿಳಿಯಿತು. ಪ್ರೌಢರ ಸಾಕ್ಷರತೆಯ ಮಟ್ಟವನ್ನು ಗಮನಿಸಿ ನಾಲ್ಕು ಇಲ್ಲವೆ ಐದು ಪ್ರೌಢರಿರುವ ಗುಂಪುಗಳನ್ನು ಮಾಡಬೇಕು. ಕಾರ್ಯಕರ್ತನು ಮೇಲಿನ ವರ್ಗದ ವಿದ್ಯಾರ್ಥಿಗಳ ಸಹಾಯ, ಸಹಕಾರವನ್ನೂ ಪಡೆಯಬಹುದು.

(೬) **ಕೊನೆಯ ಪ್ರಾರ್ಥನೆ**:—

ಸಾಕ್ಷರತೆಯ ಪಾಠಕ್ಕಾಗಿ ಇಟ್ಟುಕೊಂಡ ಘಟಕವು ಮುಗಿದ ಕೂಡಲೆ ಎಲ್ಲ ಪ್ರೌಢರು ಒತ್ತಟ್ಟಿಗೆ ಕೂಡುತ್ತಿದ್ದರು ಮತ್ತು ಎಲ್ಲರೂ ಒಂದು ಭಜನೆಯ ಪದವನ್ನಾಗಲಿ, ಪ್ರಾರ್ಥನೆಯ ಗೀತೆಯನ್ನಾಗಲಿ ಅನ್ನುತ್ತಿದ್ದರು. ಇಷ್ಟಾದ ಬಳಿಕ ಕೇಂದ್ರದ ಕಾರ್ಯಕ್ರಮವು ಸಮಾಪ್ತಿಯನ್ನು ಹೊಂದುತ್ತಿತ್ತು.

ಈ ಎಲ್ಲ ಕಾರ್ಯಕ್ರಮಗಳಿಗೆ ಒಟ್ಟು ೬೦ ರಿಂದ ೯೦ ನಿಮಿಟು ವೇಳೆ ಹಿಡಿಯುತ್ತಿತ್ತು. ಪ್ರೌಢರು ವರ್ಗಕ್ಕೆ ತಪ್ಪದೆ ಬರುವಂತೆ ಪ್ರೇರೇಪಿಸುವದು, ಅವರಿಗೆ ಸಂಬಂಧಿಸಿದ ತೀರ ಆವಶ್ಯಕ ಸಂಗತಿಗಳ ಸಾಮಾನ್ಯ ಮಾಹಿತಿ ಮಾಡಿಕೊಡುವದು, ಅವರವರ ಮಟ್ಟವನ್ನು ಅನುಲಕ್ಷಿಸಿ ಸಾಕ್ಷರತೆಯ ಹಾಗೂ ಇತರ ವಿಷಯಗಳನ್ನು ತಿಳಿಸುವದು, ಮನರಂಜನೆಯನ್ನುಂಟು ಮಾಡುವದು, ವೈಯಕ್ತಿಕ ಲಕ್ಷ್ಯ ಪೂರೈಸುವದು ಇವೆಲ್ಲವು ಈ ಪದ್ಧತಿಯಿಂದ ಸುಲಭ ಸಾಧ್ಯವೆಂಬ ಮಾತನು ಬೇರೆ ಹೇಳಬೇಕಿಲ.

ಶಿಕ್ಷಣದಲ್ಲಿ ಕೌಟುಂಬಿಕ ಜೀವನದ ಸ್ಥಾನ

(ತಾತ್ವಿಕ ವಿವೇಚನೆ)

ಲೇಖಕರು: ಶ್ರೀ. ನೀ. ರೇ. ಹಿರೇಮಠ, ಪ್ರಾಧ್ಯಾಪಕ, ವದನೀಧರರ ಜೀವನ ಶಿಕ್ಷಣ ಕೇಂದ್ರ, ಧಾರವಾಡ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಬ್ರಿಟಿಷರು ಸಿದ್ಧಪಡಿಸಿದ ಯೋಜನೆಗಳನ್ನು ಸ್ವಲ್ಪೂ ಬಿಡದೆ ಕಾರ್ಯ ರೂಪದಲ್ಲಿ ತರಲು ಕಲಿತ ಸುಶಿಕ್ಷಿತ ವರ್ಗಕ್ಕೆ ಸ್ವತಃ ಯೋಜನೆಗಳನ್ನು ತಯಾರಿಸಿ ಕಾರ್ಯಕಾರಿ ಮಾಡುವ ಹಾಗೂ ಪರಿಶೀಲಿಸಿ ಸುಧಾರಿಸುವ ತಂತ್ರ ಮರೆತು ಹೋಗಿದೆ. ಬ್ರಿಟಿಷರ ನೀಡಿದ ನೀತಿಯಂತೆ ಹುಕುಮುಗಳನ್ನು ಜಾರಿಯಲ್ಲಿ ತರಲು ಕಲಿತ ಆಡಳಿತ ಯಂತ್ರಕ್ಕೆ ಆದು ಭಾರತದ ಜನತೆ. ಾಗಿ ಇದೆ. "ಜನತೆಯ ಸೇವಕ" ಎಂಬ ಭಾವನೆಯು ಬರಬೇಕಾಗಿದೆ.

ಪ್ರಾಚೀನ ಕಾಲದ (ಬುದ್ಧನ ಕಾಲದ) ಇತಿಹಾಸ ನನ್ನು ಬಿಟ್ಟರೆ ಭಾರತವು ಈಗಿನಂತೆ ಹಿಂದೆಂದೂ ಪ್ರಜಾರಾಜ್ಯವಾಗಿರಲಿಲ್ಲ. ಒಬ್ಬಿಲ್ಲೊಬ್ಬ ಸರ್ವಾಧಿಕಾರಿಯ, ಸಾರ್ವಭೌಮನ ಇಲ್ಲವೇ ಅರಸನ ಕೈಕೆಳಗೆ ಅವನ ಮನಸ್ಸಿನಂತೆ ಪ್ರಜೆಗಳ ಜೀವನ ಸಾಗುತ್ತಿತ್ತು. ನೀತಿವಂತನಾದ ಅರಸುದಯಪಾಲಿಸಿದ ಅಲ್ಪಸ್ವಾತಂ. ತ್ರ್ಯವನ್ನೇ ದೊಡ್ಡದನ್ನಾಗಿ ಮಾಡಿ ಅವನನ್ನೇ ಕೊಂಡಾಡಿದರು. ಈ ಪ್ರಜಾಸ್ವಾತಂತ್ರ್ಯವು ಅರಸನಿತ್ತ ದಾನವಾಗಿತ್ತಲ್ಲದೆ ಪ್ರಜೆಗಳ ಹಕ್ಕಾಗಿರಲಿಲ್ಲ. ಅದರೆ ಈಗಿನ ಮಾತು ಬೇರೆ. ಭಾರತದ ಇತಿಹಾಸದಲ್ಲಿಯೇ ಮೊದಲು ಬಾರಿ ಇಡೀ ಭರತಖಂಡವು ಪ್ರಜಾರಾಜ್ಯವಾಗಿ ರೂಪುಗೊಂಡಿದೆ. ಪ್ರತಿಯೊಬ್ಬ ಪ್ರಜೆಯು ರಾಜನಾಗಿದ್ದಾನೆ. ಪ್ರತಿಯೊಬ್ಬ ಪ್ರಜೆಗೂ ತನ್ನ ರಾಜ್ಯದ ಆಡಳಿತೆ ಎಂತಿರಬೇಕು ? ರಾಷ್ಟ್ರ ನಿರ್ಮಾಣದ ಕಾರ್ಯಗಳು ಯಾವ ಯೋಜನೆಯಂತೆ ನಡೆಯಬೇಕು ಮುಂತಾದುದನ್ನು ತನ್ನ ಮತದಿಂದ ನಿರ್ಧರಿಸುವ ಅಧಿಕಾರವಿದೆ. ಗಣರಾಜ್ಯದ (ಪ್ರಜಾರಾಜ್ಯದ) ಅಧ್ಯಕ್ಷನಲ್ಲಿ ಸಾರ್ವಭೌಮಾಧಿಕಾರಗಳಿವೆ. ಅಂತಹ ಶಕ್ತಿಗಳಿದ್ದಲ್ಲಿ ಮೊಚ್ಚಿಹೊಲೆಯುವವನೂ ಸಾರ್ವಭೌಮನಾಗಬಹುದು. ರಾಷ್ಟ್ರದ ಜೀವ-ಸಾವುಗಳಿಗೆ ಸಂಬಧಿಸಿದ ದೈನಂದಿನ ವಿಷಯಗಳು ಆಯೆ್ತ ಹೊಂದಿದ ಮಂತ್ರಿಗಳು ಕೈಕೊಳ್ಳುವ ನಿರ್ಣಯಗಳನ್ನೇ ಅನಲಂಬಿಸಿವೆ. ಇತರರಾದರೂ ತಾವು ಚುನಾಯಿಸಿ ಕಳಿಸಿದ ಯೋಗ್ಯ ಮುಂದಾಳುಗಳನ್ನು ತಿಳಿದುಕೊಂಡು ಜಾಣತನದಿಂದ ಹಿಂಬಾಲಿಸಬೇಕು. ರಾಷ್ಟ್ರದ ಹಿತದ ದೃಷ್ಟಿಯಿಂದ ಕೈಕೊಂಡ ನಿರ್ಣಯಗಳು ಯಾವನೊಬ್ಬ ವ್ಯಕ್ತಿಯ ಇಲ್ಲವೆ ಗುಂಪಿನ ಹಿತಸಂಬಧಗಳಿಗೆ ವಿರೋಧವಾಗಿದ್ದರೂ ಸಂಕುಚಿತ ದೃಷ್ಟಿಯನ್ನು ಬದಿಗಿರಿಸಿ ವಿಶಾಲ ಭಾವನೆ ತಾಳಬೇಕು. ನಿರ್ದಾಕ್ಷಿಣ್ಯರ ನಿಸ್ವಾರ್ಥ ಆಡಳಿತಕ್ಕೆ ಅನುಗುಣವಾದ ಅನುಯಾಯಿಗಳುಬೇಕು.

ಬಹು ದಿನಗಳಿಂದ ಪ್ರಜಾ ಪ್ರಭುತ್ವದ ಸವಿಯನ್ನುಂಡ ಪಾಶ್ಚಿಮಾತ್ಯ ದೇಶಗಳಲ್ಲಿ ಕಂಡು ಬರುವ ಸಾಮಾಜಿಕ ನೀತಿಯ ಮಟ್ಟವು ಭಾರತಕ್ಕಿಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ. ಭಾರತದಲ್ಲಿದ್ದಷ್ಟು ಕಳ್ಳ ಪೇಟೆ ಮತ್ತು ರಾಷ್ಟ್ರೀಯಯೋಜನೆಗಳಲ್ಲಿಜನಸಾಮಾನ್ಯರು ತೋರಿಸುವ ಅನಾದರಗಳು ಪಾಶ್ಚಿಮಾತ್ಯ ದೇಶಗಳಲ್ಲಿಲ್ಲವೆಂದು ಹೇಳಲಾಗುತ್ತಿದೆ. ಅನಿಯಂತ್ರಿತ ವ್ಯಕ್ತಿತ್ವವು ಎಲ್ಲೆಲ್ಲೂ ತಲೆಯೆತ್ತುತ್ತದೆ. ಧರ್ಮ, ಆಧ್ಯಾತ್ಮ ಸಹಿಷ್ಣುತೆಗಳಲ್ಲಿ ಹೆಸರು ಪಡೆದ ಭರತ ಭೂಮಿಯು ತನ್ನ ಜನಜೀವನದಲ್ಲಿ ಅದನ್ನು ಕಳೆದು ಕೊಂಡಿದೆ. ಜಗತ್ತಿನಲ್ಲಿಯೇ ಅತಿ ದೊಡ್ಡ ಜನರನ್ನೊಳಗೊಂಡು ಪ್ರಜಾರಾಜ್ಯವಾದರೂ ಭಾರತವು ಅದರ ತಂತ್ರ ಹಾಗೂ ಅನುಭವಗಳ ದೃಷ್ಟಿಯಿಂದ ಅಂಬೆಗಾಲಿಕ್ಕುವ ಶಿಶು

ವೆಂದರೆ ಅತಿಶಯೋಕ್ತಿಯಾಗಲಾರದು. ಪರರಾಷ್ಟ್ರ ಸಂಪರ್ಕದಲ್ಲಿಯೂ ಅದು ತನ್ನ ಧೋರಣೆಯನ್ನು ಬೆಳಗಿ ಕೊಳ್ಳಬೇಕು. ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಸಧ್ಯ ವಹಿಸುತ್ತಿರುವ ನ್ಯಾಯ-ಪಕ್ಷಪಾತ ಶಾಂತಿ ಪ್ರತಿಪಾದಕ ಧೋರಣೆಗಳು ಮುಂದುವರಿಯಲು ಶೀಲಯುತರಾದ ನಾಯಕರು ಬೇಕು. ಇದೆಲ್ಲವೂ ಜನಸಾಮಾನ್ಯರ ವಿಚಾರಶಕ್ತಿಯನ್ನು ಅವಲಂಬಿಸಿದೆ.

" The nature of the social order is determined by the ways men think, feel, plan & act. If they do these things in proper ways in connection with several phases of life they can maniatain a world fit for man "

ಹೀಗೆ ಜನಾಭಿವ್ಯಾಯಗಳೂ ಯೋಜನೆಗಳೂ ವಿಶ್ವವಾಣಿಯಾಗಿವಿಶ್ವಶಾಂತಿಯು ಅಡಿಗಲ್ಲಾಗುವವು.ಇಂತಹ ಸುಸಂಪನ್ನಮತ್ತು ಮಂಗಲಕರವಾದ ವಿಚಾರ ಧಾರೆಗಳನ್ನೂ ಮತ್ತು ಅಚಾರ ಪ್ರವಾಹಗಳನ್ನೂ ಕುದುರಿಸುವ ಕಾರ್ಯ ಶಾಲೆಗಳಲ್ಲಿ ಎಡಬಿಡದೇ ನಡೆಯಬೇಕು.

ವರ್ಗ ರಹಿತವಾದ, ಸುಲಿಗೆಯಿಲ್ಲದ, ಸಹಕರಿಸಿ ದುಡಿದುಣ್ಣುವ ಕೆಲಸಗಾರರ ಸಮಾಜ ರಚನೆಯಲ್ಲಿ ವಿಶ್ವಶಾಂತಿಯಿದೆಂದು ಎಲ್ಲ ಆಧುನಿಕ ತತ್ವ-ಜ್ಞಾನಿಗಳ ಮತವಾಗಿದೆ. ವೈಯಕ್ತಿಕ ದುಃಖದ ಮತ್ತು ಸಾಮಾಜಿಕ ತಿಕ್ಕಾಟಗಳ ಒಳನೋಟವನ್ನು ಬಲ್ಲ ಗಾಂಧೀಜಿಯಾದರೂ ಶೋಷಣರಹಿತ ಸಮಾಜ ರಚನೆಯು ವರ್ಧಾ ಶಿಕ್ಷಣದ ಪೊಸಲನೆಯ ಉದ್ದೇಶವೆಂದಿದ್ದಾರೆ. ವ್ಯಕ್ತಿಯು ದೇವಾಂಶ ಸಂಭೂತನೆಂದೂ, ಪರಮಾತ್ಮನಿಂದ ನಿರ್ದೇಶಿಸಲ್ಪಟ್ಟ ಗುರಿ ಅವನೆಗಿದೆಯೆಂದೂ, ಗುರಿಯನ್ನು ಸಾಮಾಜಿಕ ಸೇವೆಯ ಮುಖಾಂತರ ಮುಟ್ಟಬೇಕೆಂದೂ ಪ್ರತಿಪಾದಿಸಿದ್ದಾರೆ. ಕೇವಲ ಪುಸ್ತಕ ಪಾಂಡಿತ್ಯದಿಂದ ಇವೆಲ್ಲ ಸಾಧಿಸದು. ಸಾಮಾಜಿಕ ಜೀವನದ ದೃಷ್ಟಿ ಒಲವುಗಳು ಆಗಂತುಕ ಸಂಗತಿಗಳು. ಅವುಗಳ ಅಂಕುರ ಕರುಣೆಯಲ್ಲಿದ್ದರೂ ಅದನ್ನು ವಿಶಿಷ್ಟವಾದ ಸನ್ನಿವೇಶಗಳ ಮುಖಾಂತರ ಬೆಳಿಸಿ ಪೋಷಿಸಬೇಕಾಗುತ್ತದೆ. ಈ ಕಾರ್ಯವು ಶಿಕ್ಷಣಾಲಯಗಳಲ್ಲಿಯ ಪ್ರತ್ಯಕ್ಷ ಜೀವನದ ಮುಖಾಂತರವೇ ಸಾಗಬಲ್ಲದು. ಅದೇ ಕೌಟುಂಬಿಕ ಜೀವನದ ಗುರಿ.

ಶಿಕ್ಷಣದಲ್ಲಿ ಈ ಬಗೆಯ ಕೌಟುಂಬಿಕ ಜೀವನವನ್ನು ಆರಂಭಿಸುವ ಅವಶ್ಯಕತೆ ಭಾರತಕ್ಕೆ ಇನ್ನೂ ಹೆಚ್ಚಾಗಿದೆ ಭಾರತದಲ್ಲಿ ಬಹುದಿನಗಳಿಂದ ಪ್ರಭಾವ ಬೀರಿದ ತತ್ವ-ಜ್ಞಾನವು ವ್ಯಕ್ತಿ ವಿಕಾಸಕ್ಕೆ ಹೆಚ್ಚಿನ ಸ್ಥಾನ ಕೊಟ್ಟಿದೆ ಧಾರ್ಮಿಕ ಕಾರ್ಯಗಳಲ್ಲೆಲ್ಲ ಸಾಮಾಜಿಕ ಉದ್ದೇಶಗಳು ಕಂಡುಬಂದರೂ ಅಂತಿಮ ಧ್ಯೇಯವು ಮಾತ್ರ ವ್ಯಕ್ತಿಯ ಮುಕ್ತಿಯಾಗಿದೆ. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥಾಶ್ರಮಗಳು ಸನ್ಯಾಸಾಶ್ರಮದಲ್ಲಿ ಪರ್ಯವಸಾನ ಹೊಂದಿ ಸಮಾಜದಿಂದ ಸಿಡಿದು ಹೋಗಲು ಪ್ರೋತ್ಸಾಹನವನ್ನಿತ್ತಿವೆ. ಹಲವು ಸಲ ಅವುಗಳ ಸರಿಯಾದ ಇಂಗಿತವನ್ನು ತಿಳಿಯದೇ ಜನರು "ಜಗನ್ಮಿಥ್ಯವೆಂಬ" ನಿರಾಶಾವಾದಿಗಳಾಗಿ ಸಾಮಾಜಿಕ ಭದ್ರತೆಯ ಕಡೆಗೆ ಮುನಸ್ಸು ಮಾಡಲಿಲ್ಲ. ತತ್ವಜ್ಞಾನಿಗಳಿಗೆ ತ್ಯಾಗ ಜೀವನವೇ ಅಂತಿಮ ಧ್ಯೇಯವಾಗಿ ಜನಸಾನಾನ್ಯರನ್ನು ಒಂದು ಗೂಡಿಸುವ "ಮರ್ತ್ಯಲೋಕವೆಂಬ ಕರ್ತಾರನ ಕಮ್ಮಟ" ದ ಮಹತ್ವದ ಅರಿವನ್ನು ಅವರು ಜನಸಾಮಾನ್ಯರಿಗೆ ಮಾಡಿಕೊಡಲಿಲ್ಲ.

ಈ ಪ್ರವಾಹದೆದರು ಕಾಲಕಾಲಕ್ಕೆ ಹೋರಾಟಗಳು ನಡೆಯುತ್ತ ಬಂದಿವೆ. ಬುದ್ಧನ ಕಾಲದಲ್ಲಿ ಬಿಕ್ಷು-ಸಂಘಗಳಿಗೆ ಪ್ರಾಧಾನ್ಯತೆ ದೊರೆತುದೂ ಕನ್ನಡ ನಾಡಿನಲ್ಲಿ ಶಿವಶರಣರು ಮಾಡಿದ ಸಾಮಾಜಿಕ ಕ್ರಾಂತಿಯೂ ಇಂತಹ ಪ್ರಯತ್ನಗಳಲ್ಲಿ ಮುಖ್ಯವಾದವು. ಆದರೆ ಅವುಗಳ ಪರಿಣಾಮಗಳು ಬಹು ದಿನಗಳ ವರೆಗೆ ಬಾಳಿಲ್ಲ. ಬ್ರಿಟಿಶರ ಭೇದ ನೀತಿಯ ಪರಿಣಾಮವಾಗಿ ನೌಕರಿಯನ್ನೇ ಗುರಿಯಾಗಿಟ್ಟುಕೊಂಡು ಕಲಿತ ಸುಶಿಕ್ಷಿತ (ಸಾಕ್ಷರಿಗಳೆಂದರೆ ಯೋಗ್ಯ) ವರ್ಗಕ್ಕೂ ವ್ಯಾಪಾರಿವರ್ಗಕ್ಕೂ ಅವರನ್ನು ಅನುಕರಿಸಲು ತವಕ ಪಟ್ಟ ಹಳ್ಳಿಗರಿಗೂ ''ಸಮಾಜಕ್ಕಾಗಿ ನಾನಿದ್ದೇನೆ" ಎಂಬ ಭಾವನೆ ದಿನ-ದಿನಕ್ಕೂ ಮಾಯವಾಗಹತ್ತಿದೆ. ಇದೇ ಭಾವನೆ ಮುಂದುವರಿದಲ್ಲಿ ಗಳಿಸಿದ ಸ್ವಾತಂತ್ರ್ಯವನ್ನು ಕಳೆದು ಕೊಳ್ಳಲು ಬಹಳ ಸಮಯ ಬೇಕಾಗಿಲ್ಲ.

(ಮುಂದುವರಿಯುವದು)

ಶಾರೀರಿಕ ಶಿಕ್ಷಣ

ಅರ್ಥ ಹಾಗೂ ವ್ಯಾಪ್ತಿ

(ಲೇಖನಾಂಕ ೨)

ಲೇಖಕರು:— **ಶ್ರೀ. ಯಶವಂತ ವೆಂಕಟೇಶ ಜಾವಡೇಕರ,** ಎಮ್. ಎ., ಬಿ. ಟಿ.
ಶಾರೀರಿಕ ಶಿಕ್ಷಣ ಇನಸ್ಪೆಕ್ಟರ, ಮುಂಬಯಿ ರಾಜ್ಯ.

ಅನುವಾದಕರು:— **ಶ್ರೀ. ಆರ್. ಕೆ. ಕಲ್ಯಾಣಕರ,** ಅ. ಡಿ. ಎ. ಇ. (ಶಾರೀರಿಕ ಶಿಕ್ಷಣ) ಬೆಳಗಾಂವಿ.
ಮತ್ತು
ಶ್ರೀ. ಮು. ಗೆ. ಕೇದನೂರ, ಮು. ಗು. ನಾಗರಾಳ.

(ಹಿಂದಿನ ಸಂಚಿಕೆಯಿಂದ ಬಂದದ್ದು.)

ಪ್ರಸಂಗ ವಿಶೇಷದಲ್ಲಾಗಲಿ, ಅಥವಾ ವಿಶಿಷ್ಟ ಪಾರ್ಶ್ವ ನಮಿಗೆ ಸಂಬಂಧಿಸಿಯಾಗಲಿ, 'ಶಿಕ್ಷಣ' ಶಬ್ದದ ಈ ರ್ಥವು ಸರಿಯಾಗಿ ಕಂಡರೂ, ನಿಜವಾಗಿ ಅದರ ಅರ್ಥವು ಾಗಿರುವದಿಲ್ಲ.

ಹೀಗಿದ್ದ ಪಕ್ಷಕ್ಕೆ 'ಶಿಕ್ಷಣ' ಶಬ್ದದ ಸತ್ಯಾರ್ಥವೇನಿದೆ? ದರಿಂದ ಯಾವ ಸಂಗತಿಯ ಅರ್ಥ ಖೋಧೆಯಾಗುವ ದೆ ? 'ಶಾರೀರಿಕ ಶಿಕ್ಷಣ' ಈ ಪದದ್ವಯದಲ್ಲಿ ್ಯಯಾವ ವಿಷಯಕ್ಕೆ ಸಂಬಂಧಿಸಿದ ಕೃತಿಯ ್ಗೀಯವು ತೋರಿಸಲ್ಪಟ್ಟಿದೆ. ಅದು ಹೇಗೆಂಬುದನ್ನು ತಿಳುಕೊಳ್ಳುವದು ಅವಶ್ಯವಿದೆ.

ಶಿಕ್ಷಣವು ಮನುಷ್ಯನ ಇಡೀ ಜನ್ಮದ ವರೆಗೆ ಒಂದೇ ನೆ ಸಾಗುತ್ತಿರುವ ಒಂದು ಪದ್ಧತಿಯಾಗಿದೆಯಲ್ಲದೆ ಷ್ಟೇ ಮನೋರಂಜಕವೂ ಆಗಿದೆ. ಮನುಷ್ಯ ್ರಾಣಿಯ ಜೀವನವು ನಾನಾ ತರದಿಂದ ಉತ್ಪನ್ನ ಾಗುವ ಪರಿಸ್ಥಿತಿಗಳಿಂದ, ಪ್ರಸಂಗಗಳಿಂದ ಕೂಡಿದ ಂದು ಗಂಭೀರ ಪ್ರವಾಹವೇ ಆಗಿದೆ. ಪ್ರತಿಯೊಂದು ರಿಸ್ಥಿತಿಯಾಗಲಿ, ಪ್ರಸಂಗವಾಗಲಿ ಮನುಷ್ಯ ಪ್ರಾಣಿಯ ೀವನದ ಮೇಲೆ ವಿಶಿಷ್ಟ ತರದ ಆಘಾತವನ್ನು ಮಾಡುತ್ತದೆ. ಮಳಿಗಾಲದಲ್ಲಿ ನಾವು ದಾರಿಯಿಂದ ಹೋಗುವಾಗ ನಮ್ಮ ಹತ್ತರ ಕೊಡೆ ಇಲ್ಲದ ಪಕ್ಷಕ್ಕೆ ನಮ್ಮ ಬಟ್ಟೆಗಳು ಒದ್ದೆಯಾಗುತ್ತವೆ. ಒತ್ತರದಿಂದ ಬೀಸುವಗಾಳಿಯಿಂದ ಬಟ್ಟೆಗಳು ಫಡ ಫಡ ಹಾರಾಡುತ್ತಿವೆ. ಪ್ರಖರವಾದ ಉಷ್ಣತೆಯಿಂದ ಬಟ್ಟೆಗಳೂ ಉಷ್ಣವಾಗಿ ಮೈಗೆ ಬೆವರು ಬಿಡುತ್ತಿದೆ. ಆಕಸ್ಮಾತ್ತಾಗಿ ನಮ್ಮ ಗೆಳೆಯನು ಭೆಟ್ಟಿಯಾದಾಗ ನಮಗೆ ಆನಂದ ವಾಗುತ್ತದೆ. ಯಾರಾದರೂ ನಮ್ಮ ಮೈಮೇಲೆ ರಾಡಿಯನ್ನು ಗೊಜ್ಜಿದ ಪಕ್ಷಕ್ಕೆ ನಮಗೆ ತಡೆಯಲಾರದ ಕೋಪ ಬರುತ್ತಿದೆ. ದಾರಿಯಲ್ಲಿ ಯಾವುದೊಂದು ಪ್ರೇತದ ದರ್ಶನವಾದರೆ ಜೀವವು ಕಳವಳಗೊಳ್ಳುತ್ತದೆ. ದಾರಿಯಲ್ಲಿ ಹೀಂಗುಂಟಾಗುವ ಈ ಆಘಾತಗಳಂತೆಯೇ ಜೀವನ ಮಾರ್ಗದಲ್ಲಿಯೂ ಅನೇಕ ಪ್ರಕಾರದ ಘಟನೆಗಳು ಬೇರೆ ಬೇರೆ ಪರಿಸ್ಥಿತಿ ಹಾಗೂ ಪ್ರಸಂಗಗಳಲ್ಲಿ ಬೇರೆ ಬೇರೆ ಪರಿಣಾಮಗಳನ್ನುಂಟು ಮಾಡುತ್ತವೆ. ಈ ಘಟನೆಗಳಿಗೆ ವಿರೋಧವಾಗಿ ಮನುಷ್ಯನೂ ಯಾವದೊಂದು ಪ್ರತಿಕ್ರಿಯೆಯನ್ನುಂಟುಮಾಡಲುದ್ಯುಕ್ತನಾಗುತ್ತಾನೆ. ಒಂದು ಸುಂದರ ಹೂವಿನಿಂದ ಆಕರ್ಷಿಸಿಸಲ್ಪಟ್ಟು ಕೂಡಲೇ ಆ ಕಡೆಗೆ ಧಾವಿಸುತ್ತಾನೆ; ಅದನ್ನು ಕೈಯಿಂದ ಮುಟ್ಟುತ್ತಾನೆ; ಲಕ್ಷವಿಟ್ಟು ನಿರೀಕ್ಷಿಸುತ್ತಾನೆ;

ಅದರ ಕಂಪಿನಿಂದ ಹರ್ಷಭರಿತನಾಗುತ್ತಾನೆ; ತನ್ಮಯನಾಗುತ್ತಾನೆ. ಇವು ಘಟನೆಯ ಕ್ರಿಯೆಗೆ ವಿರೋಧವಾಗಿ ಮಾಡಲ್ಪಡುವ ಪ್ರತಿಕ್ರಿಯೆಗಳು. ಈ ಪ್ರತಿಕ್ರಿಯೆಗಳನ್ನು ಮಾಡುತ್ತಿರುವಾಗ ಮನುಷ್ಯನ ವೃತ್ತಿಯು ಪರಿವರ್ತನವಾಗುವ ಸಂಭವವಿರುತ್ತದೆ. ಅವನ ಮನೋವಿಕಾಸವಾಗುವ ಕ್ರಾಂತಿ ಕಾಲವಿರುತ್ತದೆ ಅಥವಾ ಪರಿಸ್ಥಿತಿಯೊಡನೆ ಏಕೀಭೂತನಾಗುವ ಕಲೆಯೂ ಅವನಲ್ಲಿ ಉತ್ಪನ್ನವಾಗುತ್ತದೆ.

ನನ್ನ ಅನುಭವಕ್ಕೆ ಬಂದ ಒಂದು ವಿನೋದ ಪೂರ್ಣ ಪ್ರಸಂಗವನ್ನು ಹೇಳ ಬಯಸುತ್ತೇನೆ. ಇದರಿಂದ ಪ್ರತಿಕ್ರಿಯೆಯನ್ನು ಮಾಡುತ್ತಿರುವಾಗ ಮನುಷ್ಯನಲ್ಲಿ ಯಾವ ಅಭ್ಯಂತರವಾಗುವದೆಂಬುದು ಲಕ್ಷ್ಯದಲ್ಲಿ ಬರುವದು.

ಯುದ್ಧ ಕಾಲದ ನಂತರ ನಾವು ಒಂದು ಶಾರೀರಿಕ ಶಿಕ್ಷಣ ಶಿಬಿರವನ್ನು ಪ್ರಾರಂಭಿಸಿದೆವು. ಅದರಂತೆ ಆರಿಸಿದ ಶಿಕ್ಷಕರೆಲ್ಲರೂ ನಿಯಮಿತ ಅವಧಿಯೊಳಗಾಗಿ ಶಿಬಿರಕ್ಕೆ ಹಾಜರಾದರು. ಮೊದಲನೆಯ ದಿವಸ ಎಷ್ಟು ಪ್ರಯತ್ನಬಟ್ಟರೂ ನಮಗೆ ವಿದ್ಯುದ್ದೀಪಗಳ ವ್ಯವಸ್ಥೆ ಮಾಡುವದು ಕಠಿಣವಾಯಿತು. ಒಟ್ಟಿಗೆ ಮೊದಲನೆಯ ದಿವಸವೇ ಶಿಕ್ಷಕರೆಲ್ಲರೂ ವಿದ್ಯುದ್ದೀಪಗಳಿಲ್ಲದೆಯೇ ರಾತ್ರಿಯನ್ನು ಕಳೆಯಬೇಕಾಯಿತು. ಪರಿಸ್ಥಿತಿಯ ಅಥವಾ ಘಟನೆಯ ಕ್ರಿಯೆಯೇ ಅಂಧಃಕಾರ. ಆದರೆ ಬೇರೆ ಬೇರೆ ಶಿಕ್ಷಕರು ಮಾಡಿದ ಪ್ರತಿ ಕ್ರಿಯೆಯು ಹೊಗಳತಕ್ಕಂಥಾದ್ದಿದೆ.

ಕೆಲವು ಶಿಕ್ಷಕರು ಹಾಸಿಗೆಯ ಮೇಲೆ ಬಿದ್ದು, "ವಿದ್ಯುತ್ತಿನ ವ್ಯವಸ್ಥೆಯಾಗದಿದ್ದರೆ, ಇಂಥ ವರ್ಗಗಳನ್ನಾದರೂ ಏಕೆ ತೆಗೆಯಬೇಕು ? ಹೆಂಡಿರುಮಕ್ಕಳ ಮಧುರ ಸಹವಾಸವನ್ನು ತ್ಯಜಿಸಿ ಇಲ್ಲಿಗೆ ಬರುವ ಅವದೆಸೆಯು ಯಾರಿಗೆ ಹೊಳೆಯಿತೋ ಯಾರಿಗೆ ಗೊತ್ತು ?" ಈ ಶಿಕ್ಷಕರು ರಾತ್ರಿಯ ಊಟವನ್ನಂತೂ ಮಾಡಲೇ ಇಲ್ಲ. ಅಲ್ಲದೆ ತಮ್ಮ ಈ ಗುಣ ಗುಟ್ಟುವಿಕೆಯನ್ನೂ ಬಿಡಲಿಲ್ಲ.

ಬೇರೊಂದು ಕಡೆಯಲ್ಲಿ ಕೆಲವರು ತಮ್ಮಲ್ಲಿದ್ದ ಮೇಣಬತ್ತಿಗಳನ್ನು ಹೊತ್ತಿಸಿದರು; ಬೆಳಕು ಮಾಡಿಕೊಂಡರು. ತಂದಂಥ ಡಬ್ಬಿಗಳನ್ನು ತೆಗೆದು ಊಟ ಮುಗಿಸಿಕೊಂಡರು.

ಇದರಲ್ಲಿ ಬೇರೊಂದು ಕಡೆಯ ಶಿಕ್ಷಕರ ಪ್ರತಿಕ್ರಿಯೆಯು ಲಕ್ಷ್ಯಪೂರ್ವಕ ನೋಡಲು ತಕ್ಕದ್ದಾಗಿತ್ತು. "ಗೆಳೆಯರೇ, ಹೊರಗೆ ಸುಂದರ ಬೆಳದಿಂಗಳು ಬಿದ್ದಿದೆ ಬನ್ನಿರಿ ಹೊರಗೆ ಹೋಗೋಣ; ಕೂಡ್ರೋಣ; ನಗೋಣ ಕೆಲೆಯೋಣ; ಹಾಡೋಣ; ಬಾರಿಸೋಣ" ಹೀಗೆನ್ನುತ್ತ ಅವರು ಹೊರಗೆ ಬಂದರು. ಡಬ್ಬಿಗಳನ್ನು ಹೊರೆದೆಗೆದು ಒಳ್ಳೇ ಉತ್ಸಾಹದಿಂದ ಅವುಗಳ ಸಮಾಚಾರ ತಕ್ಕೊಳ್ಳಹತ್ತಿದ್ದರು. ಹರಟೆ, ಹಾಡು ವಿನೋದಗಳಲ್ಲಿ ಮುಗಿದು ತೂಕಡಿಗೆ ಬರಹತ್ತಲು ಒಳಗೆ ಬಂದು ಮಲಗಿ ಕೊಂಡರು.

ಈ ಬೇರೆ ಬೇರೆ ಪ್ರತಿಕ್ರಿಯೆಗಳನ್ನು ಹೂಡಿದ ಶಿಕ್ಷಕರಲ್ಲಿ ಯಾವುದಾದರೂ ಪರಿವರ್ತನನಾಗುವದು ಅನಿವಾರ್ಯವಲ್ಲವೇನು ?

ಹಾಸಿಗೆಯ ಮೇಲೆ ತಳಮಳಿಸುತ್ತ ಹೊರಳಾಡುತ್ತಿದ್ದ ಆ ಶಿಕ್ಷಕರು ಉಪವಾಸ ಬಿದ್ದರು; ನಿದ್ರೆಯಿಲ್ಲದಾಯಿತು. ಆದ್ದರಿಂದ ಆರೋಗ್ಯದಲ್ಲಿ ಕೆಂಚಿತ್ತಾದರೂ ಕೊರತೆಯಾಗಿರಬೇಕು. ಆದ್ದರಿಂದ ಅವರ ಸಿಟ್ಟುಗೇಳುವ ಸ್ವಭಾವ ಹೆಚ್ಚಾಯಿತು.

ಮೇಣ ಬತ್ತಿಯನ್ನು ಹೊತ್ತಿಸಿದವರು ಬೆಳಕು ಮಾಡಿಕೊಂಡು, ತಮ್ಮ ಯಾವದೇ ಹಾನಿಯನ್ನು ಮಾಡಿಕೊಳ್ಳಲಿಲ್ಲ. ಅಂದಿನ ಆ ದಿವಸವನ್ನು ಹೇಗಾದರೂ ಮಾಡಿ ಆರೋಗ್ಯವಂತರಾಗಿಯೇ ಬಗೆಹರಿಸಿಕೊಂಡರು.

ಮೂರನೆಯ ಗುಂಪಿನವರು ತಮ್ಮ ಶಾರೀರಿಕ, ಮಾನಸಿಕ, ಬೌದ್ಧಿಕ ಶಕ್ತಿಗಳಲ್ಲಿ ಮತ್ತಿಷ್ಟು ಹೆಚ್ಚಿಗೆಯನ್ನೆ ಮಾಡಿದರಲ್ಲದೆ, ಎಂತಹ ಪ್ರಸಂಗ ಬಂದರೂ ಉತ್ಸಾಹ ಆನಂದಗಳಿಂದ ಎದೆಗೊಟ್ಟು ಅದನ್ನು ಸ್ವಾಗತಿಸುವ ತಮ್ಮ ಮನೋಧೈರ್ಯವನ್ನೂ, ಆತ್ಮವಿಶ್ವಾಸವನ್ನೂ ಬೆಳೆಯಿಸಿ ಕೊಂಡರು. ಮತ್ತೊಂದು ವೈಶಿಷ್ಟ್ಯವೆಂದರೆ ಅವರು ಯಾವ ಸಂಕಟಗಳನ್ನಾದರೂ ಆನಂದದಿಂದಲೆ ಎದುರಿಸ ಬೇಕೆಂಬ ತಾತ್ವಿಕ ದೃಷ್ಟಿ ಕೋನವನ್ನು ಸ್ಥಿರ ಪಡಿಸಿಕೊಂಡರು.

ಈ ರೀತಿಯಾಗಿ ಸಂಭವಿಸುವ ಪ್ರಸಂಗಗಳಿಂದಲೂ ಅವುಗಳ ಕ್ರಿಯೆಗಳಿಂದಲೂ ಉಂಟಾಗುವ ಪರಿಣಾಮಕ್ಕೆ ವಿರೋಧವಾಗಿ (ನಿರೋಧಕವಾಗಿ) ಮಾಡಲ್ಪಡುವ ಪ್ರತಿಕ್ರಿಯೆಗಳಿಂದ ಮನುಷ್ಯನ ಜೀವನದ

ಪ್ರಾಥಮಿಕ ಶಿಕ್ಷಣ

'ವಿಕಾಸ ಇಲ್ಲವೆ ಅಭೋಗತಿಯುಂಟಾಗುತ್ತಿದೆ. ಈ ಬಗೆಯಾಗಿ ಪ್ರಸಂಗಗಳಿಗೆ ನಿರೋಧಕವಾಗಿ ಮಾಡಲ್ಪಡುವ ಸಮಯದ ವ್ಯಕ್ತಿಯ ಸರ್ವಾಂಗ ಪರಿಪೂರ್ಣವಾದ ವಿಕಾಸಕ್ಕೆ ಶಿಕ್ಷಣವೆಂದೆನ್ನುತ್ತಾರೆ. ಈ ಕ್ರಿಯೆಯು ಇಡೀ ಜನ್ಮದ ವರೆಗೆ ಒಂದೇ ಸವನೆ ನಡೆಯುತ್ತಿರುವದೆಂದರಿತೆ—

" ಶಿಕ್ಷಣದ ಸ್ವಾರಂಭವು ತೊಟ್ಟಿಲಲ್ಲಾಗಿ ಅಂದರೆ ಅದರ 'ಆಥ' ತೊಟ್ಟಿಲಲ್ಲಾಗಿ, ಅದರ ಸಮಾಪ್ತ ಅಥವಾ 'ಇತಿ' ಸ್ಮಶಾನದಲ್ಲಾಗುತ್ತದೆಂದು ಹೇಳುತ್ತಾರೆ. "

'ಸರ್ವಾಂಗ ಪರಿಪೂರ್ಣತೆಯೆಂದರೇನೆಂಬ' ಬಗೆಗೆ ವಿಚಾರ ಮಾಡುವದು ಇನ್ನೊಂದು ರೀತಿಯಿಂದ ಅತಾವಶ್ಯವಾಗಿದೆ. ವಿಕಾಸದ ಅರ್ಥವನ್ನು ಹೇಳುವದಕ್ಕಿಂತ್ಯ ಅದನ್ನು ಉದಾಹರಣೆಗಳಿಂದ ತಿಳಿದುಕೊಳ್ಳುವದು ಹೆಚ್ಚು ಸುಲಭವಾಗಬಹುದು. ಆಕರ್ಷಣ, ಅಕಾರ, ಸುವಾಸನೆ, ಸೌಂದರ್ಯ ಮುಂತಾದ ಗುಪ್ತ ಗುಣಗಳು ಮೊಗ್ಗಿನಲ್ಲಿ ಸಂಗ್ರಹಿತವಾಗಿರುತ್ತವೆ. ಅಹರಂತೆ ವ್ಯಕ್ತಿಯಲ್ಲಿದ್ದ ಸದ್ಗುಣಗಳನ್ನು ವ್ಯಕ್ತ ಪಡಿಸುವದೇ ವಿಕಾಸ. ಈ ಗುಣಗಳು ಯಾವ ಯಾವ ಬಗೆಯವಿರುತ್ತವೆಂಬುದನ್ನಾದರೂ ಕಂಡು ಹಿಡಿಯುವದು ಅವಶ್ಯ.

ವಿಕಾಸದ ಬೇರೆ ಬೇರೆ ಅಂಗಗಳು ಕೆಳಗಿನ ವರ್ಗೀಕರಣದಿಂದ ಸ್ಪಷ್ಟವಾಗುವವು.

ವಿಕಾಸ

ಗ	ತ	ಶ	ಳ	ಜ	ಕ	ಲ
ಶಾರೀರಿಕ	ಮಾನಸಿಕ	ಬೌದ್ಧಿಕ	ಕಲಾತ್ಮಕ	ವ್ಯವಸಾಯಾತ್ಮಕ	ನೈತಿಕ	ಸಾಮಾಜಿಕ

ಮೇಲಿನ ಗುಣಗಳು ಸುಪ್ತಾವಸ್ಥೆಯಲ್ಲಿ ಪ್ರತಿಯೊಂದು ವ್ಯಕ್ತಿಯಲ್ಲಿಯೂ ಇರುತ್ತವೆ. ಜೀವನದಲ್ಲಿಯ ವಿವಿಧ ಪ್ರಕಾರದ ಪರಿಸ್ಥಿತಿಯ ಅನುಭವದಿಂದ ಹಾಗೂ ಆಯಾ ಪ್ರಸಂಗಗಳಲ್ಲಿ ಸಹೇತುಕವಾಗಿ ನಡೆದ ವರ್ತನೆಯಿಂದ ವಿಕಾಸವಾಗುತ್ತಿರುತ್ತದೆ. ಈಗ ಶಿಕ್ಷಣದ ವರ್ಣನೆಯನ್ನು ಸಂಕ್ಷಿಪ್ತವಾಗಿಯಾದರೂ ಸ್ಪಷ್ಟವಾಗಿ ಮಾಡಲು ಬರುವಂತಿದೆ

ಜೀವನದ ಪ್ರವಾಹದಲ್ಲಿ ಸಿಲುಕಿದ ಜೀವಿಯ ಮೇಲೆ ಬಹುವಿಧವಾದ ಸಾವಿರಾರು ಘಟನೆಗಳ ಪರಿಣಾಮವಾಗುತ್ತಿರಲು, ಆ ಜೀವಿಯು ಅವುಗಳಿಗನುಲಕ್ಷಿಸಿ, ಕೈಕೊಂಡ ಪ್ರತಿಕ್ರಿಯೆಗಳಿಂದ ಅವನ ಶಾರೀರಿಕ, ಮಾನಸಿಕ, ಬೌದ್ಧಿಕ ಇತ್ಯಾದಿ ಶಕ್ತಿಗಳ ವಿಕಾಸ ಮಾಡುತ್ತದೆ. ಇಂಥ ಎಲ್ಲ ಶಕ್ತಿಗಳ ವಿಕಾಸವು ಸಂಪೂರ್ಣವಾಗುವದಕ್ಕೆ ನಾವು ಮಾಡಿಕೊಂಡ ಘಟನೆಯ ಪದ್ಧತಿಗೆ ಶಿಕ್ಷಣವೆಂದೆನ್ನುತ್ತಾರೆ.

ಇನ್ನು ಇಲ್ಲಿ ಇನ್ನೊಂದು ಸಂಶಯಕ್ಕೆ ಆಸ್ಪದ ವಾಗುವಂತಹ ಸಂಗತಿಯಾಗಿದೆ. ಈ ಸರ್ವಾಂಗ ಪರಿಪೂರ್ಣ ವಿಕಾಸದಲ್ಲಿ 'ಶಾರೀರಿಕ' ವಿಷಯದ ಅಂತರ್ಭಾವವಾಗುತ್ತಿರಲು, 'ಶಾರೀರಿಕ ಶಿಕ್ಷಣ' ಇದರಲ್ಲಿಯ 'ಶಾರೀರಿಕ' ಪದದ ಆವಶ್ಯಕತೆಯೇನು ? ಅದಕ್ಕೆ ನನ್ನ ಉತ್ತರ ಹೀಗದೆ. 'ಶಾರೀರಿಕ ಪದವು ಧ್ಯೇಯ ಬೋಧಾತ್ಮಕವಾಗಿರದೆ, ಅದರ ಉದ್ದೇಶವು ಸರ್ವಾಂಗ ಸೌಂದರ್ಯದ ಸಾಧನಗಳನ್ನು ತೋರಿಸುವದಿದೆ. ಸರ್ವಾಂಗ ಸೌಂದರ್ಯದ ಧ್ಯೇಯವನ್ನು ಯಾವ ಸಾಧನಗಳಿಂದ ಸಾಧಿಸುವದಿದೆಯೋ ಆ ಸಾಧನದ ಉತ್ತರವನ್ನು ಅದು ಕೊಡುತ್ತಿದೆ. ನಮ್ಮ, ಶರೀರದಲ್ಲಿಯ ಸಣ್ಣ ದೊಡ್ಡ

ಸ್ನಾಯುಗಳ ಚಲನವಲನಗಳಿಗೆ — ಆಕುಂಚನ, ಪ್ರಸರಣ ಗಳಿಗೆ – ಯಾವ ಮೂಲ ಸಂಗತಿಯು ಕಾರಣವಾಗಿರುವದೋ, ಆ 'ಶಾರೀರಿಕ ಶಿಕ್ಷಣವು' ಜೀವಿಯ ಸರ್ವಾಂಗ ಸೌಂದರ್ಯ ಪರಿಪೂರ್ಣಮಾಡುತ್ತಿದೆ.

ಈ ಶಾರೀರಿಕ ಕೃತಿಯ ಮೂಲಸ್ವರೂಪವು ಕೆಳಗಿನಂತಿದೆ.

(೧) ಕೂತೇಳುವದು (೨) ನಡೆಯುವದು (೩) ಓಡುವದು (೪) ಹೊಲಿಗೆ (೫) ಕುಣಿತ (೬) ದೋಲೆ ಹೊಡೆಯುವದು (೭) ಸಮತೋಲ ಹಿಡಿಯುವದು (೮) ಏರುವದು (೯) ಇಳಿಯುವದು (೧೦) ಜಿಗಿದಾಡುವದು (೧೧) ಭಾರ ಎತ್ತುವದು (೧೨) ದೂರ-ಒಗೆಯುವದು (ಎಸೆಯುವದು) (೧೩) ಜೀಕುವದು (೧೪) ಸಡ್ಡು ಹೊಡೆಯುವದು (೧೫) ನೂಕುವದು (೧೬) ಈಸುವದು (೧೭) ಕೂಗುವದು (೧೮) ಮುಳುಗುವದು (೧೯) ಗುರಿ ಹೊಡೆಯುವದು (೨೦) ತಡೆಗಟ್ಟುವದು ಇತ್ಯಾದಿ.

ಈ ಮೂಲಸ್ವರೂಪದಲ್ಲಿ ಒಂದೇ ಬಗೆಯ ಅಥವಾ ಅನೇಕ ಇಲ್ಲವೆ ಸಮ್ಮಿಶ್ರ ರೀತಿಯಾಗಿ, ಸಾಧನ ಸಹ ಅಥವಾ ಸಾಧನ ರಹಿತವಾಗಿ ಹಲವು ಬಗೆಯಿಂದ ಶಾರೀರಿಕ ಕೃತಿ ಮಾಡಬೇಕಾಗುತ್ತದೆ. ಇವುಗಳ ಸಹಾಯದಿಂದ ಮನುಷ್ಯನ ಸರ್ವಾಂಗ ಪರಿಪೂರ್ಣತೆಯನ್ನು ಸಾಧಿಸುವ ಕ್ರಮಕ್ಕೆ 'ಶಾರೀರಿಕ ಶಿಕ್ಷಣ' ಅನ್ನುತ್ತಾರೆ.

ಈಗೊಂದು ಉದಾಹರಣೆ ತಕ್ಕೊಳ್ಳುವಾ— ಎತ್ತರ ಜಿಗಿತವು ಒಂದು ಶಾರೀರಿಕಚಲನವಲನವಕೃತಿಯಾಗಿದೆ. ಇದನ್ನು ಕಲಿಯುತ್ತಿರುವಾಗ ಇದು 'ಎತ್ತರ ಜಿಗಿತವು'– ಒಂದು ಬಗೆಯಾಗಿ 'ಸಾಧ್ಯ'ವೆಂದು ಎಣಿಸಲಾಗುವದು; ಅಥವಾ 'ಸಾಧನ' ವೆಂದು ತಿಳಿಯಲಾಗುವದು: ಎತ್ತರ ಜಿಗಿತವು ಸಾಧಿಸಿದೊಡದೆ ಅಷ್ಟಕ್ಕೆ ಎಲ್ಲ ಮುಗಿಯಿತೆಂದು ಯಾವ ಶಿಕ್ಷಕನಾದರೂ ತಿಳಿದು ಕೊಂಡರೆ, ಅಂಥವನಿಗೆ ನಿಜವಾದ ಶಾರೀರಿಕ ಶಿಕ್ಷಣದ ಪರಿಜ್ಞಾನವಾಗಿಲ್ಲ ವೆಂದು ಹೇಳಬಹುದು. ಇದನ್ನು ಕಲಿಸುತ್ತಿರುವಾಗ ಹುಡಗನ ವೇಗ, ಚಪಲತೆ (ಚಾಪಲ್ಯ), ಜೋಲೀ ಹಿಡಿಯವದು ಮುಂತಾದ ಗುಣಗಳು ಅವನಲ್ಲಿ ಸಂಪೂರ್ಣವಾಗಿ ಪ್ರಾಪ್ತವಾಗ ಬೇಕಾಗುತ್ತವೆ. ಎತ್ತರ ಜಿಗಿತದ ಬೇರೆ ಬೇರೆ ಪ್ರಕಾರಗಳು, ಅವುಗಳ ಉಚ್ಚ ಗುಣಾಂಕಗಳು, ಹಾಗೂ 'ವಿಕ್ರಮ ಸ್ಥಾಪನೆ'ಯ ಇತಿಹಾಸ ಇವುಗಳನ್ನು ತಿಳಿಸಿ, ಹುಡುಗನ ಜ್ಞಾನದಲ್ಲಿ ಭರತಿಯನ್ನು ಹಾಕಬೇಕು. ಬಿದ್ದ ಕೋಲನ್ನು ನಿಶ್ಚಿತ ಸ್ಥಳದಲ್ಲಟ್ಟು, ತಗ್ಗಿನಲ್ಲಿ ಹರಡಿದ ಮಳಲನ್ನು ಸಮಮಾಡಿ, ಜೊತೆಗಾರನಿಗೆ ಹುರಿದುಂಬಿಸಿ, ಸಹಕಾರ ನೀಡಿ ಹಾಗೂ ಪರರ ಗುಣಗಳ ಪ್ರಶಂಶೆ ಮಾಡುವ ಸಾಮಾಜಿಕ ಗುಣಗಳು ಬೆಳೆಯುವ ಎಚ್ಚರಿಕೆಯನ್ನು ಶಿಕ್ಷಕನು ತಕ್ಕೊಳ್ಳಬೇಕು. ಈಗ ತನ್ನ ಬಾರಿ ಬಂತೆಂದು ಸುಳ್ಳು ಹೇಳಿ ಹಾಗೂ ಮೋಸಮಾಡಿ, ಹೊಟ್ಟೆಯುರುಕನಂತೆ ಎರಡನೆಯವರನ್ನು ಹಿಂದೆ ಕೆಡಹುವ ಮೋಹವನ್ನು ಬಿಟ್ಟು ಕೊಡಲು ಎಚ್ಚರಿಕೆ ಕೊಟ್ಟು, ಆತನ ನೈತಿಕ ಧೈರ್ಯ ಬಲಗಳನ್ನು ವಿಕಾಸಗೊಳಿಸಬೇಕು. ಜಿಗಿಯುವ ಪದ್ಧತಿಯಲ್ಲಿಯ ಶಿಸ್ತು, ಗಾಂಭೀರ್ಯ, ಚಾಪಲ್ಯ ಇವುಗಳ ಸಂಪೂರ್ಣತೆ, ಹಾಗೂ ಸಾಧನಗಳ ವ್ಯವಸ್ಥೆಯನ್ನು ಕಲಾತ್ಮಕ ದೃಷ್ಟಿಯಿಂದ ಸಜ್ಜುಗೊಳಿಸುವ ಚಟವು ಶರೀರದ ಪ್ರತಿ ಕಣದಲ್ಲಿಯೂ ಬಿಡಬೇಕು. ತುಂಬಿ ಅಂದರೆ ಈ ಗುಣಗಳು ಅವನಲ್ಲಿ ಮೈಯುಂಡು ಹೋಗಿರಬೇಕು. ಈ ಬಗೆಯಾಗಿ ಎತ್ತರ ಜಿಗಿತವನ್ನು ಒಂದು ಧ್ಯೇಯವೆಂದೇ ತಿಳಿಯದೆ 'ಸರ್ವಾಂಗೋನ್ನತಿಗಾಗಿ ಆದನ್ನು ಆಳವಡಿಸಿಕೊಳ್ಳುವದೇ ನಿಜವಾದ 'ಶಾರೀರಿಕ ಶಿಕ್ಷಣ' ವೆಂದು ಹೇಳಬಯಸುತ್ತೇನೆ. ನಿಜವಾಗಿ ಈ ರೀತಿ ಅದರ ಸದುಪಯೋಗವಾಗದಿದ್ದರೆ ಈ ಎತ್ತರ ಜಿಗಿತವೇ ತುಡುಗು ಮಾಡೋಣ, ದರೋಡೆ ಮಾಡೋಣ, ಕೊಳ್ಳೆ ಹೊಡೆಯೋಣ, ಓಡಿ-ಹೋಗೋಣ ಮುಂತಾದ ದುರಾಚಾರಣೆಯ ಪ್ರಸಂಗಗಳಲ್ಲಿ ಈ ಕಲೆಯ ಕೌಶಲ್ಯದ ಉಪಯೋಗವಾಬಗಹುದು. ಇದರಿಂದ ಶಾರೀರಿಕ ಶಿಕ್ಷಣದ ಸಮಯದಲ್ಲಿ ಅದರ ಜೊತೆಗೆ ಸದ್ಗುಣಗಳ ವಿಕಾಸವಾಗುವದಕ್ಕೆ ಅಮೂಲಾಗ್ರ ಪ್ರೋತ್ಸಾಹನ ಕೊಡಬೇಕಲ್ಲದೆ, ಶಿಕ್ಷಕರೂ ಸ್ವಂತವಾಗಿ ಜಾಗರೂಕತೆಯನ್ನು ತಕ್ಕೊಳ್ಳಬೇಕು ಎಚ್ಚರಿಕೆಯಲ್ಲಿ ತಿಲಮಾತ್ರವೂ ಚಂಚಲತೆಯಾಗ ಕೂಡದು. ನೆಟ್ಟದೃಷ್ಟಿಯಿಂದ ಅವಲೋಕಿಸುತ್ತಿರಬೇಕು.

'ಶಾರೀರಿಕ ಶಿಕ್ಷಣ' ಈ ಪದದ್ವಯದಲ್ಲಿ ಶಾರೀರಿಕ ಇದು ಸಾಧನ ವಾಚಕವಾಗಿದೆಯೇ ಹೊರತು ಸಾಧ್ಯ ವಾಚಕವಾಗಿಲ್ಲ. ಈ ಅನ್ನುವಿಕೆಯ ತಥ್ಯವನ್ನು ನಾವು ಕ್ಷದಲ್ಲಿ ಇಟ್ಟುಕೊಳ್ಳುವದು ಅವಶ್ಯವಾಗಿದೆ ಪಾರ ಕಂತ್ರ್ಯದ ಸಮಯದಲ್ಲಿ ಇದನ್ನು ನಾವು ಮರೆತಿದ್ದೆವು. ಇಲ್ಲವೆ ಮರೆ ಮಾಡಿದ್ದೆವು. ಅಥವಾ ಮರೆಯಲ್ಲಿಟ್ಟಿದ್ದೆವು. ಾಸ್ತ್ರೀಯ ಪದ್ಧತಿಯಿಂದ ಶರೀರದ ವಿಕಾಸವನ್ನು. ನಾವು ಮಾಡಲಿಲ್ಲ. ಬೌದ್ಧಿಕ ಪ್ರಗತಿ ಹಾಗೂ ಶಾರೀ ಕವಾದ ಇವುಗಳಲ್ಲಿ ತೊಡಕನ್ನು ಉತ್ಪನ್ನ ಮಾಡಿ,- ಂದರಿಂದ ಇನ್ನೊಂದನ್ನು ಬಿಡುಗಡೆ ಮಾಡಿದೆವು. ಈ ಕ್ಷಣದಿಂದ ಬಲವಂತರಾದವರಲ್ಲನೆ ಧೀಕರು ಸಮಾ ದ ಮೇಲೆ ತಮ್ಮ ಆಳಿಕೆಯ ಅಂಜಿಕೆಯನ್ನು ಪ್ರಸ್ಥಾ- ಸಿದರೇ ಹೊರ್ತು ಅದರ ಸಂರಕ್ಷಣೆಯ ಸತ್ಕಾರ್ಯವನ್ನು ೈಕೊಳ್ಳಲಿಲ್ಲ. ಇಷ್ಟೇ ಏಕೆ? ಇದಕ್ಕೆ ವಿರುದ್ಧವಾಗಿ ರಂತರವಾಗಿಯೂ ಸಮಾಜದ ಮೇಲೆ ತಮ್ಮ ಪ್ರಭುತ್ವ ನ್ನು ಪ್ರಸ್ಥಾಪಿಸಲು ಸಹ ಹೇಸಲಿಲ್ಲ. ಯಾವದೊಂದು ಪ್ರಸಿದ್ಧಿಸಲ್ಪಟ್ಟ ಕುಸ್ತಿಯಲ್ಲಿ ಬಿದ್ದೊಡನೆಯೇ ಎಷ್ಟೋ ನ್ಯಾಯಾಮ ಪ್ರೇಮಿ ಜಟ್ಟಿಗಳು, ಅನೀತಿಯ ಕಂದರ- ನಲ್ಲಿಯೇ ಹಾರಿಕೊಂಡರು.

ಕಲಾತ್ಮಕ ಪ್ರಗತಿಯಂತೂ ದೂರೇ ಉಳಿಯಿತು. ಆದರ ಬದಲಾಗಿ ಅಸ್ತಾವ್ಯಸ್ತ ಬೆಳೆದದೇಹ, ಹೊಲಸು ಬಟ್ಟೆ, ಕಾಡು ಕಾಲು, ಹ್ಹ ! ಹ್ಹ ಹ್ಹ !! ಅದೇನು ಹೇಳಬಾರದು! ಾದರೆ ಇದೆಲ್ಲ ಜಟ್ಟಿಯ ಲಕ್ಷಣವೆಂದು ಹೆಮ್ಮೆಯಿಂದ ಹೇಳಲ್ಪಡುತ್ತಿತ್ತು. ಈ ಹೆಮ್ಮೆಯ ವಿಕೃತ ದೃಶ್ಯವು ಇನ್ನೂ ಕೆಲವೆಡೆಯಲ್ಲಿ ಮೂಲ ಸ್ವರೂಪದಲ್ಲಿಯೇ ಕಂಡು ಬರುತ್ತಿದೆ. ಕೇವಲ ದೇಹದಲ್ಲಿ ನೆಣವನ್ನಾಗಲಿ ಕಸುವನ್ನಾಗಲಿ, ಗಡುತರೂವಾದ ಸ್ನಾಯುಗಳನ್ನಾಗಲಿ, ಬೆಳೆಯಿಸಿ, ಬಕಾಸುರ ದೇಹಿಗಳಾಗುವದು ಶಾರೀರಿಕ ಶಿಕ್ಷಣವಲ್ಲವೆಂಬುದನ್ನು ಸಕಾರಣವಾಗಿ ಆಗಿನ ಪಾರ ತಂತ್ರ್ಯದಲ್ಲಿ ಸಹ ತಿಳಿಸಿ ಹೇಳಲು ಬರುವಂತಿತ್ತು.

ನಮ್ಮ ಹಳೆಯ ಸಂಪ್ರದಾಯದಲ್ಲಿ ಇದೆಲ್ಲ ಇರಲಿಲ್ಲ. ನ್ಯಾಯಾಮದ ಉಪಾಸ್ಯ ದೈವತವಾದ ಶ್ರೀ. ಹನು- ಮಂತನ ದೈಹಿಕ ಪ್ರಗತಿಯು ಸಶಾಸ್ತ್ರೀಯವಾಗಿ ಬೆಳೆದು ಬಂದಿತ್ತು. ವೇಗ, ಬಲ ಈ ಮಹತ್ವದ ಗುಣ- ಗಳು ಆತನಲ್ಲಿ ಮೈಯ್ಯುಂಡು ಹೋಗಿದ್ದವು. (ಮನೋ ಜವಂಮಾರುತತುಲ್ಯವೇಗಂ) ಬುದ್ಧಿಮತ್ತೆಯಲ್ಲಿ ಆತನ ಕೈ ಹಿಡಿಯುವವರು ಯಾರೂ ಇರಲಿಲ್ಲ. (ಬುದ್ಧಿಮತಾಂ ವರಿಷ್ಠ) ಆತನ ಚಾರಿತ್ರ್ಯವು ಸುಸೀಲ ಸಂಪನ್ನವಾಗಿತ್ತು. ಅಲೌಕಿಕವಾಗಿತ್ತು. (ಜಿತೇಂದ್ರಿಯಂ) ಆತನಲ್ಲಿ ಸಾಮಾಜಿಕ ಸದ್ಗುಣಗಳು ಸಂಪೂರ್ಣವಾಗಿ ವಿಕಾಸಗೊಂಡಿದ್ದವು. (ವಾನರಯೂಥಮುಖ್ಯಂ) ಅಧ್ಯಾತ್ಮಿಕ ಪದ್ಧತಿಯ ತಳಹದಿಯ ಮೇಲೆಯೇ ಪ್ರಾರಂಭಿಸ- ಲ್ಪಟ್ಟ ರಾಷ್ಟ್ರಕಾರ್ಯವು ಆತನ ಜೀವನ ಸಾನಲ್ಯವಾಗಿತ್ತು. (ಶ್ರೀ ರಾಮ ದೂತಂ). ಹೀಗಿರುವ ನಮ್ಮ ಉಪಾಸ್ಯ ದೈವತವೇ ನಮ್ಮ ಆದರ್ಶವಾಗಿದೆ. ನಮ್ಮ ವ್ಯಾಯಾಮ ವಿಷಯಕ ಪದ್ಧತಿಯಲ್ಲಿ ಈ ಧ್ಯೇಯವೇ ಒಳಗೊಂಡಿರ- ಬೇಕು. ಸರ್ವಾಂಗ ಸುಂದರ ಧ್ಯೇಯವೆಂಬ ಧ್ರುವ- ತಾರೆಯ ಕಡೆಗೇ ದೃಷ್ಟಿಯನ್ನಿಟ್ಟು, ಆ ದಿಶೆಯಲ್ಲಿಯೇ ಸಾಗಿ, ವ್ಯಕ್ತಿಯನ್ನು ಅದರಲ್ಲಿ ಪ್ರಣೀತನನ್ನಾಗಿ ಮಾಡುವ ಯಾವುದೇ ವ್ಯಾಯಾಮ ವಿಷಯಕ ಕೃತಿಗೇ ಶಾರೀರಿಕ ಶಿಕ್ಷಣ' ವೆಂಬ ಪವಿತ್ರ ಸಂಜ್ಞೆಯನ್ನು ಕೊಡಬೇಕು.

ಇದಕ್ಕೆ ವಿಪರೀತವಾಗಿ ಶರೀರ ಸಂವರ್ಧನೆಗೆ ಆತಂಕ- ವನ್ನುಂಟು ಮಾಡುವ, ಬೌದ್ಧಿಕ ವಿಕಾಸದೆಡೆಗೆ ದುರ್ಲ- ಕ್ಷ್ಯವನ್ನುಂಟು ಮಾಡುವ, ಸಾಮಾಜಿಕ ಸದ್ಗುಣ- ಗಳನ್ನು ಕಾಲ್ತೆಳಗೆ ಹಾಕಿ ತುಳಿಯುವ, ನೈತಿಕ ಬೆಲೆಯ ಹೆಮ್ಮೆಯನ್ನು ಹಿಡಿಯದಿರುವ, ಕಲಾತ್ಮಕ ಪ್ರವೃತ್ತಿ- ಗಳನ್ನು ಹುರುಪಳಿಸಿ ಬಿಡುವ, ಯಾವದೇ ಪ್ರಕಾರದ ವ್ಯಾಯಾಮ ವಿಷಯಕ ಕೃತಿಗೆ ಆ ಮೇಲೆ ಆದರಿಂದ ಎಷ್ಟೇ ತೇಗು ಹತ್ತಲಿ, ಬೇಕಾದಷ್ಟು ಬೆವರು ಮೈಯಿಂದ ಸುರಿಯಲಿ ಶಾರೀರಿಕ ಶಿಕ್ಷಣವೆಂದು ಅದಕ್ಕೆ ಹೆಸ- ರನ್ನು ಕೊಡಲಾಗದು.

—:ಸಮಾಪ್ತ:—

ಜ್ಞಾನಾರ್ಜನೆಯಲ್ಲಿ ಸಾಹಚರ್ಯದ ಕಾರ್ಯವು

ಲೇಖಕರು:— ಶ್ರೀ. ತಟ್ಟಿ ರಾಮರಾಯರು ಬಿ. ಎ. ಎಸ್- ಟಿ. ಸಿ. ಡಿ.
ನಿವೃತ್ತ ಪ್ರಿನ್ಸಿಪಾಲರು, ಟ್ರೇನಿಂಗ ಕಾಲೇಜ, ನರಗುಂದ

ಪ್ರಾಣಿಗಳಲ್ಲಿ ನಿಜವಾಗಿ ಮಾತನಾಡಬಲ್ಲಪ್ರಾಣಿ ಎಂದರೆ ಮನುಷ್ಯನೆ. ಭಾಷೆಯ ಸಹಾಯದಿಂದಲೂತನ್ನ ವಿಚಾರ ಶಕ್ತಿಯಿಂದಲೂ ಮನುಷ್ಯನು ಸೃಷ್ಟಿಯ ಚಮತ್ಕಾರಗಳನ್ನೂ ಪ್ರಪಂಚದ ಆಗು ಹೋಗುಗಳನ್ನು ಸೂಕ್ಷ್ಮವಾಗಿ ತಿಳಿದುಕೊಂಡು ಆನಂದ ಪಡೆಯಬಲ್ಲನು. ಸೃಷ್ಟಿಯ ನಿರೀಕ್ಷಣೆಮಾಡಿ ಅದರ ನಿಯಮಗಳಿಗೆ ಹೊಂದಿಕೊಂಡು ಹೋಗಲಿಕ್ಕೂ ತನ್ನ ಜೀವನಾರ್ಥವಾಗಿ ಅದರಲ್ಲಿ ತಕ್ಕ ಮಾರ್ಪಾಟುಗಳನ್ನು ಮಾಡಿಕೊಳ್ಳಲಿಕ್ಕೂ ಅವನು ಕಲಿಯುವನು. ವಿಚಾರ ಶಕ್ತಿಯಲ್ಲಿ ಅಡಕವಾದ ನಿರೀಕ್ಷಣೆ, ಸ್ಮರಣೆ, ಪ್ರತಿಭೆ ಇವುಗಳ ಕಾರ್ಯಕ್ಕೆ ಪ್ರತ್ಯಕ್ಷ ವಿಷಯಗಳ ಅನುಭವ, ಆ ಅನುಭವದ ಸಂಸ್ಕಾರಗಳು ಮುಖ್ಯವಾಗಿ ಬೇಕಾದವುಗಳು. ಒಮ್ಮೆ, ಹಲವು ಸಾರೆ ನೋಡಿದ ಸಂಗತಿಗಳನ್ನು ಗುರ್ತು ಹಿಡಿಯುವದು, ಹೊಸ ಸನ್ನಿವೇಶಗಳನ್ನು ಕಲ್ಪಿಸುವದು ಸಾಧ್ಯವಾಗಬೇಕಾದರೆ ಅನುಭವದ ನೆನಪಿನ ಉಳಿಕೆಗಳು ಹಲವೊಂದು ರೀತಿಯಿಂದ ಸಂಘಟಿತವಾಗಬೇಕು. ಈ ಸಂಘಟನೆಗೆ ಮಾನಸಶಾಸ್ತ್ರದಲ್ಲಿ ಸಾಹಚರ್ಯವೆಂಬ ಹೆಸರಿದೆ.

ಮನೆಯಲ್ಲಿ ಕೂತಿರುವಾಗ ಬೀದಿಯಲ್ಲಿ ಹಾಯ್ದು ಹೋದ ಒಂದು ಮೋಟರಿನ ಸಪ್ಪಳವನ್ನು ಕೇಳಿದ ಕೂಡಲೆ ಅದನ್ನು ನಾವು ಪ್ರತ್ಯಕ್ಷವಾಗಿ ಕಣ್ಣಿನಿಂದ ನೋಡದಿದ್ದರೂ ಅದರ ಆಕಾರ, ಬಣ್ಣ, ಆರ್ಭಟಿ ಇವು ನಮ್ಮ ಮಾನಶ್ಚಕ್ಷುವಿನ ಮುಂದೆ ಥಟ್ಟನೆ ಬಂದು ನಿಲ್ಲುವವು. ಕಿತ್ತಳೆಯ ಹಣ್ಣನ್ನೊಂದನ್ನು ನೋಡುವಾಗ ಅದರ ವಾಸನೆ ರುಚಿ ಇವು ಸಹ ನಾವು ತತ್ಕಾಲಕ್ಕೆ ಅನುಭವಿಸಿದಂತೆಯೇ ಆಗುವದು. ಒಂದು ಶಬ್ದವನ್ನು ಉಚ್ಚರಿಸಿದ್ದನ್ನು ಕೇಳಿದ ಕೂಡಲೆ ಆ ಭಾಷೆಯನ್ನು ಬಲ್ಲವನಿಗೆ ಅದು ಸೂಚಿಸುವ ವಸ್ತುವು ಕಣ್ಣು ಮುಂದೆ ನಿಲ್ಲುವದು. ಎಷ್ಟೋ ಸಂಗತಿಗಳನ್ನು ಅತ್ಯಲ್ಪ ಶ್ರಮದಿಂದ ನೆನಪು ಮಾಡಿಕೊಳ್ಳಬಲ್ಲೆವು. ಒಮ್ಮೊಮ್ಮೆ ಸಾವಧಾನದಿಂದ ನೋಡದೆ ಇದ್ದಾಗ ಕಂಡ ವಸ್ತುವಿನಲ್ಲಿ ಇರವೆ ಇದ್ದ ಗುಣಗಳು ಸಹ ಅದರಲ್ಲಿ ಕಂಡಂತಾಗುವದು — ಹಾದಿಯಲ್ಲಿ ಬಿದ್ದ ಥಳಥಳಿಸುವ ಸಿಂಪಿನ ಚೂರು ಬೆಳ್ಳಿಯೆಂದು ಕ್ಷಣಹೊತ್ತು ಭ್ರಾಂತಿಯನ್ನು ಹುಟ್ಟಿಸುವದು. ಈ ಎಲ್ಲ ಉದಾಹರಣೆಗಳಲ್ಲಿ ಒಂದು ತತ್ವವು ಲಕ್ಷಕ್ಕೆ ಬರುವದು— **ಅನುಭವದ ಮೂಲಕ ಕೂಡಿ ಕೂಡಿ ಬಂದ ಸಂಗತಿಗಳಲ್ಲಿ ಒಂದು ಸಂಗತಿಯು ಯಾವದಾದರೊಂದು ಕಾರಣದಿಂದ ನಮ್ಮ ಅವಧಾನದ ವಿಷಯವಾದರೆ ಅದು ತನ್ನ ಸಂಗತಿಗಳನ್ನು ತತ್ಪ್ರಣ ಮನಸ್ಸಿಸ ಮುಂದೆ ಒಡ್ಡುವದು ಇದೇ ಸಾಹಚರ್ಯ ನಿಯಮವು.** ಇದರಲ್ಲಿ ಮುಖ್ಯವಾಗಿ ಎರಡು ಪ್ರಕಾರಗಳಿವೆ ಎಂದು ಹೇಳಬಹುದು ಒಂದೇ ಸ್ಥಳದಲ್ಲಿ ಅನುಭವಕ್ಕೆ ಬಂದ ಇಂದ್ರಿಯ ಸಂವೇದನೆಗಳು ಒಂದನ್ನೊಂದು ಸೂಚಿಸುವವು. ಒಂದು ಪುಸ್ತಕವನ್ನು ನೋಡಿದರೆ ಆಲ್ಲಲ್ಲಿಯ ಕಾಗದದ ಪುಟಗಳು, ಅಕ್ಷರದ ಟಾಯಿಪ ಅವರೊಳಗಿನ ಚಿತ್ರಗಳು ಮುಂತಾದವುಗಳು ನೆನಪಾಗುವವು. ಒಂದು ಗಿಡವನ್ನು ನೋಡಿದಾಗ ಅದರಲ್ಲಿ ಬಿಡುವ ಹೂ ಕಾಯಿ

ಗಳು ಸ್ಮೃತಿಗೋಚರವಾಗುವವು. ಒಂದು ಮನೆಯನ್ನು ನೋಡಿದರೆ ಅದರಲ್ಲಿಯ ಭಾಗಗಳು, ಪಡಸಾಲೆ ನಡುಮನೆ, ಹತ್ತಲು ಅಥವಾ ಬಾಗಿಲ, ಗೋಡೆಗಳು ನುಂತಾದವು ಸೂಚಿತವಾಗುವವು. ಪಾಠ ಮಾಡಿದ ಸಂಗತಿಗಳು ಪುಸ್ತಕದ ಇಂಥದೊಂದು ಪುಟದ ಇಂಥಲ್ಲಿಯೇ ಇದ್ದುದು ನೆನಪಿಗೆ ಬರುವದು. ದೇಶದ ನಕಾಶವನ್ನು ಲಕ್ಷಗೊಟ್ಟು ನೋಡಿದ್ದರೆ ಯಾವ ಪೊಳೆ ಹಳ್ಳಗಳು, ಪ್ರಾಂತಗಳು, ಮುಖ್ಯ ಪಟ್ಟಣಗಳು ಎಲ್ಲೆಲ್ಲಿ ಇವೆ ಎಂಬುದು ಸ್ಮರಣೆಗೆ ಬರುವದು. ಈ ಸಾಹಚರ್ಯದ ಪ್ರಕಾರವನ್ನು ಸ್ಥಳಸಾಮೀಪ್ಯದ ಸಾಹಚರ್ಯವೆಂದು ಕರೆಯಬಹುದು. ನೀವು ನೋಡಿದ ಒಂದು ಊರನ್ನು ನೆನಪು ಮಾಡಿಕೊಂಡರೆ ಆ ಊರಲ್ಲಿ ಇಂಥವರ ಮನೆ ಎಲ್ಲಿದೆ, ಸಾಲೆ, ಮಠ' ಕಚೇರಿ ಎಲ್ಲೆಲ್ಲಿ ಇವೆ ಎಂಬುದು ಥಟ್ಟನೆ ಹೊಳೆಯುವದಲ್ಲವೇ ? ಒಂದು ಪ್ರಾಣಿಯ ಶರೀರದ ಭಾಗಗಳು ಯಾವವು, ಅವು ಒಂದಕ್ಕೊಂದು ಹೇಗೆ ಕೂಡಿಕೊಂಡಿವೆ, ಅವುಗಳ ರಚನೆಯು ಹೇಗಿವೆ ಇತ್ಯಾದಿ ಸಂಗತಿಗಳು ಸರಿಯಾಗಿ ನೆನಪಾಗ ಬೇಕಾದರೆ ಆ ಪ್ರಾಣಿಯನ್ನು ಇಡಿಯಾಗಿಯೂ ಬಿಡಿಯಾಗಿಯೂ ಲಕ್ಷಪೂರ್ವಕವಾಗಿ ನೋಡಿರಬೇಕು. ಪ್ರತ್ಯಕ್ಷ ಅನುಭವದ ತಳಹದಿ ಇಲ್ಲದೆ ಸಾಹಚರ್ಯವು ಕೆಲಸ ಮಾಡಲಾರದು. ಅಂತೂ ಎರಡು ವಿಷಯಗಳು ಒಂದೇ ಸ್ಥಳದಲ್ಲಿ ಅನುಭವಕ್ಕೆ ಬಂದಿದ್ದರೆ ಅವುಗಳಲ್ಲಿ ಒಂದನ್ನು ಪ್ರತ್ಯಕ್ಷವಾಗಿ ಅನುಭವಿಸಿದಾಗ ಆಗಲಿ ನೆನಪಾದಾಗ ಆಗಲಿ ಇನ್ನೊಂದು ಒನ್ಮೆಲೇ ನೆನಪಾಗುವದು. ಊರಹೊರಗೆ ಅಡ್ಡಾಡಲಿಕ್ಕೆ ಹೋದಾಗ ಒಂದು ಸ್ಥಳದಲ್ಲಿ ಹಾವನ್ನು ಕಂಡಿದ್ದರೆ ಮರು ದಿವಸ ಅಲ್ಲಿಗೆ ಹೋದಾಗ ಆ ಹಾವು ಕೂಡಲೆ ನೆನಪಾಗುವದು. ಇದರಂತೆಯೇ ಏಕಕಾಲಕ್ಕೆ ಎರಡು ಸಂಗತಿಗಳು ಘಟಿಸಿದ್ದಾದರೆ ಅವು ಸಾಹಚರ್ಯದಿಂದ ಸಂಬಂಧವಾಗುವವು — ಎಂದರೆ ಅವುಗಳಲ್ಲಿ ಮಾತ್ರ ಪ್ರತ್ಯಕ್ಷವಾಗಿದ್ದರೆ ಅಥವಾ ಸ್ಮರಣೆಗೆ ಬಂದರೆ ಅದರ ಸಮಕಾಲೀನರಾದ ಬೇರೊಂದು ಸಂಗತಿಯೂ ಕೂಡಲೇ ಧ್ಯಾನಕ್ಕೆ ಬರುವದು. ಹಾಸಿಗೆಯಲ್ಲಿ ರಾತ್ರಿ ನುಲಗಿದವನು ಕೋಳಿ ಕೂಗುವದನ್ನು ಕೇಳಿ ಬೆಳಗಾಗಿರಬೇಕೆಂದು ತಿಳಿಯುವನು. ಕೋಳಿಯ ಕೂಗಿಗೂ ಪಕ್ಷಿಗಳ ಕಿಲಿ ಕಿಲಿ ನಿನಾದಕ್ಕೂ ನಸುಕಿನ ವೇಳೆಗೂ ಒಂದು ಸಾಹಚರ್ಯವು ಉಂಟಾಗುವದೇ ಅದಕ್ಕೆ ಕಾರಣ. ಹುಬ್ಬಳ್ಳಿಯ ರೇಲ್ವೆ ವರ್ಕ್ ಶಾಪಿನ ಬೂಂಗಾ' ವನ್ನು ಕೇಳಿ ಜನರು ಕೆಲಸಕ್ಕೆ ಹೊರಡುವ ಗಡಿಬಿಡಿಯಲ್ಲಿ ಕಾಣುವರು. ಇಂಥದೊಂದು ದಿನ ಯಾವದಾದರೊಂದು ಆನಂದದ ಅಥವಾ ದುಃಖದ ಸಂಗತಿಯು ನಡೆದಿದ್ದರೆ ಆ ದಿನವು ಪುನಃ ಬಂದಾಗ ಹಿಂದಿನ ಘಟನೆಯ ನೆನಪಾಗುವದು. ಇದು ಸಾಹಚರ್ಯದ ಎರಡನೆಯ ನಿಯಮವು; ಇದಕ್ಕೆ ಕಾಲಸಾಮೀಪ್ಯದ ನಿಯಮವೆಂಬ ಹೆಸರು. ಏಕಕಾಲಕ್ಕೆ ಎಂದರೆ ಅದೇ ಕ್ಷಣಕ್ಕೆ ಎಂದರ್ಥವಲ್ಲ; ಒಂದು ಅನುಪೂರ್ವಿಯಿಂದ ಒಂದರೊಂದನ್ನು ಅನುಭವಿಸಿದ್ದರಾಯಿತು. ಉದಾ: ಪಾಠಮಾಡಿದ ಕವಿತೆಯ ನುಡಿಗಳು ಅಥವಾ ವರ್ಣಮಾಲೆಯ ಅಕ್ಷರಗಳು "ಒಂದು ದಿನ ಧ್ರುವ" ಎಂಬುದನ್ನು ಅಂದ-ಕೂಡಲೆ "ತಾಯಿ ಬಳಿಯುಲಿ" ಎಂಬ ಮಾತುಗಳು ನೆನಪಾಗುವದಿಲ್ಲವೇ ? "ಕ, ಖ, ಗ, ಘ, ಙ," ಎಂದ ಕೂಡಲೇ "ಚ, ಛ, ಜ, ..." ಇತ್ಯಾದಿ ವರ್ಣಗಳನಾಲಿಗೆಯ ತುದಿಗೆ ಬರವವು. ನಾಲ್ಕು ಜನರು ಹರಟೆಗೆ ಕೂತಾಗ ಪ್ರತಿಯೊಬ್ಬನ ಅನುಭವವೂ ವ್ಯಕ್ತಿವೈಶಿಷ್ಟ್ಯಕ್ಕೆ ಅನುಸರಿಸಿ ಭಿನ್ನ ಭಿನ್ನವಾಗಿರುವದರಿಂದ ಯಾವದೊಂದು ವಿಷಯವು ಹೊರಟಾಗ ಒಬ್ಬೊಬ್ಬನು ತನಗೆ ನೆನಪಿನ ಒಂದೊಂದು ಸಂಗತಿಯನ್ನು ನಿರೂಪಿಸುವನು. ಹರಟೆಯಲ್ಲಿ ಹೀಗೆ ವಿಷಯಂತರವಾಗುವದು ಅಪರೂಪವಲ್ಲ. ಅದು ಸಾಹಚರ್ಯದ ಪರಿಣಾಮವೆ. ಇನ್ನು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುವಾಗ ಯಾವದೊಂದು ವಿಷಯದ ಜ್ಞಾನ ಮಾಡಿಕೊಳ್ಳುವಾಗ ಆ ವಿಷಯವ ಬೇರೆ ಬೇರೆ ಭಾಗಗಳನ್ನು ಒಂದು ಸುಸಂಬದ್ಧವಾದ ರೀತಿಯಿಂದ ಶಿಕ್ಷಕರು ಹೇಳುವರು; ಮತ್ತು ಆ ಭಾಗಗಳನ್ನು ಒಂದು ಕ್ರಮದಿಂದ ಹೇಳುವರು. ಪುಸ್ತಕದ ಬೇರೆ ಪ್ರಕಾರಗಳಸಂಬಂಧ (ಸ್ಥಳ ಸಾಮೀಪ್ಯ) ಪಾಠಗಳ ಪೂರ್ವಾಪರ ಸಂಬಂಧ (ಕಾಲ ಸಾಮೀಪ್ಯ) ಈ ನಿಮಿತ್ಯದಿಂದ ಅವು ಸುಸ್ನಿಗ್ಧವಾಗಿಯೂ ಕೂಡಿಕೊಂಡಿರುವವು. ಆದ್ದರಿಂದ ಆ ವಿಷಯದ ಸುಸಂಗತ-

ವಾದ ಜ್ಞಾನವಾಗುವದು, ಕಲಿತ ಯಾವ ಸಂಗತಿಯಾನರೂ ಯೋಗ್ಯ ಕಾಲಕ್ಕೆ ನೆನಪಾಗುವದು, ಹೀಗೆ ವಿಷಯದ ಬೇರೆ ಬೇರೆ ಭಾಗಗಳ ಪರಸ್ಪರ ಸಂಬಂಧವನ್ನು ತೋರಿಸಿ ಕೊಡುವದಲ್ಲದೆ ಅವುಗಳ ಸಾಮ್ಯ-ವೈಷಮ್ಯ, ಕಾರ್ಯಕಾರಣಭಾವ ಇವುಗಳನ್ನು ಸಹ ಉತ್ತಮ ಶಿಕ್ಷಕರು ಹುಡುಗರ ಗಮನಕ್ಕೆ ತರುವರು. ಹೀಗೆ ಒಂದು ವಸ್ತುವಿನಿಂದ ಅದಕ್ಕೆ ಸ್ವಾಭಾವಿಕವಾಗಿ ಸಂಬಂಧಪಟ್ಟಿರುವ — ಸಾದೃಶ್ಯ ಮೂಲಕವಾಗಿಯಾಗಲಿ, ವೈಷಮ್ಯ ಮೂಲಕವಾಗಲಿ ಕಾರ್ಯಕಾರಣದಿಂದಾಗಲಿ, ಅಂಶಾಂಶಿಭಾವದಿಂದಾಗಲಿ, ಅಧಾರಾಧೇಯ ಸಂಬಂಧದಿಂದಾಗಲಿ, – ಹೀಗೆ ಯಾವದಾದರೊಂದು ಬಗೆಯ ಸ್ವಾಭಾವಿಕ ಸಂಬಂಧವುಳ್ಳ ಬೇರೊಂದು ಸಂಗತಿಯು ಲಕ್ಷ್ಯಕ್ಕೆ ಬರವದು. ಯಾವದೆ ವಿಷಯವನ್ನು ಕಲಿಸುವಾಗ ಅಗಲಿ ಅದರಲ್ಲಿಯ ಬೇರೆ ಬೇರೆ ಭಾಗಗಳ ಪರಸ್ಪರ ಸಂಬಂಧವನ್ನು ವಿದ್ಯಾರ್ಥಿಗಳ ಗಮನಕ್ಕೆ ಆಕರ್ಷಕವಾಗಿ ತರುವ ಶಿಕ್ಷಕನೇ ಉತ್ತಮ ಶಿಕ್ಷಕನು. ಸಮಾಪ್ತ

★

ಲೇಖಕರಿಗೆ ವಿನಂತಿ

ಅಭ್ಯಾಸ ಪತ್ರಿಕೆಗೆ ಸಂಬಂಧಿಸಿದ, ಕಲಿಸುವ ಪದ್ಧತಿಗಳನ್ನು ವಿಶದೀಕರಿಸುವ, ಶಿಕ್ಷಣ ಕ್ಷೇತ್ರದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿ ಅವುಗಳನ್ನು ಕುರಿತು ಚರ್ಚಿಸುವ ಪ್ರಾಥಮಿಕ ಶಿಕ್ಷಣ ಕ್ಷೇತ್ರಕ್ಕೆ ಅನ್ವಯಿಸುವ ವಿಷಯಗಳನ್ನು ಕುರಿತು ಬರೆದ ಬರಹಗಳನ್ನು ಪ್ರಕಟನೆಗಾಗಿ ಕಳಿಸಬೇಕೆಂದು ಕೋರಿಕೆ. ಬರಹವು ಮುದ್ರಣದ ಎರಡುಇಲ್ಲಿವೆ ಮೂರು ಪುಟಗಳನ್ನು ಮೀರದಷ್ಟಿದ್ದರೆ ಹೆಚ್ಚು ಒಳಿತು.

ಪ್ರಧಾನ ಸಂಪಾದಕರು.

* * * * *

ವ್ಯಾವಹಾರಿಕ ಗಣಿತವು

(ಭಾಗ ೧, ೨, ೩)

೫, ೬, ೭ನೆಯ ಇಯತ್ತೆಯವರಿಗಾಗಿ

"ಅನೇಕ ವರ್ಷಗಳಿಂದ ನನಗೆ ಚೆನ್ನಾಗಿ ಪರಿಚಿತರಾದ ಶ್ರೀಮಾನ್ ಅನಂತರಾವ ಬೋತೆಯವರ "ವ್ಯಾವಹಾರಿಕ ಗಣಿತ"ದ ಎಲ್ಲ ಭಾಗಗಳನ್ನು ನಾನು ಕೂಲಂಕುಷವಾಗಿ ಓದಿ ನೋಡಿದೆನು. ಈ ಪುಸ್ತಕವು ಅವರ ೩೫ ವರ್ಷಗಳ ಶಿಕ್ಷಣಕಾರ್ಯದ ಮತ್ತು ಅನುಭವದ ಪರಿಪಕ್ವವಾದ ಫಲವಾಗಿರುವದೆಂದು ಹೇಳಲಿಕ್ಕೆ ನನಗೆ ಸಂತೋಷವಾಗುತ್ತದೆ. ಇದು ಒಳ್ಳೆಯ ಯೋಜನೆಯ ತಳಹದಿಯ ಮೇಲೆ ರಚಿಸಿದ್ದಾಗಿದೆ; ಮತ್ತು ಹೊಸ ಅಭ್ಯಾಸಪತ್ರಿಕೆಯಂತೆ ಎಲ್ಲ ಅಂಶಗಳನ್ನು ಒಳಗೊಂಡಿದೆ. ಅಲ್ಲದೆ ಸರಿಯಾಗಿ ಅನುಕ್ರಮದಲ್ಲಿ ಕೊಡಲಾಗಿರುವ, ಉತ್ತಮವಾಗಿ ಆರಿಸಿದ ನಿತ್ಯಜೀವದಿಂದ ಆಯ್ದುಕೊಂಡ ಉದಾಹರಣೆಗಳನ್ನು ಕೊಡಲಾಗಿದೆ. ಇದು ಇಂದು ಯೋಜನೆಯ ತಳಹದಿಯ ಮೇಲೆ ರಚಿಸಲಾದ ಪಠ್ಯಪುಸ್ತಕಗಳ ವಿರಲತೆಯಿಂದ ಉಂಟಾಗಿರುವ ಪ್ರತಿಕೂಲತೆಯನ್ನು ಹೋಗಲಾಡಿಸಿ ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿ ಕಂಡುಬರುವದರಲ್ಲಿ ಸಂಶಯವಿಲ್ಲ." ಎಂದು ಎಸ್. ಟಿ. ಕಾಲೇಜಿನ ಗಣಿತ ವಿಷಯದ ಪ್ರಾಧ್ಯಾಪಕರಾದ ಶ್ರೀಮಾನ್ **ಪಿ. ಎಸ್. ಮುಳಗಾವಕರರು** M. A., B. T., M. Ed. ಇವರು ಹೇಳುತ್ತಾರೆ.

ಪ್ರತಿಗಳು ದೊರೆಯುವ ಸ್ಥಳ : ಎ. ಬ್ಹಿ. ಬೋತೆ ಫುಲಬಾಗ ೨೨೪/೪೭ ಬೆಳಗಾವಿ

ಭೂಗೋಲವನ್ನು ಕಲಿಸುವ ಬಗೆಗಳು

ಲೇಖಾಂಕ (೫)

ಲೇಖಕರು:— ಶ್ರೀ. ಬ. ಮು. ಶಿಂತ್ರಿ. ಬಿ. ಎ. ಬಿ. ಟಿ.
ನಿವೃತ್ತ-ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ದಕ್ಷಿಣ ಭಾಗ, ಧಾರವಾಡ.

ವಿಷಯಾನುಬಂಧ

ನಮ್ಮ ಅಭ್ಯಾಸ ಪತ್ರಿಕೆಯೊಳಗಿನ ವಿಷಯಗಳು ಬೇರೆ ಬೇರೆಯಾಗಿದ್ದರೂ ಅವುಗಳ ಜ್ಞಾನವುವ ಮಾತ್ರ ಏಕರೂಪವಾಗಿದೆ. ವಿವಿಧತೆಯಲ್ಲಿ ಏಕರೂಪತೆಯಿಬೆ. ವಿಷಯಗಳು ಬೇರೆ ಬೇರೆಯಾಗಿದ್ದಂತೆ ನಮ್ಮ ಜ್ಞಾನದಲ್ಲಿ ಇಲ್ಲಪೆ ತಲೆಯಲ್ಲಿ ಭೂಗೋಲದ ಪೆಟ್ಟಗೆ ಬೇರೆ, ಇತಿಹಾಸದ ಪೆಟ್ಟಿಗೆ ಬೇರೆ, ತಾಯ್ನುಡಿಯ ಪೆಟ್ಟಿಗೆ ಬೇರೆ ಹೀಗೇನೂ ಇರುವದಿಲ್ಲ. ನಮಗೆ ದೇವರು ದಯಪಾಲಿಸಿದ ಪೆಟ್ಟಿಗೆಯು ಒಂದೇ ಒಂದು ತಲೆಯು. ಅದು ಎಲ್ಲ ಜ್ಞಾನದ ಆಗರವು. ಜ್ಞಾನವು ವಿಷಯಗಳ ಪ್ರಕಾರ ತುಂಡು ತುಂಡಾಗಿರದೆ ಅಖಂಡವಾಗಿದೆ. ಇದನ್ನನುಲಕ್ಷಿಸಿ ಹೊಸ ಶಿಕ್ಷಣದಲ್ಲಿ ವಿಷಯಗಳನ್ನು ಒಂದಕ್ಕೊಂದು ಸಾಸು ಹೊಕ್ಕಾಗುವಂತೆ ಹೆಣೆದು · ಕಲಿಸಲುಪಕ್ರಮಿಸಿದ್ದಾರೆ. ಇದಕ್ಕೆ ವಿಷಯಾನು ಬಂಧನವೆನ್ನುವರು. ಇದಕ್ಕೆ ಸಂಬಂಧೀಕರಣವೆಂದೂ ಕರೆಯುತ್ತಾರೆ. ಇದರಿಂದಾಗುವ ಮುಖ್ಯ ಲಾಭವೆಂದರೆ ಮಕ್ಕಳಿಗೆ ವಿಷಯಗಳ ಪರಿಪೂರ್ಣ ಜ್ಞಾನವು ಸಿಕ್ಕುತ್ತಿದೆ. ಬೇರೆ ಬೇರೆ ವಿಷಯಗಳಲ್ಲಿ ಮಕ್ಕಳಿಗೆ ಗೊತ್ತಿದ್ದ ಸಂಗತಿಗಳ ಜ್ಞಾನದ ಬಲದಿಂದ ವ್ಯಜಲಿತ ವಿಷಯದೊಳಗಿನ ಹೊಸ ಸಂಗತಿಯ ಜ್ಞಾನವನ್ನು ಸಂಪಾದಿಸಲು ಸಹಾಯವಾಗುತ್ತಿದೆ. ಭೂಗೋಲಕ್ಕೂ ಇತಿಹಾಸಕ್ಕೂ ಇಂತಹ ನಿಕಟ ಸಂಬಂಧವಿದೆಯೆಂಬುದು ನೇಸರನ ಬೆಳಕಿನಷ್ಟು ಸ್ಪಷ್ಟವಿದೆ. ಇತಿಹಾಸದಲ್ಲಿ ನಾವೆಲ್ಲರೂ ಉಪಯೋಗಿಸುವ ನಕಾಶೆಗ್ಲೋಬುಗಳು ಭೌಗೋಲಿಕ ಉಪಕರಣಗಳಲ್ಲವೇ ? ಭೂಗೋಲವನ್ನು ನಾಟಕದ ರಂಗಸ್ಥಳವೆಂದು ಕಲ್ಪಿಸಿದರೆ, ಅದರ ಮೇಲೆ ಆಡಿ ಹೋದ ಪಾತ್ರಗಳಿಂದರೆ ಐತಿಹಾಸಿಕ ಸ್ತ್ರೀಪುರುಷರಲ್ಲವೇ ? ಇತಿಹಾಸದಲ್ಲಿಯ ಎಷ್ಟೋ ಸಂಗತಿಗಳ ಕಾರಣಗಳು ಭೌಗೋಲಿಕವಿವೆ. ಉದಾಹರಣಾರ್ಥವಾಗಿ, ಆರ್ಯರು ಭಾರತದಲ್ಲಿ ವಾಯವ್ಯ ಮಾರ್ಗದಿಂದ ನುಸುಳಿ ಮೊದಲು ಪಂಜಾಬದಲ್ಲಿ ಆಮೇಲೆ ಗಂಗಾ-ಯಮುನಾ ನದಿಗಳಗುಂಟ ನೆಲಸಿದ್ದು, ಮಾವಳಿ ಜನರು ಮತ್ತು ಗೂರ್ಖರು ಹುಟ್ಟಾ ಶೂರರೂ ಗಟ್ಟಿಗರೂ ಇದ್ದದ್ದು, ಪಾಣಿಪತ್ತ (ಕುರುಕ್ಷೇತ್ರ)ವು ಪುರಾಣಗಳ ಕಾಲದಿಂದ ಯುದ್ಧ ಮಾಡಲು ರಣರಂಗದ ಸಲುವಾಗಿ ಪ್ರಸಿದ್ಧವಾಗಿದ್ದುದು, ಮರಾಟರು ಗುಡ್ಡಗಳ ಶಿಖರಗಳ ಮೇಲೆ ಕೋಟೆಗಳನ್ನು ಕಟ್ಟುತ್ತಿದ್ದುದು, ದಿಲ್ಲಿಯು ರಾಜಧಾನಿಯಾಗಿದ್ದುದು, ಇವುಗಳಿಗೆಲ್ಲ ಕಾರಣಗಳು ಭೌಗೋಲಿಕವಿವೆಯಲ್ಲವೆ ? ಭೂಗೋಲಕ್ಕೂ ಇತಿಹಾಸಕ್ಕೂ ಇರುವ ನಿಕಟ ಸಂಬಂಧವನ್ನು ತೋರಿಸಲು ಇಂತಹ ಇನ್ನೂ ಎಷ್ಟೋ ಉದಾಹರಣೆಗಳನ್ನು ಕೊಡಬಹುದಾಗಿದೆ. ಇಂತಹ ಸಂದರ್ಭಗಳಲ್ಲಿ ಒಳಗೆ ಹುದುಗಿಕೊಂಡಿದ್ದ ಸಂಬಂಧವನ್ನು ಹೊರಗೆ ಬೆಳಕಿಗೆ ಎಳೆದು ತಂದು ಮಕ್ಕಳಿಗೆ ತೋರಿಸಿ ಕೊಡಲು ಶಿಕ್ಷಕ-ಶಿಕ್ಷಕಿಯರಿಗೆ ಶಕ್ಯವಿದೆ. ಒಂದು ವೇಳೆ ಶಿಕ್ಷಕ-ಶಿಕ್ಷಕಿಯರು ಈ ಪ್ರಕಾರ ಮಾಡಿ ತೋರಿಸಿದರೆ, ಆಯಾ ಸಂಗತಿಗಳ ಜ್ಞಾನವು ಮಕ್ಕಳಿಗೆ ಎಷ್ಟು ಸುಲಭವಾಗಿಯೂ ಸ್ಪಷ್ಟವಾಗಿಯೂ ಚಿತ್ತಾಕರ್ಷಕವಾಗಿಯೂ ಶಾಶ್ವತವಾದುದಾಗಿಯೂ, ಆಗುವದೆಂಬುದನ್ನು ಎಷ್ಟು ಒತ್ತಿ ಹೇಳಿದರೂ ಕಡಿಮೆಯೇ ಎಂದು ನಮ್ಮ ಭಾವನೆ. ಆದ-

ರಂತಯೇ ಭೂಗೋಲಕ್ಕೂ ವಿಜ್ಞಾನಕ್ಕೂ ವಿಶೇಷ ಸಂಬಂಧವಿದೆ. ಸಾಮಾನ್ಯ ವಿಜ್ಞಾನಕ್ಕೆ ಭೂಗೋಲವೇ ಆಧಾರ ಸ್ತಂಭವು. ವಿಜ್ಞಾನ (Science)ವಂತೂ ಪೃಥ್ವಿಯಲ್ಲಡಗಿಕೊಂಡಿದ್ದ ಅಟಂ (ಅಣು) ಮೊದಲಾದ ಶಕ್ತಿಯುತ ವಸ್ತುಗಳನ್ನು ಶೋಧಿಸಿದೆ, ಇನ್ನೂ ಹೊಸ ಹೊಸ ಶಕ್ತಿಯುತ ವಸ್ತುಗಳನ್ನು ಶೋಧಿಸುವದರಲ್ಲಿದೆ. ಇದರಂತೆ ಭೂಗೋಲಕ್ಕೂ ಕೈಕೆಲಸಕ್ಕೂ ಭೂಗೋಲಕ್ಕೂ ಚಿತ್ರಕಲೆಗೂ, ಭೂಗೋಲಕ್ಕೂ ತಾಯ್ನುಡಿಗೂ ವಿಷಯಾನುಬಂಧವಿರುತ್ತದೆ. ಇವೆಲ್ಲವುಗಳ ವಿಷಯಕ್ಕೆ ಇಲ್ಲಿ ಬರೆಯುತ್ತ ಕೂತರೆ, ಅದು ವಿಷಯಾಂತರವಾಗುವದೆಂಬ ಭೀತಿಯು ಬಾಧಿಸಬಹುದಾಗಿದೆ. ಆದುದರಿಂದ ಇದನ್ನಷ್ಟಕ್ಕೇ ವಿರಮಿಸುವದೊಳಿತು. ಈ ಸಂದರ್ಭದಲ್ಲಿ ಶಿಕ್ಷಕ-ಶಿಕ್ಷಕಿಯರಿಗೆ ಎಚ್ಚರಿಕೆಯೊಂದನ್ನು ಮಾತ್ರ ಕೊಡುವದು ವಿಹಿತವೆಂದು ನಮ್ಮ ಭಾವನೆ. ವಿಷಯಾನುಬಂಧ ಮಾಡುವ ಭರದಲ್ಲಿ ಮುಖ್ಯ ವಿಷಯವನ್ನೇ ಮರೆತು ಬಿಡುವ ಸಂಭವ ಹೆಚ್ಚು. ಆದುದರಿಂದ ವಿಶೇಷ ದೀರ್ಘಕ್ಕೆ ಹೋಗದೆ ಊಟದಲ್ಲಿ ಕೊಂಚು ಉಪ್ಪಿನಕಾಯಿಯನ್ನು ನಂಜಿ ಕೊಂಡಂತೆ ಪಾಠವು ರುಚಿಕಟ್ಟಾಗಲು, ಉಪಯುಕ್ತವಾಗಲು ವಿಷಯಾನುಬಂಧವು ಎಷ್ಟು ಅವಶ್ಯವೋ ಅಷ್ಟೇ ಅದರ ಉಪಯೋಗವನ್ನು ತಕ್ಕೊಳ್ಳುವದು ಲೇಸು.

ಭೂಗೋಲವೂ ಮೂಲ ಶಿಕ್ಷಣವೂ

ಶೈಕ್ಷಣಿಕ ಕ್ಷೇತ್ರದಲ್ಲಿ ಹೊಸ ಹೊಸ ವಿಚಾರಗಳು ಮೇಲಿಂದ ಮೇಲೆ ತಲೆದೋರುತ್ತಿರುವದುಂಟು. ಆ ವಿಚಾರಗಳನ್ನು ಶಿಕ್ಷಣತಜ್ಞರು ಪ್ರಯೋಗ ಶಾಲೆಗಳಲ್ಲಿ ಪ್ರಯೋಗ ಮಾಡಿ ನೋಡುತ್ತಾರೆ. ಪ್ರಯೋಗದಲ್ಲಿ ಹೊರಟ ಸಿದ್ಧಾಂತಗಳನ್ನು ಪರಿಶೀಲನೆ ಮಾಡಿ ನೋಡುವದುಂಟು. ಆ ಸಿದ್ಧಾಂತಗಳು ಎಲ್ಲರ ಮೆಚ್ಚುಗೆಗೆ ಪಾತ್ರವಾದವೆಂದರೆ, ಅವೇ ಹೊಸ ಪದ್ಧತಿಗಳಾಗಿ ಜಾರಿಯಲ್ಲಿಬರುವ ವಾಡಿಕೆಯಿದೆ. ಮೂಲ ಶಿಕ್ಷಣವು ಇಂತಹದೊಂದು ಹೊಸ ಪದ್ಧತಿಯು. ಇದಕ್ಕೆ 'ನಯಿ ತಾಲಿಮ' ಅಂದರೆ ಹೊಸ ಶಿಕ್ಷಣವೆಂದು ಹೆಸರಿದೆ. ಇದು ಮಗು ಪ್ರಧಾನ ಶಿಕ್ಷಣವು; ಅಂದರೆ ಮಗುವುಶಿಕ್ಷಣದ ಕೇಂದ್ರವೆಂದು ಗಾಂಧೀಜಿಯವರು ಸಾರಿದರು. ಮಗುವಿನ ಸರ್ವತೋಮುಖವಾದ ವಿಕಾಸವೇ ಶಿಕ್ಷಣದ ಗುರಿ ಇಲ್ಲಿಯವರೆಗಿನ ಶಿಕ್ಷಣವು ಜೀವನಕ್ಕೆ ಹೊಂದಿಕೆಯಾಗಲಿಲ್ಲ. ಇದು ಜೀವನಕ್ಕೆ ಹೊಂದಿಕೆಯಾಗಿದೆಯಾದುದರಿಂದ ಇದಕ್ಕೆ 'ಜೀವನ ಶಿಕ್ಷಣ' ಎಂದು ಕರೆಯುವದುಂಟು. ಯಾವದಾದರೊಂದು ಮೂಲ ಉದ್ಯೋಗವು ಶಿಕ್ಷಣದ ಮಾಧ್ಯಮವಾಗಿರುವದೇ ಮೂಲ ಶಿಕ್ಷಣವು. ಜೀವನದ ಮೂಲ ಬೇಡಿಕೆಗಳು ಮೂರು— ಅನ್ನ, ಅರಿವೆ, ಆಸರ. ಮಾನವನ ಈ ಮೂರು ಮೂಲ ಬೇಡಿಕೆಗಳಿಗನುಗುಣವಾಗಿ ಮೂರು ಮೂಲ ಉದ್ಯೋಗಗಳು ಈಗ ನಮ್ಮ ಮುಂಬಯಿ ರಾಜ್ಯದಲ್ಲಿ ಬಳಕೆಯಲ್ಲಿವೆ:— (೧) ಕೈದೋಟ—ಕೃಷಿಕರ್ಮ (೨) ನೂಲುವದು — ನೇಯುವದು, (೩) ಕಾಗದ ಮತ್ತು ರಟ್ಟಿನ ಕೆಲಸ—ಕಟ್ಟಿಗೆಯ ಕೆಲಸ, ಈ ಮೂರು ಮೂಲ ಉದ್ಯೋಗಗಳ ಮುಖಾಂತರ ಮಗುವಿನ ಶಿಕ್ಷಣವು ಸಾಗುವದು.

ಉದ್ಯೋಗವೆಂದರೆ ಅದೊಂದು ಉತ್ಪಾದಕ ಚಟುವಟಿಕೆಯಲ್ಲವೆ ? 'ಮಾಡುತ್ತ ಕಲಿ' ಎಂಬ ಮನಃಶಾಸ್ತ್ರದ ತತ್ವವು ಈ ಪದ್ಧತಿಯ ತಳಹದಿ. ಮಾಡುತ್ತ ಕಲಿತ ಅನುಭವವು ಶಿಕ್ಷಣ ಶಾಸ್ತ್ರದಲ್ಲಿ ಮಿಗಿಲಾದ ಜ್ಞಾನವು. ಅದರಂತಹ ಜ್ಞಾನವು ಬೇರೊಂದಿಲ್ಲ. ಈ ಮಾತನ್ನು ಮನಃ ಶಾಸ್ತ್ರವಂತೂ ತುಂಬಾ ಒಪ್ಪುತ್ತಿದೆ. ಸಂಬಂಧೀಕರಣವು ಈ ಪದ್ಧತಿಯ ಜೀವಾಳವು. ಮಗುವು ಕಲಿಯಬೇಕಾದ ಎಲ್ಲ ವಿಷಯಗಳನ್ನು ಮೂಲ ಉದ್ಯೋಗಕ್ಕೇನೇ ಅನುಬಂಧ ಮಾಡಿ ಕಲಿಸಬೇಕೆಂಬುದಿಲ್ಲ. ಈ ಪದ್ಧತಿಯು ಪ್ರಯೋಗಾವಸ್ಥೆಯಲ್ಲಿದ್ದಾಗ ಅದರಲ್ಲಿ ಎಷ್ಟೋ ಮಾರ್ಪಾಟುಗಳಾಗಿವೆ. ಪ್ರಯೋಗದ ಕಟ್ಟುನಿಟ್ಟುಗಳೊಳಗಿಂದಲೂ ನಿಯಮ-ನಿರ್ಬಂಧಗಳೊಳಗಿಂದಲೂ ಹಾಯ್ದು ಪರಿಷ್ಕರಣ ಹೊಂದಿ ಈಗಿನ ಮಟ್ಟಕ್ಕೆ ಬಂದು ಮುಟ್ಟಿದೆ.ಅದು ಎಷ್ಟೋ ಇಕ್ಕಟ್ಟು ಬಿಕ್ಕಟ್ಟುಗಳೊಳಗಿಂದಲೂ ಎಡರು-ತೊಡರುಗಳೊಳಗಿಂದಲೂ ಸಾರಾಗಿ ಬಂದಿದೆ. ಹೀಗಂದಾಕ್ಷಣಕ್ಕೆ ಈಗದು

ಪರಿಪೂರ್ಣಾವಸ್ಥೆಗೆ ಬಂದಿದೆಯೆಂದು ಮಾತ್ರ ತಿಳಿಯ ಕೂಡದು. ಯಾಕಂದರೆ, ಶಿಕ್ಷಣ ಶಾಸ್ತ್ರದಲ್ಲಿ ಹೊಸ ಹೊಸ ವಿಚಾರಗಳಿಗೂ ಸಿದ್ಧಾಂತಗಳಿಗೂ ಪದ್ಧತಿಗಳಿಗೂ ಕೊನೆ ಎಂಬುದಿಲ್ಲವಲ್ಲವೇ ? ಇರಲಿ, ಸಂಬಂಧೀಕರಣವು ಈಗ ತ್ರಿವೇಣೀ ಸಂಗಮದಂತೆ-ಮೂರು ತೆರನಾಗಿದೆ: — (೧) ಆರ್ಥಿಕ ಪರಿಸ್ಥಿತಿ (ಮೂಲ ಉದ್ಯೋಗದ ಚಟುವಟಿಕೆಗಳು), (೨) ನೈಸರ್ಗಿಕ ಪರಿಸ್ಥಿತಿ (ನಿಸರ್ಗವನ್ನು ನೀರಿಕ್ಷಿಸುವ ಚಟುವಟಿಕೆಗಳು), (೩) ಸಾಮಾಜಿಕ ಪರಿಸ್ಥಿತಿ (ಸಾಮಾಜಿಕ ಚಟುವಟಿಕೆಗಳು), ಇವುಗಳಲ್ಲಿ ಬೇಕಾದೊಂದು ಚಟುವಟಿಕೆಯನ್ನಿಟ್ಟುಕೊಂಡು ಪಾಠಗಳನ್ನು ಕೊಡಬಹುದು.

ಈ ಪದ್ಧತಿಯು ಈಗ ಪ್ರಯೋಗಾವಸ್ಥೆಯನ್ನು ದಾಟಿದೆ. ಧಾರವಾಡದ ಸುತ್ತು ಮುತ್ತಲಿನ ಸುಮಾರು ಹದಿನೆಂಟು ಪ್ರಯೋಗ ಶಾಲೆಗಳಲ್ಲಿ ಅದನ್ನು ಪ್ರಯೋಗ ಮಾಡಿ ನೋಡಿದ್ದಾಯಿತು- ಇಷ್ಟರಂತೆ ಮುಂಬಯಿ ರಾಜ್ಯದ ಬೇರೆ ಪ್ರಾದೇಶಿಕ ಭಾಗಗಳಾದ ಮಹಾರಾಷ್ಟ್ರ ಗುಜರಾಥಗಳಲ್ಲಿಯೂ ಪ್ರಯೋಗ ಮಾಡಿ ನೋಡಿದ್ದಾಗಿದೆ. ಫಲಕಾರಿಯೆಂದು ನಿರ್ಣಯವಾದುದರಿಂದ ಅದು ಬೇಗನೆ ಸಾರ್ವತ್ರಿಕವಾಗುವದರಲ್ಲಿದೆ. ಚಟುವಟಿಕೆಯು ಈ ಪದ್ಧತಿಯ ಮೂಲ ಮಂತ್ರವು. ಮೇಲೆ ಹೇಳಿದ ಮೂರು ತೆರನಾದ ಚಟುವಟಿಕೆಗಳಲ್ಲಿ ಬೇಕಾದೊಂದನ್ನಾಯ್ದುಕೊಂಡು ಪಾಠವನ್ನು ಕೊಡಬಹುದು- ಪ್ರಸ್ತುತ ವಿಷಯವಾದ ಭೂಗೋಲವನ್ನು ಮೇಲೆ ಹೇಳಿದ ಮೂರು ತೆರನಾದ ಚಟುವಟಿಕೆಗಳಲ್ಲಿ ಬೇಕಾದೊಂದಕ್ಕೆ ಹೊಂದಿಸಿ ಪಾಠಗಳನ್ನು ಕೊಡಲು ಶಕ್ಯವಿದೆ. ಈ ಸಂದರ್ಭದಲ್ಲಿ ಎಚ್ಚರಿಕೆಯೊಂದನ್ನು ವಹಿಸುವದು. ಮಾತ್ರ ಅತ್ಯಗತ್ಯವೆಂದು ನಮ್ಮ ನಂಬುಗೆ. ಸಂಬಂಧೀಕರಣವು ನೈಜವಾದದ್ದೂ ಸ್ವಾಭಾವಿಕವಾದದ್ದೂ ಇರಬೇಕು. ಅದು ತನ್ನಷ್ಟಕ್ಕೆ ತಾನೇ ಹೊರಹೊಮ್ಮಿ ಬಂದದ್ದಾಗಿರಬೇಕು; ಕೃತ್ರಿಮವಾದದ್ದಿರಬಾರದು ಅಂದರೆ ಜಗ್ಗಿ ತಂದದ್ದಿರಬಾರದು, ಜಗ್ಗಿ ತಂದು ಸಂಬಂಧೀಕರಣ ಮಾಡಿ ಕಲಿಸುವದಕ್ಕಿಂತ ಪಾಠವನ್ನು ಹಾಗೇಯೇ ಸ್ವತಂತ್ರವಾಗಿ ಕಲಿಸುವದೊಳಿತು. ಸಂಬಂಧೀಕರಣವು ಶಕ್ಯವಾಗದಿದ್ದರೆ, ಬೇರೆ ಮಾರ್ಗವೇ ಇಲ್ಲದಾಗಿದೆ. ಈ ಪದ್ಧತಿಯು ಮಗು ಪ್ರಧಾನವಿದೆಯಲ್ಲದೆ ವಿಧಾನಪ್ರಧಾನವಿಲ್ಲವೆಂಬುವದನ್ನು ಮರೆಯ ಕೂಡದು. ಹೇಗೆ ಕಲಿಸಿದರೆ ಮಗುವು ಬೇಗನೆ ಮತ್ತು ಸುಲಭವಾಗಿ-ಗ್ರಹಿಸುವದೋ ಅದೇ ಅತ್ಯುತ್ತಮವಾದ ಪದ್ಧತಿಯೆಂಬ ಮಾತನ್ನು ಶಿಕ್ಷಕ-ಶಿಕ್ಷಕಿಯರು ನೆನಪಿನಲ್ಲಿಟ್ಟರಾಯಿತು. ಇದುವೇ ಈಗಿನ ಹೊಸ ಶಿಕ್ಷಣದ ತಿರುಳು.

(ಮುಂದುವರಿಯುವದು)

ವಿಶೇಷ ಸುದ್ದಿ

★

ಪ್ರಾಥಮಿಕ ಶಿಕ್ಷಕರ ಪ್ರಮಾಣ ಪತ್ರ ಪರೀಕ್ಷೆಯಲ್ಲಿ ಯಾವದೇ ಶಿಕ್ಷಕ ವಿದ್ಯಾರ್ಥಿಯು 'ಸಾಂಘಿಕ ಜೀವನ ಮತ್ತು ಆರೋಗ್ಯ' ಈ ವಿಷಯದ ತರಬೇತಿಯಲ್ಲಿ ನಪಾಸಾದರೆ ಆ ಶಿಕ್ಷಕ-ವಿದ್ಯಾರ್ಥಿಯು ಕನಿಷ್ಟ ಒಂದು ಶೈಕ್ಷಣಿಕ ಅವಧಿಯ ವರೆಗೆ ಪುನಃ ಟ್ರೇನಿಂಗ ಕಾಲೇಜದಲ್ಲಿ ಹಾಜರಿರಬೇಕಾಗುವದು ಮತ್ತು ಕಾಲೇಜದ ಪ್ರಿನ್ಸಿಪಾಲರಿಗೆ ಸಮಾಧಾನಕರವಾಗುವಂತೆ ಆ ವಿಷಯದಲ್ಲಿ ತನ್ನ ಪ್ರಗತಿಯನ್ನು ತೋರಿಸಶಕ್ತನಾದ್ದು. ಅದರಂತೆ ಮೂಲೋದ್ಯೋಗಗಳ ವಾರ್ಷಿಕ ಕೆಲಸದಲ್ಲಿ ನಪಾಸಾದ ಶಿಕ್ಷಕ-ವಿದ್ಯಾರ್ಥಿಗಳು ಆರು ತಿಂಗಳಿಗೆ ಮೀರದಷ್ಟು ಅವಧಿಯ ವರೆಗೆ ಟ್ರೇನಿಂಗ ಕಾಲೇಜದಲ್ಲಿ ಹಾಜರಿರಬೇಕಾಗುವದು. ಹಾಜರಿರಬೇಕಾಗುವ ಅವಧಿಯನ್ನು ಪ್ರಾಥಮಿಕ ಶಿಕ್ಷಕರ ಪ್ರಮಾಣಪತ್ರ ಪರೀಕ್ಷೆಯ ಕೇಂದ್ರ ಸಮಿತಿಯವರು ನಿರ್ಧರಿಸುವರು.

ಕೇವಲ ಹಿಂದೀ ವಿಷಯದಲ್ಲಿ ನಪಾಸಾದ ಧಾರವಾಡ ವಿಭಾಗದ ಶಿಕ್ಷಕ-ವಿದ್ಯಾರ್ಥಿಗಳಿಗೆ ಆ ವಿಷಯದಲ್ಲಿ ಪುರವಣಿ ಪರೀಕ್ಷೆಯನ್ನು ತೆಗೆದುಕೊಳ್ಳಬೇಕೆಂದು ನಿರ್ಧರಿಸಲಾಗಿದೆಯೆಂದು ತಿಳಿದುಬಂದಿದೆ.

ಪ್ರಾಥಮಿಕ ಶಿಕ್ಷಣದ ಪ್ರಶ್ನಿಸಿದ ಮೇಲೆ (೨)

ಧಾರವಾಡಃ ಶ್ರೀಮತಿ ಎಸ್. ಸಿ. ದ್ಯಾಪೂರ, ಧಾರವಾಡ, ಶ್ರೀ. ಬಿ. ಎಸ್ ಗಣಾಚಾರಿ ವಿಜಾಪೂರ, ಶ್ರೀ. ಎಸ್ .ಡಿ. ಇಂಚಲ, ಬೆಳಗಾಂವ ಆವರು ಪ್ರಾದೇಶಿಕ ಸಾಮಾಜಿಕ ಶಿಕ್ಷಣ ಸಮಿತಿ (ಬೆಳಗಾಂವಿ) ಯ ಸದಸ್ಯರೆಂದು ನಿಯಮಿಸಲ್ಪಟ್ಟಿದ್ದಾರೆ.

ಮಳಗಿಃ ಫುಢ್ ಪ್ರೊಡಕ್ಶನ್ ಕಮೀಟಿಯವರು ಶಾಲೆಯ ವಾಚನಾಲಯಕ್ಕೆ ೧೫೦ ರೂಪಾಯಿಗಳನ್ನು ಇನಾಮಾಗಿ ಕೊಟ್ಟರು ಮತ್ತು ಶ್ರೀ. ಎಸ್ ಆರ್ ನಾಡಿಗೇರ ಆವರು ನಕಾಶಗಳಿಗಾಗಿ ೧೦ ರೂಪಾಯಿಗಳನ್ನು ಕಾಣಿಕೆಯಾಗಿ ಕೊಟ್ಟರು.

ಮುಮದಾಪೂರ (ವಿಜಾಪುರ), ೨೨-೭- ೧೯೫೨ಃ—

ಇಂದು ಈ ಊರ ಶಾಲೆಯಲ್ಲಿ ಗ್ರುಪ ಶಿಕ್ಷಕರ ಸಮ್ಮೇಲನವು ಜರುಗಿತು. ಶ್ರೀ. ಕೆ. ಯು. ಕುಲಕರ್ಣಿ- ಅಧ್ಯಕ್ಷರಾಗಿದ್ದರು, ಮಾದರಿ ಪಾಠಗಳು, ಸಂಭಾಷಣೆ, ಬೀಟ ಆಫೀಸರಾದ ಶ್ರೀ. ಜೆ. ಬ. ಪಾವಟೆ ಆವರ ಭಾಷಣ, ಬಾಲಕರ ವ್ಯಾಯಾಮ ಪ್ರದರ್ಶನಗಳು ಜರುಗಿದವು.

ಮುಂಡಗೋಡಃ— ದಿನಾಂಕ ೨೨-೭-೧೯೫೨ ನೆಯ ರವಿವಾರ ಈ ತಾಲೂಕಿನ ಶಿಕ್ಷಕರ ಶಿಕ್ಷಣ ಸಮ್ಮೇಲನವು ಮುಂಡಗೋಡ ಕನ್ನಡ ಶಾಲೆಯಲ್ಲಿ ಶ್ರೀ. ಜೆ. ಡಿ. ಮಿರೀಕರ ಆವರ ಹಿರಿಯತನದಲ್ಲಿ ನೇರವೇರಿತು.

ಧಾರವಾಡಃ— ದಿನಾಂಕ ೨೯-೫-೧೯೫೨ ನೆಯ ಗುರುವಾರ ದಿವಸ, ಧಾರವಾಡದ ಮುನಿಸಿಪಲ್ ಇನ್-ಘಂಟ ಮಾಡೆಲ್ ಸ್ಕೂಲಿನ ದೊಡ್ಡ ಕೋಣೆಯಲ್ಲಿ ಧಾರವಾಡದಲ್ಲಿಯ ಯಾವತ್ತೂ ಪ್ರಾಥಮಿಕ ಶಿಕ್ಷಕ ಹಾಗು ಶಿಕ್ಷಿಕೆಯರನ್ನು ಕೂಡಿಸಿ, ಧಾರವಾಡ ಜಿಲ್ಲೆಯ ಡೆಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಶೀ. ಎ. ಎಚ್. ದಳವಾಯಿಯವರು ಮುಂಬೈ ಸರಕಾರದವರು ಕೆಳಗಿನ ನಾಲ್ಕು ವರ್ಗಗಳ ಬಗ್ಗೆ ಪಠ್ಯ ಪುಸ್ತಕಗಳನ್ನು ರಚಿಸಿದ ಉದ್ದೇಶ, ಹಿನ್ನೆಲೆ, ಔಚಿತ್ಯಾದಿಗಳನ್ನೂ ಕುರಿತು ಹೊಂದಿಸಿಕೊಂಡು ಕಲಿಸುವ ರೀತಿಗಳನ್ನು ಮಾರ್ಮಿಕ ಮಾತುಗಳಲ್ಲಿ ತಿಳಿಯಾಗಿ ಹೇಳಿದರು.

ಕಳೆದ ಜೂನ ತಿಂಗಳ ೧೬, ೧೮, ಹಾಗೂ ೧೯, ತಾರೀಖುಗಳಲ್ಲಿ ಶಿರಹಟ್ಟಿ ತಾಲೂಕದೊಳಗಿನ ಘಟಿ-ಗಾಂವಬಡ್ನಿ, ಆದರಳ್ಳಿ, ಹಾಗೂ ಬಟ್ಟೂರ ಗ್ರಾಮಗಳಲ್ಲಿ, ಸಮಾಜಶಿಕ್ಷಣದಪ್ರಸಾರವಯಾಡುವಗೋಸುಗ ಶ್ರೀ. ರಾ- ನ. ಜಕಾತಿ, ಅ. ಡೆ. ಎ. ಇ. ಲಕ್ಷ್ಮೇಶ್ವರ ಭಾಗ ಇವರ ಅಧ್ಯಕ್ಷತೆಯಲ್ಲಿ, ಸಭೆಗಳು ಜರುಗಿಸಲ್ಪಟ್ಟವು. ಆಯಾ ಗ್ರಾಮಗಳಲ್ಲಿಯ ಗ್ರಾಮಾಧಿಕಾರಿಗಳೂ ಪ್ರಮುಖ ಜನರೂ, ಎಷ್ಟೋ ಹಳ್ಳಿಗರೂ ಸಭೆಗಳಲ್ಲಿ ಉಪಸ್ಥಿತರಾಗಿದ್ದರು. ಆಗ್ಗೆ ವಿನೋದಾವಳಿಗಳ ಸಹ ಜರುಗಿಸಲ್ಪಟ್ಟವು, ಘು. ಬಡ್ನಿ ಗ್ರಾಮದಲ್ಲಿಯ ತರುಣ ಹಾಗೂ ಉತ್ಸಾಹೀ ಸ. ಶಿ. ಕಾರ್ಯಕರ್ತರಾದ ಶೀ. ಕಂಡಗಲ್ ಮತ್ತು ಶ್ರೀ. ಶಾಡಗುಪ್ಪಿ ಇವರು, ಸಮಾಜ ಶಿಕ್ಷಣದ ಮಹತ್ವವನ್ನು ಹಳ್ಳಿಗರ ಮನವೊಲಿಯುವಂತೆ ತಿಳಿಸಿ ಕೊಟ್ಟರು.

ಪುಸ್ತಕ ವಿಮರ್ಶೆ

ಪುಸ್ತಕದ ಹೆಸರು:— **ಬಣ್ಣದ ಚೆಂಡು**
ಪುಟಿಸಿದವರು:— ಶ್ರೀ ಡಿ. ಎಸ್. ಕರ್ಕಿ.
ಮತ್ತು
ಶ್ರೀ. ಎಸ್. ಡಿ. ಇಂಚಲ.
ಪ್ರಕಾಶಕರು:— ಶ್ರೀ. ಬ ಗಂ ತುರಮುರಿ.
ಉದಯಸಾಹಿತ್ಯ ಪ್ರಕಾಶನ ಬೆಳಗಾಂವಿ.
ಪುಟಗಳು:— ೨೩ ಬೆಲೆ:— ೦-೫-೦

ಚಿಕ್ಕ ಮಕ್ಕಳಿಗೆ ತಕ್ಕುದಾದ ಪುಸ್ತಕವಿದು. ೧೨ ಕವನಗಳು ಚಿಕ್ಕ ಮಕ್ಕಳ ಮನೋವಿಶ್ಲೇಷಣಕ್ಕೆ ಅನುಗುಣವಾಗುವಂತೆ ಚಿಂಡಿನ ಪುಟಿಕೆಗಳಂತೆ ಪುಟಿದು ಬಂದಿವೆ; ಮಕ್ಕಳು ಈ ಕವನಗಳನ್ನು ಮೆಚ್ಚಿ, ಹಾಡಿ, ಹಾಡಿ ತಣಿಯುವದರಲ್ಲಿ ಸಂದೇಹ ವಿಲ್ಲ. ಹಾಡುಗಳ ವಿಷಯಗಳು ಸಹ ಮಕ್ಕಳ ಮನಸ್ಸನ್ನು ಹಿಡಿಯುವಂತಹವಿವೆ. ಮಕ್ಕಳ ವಯೋಗುಣಕ್ಕನುಸರಿಸಿ ಹಾಡುಗಳನ್ನು ವರ್ಗೀಕರಿಸಿ ಕಲಿಸಲು ಯತ್ನಿಸಿದರೆ ಮಕ್ಕಳಿಗೆ ಮನರಂಜನೆ ಹಾಗು ವಿಷಯ ಜ್ಞಾನವಾಗುವದೆಂದು ಹೇಳಬಹುದು.

‡ ‡ ‡

ಪುಸ್ತಕದ ಹೆಸರು:— **ತತ್ಸಮ--ತದ್ಭವ.**
ಸಂಗ್ರಾಹಕರು: ಶ್ರೀ. ಕೃ. ಶ್ರೀ. **ಕಾಟೋಟೆ.**
ಪ್ರಕಾಶಕರು:— ಶ್ರೀ. ಎವಿ. ಡಿ. ಜಕಾತಿ.
ಸಿಟಿಹಾಯ್‌ಸ್ಕೂಲ ಹುಬ್ಬಳ್ಳಿ.
ಪುಟಗಳು:— ೪೦ ಬೆಲೆ:—೦-೪-೬

ತತ್ಸಮ–ತದ್ಭವಗಳನ್ನು ಆಯ್ದು ಅಕ್ಷರಕ್ರಮಾಂಕದಂತೆ ಹೊಂದಿಸಿ ಸಂಗ್ರಹಿಸಲಾಗಿದೆ. ಈ ಚಿಕ್ಕ ಪುಸ್ತಕದಲ್ಲಿ. ಪ್ರಾ. ಶಾ. ಪ್ರ. ಪತ್ರ ಪರೀಕ್ಷೆಗೆ ಕೂಡ್ರ ತಕ್ಕ ವಿದ್ಯಾರ್ಥಿಗಳಿಗೆ, ಟ್ರೇನಿಂಗ ಕಾಲೇಜದ ಶಿಕ್ಷಕ ವಿದ್ಯಾರ್ಥಿಗಳಿಗೆ, ಎಸ್. ಎಸ್. ಸಿ. ಪ. ಪರೀಕ್ಷೆಗೆ ಕಟ್ಟತಕ್ಕ ಉಮೇದವಾರರಿಗೆ ಇದು ಉಪಯುಕ್ತವಾಗುವದೆಂದು ಹೇಳಬಹುದು. ತತ್ಸಮ–ತದ್ಭವಗಳನ್ನು ಅಲ್ಲಲ್ಲಿ ಹುಡುಕಲು ಬೇಕಾದ ಶಿಕ್ಷಕರ ಶ್ರಮವನ್ನು ಉಳಿಸಲೆತ್ನಿಸಿದೆ ಈ ಪುಸ್ತಕ.

‡ ‡ ‡

ಹೆಸರು:— **ಮಹಾದೇವಿಯಕ್ಕನ ಉಜ್ವಲಜೀವನ**
ಲೇಖಕರು:— ಶ್ರೀ. ಸ. ವೀ. ಹಂಜಿ, ಬಾಗಲಕೋಟ
ಪ್ರಕಾಶಕರು:— ,, ,, ,,
ಪುಟಗಳು:— ೫೧ ಬೆಲೆ:— ೦-೧೦-೧

ರೂಪ ಶೀಲ ಗುಣ ಸಂಪನ್ನೆಯಾದ, ವೀರ ವಿರಾಗಿಯಾದ, ತಪಶ್ವಿನಿಯಾದ ಮಹಾದೇವಿಯಕ್ಕನ ಉಜ್ವಲ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿಯಾದರೂ ಸ್ಫುಟವಾಗಿ ರೂಪಿಸಿದೆ ಈ ಪುಸ್ತಕದಲ್ಲಿ. ಅಕ್ಕನ ಪ್ರಭಾವಯುತ ವ್ಯಕ್ತಿತ್ವ, ಆದರ್ಶ ನಡೆ–ನುಡಿ, ಆಧ್ಯಾತ್ಮಿಕ ವಿಚಾರ, ಪರಮಾತ್ಮನ ಮೇಲಿನ ಅಪಾರವಾದ ನಿಷ್ಠೆ ಇವೇ ಮೊದಲಾದವು ಆಕೆಯು ಹಾಡಿರುವ ವಚನಗಳ ಆಧಾರದಿಂದ ಇಲ್ಲಿ ವಾಚಕರಿಗೆ ಹೊಳೆಯುವಂತೆ ನಿರೂಪಿಸಲ್ಪಟ್ಟಿವೆ. ಅಕ್ಕಯ ಜೀವನದಲ್ಲಿಯ ಸಂನಿವೇಶಗಳನ್ನು ಆಯ್ದುಕೊಂಡು ಆಕೆಯ ಜೀವನವು ಇನ್ನಿಷ್ಟು ಪವಿತ್ರವಾಗಿ ಕಾಣುವಂತೆ ಸುಂದರವಾಗಿ, ಆಹ್ಲಾದಕರವಾದ ಶೈಲಿಯಲ್ಲಿ ಹೆಣೆಯಲಾಗಿದೆ.
ಅಕ್ಕನು ಭಾರತೀಯ, ಅಷ್ಟೇ ಏಕೆ, ಪ್ರಪಂಚದ ಮಹಿಳೆಯಲ್ಲರಿಗೆ ಹಾಕಿಕೊಟ್ಟ ದಾರಿ, ತುಳಿದ ಹೆಜ್ಜೆ, ಇಟ್ಟು ಕೊಂಡ ಗುರಿ ಮೊದಲಾದುವು ಯಶಸ್ವಿಯಾಗಿ ಚಿತ್ರಿತವಾಗಿವೆ. ಲೇಖಕರು ಈ ಚಿಕ್ಕ ಹೊತ್ತಿಗೆಯನ್ನು ಬರೆಯುವಾಗ ಸಹಾಯ ಪೊರಕೆಸಿದ ಗ್ರಂಥಗಳನ್ನು ನೋಡಿದರೆ ಇದರಲ್ಲಿ ಬರುವ ಸಂಗತಿಗಳು ಸಾಧಾರಣವಾಗಿವೆಯೆಂದು ತಿಳಿಯದಿರದು. ನಾಡಿನ ವಾಚಕರಿಗೆ ಉಪಯುಕ್ತ ಗ್ರಂಥವಿದೆಂದು ಹೇಳಬಹುದು.

ತ್ವರೆ ಮಾಡಿರಿ! ಇಂದೇ ಸಂಗ್ರಹಿಸಿರಿ!

ಹಬ್ಬ-ಹುಣ್ಣಿವೆಗಳು

ಬೆಲೆ: ೦—೧೨—೦

ಎಲ್ಲರಲ್ಲಿಯೂ ಇರಬೇಕಾದ ಪುಸ್ತಕ. ಹಬ್ಬಗಳು ರೂಢಿಯಲ್ಲಿ ಏಕೆ ಬಂದವು? ಅವುಗಳಿಗಿರತಕ್ಕ ಐತಿಹಾಸಿಕ ಹಿನ್ನೆಲೆ ಮತ್ತು ಮಹತ್ವ ಕುರಿತು ಸರಳ ಶೈಲಿಯಲ್ಲಿ ವಿವೇಚಿಸಲಾಗಿದೆ.

ತ್ವರೆ ಮಾಡಿರಿ! ಇದೀಗ ತಯಾರಾಗಿವೆ.

ಲಘುಪಾಠಮಾಲೆ-೧ ಇತಿಹಾಸ ಬೆಲೆ ೦—೬—೦

,, ೨ ಭೂಗೋಲ ಬೆಲೆ ೦-೬—೦

,, ೩ ಭೂಮಿತಿ-ಜಮಾಖರ್ಚ ೦-೬-೦

,, ೪ ವ್ಯಾಕರಣ (ಅಚ್ಚಿನಲ್ಲಿ)

ಈ ಚಿಕ್ಕ ಪುಸ್ತಕಗಳು ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೂ ೫-೬ನೇ ಇಯತ್ತೆಯ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯುಕ್ತವಾಗಿವೆ. ಈಗಾಗಲೆ ಈ ಮಾಲೆಯು ಬಹುಜನರಿಂದ ಮನ್ನಣೆ ಪಡೆದಿದೆ.

ಆಕಳವಾಡಿ ಬುಕ್-ಡಿಪೋ, ಧಾರವಾಡ

A. B. D.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋತಿ, ಮತ್ತು **ಶ್ರೀ. ಜಿ. ಡಿ. ಮಾಲಿ.**

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಿಗಳ ಹತ್ತರ ದೊರೆಯುವದು. **ಬೆಲೆ ೧-೦೨-೦,** ಪ್ರತ್ಯೇಕ. ಐದು ಮತ್ತು ಅಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸುಸಂಧಿ!

೧೯೫೧ ಮತ್ತು ೧೯೫೨ನೆಯ ವರ್ಷಗಳ
ಮುಲ್ಕೀ ಪರೀಕ್ಷೆಯ ಎಲ್ಲ ವಿಷಯಗಳ
ಪ್ರಶ್ನೆಗಳನ್ನು ಬಿಡಿಸಿದ

"ಪ್ರಶ್ನೋತ್ತರ ದರ್ಪಣ"ವು

ಲೆ: ಆಯ್. ಎಸ್. ಅರಳಗುಪ್ಪಿ
ಬಿ. ಜಿ. ಸಿದ್ದನಗೌಡರ
ಎನ್. ಎಸ್. ಸವದಿ

ಸಿದ್ಧವಾಗಿದೆ. ಅನುಭವಿಕ ಶಿಕ್ಷಕರಿಂದ ಬರೆದು,
ಶಿಕ್ಷಣ ತಜ್ಞರಿಂದ ಪರಿಶೋಧಿಸಿದೆ.
ತ್ವರೆ ಮಾಡಿರಿ.

ವಿಳಾಸ: **ಎಲ್. ಜಿ. ಹೊಸಮನಿ**
ದೀಕ್ಷಿತವಾಡೆ, ಲೈನಬಜಾರ, ಧಾರವಾಡ.

ಬೆಲೆ: ೧—೧೨—೦

೭ನೆಯ ಇಯತ್ತೆಯ ಹೊಸ ಅಭ್ಯಾಸಪತ್ರಿಕೆ
ಯಂತೆ ಹೊಸ ಮಾದರಿಯಿಂದ ರಚಿಸಿದ

ಭಾರತ ರಾಜ್ಯ ಘಟನೆ

(ಸಚಿತ್ರ)

ಸುಧಾರಿಸಿದ ಎರಡನೆಯ ಆವೃತ್ತಿ
ಫೆಬ್ರುವರಿ ೧೯೫೨
ಲೇಖಕರು:— **ವಿ. ಕ. ನಂದಗಾಂವ**

ಬೆಲೆ ೦—೧೨—೦

ಮಾನ್ಯರಾದ ಎಸ್.ಎನ್. ಅಂಗಡಿ, ಪ್ರಿ ರೆಡ್ಡಿ, ಪ್ರಿ. ಜೋಶಿ, ಪ್ರಿ. ಇಂಚಲ, ಪ್ರಿ. ವರ್ಟ್, ಪ್ರಿ. ಚಿಕ್ಕರಮನೆ, ಶ್ರೀ. ಗೋಖಲೆ ಕೇಶವರಾಯರು, ಶ್ರೀ. ಶಾನಭಾಗ (ಡಿ.ಎಸ್.ಪಿ.) ಮುಂತಾದವರಿಂದಲೂ ಪಠ್ಯ ಪುಸ್ತಕ ಸಮಿತಿಯವರಿಂದಲೂ ಮಾನ್ಯ ಮಾಡಲ್ಪಟ್ಟಿದೆ.

ಪ್ರಕಾಶಕರು: **ನಿ. ವಿ. ನಂದಗಾಂವ**
೬೧೯ ಮಠಗಲ್ಲಿ, ಬೆಳಗಾಂವ

ಅವಶ್ಯವಾಗಿ ಸಂಗ್ರಹಿಸಲೇಬೇಕಾದ ಪುಸ್ತಕಗಳು!

ಲೇಖಕ: **ಗಲಗಲಿ**

ನಮ್ಮ ರಾಜ್ಯಘಟನೆ

(ಬೆಲೆ: ೧೨ ಆಣೆ)

ಇಂದಿನ ಪರೀಕ್ಷೆಯ ಹೊಸ ಧೋರಣೆಯಂತೆ ಪುಸ್ತಕ ರಚಿಸಲಾಗಿದೆ. ಹೊಸ ಅಭ್ಯಾಸಪತ್ರಿಕೆಯ ಪ್ರಕಾರ ಎಲ್ಲ ವಿಷಯಗಳನ್ನು ಮಕ್ಕಳಿಗೆ ತಿಳಿಯುವಂತೆ ತಿಳಿಯಾದ ಭಾಷೆಯಲ್ಲಿ ವಿವೇಚಿಸಲಾಗಿದೆ. ಪ್ರತಿ ಪ್ರಕರಣದ ಕೊನೆಗೆ ಉಪಯುಕ್ತ ಹಾಗೂ ಮಹತ್ವದ ಪ್ರಶ್ನೆಗಳನ್ನೂ ಕೊಟ್ಟಿದೆ. ಕಾರಣ ಈ ಪುಸ್ತಕವನ್ನು ಪ್ರಾ. ಶಾ. ಪ್ರ. ಪ. ಪರೀಕ್ಷೆಯ ವಿದ್ಯಾರ್ಥಿಗಳು ಕೂಡಲೇ ಸಂಗ್ರಹಿಸುವದು ಜಾಣತನವೆಂದು ಬೇರೆ ಹೇಳಬೇಕಿಲ್ಲ.

★

ಪ್ರಶ್ನೋತ್ತರ-ಕರ್ನಾಟಕ ಇತಿಹಾಸ

(ಬೆಲೆ: ೧೨ ಆಣೆ)

ಎಲ್ಲ ವಿಷಯಗಳನ್ನೊಳಗೊಂಡ ಇಂಥ ಪುಸ್ತಕ ಕರ್ನಾಟಕದಲ್ಲಿ ಇನ್ನೂವರೆಗೆ ಹೊರಟಿರಲಿಲ್ಲ. ಮಿ. ಸ್ಕೂಲ ಸ್ಕಾಲರಶಿಪ್ ಪರೀಕ್ಷೆಯ ವಿದ್ಯಾರ್ಥಿಗಳು ಈ ಪುಸ್ತಕವನ್ನು ಅಭ್ಯಸಿಸಿ ತಮ್ಮ ಯಶದ ಮಾರ್ಗವನ್ನು ಸುಗಮ ಮಾಡಿಕೊಳ್ಳುವರೆಂದು ಅತಿಶಿದರೆ ಅದೇನೋ ಅತಿಶಯೋಕ್ತಿಯಲ್ಲ. ಪ್ರಾಥಮಿಕ ಶಾಲೆಯ ತರಗತಿಯ ಮಕ್ಕಳಿಗೆ ಇದು ಮಾರ್ಗದರ್ಶನ ಮಾಡಬಲ್ಲದು. ಆದ್ದರಿಂದ ಈ ಪುಸ್ತಕ ನಿಮ್ಮಲ್ಲಿರದಿದ್ದರೆ ಕೂಡಲೇ ಸಂಗ್ರಹಿಸಿರಿ.

ಇಂದೇ ನಿಮ್ಮ ಪ್ರತಿಗಳನ್ನು ತರಿಸಿಕೊಂಡು ಯಶಸ್ಸನ್ನು ಗಳಿಸಿರಿ!!

ವ್ಯಾಪಾರಸ್ಥರಿಗೆ ಧಾರಳ ಕಮೀಶನ್

ಅಕಳವಾಡಿ ಬುಕ್ ಡಿಪೋ, (ವಿಜಯ ರೋಡ) ಧಾರವಾಡ

ಸತ್ಯ, ಅಹಿಂಸೆ, ಅಸ್ಪೃಶ್ಯತಾನಿವಾರಣೆ ಸ್ವದೇಶಪ್ರೇಮ ಇತ್ಯಾದಿ ರಾಷ್ಟ್ರೀಯ ಭಾವನೆಗಳ
ವಿಶೇಷತಃ ಗಾಂಧೀಜಿಯ ವಿಧಾಯಕ ವಿಚಾರಗಳ

ಭಾರತೀಯರ ಕಥೆಗಳು

ಕನ್ನಡ ಶಿಕ್ಷಣ ವರ್ಗಕ್ಕೆ

ಲೇಖಕ:—ಶ್ರೀ ಹಿರೇಮಠ ಬೆಲೆ ೮ ಆಣೆ

ಮು. ಬುದ್ಧನಿಂದ ದಾದಾಭಾಯಿ ನವರೋಜಿ. ತಥಾ ಮು. ಗಾಂಧೀಜಿಯವರೆಗಿನ ಕಥೆಗಳನ್ನು
ಸುರಸ ಹಾಗು ಸರಳ ಶೈಲಿಯಲ್ಲಿ ರಚಿಸಿದೆ.

ಸಾಮಾನ್ಯ ಜ್ಞಾನ

ಮತ್ತು

ಧಾರವಾಡ ಜಿಲ್ಲೆಯ ಭೂಗೋಲ

ಪೌರನೀತಿ ಸಹಿತ ಬೆಲೆ ೧೦ ಆಣೆ.

ಶಿಕ್ಷಣ ವರ್ಗಕ್ಕೆ ಪಠ್ಯಪುಸ್ತಕದ ಜೊತೆಗೆ ಈ ಎರಡೇ ಪುಸ್ತಕಗಳು ಸಾಕು!

ಮಾರಾಟಗಾರರು:—**ಆಕಳವಾಡಿ ಬುಕ್‌ಡಿಪೋ, ಧಾರವಾಡ.**

ವಿದ್ಯಾರ್ಥಿಗಳೇ ಪರೀಕ್ಷೆಯಲ್ಲಿ ನಿಮ್ಮ ಯಶವನ್ನು ನಿಶ್ಚಿತಗೊಳಿಸಬೇಕೇ?

ಹಾಗಿದ್ದರೆ

ಪ್ರಶ್ನೋತ್ತರ ದೀಪಿಕೆ

ಭೂಗೋಲ ಮತ್ತು ಇತಿಹಾಸ

ಇವುಗಳನ್ನು ತಪ್ಪದೇ ಓದಿರಿ!

ಈ ಪುಸ್ತಕಗಳು ಮುಲ್ಕೀ ಮತ್ತು ಸ್ಕಾಲರ್‌ಶಿಪ್ ಪರೀಕ್ಷೆಯ, ಹೊಸ ಅಭ್ಯಾಸ ಪತ್ರಿಕೆಯ ಪೂರ್ಣ ವಿಷಯಗಳನ್ನೊಳಗೊಂಡಿದ್ದು, ಇತ್ತೀಚಿನ ಭೌಗೋಲಿಕ, ರಾಜಕೀಯ, ಹಾಗು ಐತಿಹಾಸಿಕ ಬದಲಾವಣೆಗಳನ್ನೆಲ್ಲಾ ಒಳಗೊಂಡಿವೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಓದಲೇ ಬೇಕಾದ ಪುಸ್ತಕಗಳು.

ಬೆಲೆ ಪ್ರತಿಯೊಂದಕ್ಕೆ ೦—೧೨—೦. (ಅಂಚೇ ವೆಚ್ಚ ಪ್ರತ್ಯೇಕ).

ಇಂದೇ ನಿಮ್ಮಲ್ಲಿಯ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ. ಅಥವಾ ಕೆಳಗಿನ ಪತ್ತೆಗೆ ಬರೆಯಿರಿ—

ವೀಣಾ ಬುಕ್—ಡಿಪೋ.

ಮಾರುತಿ ಬೀದಿ ಬೆಳಗಾವಿ

ಮಕ್ಕಳ ಸಚಿತ್ರ ಅಂಕಗಣಿತ

ಪ್ರಾಥಮಿಕ ೧, ೨, ೩ನೆಯ ತರಗತಿಗಳಿಗೆ

ಹೊಸ ಅಭ್ಯಾಸಪತ್ರಿಕೆಯಂತೆ ಬರೆಯಲ್ಪಟ್ಟಿವು! ಹೊಸ ಶಿಕ್ಷಣಪದ್ಧತಿಗೆ ಹೊಂದಿಕೊಳ್ಳುವಂತೆ ವಿಷಯ ವಿವೇಚನೆಯನ್ನೊಳಗೊಂಡುವು! ದಿನ ನಿತ್ಯದ ಜೀವನಕ್ಕೆ ಸಂಬಂಧಿಸಿದ ಉದಾಹರಣೆಗಳು! ಸುಲಭವಾದ ಶೈಲಿ, ಮಕ್ಕಳ ಮನಸೆಳೆಯುವ, ಕಣ್ಣೆಳೆಸುವ ಸುಂದರ ಚಿತ್ರಗಳು!! ಮಕ್ಕಳಿಗೆ ಅತ್ಯುಪಯುಕ್ತ!

೧ನೆಯ ತರಗತಿಯ ಅಂಕಗಣಿತ: ಬೆಲೆ ೦ ೫-೦

೨ನೆಯ ತರಗತಿಯ ಅಂಕಗಣಿತ: ಬೆಲೆ ೦-೭-೦

೩ನೆಯ ತರಗತಿಯ ಅಂಕಗಣಿತ: ಬೆಲೆ ೦-೧೦-೦

ರಾಮಾಶ್ರಯ ಬುಕ್-ಡಿಪೊ, ಧಾರವಾಡ.

ಸ್ವತಂತ್ರ ಭಾರತೀಯ ರಾಜ್ಯತಂತ್ರ

(ಸಚಿತ್ರ)

ಲೇಖಕರು: ಶ್ರೀ. ನಾರಾಯಣ ಶರ್ಮ

ಎಸ್. ಎಸ್. ಸಿ (ಮ್ಯಾಟ್ರಿಕ್), ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ (ಮುಲ್ಕಿ) ಹಾಗು ಪ್ರಾಥಮಿಕ ಶಿಕ್ಷಕರ ಪ್ರಮಾಣಪತ್ರ ಪರೀಕ್ಷೆ (ಸಿ. ಟಿ. ಸಿ.) ಗಳ ಹೊಸ ಅಭ್ಯಾಸ ಪತ್ರಿಕೆಗಳಿಗೆ ಅನುಸಾರವಾಗಿ ಬರೆಯಲ್ಪಟ್ಟಿದು. ಇದೊಂದೇ ಪುಸ್ತಕದಲ್ಲಿ ಮೂರು ಪರೀಕ್ಷೆಗಳಿಗೆ ಅವಶ್ಯವಾದ ಭಾರತೀಯ ರಾಜ್ಯತಂತ್ರದ ತ್ರಿವೇಣೀ ಸಂಗಮ! ವಿಷಯಕ್ಕನುಗುಣವಾದ ಸುಂದರ ಚಿತ್ರಗಳು! ನಕಾಶೆಗಳು! ಚಿತ್ರಪಟಗಳು! ಗಹನವಾದ ವಿಷಯವನ್ನು ಸುಲಭವಾಗಿ ತಿಳಿಯುವ ಶೈಲಿಯಲ್ಲಿ ಪ್ರತಿಪಾದಿಸಲಾಗಿದೆ.

ಬೆಲೆ: ೧—೦—೦ ಮಾತ್ರ

ಪ್ರಕಾಶಕರು:

ರಾಮಾಶ್ರಯ ಬುಕ್-ಡಿಪೊ, ಧಾರವಾಡ.

Regd. No, B. 5875

ಗೌರೀಶ ಗ್ರಂಥ ಪ್ರಕಟನಾಲಯದಿಂದ ಪ್ರಕಟವಾದ ಹೊಸ ಹೊತ್ತಿಗೆಗಳು

೧. **ಕರ್ನಾಟಕದ ಐತಿಹಾಸಿಕ ಕಥೆಗಳು.** ಎನೇ ಇಯತ್ತಿಗೆ — **ಬೆಲೆ ೦-೧೪-೦**
ಲೇಖಕರು :- ಶ್ರೀಯುತ ಬಸಪ್ಪ ಮಲ್ಲಪ್ಪ ಶಿಂತ್ರಿ ಬಿ.ಎ.ಬಿ.ಟಿ.
ರಿಟಾಯರ್ಡ ಅ. ಎ. ಇ. ದಕ್ಷಿಣ ಭಾಗ, ಧಾರವಾಡ.

೨. **ಭೂಮಂಡಲ ಬೋಧಿನಿ ಭಾಗ ೧.** ಎನೆಯ ಇಯತ್ತಿಗೆ — **ಬೆಲೆ ೦-೧೨-೦**
ಲೇಖಕರು :- ಕೈ. ಶಿ. ಸೋ. ಕುಲಕರ್ಣಿ.

೩. **ಭೂಮಂಡಲ ಬೋಧಿನಿ ಭಾಗ ೨.** ೫ನೆಯ ಇಯತ್ತಿಗೆ — **ಬೆಲೆ ೧-೪-೦**
ಲೇಖಕರು :- ಶ್ರೀಯುತ ಎ ಜಿ. ಕುಲಕರ್ಣಿ ಬಿ.ಎ.ಬಿ.ಟಿ.
ಮತ್ತು ಶ್ರೀಯುತ ಕಾರಡಗಿ ಬಿ.ಎ.

೪. **ಭೂಮಂಡಲ ಬೋಧಿನಿ ಭಾಗ ೩.** ೬ನೆಯ ಇಯತ್ತಿಗೆ — **ಬೆಲೆ ೧-೧೦-೦**
ಲೇಖಕರು :- ಪದರೀಯವರು

೫. **ಭೂಮಂಡಲ ಬೋಧಿನಿ ಭಾಗ ೪.** ೭ನೆಯ ಇಯತ್ತಿಗೆ — **ಬೆಲೆ ೨-೨-೦**
ಲೇಖಕರು :- ಪದರೀಯವರು

೬. **ಸ್ವತಂತ್ರ ಭಾರತದ ಗಣರಾಜ್ಯ ಘಟನೆ.** ೭ನೆಯ ಇಯತ್ತಿಗೆ — **ಬೆಲೆ ೦-೧೨-೦**
ಲೇಖಕರು :- ಆದ್ಯ ರಂಗಾಚಾರ್ಯ ಎಂ. ಎ. (ಲಂಡನ)

೭. **ಭಾರತ ರಾಜ್ಯಘಟನೆಯ ತಿಳಿನೋಟ.** ೬ನೆಯ, ೭ನೆಯ ಇಯತ್ತಿಗಳಿಗೆ — **ಬೆಲೆ ೦-೮-೦**
ಲೇಖಕರು :- ಶ್ರೀ. ಗ. ಪ. ಹಾಲಪ್ಪ ಎಂ. ಎ. ಮಹಾರಾಜಾ
ಕಾಲೇಜ, ಮೈಸೂರ.

ಮೇಲಿನ ಎಲ್ಲ ಪುಸ್ತಕಗಳು ಅವುಗಳ ಮುಂದೆ ಕಾಣಿಸಿದ ಇಯತ್ತಿಗಳಿಗೆ ೧೫೫೪ರ ವರೆಗೆ **ಪಠ್ಯ ಪುಸ್ತಕಗಳೆಂದು ಸರಕಾರದವರಿಂದ ಮಂಜೂರಾಗಿವೆ.**

೮. **ಮನಸ್ಸು ಮತ್ತು ಶಿಕ್ಷಣ ಸಮಸ್ಯೆ.** ಟ್ರೇನಿಂಗ ಕಾಲೇಜದ ೨ನೆಯ ವರ್ಷದವರಿಗೆ ಪೂರಕ ವಾಚನವೆಂದು ಮಂಜೂರಾಗಿದೆ. **ಬೆಲೆ ೦-೧೨-೦**
ಲೇಖಕರು :- ಶ್ರೀ. ಕಾರಡಗಿ ವೀರಭದ್ರಪ್ಪನವರು ಎಂ. ಎ. ಎಲ್ ಎಲ್. ಬಿ.

೧. **ಮಾತಿನ ಮುನ್ನಡೆ.** ೬ನೆಯ ಇಯತ್ತಿಗೆ
೨. **ಮಾತಿನ ಮುನ್ನಡೆ.** ೫ನೆಯ ಇಯತ್ತಿಗೆ
೩. **ಮಾತಿನ ಮುನ್ನಡೆ.** ೪ನೆಯ ಇಯತ್ತಿಗೆ
೪. **ಮಾತಿನ ಮುನ್ನಡೆ.** ೩ನೆಯ ಇಯತ್ತಿಗೆ

೫. ಪತ್ರಗಳ ಪರಿಚಯ. ೬-೭ನೆಯ ಇಯತ್ತಿಗಳಿಗೆ.
ಇವೆಲ್ಲವೂ ಪೂರಕ ವಾಚನಗಳೆಂದು ಮಂಜೂರಾಗಿವೆ.

ಪ್ರಕಾಶಕರು :
ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ, ಧಾರವಾಡ.

Printed by M. A. Kamat, B. sc. at Jai Hind Art Press, Javlipeth, Dharwar. Edited and Published by M. G. Handral B. M. Shintri, S. R. Tatti, & Y. D. Nadkarni Jointly at the Kannada Prathamik Shikshan Office Govt. Training College for Men, Dharwar.

ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು:—ಶ್ರೀ. ಎಂ. ಜಿ. ಹಂದ್ರಾಳ

18/8/52



ಉತ್ತರದಲಿ ಬಿತ್ತರದಲಿ
ರಾಷ್ಟ್ರಧ್ವಜ ಹಾರುತಿದೆ;
ಅತ್ಯುತ್ತಮ ಮಾನವತೆಯ
ತತ್ವಂಗಳ ಸಾರುತಿದೆ.

ಅರುಣನೆಯೋ ಕಾರುಣ್ಯವು;
ಶುಭ್ರತೆಯೋ ಪಾವಿತ್ರ್ಯ;
ಮರಕತವೇ ವೈಪುಲ್ಯವು;
ಚಕ್ರನೇ ಪ್ರಗತಿಯ ಚಿತ್ರ.

ಭಾರತವಿದು ವಿಜ್ಞಾನದ
ಸುಜ್ಞಾನದ ಶಿಖರವನು
ಏರಲಿ; ಕಾಂ ತೋರಲಿ ಧರೆ-
ಗಾದರ್ಶದ ಮಕುರವನು

ಪ್ರತಿವ್ಯಕ್ತಿಯ ಗುಣಶಕ್ತಿಯ
ವಿಕಸನವೇ ಸ್ವಾತಂತ್ರ್ಯ;
ನಿಶ್ಚಿಂತೆಯ ನಿರ್ಭೀತಿಯ
ಜೀವನವೇ ಸುಖಸೂತ್ರ.

—ಗಂಗಪ್ಪ ವಾಲಿ

★

ಬಿಡಿ ಪ್ರತಿ ಅಗಷ್ಟ ೧೯೫೨ ವಾ. ಚಂದಾ
೦—೬—೦ ೪—೦—೦

ಮುಂಬಯಿ ವಿದ್ಯಾಖಾತೆಯ ಪಠ್ಯ ಪುಸ್ತಕ ಸಮಿತಿಯಿಂದ ಮಂಜೂರಾಗಿ, ಈಗಾಗಲೇ ವಿಜಾಪುರ ಜಿಲ್ಲೆಯ ಮಾಧ್ಯಮಿಕ ಶಾಲೆಗಳಲ್ಲಿಯೂ, ಧಾರವಾಡ ಜಿಲ್ಲೆಯ ವ್ಯಾಥಮಿಕ ಶಾಲೆಗಳಲ್ಲಿಯೂ ಉಪಯೋಗದಲ್ಲಿರುವ ಹಾಗೂ ಕರ್ನಾಟಕ ವಿದ್ಯಾಪ್ರಕಾಶಕ ಸಂಘ ಧಾರವಾಡ ಇವರಿಂದ ಪಾರಿತೋಷಕ ಪಡೆದ ಗ್ರಂಥ.

ಮಹಾತ್ಮಾ ಗಾಂಧಿ

(ಮಹಾತ್ಮರ ಜೀವನ ಚರಿತ್ರೆ ಹಾಗೂ ವಿಚಾರ ಸಂಗ್ರಹ)

ದ್ವಿತೀಯ ಮುದ್ರಣ.

ಲೇಖಕರು:—**ಸ. ವೀ. ಹಂಜಿ,** ಎಂ. ಎ., ಬಿ. ಟಿ., ಡಿ. ಬಿ. ಈ.

೭೯ ವರ್ಷಗಳ ತ್ಯಾಗಪೂರ್ಣ, ತಪಸ್ಸಿನ ಹಾಗೂ ಸೇವಾಮಯ ಮಹಾನ್ ಜೀವನದ ಪ್ರಮಾಣ ಗ್ರಂಥ.
ಮಹಾತ್ಮರ ಸಮಗ್ರ ಜೀವನವನ್ನು ಸರಳ ಶೈಲಿಯಲ್ಲಿ ಚಿತ್ರಿಸುವ ಮೊದಲನೆಯ ಗ್ರಂಥ.
ಪ್ರೊ. ಶಿ. ಶಿ. ಬಸವನಾಳ ಅವರ ಮುನ್ನುಡಿ ಹಾಗೂ ಮಾನ್ಯ ಶ್ರೀ ಆರ್. ಆರ್. ದಿವಾಕರ ಅವರ ಅಭಿನಂದನೆಯೊಡನೆ ಪ್ರಸಾದಿಸುವ ಗ್ರಂಥ.
ಪ್ರತಿಯೊಬ್ಬ ಕನ್ನಡಿಗನು ಅವಶ್ಯವಾಗಿ ಓದಬೇಕೆಂದು ವಿನ್ನಪ.

ಕ್ರೌನ್ ೪. ಪ. ಪುಟ. ೧೪೪+೨೦೦

ಬೆಲೆ, ಉತ್ತಮ ಪ್ರತಿ. ರೂ ೨—೦—೦

ಸಾದಾ ಪ್ರತಿ ರೂ ೧—೪—೦ (ವಿದ್ಯಾರ್ಥಿಗಳ ಸಲುವಾಗಿ)

ಗ್ರಂಥಗಳು ಸಿಗುವ ವಿಳಾಸಃ—

ಎಸ್. ವ್ಹಿ. ಹಂಜಿ.

ಬಸವೇಶ್ವರ ಟ್ರೇನಿಂಗ ಕಾಲೇಜ, ಬಾಗಲಕೋಟೆ.

ಪುಟ ೨೪೦) **ಮೂಲ ಶಿಕ್ಷಣ** (ಬೆಲೆ: ೩-೦-೦

ಲೇಖಕರು:— **ಶ್ರೀ. ಮ. ಗು. ಹಂಚ್ಯಾಳ,** ಬಿ. ಎ., (ಆನರ್ಸ) ಬಿ. ಟಿ.
(ಪಿನ್ಸಿಪಾಲ, ಸರಕಾರಿ ಕ. ಗಂ. ಟ್ರೇ. ಕಾ. ಧಾರವಾಡ.)

ಮೂಲ ಶಿಕ್ಷಣದ ಬಗೆಗೆ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ವ್ಯಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಪುಸ್ತಕ ಪೊತ್ತಿಕೆಯಾಗಿದೆ.
ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ.
ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ.

ಆಕಳವಾಡಿ ಬುಕ್ ಡಿವೋ, ಧಾರವಾಡ.

ಕನ್ನಡ ಪ್ರಾಥಮಿಕ ಶಿಕ್ಷಣ



ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಡಿ. ಬಿ. ಚಿಕ್ಕರಮನೆ, ಎಜ್ಯುಕೇಶನಲ್ ಇನಸ್ಪೆಕ್ಟರ್, ಧಾರವಾಡ ಭಾಗ, ಧಾರವ
ಪ್ರಧಾನ ಸಂಪಾದಕರು : ಶ್ರೀ. ಎಂ. ಜಿ. ಹಂದ್ರಾಳ ಬಿ.ಎ.(ಆನರ್ಸ)ಬಿ. ಟಿ., ಡಿ. ಪಿ. ಇಡಿ;ಡಿ. ಬಿ.
ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವ

ಸಹಸಂಪಾದಕರು:

ಶ್ರೀಯಮುನಾಬಾಯಿ ನಾಡಕರ್ಣಿ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವ
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗ

ಸಂಪುಟ ೯೨	ಆಗಸ್ಟ ೧೯೫೨	ಸಂಚಿಕೆ ೩

ವಿಷಯ

ಪರಿವಿಡಿ

ಪುಟ

೧. ಸ್ಕಾಲರಶಿಪ್‌ಗಳ ಸಂಬಂಧವಾಗಿ ಮಾಹಿತಿ. ೨
೨. ಸಂಪಾದಕೀಯ ೩
೩. ವ್ಯಕ್ತಿವಿಕಾಸದಲ್ಲಿ ಅನುರಾಗಗಳ ಮತ್ತು ಸ್ಥಿರಮನೋವೃತ್ತಿಗಳ ಸ್ಥಾನ. ಶ್ರೀ ತಟ್ಟಿ ಶಾಮರಾಯರು ೫
೪. ಭೂಗೋಲವನ್ನು ಕಲಿಸುವ ಬಗೆಗಳು —ಶ್ರೀ. ಶಿಂತ್ರಿ ಬಸಪ್ಪನವರು. ೮
೫. ಜೀವನ ಶಿಕ್ಷಣದಲ್ಲಿ ಶಿಕ್ಷಣಾಧಿಕಾರಿಗಳ ತರಬೇತಿ ರಾ. ಬ. ಕುಪ್ಪಸದ ೧೦
೬. ಶಿಕ್ಷಣದಲ್ಲಿ ಕೌಟುಂಬಿಕ ಜೀವನ ಸ್ಥಾನ ಶ್ರೀ ನೀ. ರೇ. ಹಿರೇಮಠ ೧೨
೭. ಆದರ್ಶ ಶಿಕ್ಷಕ. ಶ್ರೀ. ಎಸ್. ಬಿ. ಹಂಜಿ ೧೫
೮. ಕೈನೂಲಿನ ಹೆಣಿಕೆಯ ಸೂಚನೆಗಳು (ಅನುವಾದ) ಶ್ರೀಮತಿ ಯಮುನಾಬಾಯಿ ನಾಡಕರ್ಣಿ ೧೭
೯. ಪುಸ್ತಕ ವಿಮರ್ಶೆ ೨೦
೧೦. ಸುದ್ದಿಗಳು. ೨೨

ಮುಖಪೃಷ್ಠದ ಪಡಿಯಚ್ಚು:"ಹಿಂದದಮಾತಾ ಮುದ್ರಣಾಲಯ"ದ ಕೃಪೆಯಿಂದ

ಸ್ಕಾಲರ ಶಿಪ್ಪುಗಳ ಸಂಬಂಧವಾಗಿ ಮಾಹಿತಿ

ಇದೇ ಡಿಸೆಂಬರ ತಿಂಗಳ ೧೫-೧೬ನೆಯ ತಾರೀಖುಗಳಲ್ಲಿ ಈ ವರ್ಷದ ಸ್ಕಾಲರಶಿಪ್ ಪರೀಕ್ಷೆಗಳು ಜಿಲ್ಲಾ ಕೇಂದ್ರಗಳಲ್ಲಿರುವ ಸರಕಾರೀ ಹೈಸ್ಕೂಲುಗಳಲ್ಲಿ ನಡೆಯುವವು. ಇವುಗಳ ಮಾಸಿಕ ವೃತ್ತಿಗಳು ೫ ರಿಂದ ೬ನೆಯ ಇಯತ್ತೆಯ ವರೆಗೆ ೪ ರೂ, ೭ನೆಯ ಇಯತ್ತೆಗೆ ೫ ರೂ. ೮ನೆಯ ಇಯತ್ತೆಗೆ ೬ ರೂಪಾಯಿ, ಮತ್ತು ೧೦-೧೧ನೆಯ ಇಯತ್ತೆಗೆ ೮ ರೂಪಾಯಿಯಂತೆ ಇರುವವು. ಈ ಸ್ಕಾಲರ ಶಿಪ್ಪುಗಳ ಬೆಲೆಯು ಹಿಂದುಳಿದ ವರ್ಗದ ಸ್ಕಾಲರಶಿಪ್ಪುಗಳಲ್ಲಿ ೧೫ ಪಟ್ಟು ಏರಿದೆ. ಸ್ಕಾಲರಶಿಪ್ಪುಗಳ ಸಂಖ್ಯೆಯು ಜಿಲ್ಲಾ ಪ್ರಕಾರ, ಕೆಳಗಿನ ಪ್ರಕಾರ ಇದೆ:-

ಜಿಲ್ಲೆ	ಹೈಸ್ಕೂಲು		ಮಿಡಲ್‌ಸ್ಕೂಲ್	
	ಮುಂದುವರಿದ ವರ್ಗದವರ	ಹಿಂದುಳಿದ ವರ್ಗದವರು	ಮುಂದುವರಿದ	ಹಿಂದುಳಿದ ವರ್ಗದವರ
ಧಾರವಾಡ	೨೪	೪	೨೯	೪
ಬೆಳಗಾಂವಿ	೨೭	೧೦	೨೪	೧೦
ವಿಜಾಪುರ	೨೨	೯	೨೩	೯
ಕಾರವಾರ	೧೦	೨	೧೧	೨

ವಯೋ ಮಿತಿಯು ಮಿಡಲ್ ಸ್ಕೂಲ್ ಸ್ಕಾಲರಶಿಪ್ಪಿನ ಮುಂದುವರಿದ ವರ್ಗದ ಉಮೇದವಾರರಿಗೆ ೧೨ ವರ್ಷ ಮತ್ತು ಹಿಂದುಳಿದ ವರ್ಗದ ಉಮೇದವಾರರಿಗೆ ೧೨ ವರ್ಷದ್ದು ಇರುತ್ತದೆ ಮತ್ತು ಹೈಸ್ಕೂಲು ಸ್ಕಾಲರಶಿಪ್ಪಿನ ಮುಂದುವರಿದ ಉಮೇದವಾರರಿಗೆ ೧೫ ವರ್ಷ ಮತ್ತು ಹಿಂದುಳಿದ ವರ್ಗದ ಉಮೇದವಾರರಿಗೆ ೧೬ ವರ್ಷದ್ದು ಇರುತ್ತದೆ. ಎರಡೂ ಬಗೆಯ ಸ್ಕಾಲರಶಿಪ್ಪುಗಳಲ್ಲಿ ಗಂಡು ಹುಡುಗರ ವಯೋಮಿತಿಗಿಂತ ಹೆಣ್ಣು ಮಕ್ಕಳ ವಯೋಮಿತಿಯು ಒಂದು ವರ್ಷ ಹೆಚ್ಚು ಇರುತ್ತದೆ. ಮುಂದುವರಿದ ವರ್ಗದ ಉಮೇದವಾರರಿಗೆ ಹೈಸ್ಕೂಲ ಸ್ಕಾಲರಶಿಪ್ಪಿನ ಪರೀಕ್ಷಾ ಫೀಯು ೨ ರೂ. ಮತ್ತು ಮಿಡಲ್‌ಸ್ಕೂಲ ಸ್ಕಾಲರಶಿಪ್ಪಿನ ಪರೀಕ್ಷಾ ಫೀಯೂ ೧ ರೂ. ಇರುತ್ತದೆ. ಹಿಂದುಳಿದ ವರ್ಗದ ಉಮೇದವಾರರಿಗೆ ಪರೀಕ್ಷಾ ಫೀಯು ಇರುವದಿಲ್ಲ. ಜಿಲ್ಲಾ ಕೇಂದ್ರಗಳಲ್ಲಿ ಇರುವ ಸರಕಾರಿ ಹೈಸ್ಕೂಲಿನ ಹೆಡ್ ಮಾಸ್ತರರಲ್ಲಿ ಪುಕ್ಕಟೆಯಾಗಿ ದೊರೆಯುವ ಅಚ್ಚಾದಫಾರ್ಮುನಗಳಲ್ಲಿಅರ್ಜಿಗಳನ್ನು ಕಳಿಸಬೆಕು ಮತ್ತು ಅವು ೧೯೩೨ ಅಕ್ಟೋಬರ ೩೦ ನೆಯತಾರೀಖಿನ ದಿನ ಅಥವಾ ಅದಕ್ಕೂ ಮೊದಲು ಮುಟ್ಟುವಂತೆ ಕಳಿಸಬೇಕು. ಈ ಎರಡೂ ಪರೀಕ್ಷೆಗಳು ಕೆಳಗಿನಂತೆ ಆಯಾ ದಿನಗಳಲ್ಲಿ ಪ್ರತಿಯೊಂದು ಕೇಂದ್ರದಲ್ಲಿ ನಡೆಯುವವು:—

ಕಾರ್ಯಕ್ರಮ

೧೫ – ೧೨ – ೧೯೩೨	ಗಣಿತ	೧೦೦	ಗುಣಗಳು
	ಸಾಮಾನ್ಯ ಜ್ಞಾನ — ೧ (ಇತಿಹಾಸ ಮತ್ತು ಭೂಗೋಲ)	೫೦	,,
	ಸಾಮಾನ್ಯ ಜ್ಞಾನ — ೨ (ಪ್ರಾಕೃತಿಕ ಭೂಗೋಲ ಮತ್ತು ವಿಜ್ಞಾನ)	೫೦	,,
೧೬ – ೧೨ – ೧೯೩೨	ಪ್ರಾದೇಶಿಕ ಭಾಷೆ — ೧ (ವಾಚನವಾಚನ ಮತ್ತು ಪ್ರಬಂಧ)	೫೦	,,
	ಪ್ರಾದೇಶಿಕ ಭಾಷೆ — ೨ (ಓದುವದು ಮತ್ತು ತಿಳಿದುಕೊಳ್ಳುವದು.)	೫೦	,,
		೩೦೦	ಗುಣಗಳು

ನಿಶ್ಚಿತ ದಿನಕ್ಕಿಂತ ತಡವಾಗಿ ಬಂದ ಅರ್ಜಿಗಳನ್ನು ಯಾವ ಪರಿಸ್ಥಿತಿಯಲ್ಲಿಯೂ ಸ್ವೀಕಾರ ಮಾಡುವದಿಲ್ಲ.

(ಸಹಿ). ಡಿ. ವ್ಹಿ. ಚಿಕ್ಕರಮನೆ
ಎಜ್ಯುಕೇಶನಲ್ ಇನಸ್ಪೆಕ್ಟರ ಧಾರವಾಡ ಭಾಗ, ಧಾರವಾಡ

18/8/15

ಸಂಪಾದಕೀಯ

ವನಮಹೋತ್ಸವ

ಶ್ರಾವಣ ಮಾಸದ ಬಿಡುವಿಲ್ಲದ ಜಡಿಮಳೆಯೊಂದಿಗೆ ೩ ವರ್ಷದಂತೆ ಈ ಸಲವೂ ವನಮಹೋತ್ಸವವು ಡಿನಲ್ಲೆಲ್ಲ ರೂಪುಗೊಂಡೂ ಬಂದಿದೆ. ಪ್ರದೇಶದ ಸ್ಥಿತಿಗನುಸರಿಸಿ ಮುಂಬಯಿ ರಾಜ್ಯದ ಬೇರೆ ಬೇರೆ ಸ್ಥಳಗಳಲ್ಲಿ ಅಲ್ಲಿಯ ಕಲೆಕ್ಟರರು ಹಾಗೂ ಗ್ರಾಮ ಸುಧಾ ರಣಾ ಮಂಡಳದವರು ಯಾವದೊಂದು ವಾರವನ್ನು ವನಮಹೋತ್ಸವದ ಸಪ್ತಾಹವೆಂದು ಆಚರಿಸಲು ನಿರ್ಧ ರಿಸುವರು. ಕನ್ನಡ ನಾಡಿನ ಜಿಲ್ಲೆಗಳಲ್ಲಿ ಈ ಮಹೋ ತ್ಸವವು ವಿಜೃಂಭಣೆಯಿಂದ ನಡೆದಿದೆ; ನಡೆಯಲಿದೆ.

ರಾಷ್ಟ್ರದ ವನಸಿರಿಯನ್ನು ಹೆಚ್ಚಿಸಿ, ಅಧಿಕ ರೀತಿಯಲ್ಲಿ ಕೆತಂದು ಅಧಿಕ ಆಹಾರೋತ್ಪಾದನೆಯನ್ನು ಮಾಡು ವ ನೆರವಾಗುವುದಲ್ಲದೆ ಈ ವನಮಹೋತ್ಸವವು ಅನೇಕ ಕ್ಷಣಿಕ ಲಾಭಗಳನ್ನು ಒದಗಿಸುತ್ತದೆ. ಸಾಲೆಯ ಕಾರದಲ್ಲಿ, ಆಟದ ಬೈಲಿನ ಸುತ್ತಲೂ ಗಿಡಗಳನ್ನು ನುವುದಲ್ಲದೆ ನೆಟ್ಟ ಗಿಡಗಳನ್ನು ಸಂರಕ್ಷಿಸುವದು, ೀಕ್ಷಿಸುವದು ನಡೆಯಬೇಕು; ಗಿಡ ನೆಡುವದಕ್ಕಿಂತ ಟ್ಟ ಗಿಡಗಳನ್ನು ಬೆಳೆಯಿಸುವದು ಹೆಚ್ಚು ಮಹತ್ವದ್ದು. ತಿ ಇಯತ್ತೆಯ ಮಕ್ಕಳು ಸಾಂಘಿಕವಾಗಿ ಗಿಡಗಳನ್ನು ಟ್ಟು ಅವುಗಳನ್ನು ರಕ್ಷಿಸುವ, ಬೆಳೆಯಿಸುವ ಹೊಣೆ ಾರಬೇಕು. ಸಾಂಘಿಕ ಕಾರ್ಯಪ್ರವೃತ್ತಿ, ಸಹಕಾರ ನೋಭಾವ ಇವು ಇದರಿಂದ ಬೆಳೆಯುವದರಲ್ಲಿ ಸಂದೇ ಹವಿಲ್ಲ. ಗಿಡ ನೆಡುವದೂ ಒಂದು ಚಟುವಟಿಕೆಯೆಂದು ಗಮನಿಸಿ ಅದಕ್ಕೆ ಸಮನ್ವಯಿಸಿ ವಿಷಯಗಳ ಜ್ಞಾನ ವನ್ನೂ ಮಾಡಿಕೊಡಲಿಕ್ಕೆ ಅನುವಾಗುವುದು. ಗಿಡ ನೆಡುವ ಹಾಗೂ ಅವುಗಳನ್ನು ಬೆಳೆಯಿಸುವ ಈ ಕಾರ್ಯ ದಲ್ಲಿ ವರ್ಗ ವರ್ಗಗಳಲ್ಲಿ ಹಿತವಾದ, ಮಿತವಾದ ಸ್ಪರ್ಧೆ ಇರಬೇಕು.

ಸ್ವಾತಂತ್ರ್ಯೋತ್ಸವ:

ಇದೇ ಆಗಸ್ಟ ೧೫ನೆಯ ದಿನಾಂಕ ಭಾರತವು ತನ್ನ ಸ್ವಾತಂತ್ರ್ಯದ ಐದನೆಯ ಜಯಂತಿಯನ್ನು ಆಚರಿಸಲಿದೆ. ಈ ಸುಸಂದರ್ಭದಲ್ಲಿ ಸ್ವಾತಂತ್ರ್ಯ ದೊರಕಿಸಿಕೊಟ್ಟ ರಾಷ್ಟ್ರಪಿತ ಮಹಾತ್ಮಾಗಾಂಧಿಯವರನ್ನು, ಸ್ವಾತಂತ್ರ್ಯ ಕ್ಕಾಗಿ ಪ್ರಾಣಾರ್ಪಣೆ ಮಾಡಿದ ಹುತಾತ್ಮರೆಂದೆನಿಸಿ ಕೊಂಡ ಸತ್ಯಾಗ್ರಹಿಗಳನ್ನು ನೆನೆಯುವದೂ ಅವರ ಆತ್ಮಕ್ಕೆ ಶಾಂತಿ ದೊರೆಯಲೆಂದು ಕೋರುವದು, ಅಂತಹ ಕಾರ್ಯಗಳಲ್ಲಿ ತೊಡಗುವೆವೆಂದು ಪ್ರತಿಜ್ಞೆಗೈಯುವದೂ ನಮ್ಮೆಲ್ಲರ ಧರ್ಮ. ಭಾರತಕ್ಕೆ ಎಂದಿಲ್ಲದ ಅಖಂಡತ್ವವನ್ನು ತಂದುಕೊಟ್ಟ ದಿವಂಗತ ಸರದಾರ ಪಟೇಲರನ್ನೂ ನೆನೆಯ ದಿರೆವು. ಕಳೆದ ಐದು ವರುಷಗಳಿಂದ ಗಳಿಸಿದ ಸ್ವಾತಂತ್ರ ವನ್ನು ಭದ್ರಗೊಳಿಸಿ ಭಾರತದ ಬಾವುಟವು ನಭೋಮಂ ಡಲದಲ್ಲಿ ರಾಷ್ಟ್ರದ ಧವಲ ಕೀರ್ತಿ ಯನ್ನು ಜಗಕ್ಕೆ ಸಾರುತ್ತ ಹಾರುತ್ತಿರುವಂತೆ ಶ್ರಮಿಸುತ್ತಿರುವ ನಮ್ಮ ಇಂದಿನ ಮುಂದಾಳುಗಳಿಗೆ ಧನ್ಯತೆಗಳನ್ನು ಅರ್ಪಿಸುವೆವಲ್ಲದೆ

ದೇವರು ಇನ್ನೂ ಹೆಚ್ಚಿಗೆ ಅವರಿಗೆ ಆಯುರಾರೋಗ್ಯವನ್ನೂ ಕೊಡಲೆಂದು ಪ್ರಾರ್ಥಿಸುವೆವು.

"ಕನ್ನಡ ಪ್ರಾಥಮಿಕ ಶಿಕ್ಷಣವು" ರಾಷ್ಟ್ರ ಸ್ವಾತಂತ್ರ್ಯದ ಭದ್ರತೆಯಲ್ಲಿ ತನ್ನ ಅಳಿಲು ಸೇವೆಯನ್ನು ಸಲ್ಲಿಸದೆ ಇರದು. ಭಾರತದ ಕೀರ್ತಿ, ಭಾರತೀಯ ಪ್ರಜಾರಾಜ್ಯ ಇನ್ನೂ ಪ್ರಪಂಚದಲ್ಲಿ ಸಾರವತ್ತಾಗಿ, ರಸವತ್ತಾಗಿ, ಕೀರ್ತಿವತ್ತಾಗಿ ನಿಲ್ಲಲಿ ಎಂಬ ತನ್ನ ಹಾರೈಕೆಯನ್ನು ಪರಮಾತ್ಮನು ಪೋಷಿಸಲಿ ಎಂದು ಪ್ರಾರ್ಥಿಸುತ್ತೇವೆ.

"ಕೈಪಿಡಿಗಳು" ಹಾಗೂ "ಮಾರ್ಗದರ್ಶಿಕೆಗಳು"

ಅನೇಕ ಪ್ರಾಥಮಿಕ ಶಿಕಕ್ಷರು ಶಬ್ದಾರ್ಥ ಪುಸ್ತಕ, ಕೈಪಿಡಿ, ಮಾರ್ಗದರ್ಶಿಕೆ, ಟಿಪ್ಪಣಿ ಪುಸ್ತಕ ಇವೇ ಮೊದಲಾದ ನಿಷಿದ್ಧ, ನಿಯಮಬಾಹ್ಯ ಪುಸ್ತಕಗಳನ್ನು ಮಕ್ಕಳಿಗೆ ಕೊಳ್ಳಲಿಕ್ಕೆ ಪ್ರೋತ್ಸಾಹಿಸುವದು ಕಂಡುಬಂದಿದೆ. ಇಂತಹ ಪುಸ್ತಕಗಳಿಂದ ಮೂರು ತರಹದ ಹಾನಿಯಿದೆ, ಮೊದಲನೆಯದಾಗಿ ಶಿಕ್ಷಕರಲ್ಲಿ ಆಲಸ್ಯತನ, ಮಂದಗಾಮಿತ್ವ, ವಿಚಾರ ಸರಣಿಯ ಕುಗ್ಗುವಿಕೆ ಇವು ಬೆಳೆಯುತ್ತವೆ. ಪ್ರತಿ ದಿನ ಕಲಿಸತಕ್ಕ ಪಾಠಗಳ ವಿಷಯವನ್ನು ಬೇರೆ ಬೇರೆ ಪುಸ್ತಕಗಳಿಂದ ಓದಿ ಸಂಗ್ರಹಿಸಿ ತಯಾರಿಸುವದು ಶಿಕ್ಷಕರ ಕರ್ತವ್ಯ. ರಾಷ್ಟ್ರ ಸೇವಾ ಭಾವನೆಯನ್ನು ಹೊಂದಿ ಟ್ರೇನಿಂಗ ಕಾಲೇಜುಗಳಿಂದ ಹೊರಬೀಳುವ ತರುಣ ಶಿಕ್ಷಕರಲ್ಲಿ ಇಂಥ ನಿಷಿದ್ಧ ಪುಸ್ತಕಗಳನ್ನು ಪ್ರೋತ್ಸಾಹಿಸುವ ಹವ್ಯಾಸ ಕಂಡರಂತೂ ಅತ್ಯಂತ ವಿಷಾದಕರ.

ಎರಡನೆಯದಾಗಿ, ಈ ಪುಸ್ತಕಗಳು ಮಕ್ಕಳನ್ನು ಗಿಳಿಗಳನ್ನಾಗಿ ಮಾರ್ಪಡಿಸುತ್ತವೆ. ಅವರು ಅರ್ಥ ತಿಳಿದುಕೊಳ್ಳದೆ ಯಾಂತ್ರಿಕ ರೀತಿಯಿಂದ ಕಂಠಪಾಠ ಮಾಡತ್ತಾರೆ. ಮಕ್ಕಳಲ್ಲಿ ಹುದುಗಿದ ಅಂತಃಶಕ್ತಿಗಳನ್ನ ಹೊಡೆದೆಬ್ಬಿಸಿ ಅವರಲ್ಲಿ ಸಂಶೋಧನಾ ಸಾಮರ್ಥ್ಯ, ಸ್ವಕಾಯ ಪ್ರವೃತ್ತಿ, ಸ್ವಚ್ಛ ಹಾಗೂ ಸ್ವತಂತ್ರ ವಿಚಾರ ಶಕ್ತಿ ಇವುಗಳನ್ನು ಬಿತ್ತಿ ಅವರ ಸರ್ವತೋಮುಖ ಏಳಿಯನ್ನುಂಟು ಮಾಡುವದೇ ಶಿಕ್ಷಣದ ಧ್ಯೇಯ. ಶಬ್ದಾರ್ಥ ಪುಸ್ತಕ, ಮಾರ್ಗದರ್ಶಿಕೆ, ಕೈಪಿಡಿ ಮೊದಲಾದವುಗಳಿಂದ ಇವುಗಳ ವಿನಾಶವಾಗುವದರಲ್ಲಿ ಸಂದೇಹವಿಲ್ಲ.

ಮೂರನೆಯದಾಗಿ ಬಡತನದ ಬವಣೆಯಿಂದ ಬಳಲುತ್ತಿರುವ ಜನಸಾಮಾನ್ಯರಿಗೆ ಈ ಪುಸ್ತಕಗಳಿಂದ ಹಣ ಭಾರವೂ ಆಗುವದು.

ಆದುದರಿಂದ ಸರಕಾರದವರು ಇಂಥ ಪುಸ್ತಕಗಳನ್ನ ನಿಷೇಧಿಸಿದ್ದಾರೆ. ವ್ಯಾಪಾರೀ ವೃತ್ತಿಯಿಂದ ಬರೆಯಲ್ಪಟ್ಟ ನಿರ್ಜೀವಿ ಮುದ್ರಣದ ಮಾರ್ಗದರ್ಶಿಕೆಗಿಂತ ಶಿಕ್ಷಕರು ತಾವೇ ಸಜೀವಿ ಮಾರ್ಗದರ್ಶಕರಾಗಿ ನಿಲ್ಲಬೇಕು. ಸಾಮಾನ್ಯವಾಗಿ, ಟೀಕೆ-ಟಿಪ್ಪಣಿಗಳು ಬರೆಯಲ್ಪಟ್ಟ ಪುಸ್ತಕಗಳನ್ನು ಪಠ್ಯಪುಸ್ತಕಗಳೆಂದು ಹಚ್ಚುವದಿಲ್ಲ. ನೈಜ ಅಭ್ಯಾಸವನ್ನು ಪರೀಕ್ಷಿಸುವಂತೆ ಪ್ರಶ್ನೆಗಳ ಸಂಯೋಜನೆ ಇರುವದು. ಶಾಲೆಯಲ್ಲಾಗಲಿ, ಮನೆಯಲ್ಲಾಗಲಿ ಉಪಯೋಗಿಸಲಿಕ್ಕೆಂದು ಇಂತಹ ನಿಷಿದ್ಧ, ನಿಯಮಬಾಹ್ಯ ಪುಸ್ತಕಗಳನ್ನು ಕೊಳ್ಳ ಹಚ್ಚಬಾರದೆಂದು ಶಿಕ್ಷಕರಿಗೆ ವಿನಂತಿಸಲಾಗಿದೆ. ಕೆಳಗಿನ ಮೂರು ವರ್ಗಗಳ ಕ್ರಮಿಕ ಪುಸ್ತಕೇತರ ಪುಸ್ತಕಗಳನ್ನು ಸಹ ಉಪಯೋಗಿಸಬಾರದೆಂದು ಖಾತೆಯವರ ಉದ್ದೇಶವಿದೆ. ಶಿಕ್ಷಣ ವ್ಯವಸಾಯಿಗಳು ಮೂಲ ಶಿಕ್ಷಣ ತತ್ವವನ್ನು ಚೆನ್ನಾಗಿ ಆರಿತರೆ, ತೀವ್ರವೇ ಈ ದೋಷವು ದೂರಾಗುವದೆಂದು ಸೂಚಿಸದಿರಲಾರೆವು.

ವ್ಯಕ್ತಿವಿಕಾಸದಲ್ಲಿ

ಅನುರಾಗಗಳ ಮತ್ತು ಸ್ಥಿರಮನೋವೃತ್ತಿಗಳ ಸ್ಥಾನ

ಲೇಖಕರುಃ— ಶ್ರೀ ತಟ್ಟಿ ಶಾಮರಾಯರು. ಬಿ. ಎ.
ನಿವೃತ್ತ ಮುಖ್ಯಾಧ್ಯಾಪಕರು, ಅಧ್ಯಾಪನ ಕೇಂದ್ರ, ನವಲಗುಂದ.

★

ನಮ್ಮ ಬಾಳುವೆಯು ಒಳ್ಳೆಯ ರೀತಿಯಿಂದ ನಡೆಯು ೀಕಾದರೆ ಸಮಾಜದಲ್ಲಿರತಕ್ಕ ಹೆಚ್ಚು ಹೆಚ್ಚು ವ್ಯಕ್ತಿಗಳ ುಧಾರಣೆಯಾಗಬೇಕು. ಈ ಸುಧಾರಣೆಯು ಬುದ್ಧಿಯ ಿಳವಣಿಗೆ, ಅಂತಃಕರಣದ ಅರುಳುವಿಕೆ ಹಾಗು ಹೊಸ ಾರ್ಯಸಾಧನೆಯ ಸಾಮರ್ಥ್ಯ ಹೀಗೆ ಮೂರು ುಕ್ತಿನಲ್ಲಿ ನಡೆಯಬೇಕು. ಸಮಾಜದ ಉತ್ಕರ್ಷ ಅಥವಾ ಮಾನವಕುಲದ ಉನ್ನತ್ತಿಯೇ ರಾಜ್ಯಶಾಸನದ ಗುರಿ-ಯಾಗಿರುವದು. ಸಮಾಜದ ಸುಸ್ಥಿತಿಯು ವ್ಯಕ್ತಿಯ ್ರೇಯಃ ಸಾಧನೆಗೆ ಅನುಕೂಲವಾದುದು.

ಸುಶಿಕ್ಷಿತನೆನಿಸಿಕೊಳ್ಳುವ ವ್ಯಕ್ತಿಯು ಹೇಗಿರಬೇಕು? ಂತಹವ ವ್ಯಕ್ತಿಯು ನಮ್ಮ ಆದರ್ಶಪ್ರಾಯನು ಎಂದರೆ ತನು ಪೊರಲು ಕಾರ್ಯಕ್ಷಮನಾಗಿರುವನು ತನ್ನ ುನೆತನದ—ತಂದೆತಾಯಿಗಳ ಹೆಂಡತಿ ಮಕ್ಕಳ ಬಂಧು ಳಗದವರ ಯೋಗಕ್ಷೇಮವನ್ನು ಅತ್ಯಂತ ಆಸಕ್ತಿ ಯಿಂದಲೂ ದಕ್ಷತೆಯಿಂದಲೂ ನೋಡಿಕೊಂಡು ೋಗುವನು. ಅವನ ಹಿರಿಯತನವನ್ನು ಯಾರೂ ್ರಶ್ನಿಸಿಪುವದಿಲ್ಲ. ಅವನ ಮಾತಿಗೊಂದು ಬೆಲೆ-ಂದುವದು. ಮನೆಯ ಎಲ್ಲ ಆಗು—ಹೋಗುಗಳಿಗೂ ವನು ತನ್ನ ಲಕ್ಷವನ್ನು ಪೂರೈಸುವನು. ಅವನಲ್ಲಿ ೈರ್ಯ ಆತ್ಮವಿಶ್ವಾಸ ಉತ್ಸಾಹಗಳಿರುವವು. ೈಕೈ ಯಿಂದ ದೃಷ್ಟ ಪುಷ್ಟನಾಗಿದ್ದರೂ ಅವನಲ್ಲಿ ಚಟುವಟಿಕೆ ಯೂ ಅದೇ ಪ್ರಮಾಣದಲ್ಲಿರುವದು. ನಿಯಮಿತ ತನವೂ ಕಟ್ಟುನಿಟ್ಟಿನ ರೀತಿಯೂ ಅವನ ಸ್ವಭಾವವಾಗಿ ೋಗಿರುವವು. ಆಹಾರ ವಿಹಾರಗಳಲ್ಲಿ ಹಿತವೂ ಮಿತವೂ ಆದ ರೀತಿಯು ಅವನದು. ಮನೆಯವರೆಲ್ಲರ ಆದರಂತೆ ಅವನನ್ನು ಬಲ್ಲವರೆಲ್ಲರ ್ರೇಮಾದರಗಳಿಗೆ ಸುತರಾಂ ಪಾತ್ರವಾಗಿರುವನು. ಜನರು ತನಗೆ ಒಪ್ಪಿ ಸಿದ ಸಾರ್ವಜನಿಕ ಹಿತದ ಕೆಲಸಗಳನ್ನು ಅಷ್ಟೇ ಮನ ಮುಟ್ಟಿ ಮಾಡುವನು.

ಈ ವ್ಯವಹಾರ ಚಾತುರ್ಯವೂ ಕಾರ್ಯಕುಶಲ-ತೆಯೂ ಅವನಲ್ಲಿ ನೆಲೆಗೊಂಡುದುದನ್ನು ಸೂಚಿಸುವಂತೆ ಅವನ ಅಂತಃಕರಣವು ಕೋಮಲವಾಗಿರುವದು, ಹೃದಯವು ವಿಶಾಲವಾಗಿರುವದು. ಎಲ್ಲರಲ್ಲಿಯೂ ನನ್ನವರೆಂಬ ಭಾವನೆ ಅತನಿಗೆ—ಎಲ್ಲರಪ್ರೀತಿ ಪಾತ್ರನು, ಎಲ್ಲರಿಗೂ ಬೇಕಾದವನು—ಜೊಡ್ಡಮನುಷ್ಯನು ಅವನ ಮಾತು ಎಲ್ಲರಿಗೂ ಸರಿ ಎನಿಸುವದು, ಸಮಾಧಾನ ವೆನಿಸುವದು. ಅವನ ಕಣ್ಣು ತುಂಬ ಮುಖದ ಭಾವ ಇವುಗಳನ್ನು ನೋಡಿದರೆ ನರಿ—ಅವು ಅವನ ವ್ಯಕ್ತಿತ್ವಕ್ಕೆ ಸುಸ್ಪಷ್ಟವ್ಯಾಖ್ಯಾನದಂತೆ ಇವೆ. ಮನೆಯವರ ಪಾಗೂ ಆಪ್ತೇಷ್ಟರ ಸುಖದುಃಖಗಳಲ್ಲಿ ಅವನಿಗೆ ಪೂರ್ಣ ಅತ್ಮೀ ಯಭಾವ. ಆಪತ್ತಿನಲದಲ್ಲಿ ತನ್ನನ್ನು ಬಳಸಿಬಂದವರಲ್ಲಿ ಆಪ್ತಬಂಧುವಂತೆ ಇರುವನು. ಎಲ್ಲರಲ್ಲಿ ದಯಾಪರನೂ ಕ್ಷಮಾಶೀಲನೂ; ಆದರೆ ಕಪಟ ದುರಾಚಾರಗಳನ್ನು ನಿರ್ದಾಕ್ಷಿಣ್ಯದಿಂದ ಖಂಡಿಸುವನು. ಅವನ ರೀತಿ ಒಳ-ಗೊಂದು ಹೊರಗೊಂದು ಇಲ್ಲ; ಯಾವಕೆಲಸವನ್ನು ಮಾಡಿದರೂ ಮನಃಪೂರ್ವಕವಾಗಿ ಮಾಡುವನು. ತನ್ನ ಅಭಿಪ್ರಾಯವನ್ನು ಒತ್ತಿತ್ತಿಹೇಳುವದಕ್ಕಿಂತ ಇತರರ ಹೃದ್ಗತವನ್ನರಿಯಲು ಹೆಚ್ಚು ಆತುರನಿರುವನು ಕಾನಾಡುವಪೂರ್ವದಲ್ಲಿ ಅನ್ಯರನ್ನು ಸಮಾಧಾನ-ದಿಂದ ಕೇಳಿಕೊಳ್ಳುವನು ವಾದದಲ್ಲಿ ಎಂದೂ ಆವೇಶ—

ಯುಕ್ತನಾಗುವದಿಲ್ಲ. ಪರರ ಪ್ರತಿಪಾದನೆಗೆ ಏನಾದರೂ ಅಂತರಿಕ ಹೇತುವಿನ ಆಪಾದನೆ ಮಾಡುವದಿಲ್ಲ. ಮಾತುಗಾರಿಕೆಯಲ್ಲಿ ಹಾಸ್ಯರಸವು ಅಲ್ಲಲ್ಲಿ ಹೆಣಿಕೆಹಾಕಿದರೂ ಅಪ್ರಸ್ತುತವಿಷಯವನ್ನೆತ್ತಿ ವಿಷಯದ ಗಂಭೀರ ಸ್ವರೂಪವನ್ನು ಮರೆಮಾಜುವದಿಲ್ಲ ದೊಡ್ಡವರಲ್ಲಿಯೂ ಮಹಾಮಹಿಮರಲ್ಲಿಯೂ ಭಕ್ತಿಯುತನಾಗಿರುವನು. ಸ್ವಾಭಿಮಾನಿಯೂ, ವಿನಯಶೀಲನೂ, ಶ್ರದ್ಧಾಳುವೂ ಕರ್ತವ್ಯನಿಷ್ಠನೂ ಆಗಿರುವನು. ಆತನ ರಾಗದ್ವೇಷಾದಿ ಮನೋವಿಕಾರಗಳ ಮೇಲೆ ಬುದ್ಧಿಯ ನಿಯಂತ್ರಣವಿರುವದು. ಅವನ ರಸಿಕತೆಯೂ ಗುಣಗ್ರಹಣವೂ ವೇಳೆಯ ಸದ್ವಿನಿಯೋಗದ ಸಾಕ್ಷಿಗಳು.

ಈ ತರದ ಶಿಕ್ಷಣವು ಅವನಿಗೆ ಗುರ್ವನುಗ್ರಹದಿಂದ ದೊರೆತಿರಬೇಕಾದರೆ ಅವನು ವಿವೇಕಿಯೂ ಬುದ್ಧಿಶಾಲಿಯೂ ಇರಬೇಕೆಂದು ಹೇಳುವ ಕಾರಣವಿಲ್ಲ. ಏಕೆಂದರೆ ಶರೀರ, ಹೃದಯ,ಬುದ್ಧಿ ಇವು ಒಂದಕ್ಕೊಂದು ಅತಿನಿಕಟವಾಗಿ ಸಂಬಂಧಿಸಿರುವವು. ನಮ್ಮ ಆದರ್ಶಪ್ರಾಯವಾದ ವ್ಯಕ್ತಿಯು ಜಾಣನೂ, ಬುದ್ಧಿಶಾಲಿಯೂ ವಿವೇಕಿಯೂ ಆಗಿರುವನು. ಅವನಿಗೆ ದೇಶ-ಕಾಲ-ಪರಿಸ್ಥಿತಿಯು ಸೂಕ್ಷ್ಮಜ್ಞಾನವಿರುವದು, ವಿದ್ವಾಂಸಕ ಸಭೆ ಸಮಿತಿಗಳಲ್ಲಿ ಮನೆಯಲ್ಲಿದ್ದ ಹಾಗೆ ಎನಿಸುವದು; ದೇಶದಲ್ಲಿ ಭಿನ್ನಾಭಿಪ್ರಾಯಗಳಿಗೆ ಎಡೆಗೊಡುವಪ್ರತಿಯೊಂದು ಮಹತ್ವದ ವಿಷಯದ ಇತ್ಯರ್ಥವನ್ನು ತನ್ನ ಮನಸ್ಸಿನಲ್ಲಿ ಆತನು ಜಿನ್ನಾಗಿ ಮಾಡಿಕೊಂಡಿರುವನು. ಆದ್ದರಿಂದ ತನ್ನ ಸಮಾಜದ ಹಿರಿಯರಲ್ಲಿ ಇವನಿಗೊಂದು ಗೌರವ ಸ್ಥಾನವಿರುವದು. ತನ್ನಶಕ್ತಿಯ ಅಳವಿನಲ್ಲಿರುವ-ಧ್ಯೇಯವನ್ನು ರೂಪಿಸಿಕೊಳ್ಳುವದಕ್ಕೆ ಬುದ್ಧಿಯು ಸಹಾಯಬೇಕು. ಹೀಗೆ ವ್ಯಕ್ತಿಯ ಗುರಿಯ ಸಾಧನೆಗೆ ದೇಹ, ಮನಸ್ಸು, ಆತ್ಮ ಇವೆಲ್ಲವುಗಳ ಸಮನ್ವಿತ-ವಿಕಾಸವು ಕಾರಣವಾಗಿರುವದು. ಮುಖ್ಯ-ವಾಗಿ ಕಾರ್ಯಕುಶಲತೆಗೆ ನಿಯಮಿತತನವು ವೈಯಕ್ತಿಕ ಸ್ವಭಾವವಾಗಿರಬೇಕು. ಅವನ ದೇಹದ ರಥವನ್ನು ಹೊಡೆಯುವ ಒಂದು ಯಂತ್ರವು ಈ ರೂಢಿಯ ನಿಯಮಿತತನ; ಎರಡನೆಯದು ರಾಗದ್ವೇಷಾದಿ ಭಾವಗ್ರಂಥಿಗಳು (ಅನುರಾಗಗಳು ಅಥವಾ ಸ್ಥಿರಮನೋವೃತ್ತಿಗಳು); ಆ ರಥವನ್ನು ಹೊಡೆಯುವ ಸಾರಥಿಯು ಬುದ್ಧಿ ಅಥವಾ ವಿವೇಕ.

ನಮ್ಮ ಮನೋವಿಕಾರಗಳೆಲ್ಲವೂ ಅನುಭವ ಬುದ್ಧಿ ಇವುಗಳ ಉದಾತ್ತೀಕರಣದ ಸಂಸ್ಕಾರಕ್ಕೊಳಪಟ್ಟು ದಕ್ಷಿಣೋತ್ತರಧ್ರುವಗಳಂತಿರುವ ರಾಗದ್ವೇಷಗಳೆಂಬ ಎರಡು ಕೇಂದ್ರಗಳ ಸುತ್ತ ಬಳಸಿರುವವು. ಪ್ರೀತಿಯೆಂಬ ಸ್ಥಿರ ಭಾವದ ಹಿನ್ನೆಲೆಯಲ್ಲಿ ಆಸೆ, ನಿರಾಸೆ ಖೇದ, ಪ್ರಮೋದ, ಕ್ರೋಧ, ಭಯ ಇವು ಸುತ್ತುವವು. ನಮ್ಮ ಪ್ರಿಯ ವಸ್ತುವು ದೊರೆಯುವ ಯೋಗವಿದ್ದಾಗ ಆಸೆ, ದೊರೆಯದೆಂದು ಖಂಡಿತವಾದರೆ ನಿರಾಸೆ, ದೊರೆತರೆ ಆನಂದ, ಕಳಕೊಂಡರೆ, ದುಃಖ ಅವನ್ನುಯಾರಾದರೂ ಅಪಹರಿಸಿಯಾರು ಎಂಬ ಭಯ, ಅಪಹರಿಸಿದರೆ ಕೋಪ ಹೀಗೆ ಈ ಎಲ್ಲ ಮನೋಭಾವನೆಗಳು ಪ್ರೀತಿಯ ಗಡ್ಡಿಯ ಸುತ್ತಲಿನ ಕಂಬಿಗಳಂತೆ ಸಂಘಟಿತವಾಗಿರುವವು ಇದರಂತೆಯೆ ದ್ವೇಷವೆಂಬ ಸ್ಥಿರಭಾವ ಅಥವಾ ಸ್ಥಾಯಿ ಭಾವದ ಸುತ್ತಲೂ ಇವೇ ಮನೋವಿಕಾರಗಳು ಒತ್ತಿಬರುವವು. ಜೂಜಾಡುವದು ಒಂದು ಅಸಡ್ಡೆ ಎಂದು ನಾವು ಭಾವಿಸಿ ಅದನ್ನು ನಾವು ದ್ವೇಷಿಸಿದರೆ ಅದನ್ನು ಶಾಸನದಿಂದ ಪ್ರತಿಬಂಧಮಾಡುವರು ಎಂದು ಕೇಳಿದರೆ ಒಂದು ಆಸೆಯು ಮೂಡುವದು. ಪ್ರತಿಬಂಧಿಸುವದಿಲ್ಲ ಎಂದು ಕೇಳಿದರೆ ನಿರಾಶೆ. ದ್ಯೂತ ಸಂಸ್ಥೆಯು ಸಮಾಜದಿಂದ ತೊಲಗಿ ಹೋದರೆ ಪ್ರಮೋದ, ತೊಲಗದಿದ್ದರೆ ಖೇದ. ಅನ್ಯಾಯದಿಂದ ಪಾಂಡವರು ಸೋಲಿಸಲ್ಪಟ್ಟರೆಂದರೆ ಕೋಪ ಅನ್ಯಾಯವನ್ನು ಯಾರಾದರೂ ಪ್ರತಿಭಟಿಸಿದರೆ ಸಂತೋಷ, ದ್ರೌಪತಿಗೆ ಮಾನಭಂಗವಾಗುವದೆಂಬ ಸಂದರ್ಭದಿಂದ ಭಯ ಹೀಗೆ ಎಲ್ಲ ವಿಕಾರಗಳು ದ್ಯೂತವೆಂಬ ವಿಷಯದ ಪರಿಸರದಲ್ಲಿ ಒಟ್ಟುಗೂಡುವವು.

ಸ್ಥಿರಮನೋವೃತ್ತಿಗಳು ಎರಡು ವಿಧವಾದವುಗಳು:— (೧) ರಾಗ (೨) ದ್ವೇಷ. ಪ್ರತಿಯೊಂದರಲ್ಲಿ ಪುನಃ (ಅ) ವಸ್ತುನಿಷ್ಠ (ಇ) ವ್ಯಕ್ತಿನಿಷ್ಠ (ಉ) ವಿಷಯನಿಷ್ಠ ಹೀಗೆ ಮೂರೂ ಅವಾಂತರ ಭೇದಗಳನ್ನು ಮಾಡಬಹುದು. ಪ್ರತಿಯೊಬ್ಬ ವ್ಯಕ್ತಿಯ ಜನ್ಮಸ್ಥಳವು - ಊರು, ಮನೆ— ಅವನ ಪ್ರೀತಿಯ ವಸ್ತುವಾಗಿರುವದು.ನಮ್ಮ ಮನೆಯು-ಹುಟ್ಟಿ ಬೆಳೆದು ,ದೊಡ್ಡವರಾದ ಮನೆಯು—ಎಷ್ಟು

ಸಣ್ಣದೇ ಇರಲಿ, ಚಿಕ್ಕ ಗುಡಿಸಲವೇ ಆಗಿರಲಿ– ನಮಗೆ ಎಷ್ಟು ಪ್ರೀತಿ ಪಾತ್ರವಾಗಿರುವದು! ಅದನ್ನು ಸುಧಾರಿಸುವದರಲ್ಲಿ, ಜೊಕ್ಕಟ್ಟವಾಗಿಟ್ಟುಕೊಳ್ಳುವದರಲ್ಲಿ ನಮಗೆಷ್ಟು ಅಭಿಮಾನ! ಕಳೆದುಕೊಳ್ಳುವ ಪ್ರಸಂಗ ಬಂದರೆ ವ್ಯಥೆಯಷ್ಟು! ವ್ಯಕ್ತಿನಿಷ್ಠ (ಅನು)ರಾಗದ ಉದಾಹರಣೆಗೆ ತಾಯಿಯಲ್ಲಿ ನಮಗಿರುವ ವಿಶ್ವಾಸವನ್ನು ತೆಗೆದುಕೊಳ್ಳಬಹುದು. ಸುಖ, ದುಃಖ, ಕೋಪ, ಭಯಗಳೆಲ್ಲವೂ ಆ ಪ್ರೀತಿಯ ವಶವರ್ತಿಯಾಗಿರುವವು. ಪಾನಪ್ರತಿಬಂಧವು ಕಾಂಗ್ರೆಸನಿಷ್ಠರ ಪ್ರೀತಿಯ ವಿಷಯವಾಗಿರುವದು. ಅದು ಯಶಸ್ವಿಯಾದರೆ ಅವರಿಗೆಆನಂದ, ಅದಕ್ಕೆ ವಿರೋಧವು ತಲೆ ಎತ್ತಿದರೆ ಭಯ, ಇತ್ಯಾದಿ. ಹೀಗೆಯೇ ದ್ವೇಷಕ್ಕೂ ಮೂರು ಆವಾಂತರಭೇದಗಳನ್ನು ಹೇಳಬಹುದು. ಮಾಂಸಾಹಾರವು ದುಷ್ಟವೆಂಬ ಭಾವನೆ ಪಸ್ತುನಿಷ್ಠ ಅಪ್ರೀತಿಗೆ ಉದಾಹರಣೆ. ಅಯೋಗ್ಯವಾದ ಒಬ್ಬನು ಅಧಿಕಾರದ ಸ್ಥಳಕ್ಕೆ ಆರಿಸಿ ಬರುವದು ವ್ಯಕ್ತಿನಿಷ್ಠ ತಿರಸ್ಕಾರಕ್ಕೆ ಉದಾಹರಣೆ. ಹಿಂದೂ ಧರ್ಮ ಕ್ರೋಡೀಕರಣ ಮಸೂದೆಯು ವಿಷಯನಿಷ್ಠ ಅನಾದರಕ್ಕೆ ಉದಾಹರಣೆಯಾಗಿರುವದು. ರಾಗದಲ್ಲಿ– ಪ್ರೀತಿಯಲ್ಲಿ– ತೀವ್ರ ತೀವ್ರತರಾದಿ ಅನೇಕ ಅಂತಸ್ತುಗಳಿವೆ. ಮಹಿ, ಸೇರಿಕೆ, ಪ್ರೀತಿ ಅಭಿಮಾನ, ಶ್ರದ್ಧೆ, ವಿಶ್ವಾಸ ಗೌರವ ಭಕ್ತಿ ಇತ್ಯಾದಿ. ಇದರಂತೆ ಜಗಡ್ಡಿ, ತಿರಸ್ಕಾರ ಅನಾದರ, ಅವಿಶ್ವಾಸ, ಅಗೌರವ, ಕ್ರೋಧ, ದ್ವೇಷ ಇವು ದ್ವೇಷದ ತೀವ್ರ ತೀವ್ರತರಾದಿ ಭೇದಗಳು. ಪ್ರೀತಿಯು ಭಾವರೂಪವಾದ ಮನೋವೃತ್ತಿ, ಅಪ್ರೀತಿಯು ಅಭಾವರೂಪವಾದದ್ದು. ಈ ಅನುರಾಗವು (ಭಾವಗ್ರಂಥಿ, ಸ್ಥಿರ ಮನೋವೃತ್ತಿ, Sentiment) ಅನುಭವದಿಂದಲೂ, ಜ್ಞಾನದಿಂದಲೂ ಹೆಚ್ಚಿಚ್ಚು ಸ್ಥಿರವಾಗುವದು. ಎಲ್ಲಕ್ಕೂ ಹೆಚ್ಚಿನ ಅನುರಾಗವು ಸ್ವಾತ್ಮನಿಷ್ಠ ಗೌರವ ಅಥವಾ ಸ್ವಾಭಿಮಾನ. Self regarding Sentiment ನಮ್ಮನ್ನು ನಾವು ಪೂರ್ಣ ಪ್ರೀತಿಸುವಂತಾದರೆ, ನಮ್ಮ ಶುದ್ಧಾಂತಃಕರಣದ ಸಾಕ್ಷಿಯು ನಮಗೆ ಮನವರಿಕೆಯಾದರೆ ನಮ್ಮ ಪ್ರಗತಿಯು ಆತ್ಯೋನ್ನತಿಯ ನಿಶ್ಚಿತದಾರಿಯಲ್ಲಿದೆ ಎಂದು ನಮ್ಮದಿಯೊಂದುಂಟಾದರೆ ಆಗ ನಮ್ಮ ವೈಯಕ್ತಿಕ-ಸ್ವಾಭಿಮಾನವೇ ನಮ್ಮ ರಥವನ್ನು ಎಡೆತಡೆಯಿಲ್ಲದೆ ಹಡೆಸಿಕೊಂಡು ಹೋಗುವ ದಿವ್ಯ ಶಕ್ತಿಯಾಗುವದು.

ಈ ಮನೋಭಾವನೆಗಳು ಅನುರಾಗರೂಪದಿಂದ ಸಂಘಟಿತವಾಗುವದಕ್ಕೆ ಜ್ಞಾನವೂ ಪವಿತ್ರ ಭಾವನೆಯಿಂದ ಕೈಕೊಂಡ ಕಾರ್ಯಕವೂ ಅವಶ್ಯವಾವವುಗಳು. ಆದ್ದರಿಂದ ಕಾರ್ಯಚರಣೆಗೂ, ಬುದ್ಧಿಯ ವಿಕಾಸಕ್ಕೂ ಪಾಠಶಾಲೆಗಳಲ್ಲಿ ಪ್ರಾಧಾನ್ಯವಿರಬೇಕಾದುದು ಅಗತ್ಯ.

ವಿಶೇಷ ಸುದ್ದಿ ೧

೧೯೩೨ ನೆಯ ಎಪ್ರಿಲ್ ತಿಂಗಳಲ್ಲಿ ಜರಗಿದ ಪ್ರಾ. ಶಿ. ಪ್ರ. ಪತ್ರ ಪರೀಕ್ಷೆಯಲ್ಲಿ ಕೇವಲ ಹಿಂದೀ ವಿಷಯದಲ್ಲಿ ನಾಪಾಸಾದ ಧಾರವಾಡ ವಿಭಾಗದ ಉಮೇದವಾರರು ೧೯೩೩ ನೆಯ ಅಕ್ಟೋಬರ ತಿಂಗಳಲ್ಲಿ ಪುನಃ ಪುರವಣಿ ಪರೀಕ್ಷೆಗೆ ಕೂಡ್ರಬೇಕಾಗುವದು. ಅಂಥ ಉಮೇದವಾರರು ಸದರೀ ಪರೀಕ್ಷೆಗೆ ಕೂಡ್ರಬಯಸುವದಕ್ಕಾಗಿ ತಮ್ಮ ತಮ್ಮ ಟ್ರೇನಿಂಗ ಕಾಲೇಜಗಳ ಪ್ರಿನ್ಸಿಪಾಲರ ಕಡೆಗೆ ತೀವ್ರ ಅರ್ಜಿಯನ್ನು ಮಾಡಿಕೊಳ್ಳತಕ್ಕದ್ದು. ಹೀಗೆ ಬಂದ ಎಲ್ಲ ಅರ್ಜಿಗಳನ್ನು ಆ, ಆ, ಪ್ರಿನ್ಸಿಪಾಲರು ಮೆಹರ್ಬಾನ ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ ಧಾರವಾಡ ಅವರ ಕಡೆಗೆ ತಾ ೧– ೯– ೧೯೩೨ ನೆಯ ದಿನಾಂಕ ನೊಳಗಾ ಕಳಿಸಿಕೊಡುವರು.

ವಿಶೇಷ ಸುದ್ದಿ ೨

ಈ ಸಲ ಹಾಯ್‌ಸ್ಕೂಲ ಹಾಗೂ ಮಿಡಲ್‌ಸ್ಕೂಲ ಸ್ಕಾಲರಶಿಪ್ ಪರೀಕ್ಷೆಗಳುಏಕಕಾಲಕ್ಕೇ ಅಂದರೆ ೧೯೩೨ ನೆಯ ಡಿಸೆಂಬರ ೧೫–೧೬ ನೆಯ ದಿನಾಂಕಗಳಲ್ಲಿ ನಡೆಯುವವು.

ಭೂಗೋಲವನ್ನು ಕಲಿಸುವ ಬಗೆಗಳು

ಲೇಖಕರು:— ಶ್ರೀಯುತ ಶಿಂತ್ರಿ ಬಸಪ್ಪನವರು ಬಿ. ಎ. ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್ಸಪೆಕ್ಟರ, ದಕ್ಷಿಣಭಾಗ, ಧಾರವಾಡ.

ಭೂಗೋಲವನ್ನು ಕಲಿಸುವ ಶಿಕ್ಷಕ-ಶಿಕ್ಷಕಿಯರು

ಭೂಗೋಲದ ಶಿಕ್ಷಕ-ಶಿಕ್ಷಕಿಯರಿಂದ ಮಾತ್ರಕ್ಕೆ ಉಳಿದ ಶಿಕ್ಷಕ-ಶಿಕ್ಷಕಿಯರಿಂದ ಸಿಡಿದು ನಿಂತೊಂದು ವರ್ಗವೆಂದು ಭಾವಿಸಲಾಗದು. ಉಳಿದ ಶಿಕ್ಷಕ-ಶಿಕ್ಷಕಿಯರಂತೆಯೇ ಅವರೂ ಇರುತ್ತಾರೆ. ಆದರ್ಶ ಶಿಕ್ಷಕ ಶಿಕ್ಷಕಿಯರಲ್ಲಿ ನೆಲಸಿರಬೇಕಾದ ಗುಣಗಳೆಲ್ಲ ಇವರಲ್ಲಿಯೂ ನೆಲಸಿರಲಿಕ್ಕೇಬೇಕು. ಇವಲ್ಲದೆ ಕೆಲವು ವಿಶಿಷ್ಟ ಲಕ್ಷಣಗಳು ಇವರಲ್ಲಿ ಹೆಚ್ಚಿಗೆ ಇರಬೇಕಾದುದು ಆವಶ್ಯವಿದೆ. ಅವುಗಳನ್ನೊಂದೊಂದಾಗಿ ಇಲ್ಲಿ ವಿವರಿಸಲಾಗುವದು.

(ಅ) ವಿಷಯದ ಪರಿಪೂರ್ಣ ಜ್ಞಾನವಿರಬೇಕು:— ವಿಷಯದ ಪರಿಪೂರ್ಣ ಜ್ಞಾನವಿಲ್ಲದ ಹೊರತು ಭೂಗೋಲವನ್ನು ಕಲಿಸುವದು ತಕ್ಕ್ಯವೇ ಇಲ್ಲ. ಪೃಥ್ವಿಯ ಪ್ರಾಕೃತಿಕ ಸ್ವರೂಪ, ಹವೆ, ನೀರು-ನೆಲಗಳ ಗುಣಧರ್ಮಗಳು, ಭೌಗೋಲಿಕ ಸಂಗತಿಗಳ ನಿಜವಾದ ಕಾರಣಗಳನ್ನೂ ಪರಿಣಾಮಗಳನ್ನೂ ಕಂಡು ಹಿಡಿಯುವದು, ಪರಿಣಾಮದಿಂದ ಕಾರಣಗಳನ್ನು ಶೋಧಿಸುವದು, ಕಾರಣಗಳಿಂದ ಪರಿಣಾಮಗಳನ್ನು ಗೊತ್ತುಹಚ್ಚುವದು, ಅನುಮಾನ-ನಿರ್ಣಯಗಳನ್ನು ಹೊರಡಿಸುವದು, ಇವೆಲ್ಲವೂ ಅವರಲ್ಲಿರಬೇಕಾದುದು ಅವಶ್ಯವು. ವಿಷಯದಪರಿಪೂರ್ಣ ಜ್ಞಾನವಿಲ್ಲದ ಹೊರತು ಇವೆಲ್ಲವು ಸಾಧಿಸಲಾರವೆಂಬ ಮಾತು ಸೂರ್ಯನ ಬೆಳಕಿನಷ್ಟು ಸ್ಪಷ್ಟವಿದೆ. ಮೇಲಿನ ಇಯತ್ತ್ರಿಗಳಲ್ಲಿ ಮಕ್ಕಳು ತಮಗೆ ತೋಚಿದ ಬೇಕಾದ ಭೌಗೋಲಿಕ ಸಂಗತಿಗಳ ಕಾರಣಗಳ ಇಲ್ಲವೆ ಪರಿಣಾಮಗಳ ಬಗೆಗೆ ಕೇಳುವ ಸಂಭವ ಇರುತ್ತಿದೆ. ಒಮ್ಮೊಮ್ಮೆ ಪ್ರಚಲಿತ ಸಂಗತಿಗಳ ಬಗೆಗೂ ಕೇಳುವ ಸಂಭವವಿರುತ್ತಿದೆಯಲ್ಲವೇ ? ಉದಾಹರಣಾರ್ಥವಾಗಿ, ಕೋರಿಯ-ಪೊರ್ಮೋಸಾಗಳಲ್ಲಿ ಅಮೇರಿಕೆಯು ವಹಿಸಿರುವ ಆಸ್ಥೆ, ಕೋರಿಯದಲ್ಲಿಯ ಖಿಲನೆಯ ಉತ್ತರ ಆಕ್ಷಾಂಶದ ಮಹತ್ವ, ಇಲ್ಲವೆ ಚೀನವು ಕೊರಿಯದ ಯುದ್ಧದಲ್ಲಿ ಧುಮಿಕಿದುದು, ಇಂತಹವುಗಳ ಬಗೆಗೆ ಕೇಳುವ ಸಂಭವವಿದೆಯಲ್ಲವೇ ? ಯಾಕಂದರೆ. ಮಕ್ಕಳು ದೈನಿಕ ವರ್ತಮಾನ ಪತ್ರಗಳಲ್ಲಿ ದಿನಾಲು ಇವುಗಳ ಬಗೆಗೆ ಸುದ್ದಿಗಳನ್ನು ಓದುತ್ತಾ ಇರುತ್ತಾರೆ. ಇಂತಹ ಸಂಗತಿಗಳ ಪರಿಪೂರ್ಣವಾದ ಭೌಗೋಲಿಕ ಜ್ಞಾನವು ಇಲ್ಲದ ಹೊರತು ಶಿಕ್ಷಕ-ಶಿಕ್ಷಕಿಯರಿಗೆ ಸಮರ್ಪಕವಾದ ಉತ್ತರಗಳನ್ನು ಕೊಡುವದು ಹೇಗೆ ತಾನೇ ಸಾಧ್ಯವಾದೀತು ? ಈ ಅರಿವು ಸಾಕಷ್ಟಿದ್ದರೇನೇ ಆಯಾ ಸಂಗತಿಗಳ ಬಗೆಗೆ ಪ್ರಶ್ನೆಗಳನ್ನು ಕೇಳಿದ ಮಕ್ಕಳಿಗೆ ಮನವರಿಕೆಯಾಗುವಂತೆ ಹೇಳಲು ಧೈರ್ಯವು ಬರುತ್ತಿದೆಯಲ್ಲವೇ ? ಶಿಕ್ಷಕ- ಶಿಕ್ಷಕಿಯರಿಗೆ ಭೌಗೋಲಿಕ ಸಂಗತಿಗಳ ತುಲನಾತ್ಮಕ ಜ್ಞಾನವಿದ್ದರೆ ಮಾತ್ರ, ಮಕ್ಕಳ ಕಡೆಯಿಂದ ಸಮರ್ಪಕ ಅನುಮಾನ-ನಿರ್ಣಯಗಳನ್ನು ಹೊರಡಿಸಿಕೊಳ್ಳಲು ಶಕ್ಯವಾಗುವದಲ್ಲವೇ ? ಒಟ್ಟಾರೆ, ಪರಿಪೂರ್ಣ ಜ್ಞಾನವಿದ್ದವರು ತಾವೂ ಬೆಳಗುವರಲ್ಲದೆ, ತಮ್ಮ ಕೈಯಲ್ಲಿ ಕಲಿಯುವ ಮಕ್ಕಳನ್ನೂ ಬೆಳಗಿಸಬಲ್ಲರು.

(ಅ) ಉತ್ತಮ ಕತೆಗಾರರಾಗಿರಬೇಕು:— ಇದು ಾಗೋಲ ಶಿಕ್ಷಕ-ಶಿಕ್ಷಕಿಯರಿಗೆ ಅತ್ಯವಶ್ಯವು. ಾಗೋಲದಲ್ಲಿ ಕೆಳಗಿನ ವರ್ಗಗಳಿಗೆ ಎಸ್ಕಿಮೋ, ಪಿಗ್ಮಿ ್ಗೀಯು, ಅರಬ, ಚೀನಿ, ಮೊದಲಾದವರ ಜೀವನ ಮವನ್ನು ಕಥಾರೂಪದಲ್ಲಿಯೇ ಹೇಳುವದಿರುತ್ತದೆ. ದುದರಿಂದ ಹೇಳುವ ಶೈಲಿಯು ಮೋಹಕವಾದದ್ದಾ ರಬೇಕು. ಅದೊಂದು ಕಲೆಯಿದೆ. ಅದನ್ನು ರೂಢಿ ಂದ ಸಾಧಿಸಿ ಕೊಳ್ಳಲು ಶಕ್ಯವಿದೆ. ಅದರ ಮಹತಿ ಳ್ಳಿ ಕೆಳಗಿನ ವರ್ಗಗಳಲ್ಲಿ ಅಷ್ಟಿಷ್ಟೆಂದು ಹೇಳಲಾಸಲ್ಲ. ಲಿಯು ಚಿತ್ತಾಕರ್ಷಕವಿದ್ದಷ್ಟು ಪಾಠಕ್ಕೆ ಕಳೆಯೇರಿ ದು ಪರಿಣಾಮಕಾರಕವಾಗುತ್ತಿದೆ. ಇದರ ಜೊತೆಗೆ ವಭಾವವನ್ನಷ್ಟು ಸಂದರ್ಭಕ್ಕನುಸರಿಸಿ ಬೆರಸುತ್ತ ನಡೆ ೆ, ಭಂಗಾರಕ್ಕೆ ಕುಂದಣವನ್ನಿಟ್ಟಂತಾಗುತ್ತದೆ. ೀತಿಯ ಸ್ವಭಾವದ ಚಿಕ್ಕಮಕ್ಕಳಂತೂ ಮೈಮರೆತು ಂಬೆಗಳಂತೆ ಅತ್ತಿತ್ತ ಆಗಳಾಡದೆ ಚಿತ್ತಗೊಟ್ಟು ಳುವದುಂಟು ! ಆ ದೃಶ್ಯವನ್ನು ನೋಡುವವರೇ ್ಯರು !! ಇಂತಹ ಅಸಾಧಾರಣವಾದ ಶಕ್ತಿಯಿದೆ ಆ ವಭಾವಯುಕ್ತವಾದ ಮತ್ತು ಮೋಹಕವಾದ ೀಳುವ ಶೈಲಿಯಲ್ಲಿ !!! ಅದೊಂದು ಚಿಕ್ಕ ಮಕ್ಕಳನ್ನು ುಗ್ಧರನ್ನಾಗಿ ಮಾಡುವ ಜಾದು ಕಟ್ಟಿಗೆಯೇ ಸೈ. ಂತಹ ಜಾದು ಕಟ್ಟಿಗೆಯನ್ನು ಭೂಗೋಲವನ್ನು ಕಲಿ ವ ಶಿಕ್ಷಕ-ಶಿಕ್ಷಕಿಯರು ತಮ್ಮಲ್ಲಿಟ್ಟುಕೊಳ್ಳುವದು ಸಲ್ಲವೇ ?

(ಇ) ಪ್ರಶ್ನೋತ್ತರ ಕಲೆಯನ್ನರಿತವರಿರಬೇಕು:— ಕ್ಕಳಲ್ಲಿ ಮಾನಸಿಕ ಚಟುವಟಿಕೆಯನ್ನು ಹುಟ್ಟಿಸ ಕ್ಕೂ, ಅವರಿಂದ ಅನುಮಾನನಿರ್ಣಯಗಳನ್ನು ಹೊರಡಿ ಿಕ್ಕೂ, ವಿಷಯದತ್ತ ಅವರ ಅವಧಾನವನ್ನು ಎಳೆಯ ಕ್ಕೂ ಪ್ರಶ್ನದಂತಹ ಸಾಧನವು ಬೇರೊಂದಿಲ್ಲ. ಅದು ಿಸುವಿಕೆಯ ಜೀವಾಳವೆಂದರೂ ಸಲ್ಲುವದು. ಪ್ರಶ್ನ ನ್ನು ಹಾಕುವದರಲ್ಲಿ ಎಷ್ಟು ಜಾಣತನವಿದೆಯೋ ಷ್ಟೇ ಜಾಣತನವು ಶರಿಯಾದ ಉತ್ತರಗಳನ್ನು ಾರರಡಿಸಿಕೊಳ್ಳುವದರಲ್ಲಿಯೂ ಇದೆ. ಇವೆರಡರ ಯೂ ಕಲೆಯಿದೆ. ಭೂಗೋಲದಲ್ಲಿ ಇವುಗಳ ಮುಖಾಂ ರಬಹಳಷ್ಟು ಕಲಿಸುವದಿದೆಯಾದುದರಿಂದ, ಇವೆರಡೂ ಲೆಗಳಲ್ಲಿ ಶಿಕ್ಷಕ-ಶಿಕ್ಷಕಿಯರು ಮೈವುಂಡವರಿರಬೇಕು. ಯತ್ನದಿಂದ ಇವೆರಡೂ ಕಲೆಗಳನ್ನು ಹಸ್ತಗತ ಾಡಿಕೊಳ್ಳಲು ಶಕ್ಯವಿದೆ. ಇವೆರಡರ ಬಗೆಗೆ ಆಯಾ ೋನಾಮಯ ಕಳಗೆ ವಿಸ್ತಾರವಾಗಿ ಬರೆಯಲಾಗಿದೆ ಾದುದರಿಂದ ಇಲ್ಲಿ ಹೆಚ್ಚಿಗೆ ಬರೆಯುವದು ಅನವಶ್ಯಕ ಂದು ನಮ್ಮ ಭಾವನೆ.

(ಈ) ಚಿತ್ರಕಲೆ ಕೈಕೆಲಸಗಳಲ್ಲಿ ಗತಿಯಿರಬೇಕು:— ಭೂಗೋಲದಲ್ಲಿ ನಕಾಶ, ಚಿತ್ರ, ನಕ್ಷೆ, ಪಟ, ಮೊದಲಾದವುಗಳ ಉಪಯೋಗವು ಹೇಳಲಾರದಷ್ಟಿರುವರಿಂದ ಚಿತ್ರಕಲೆಯ ಜ್ಞಾನವು ಅವಶ್ಯವು. ಅದರಲ್ಲಿ ನಿಷ್ಣಾತರಿದ್ದಂತೂ ಕಬ್ಬಿನಮೇಲೆ ಜೇನಿಟ್ಟಂತೆ. ಅಂತಹವರ ಪಾಠಗಳು ಮಕ್ಕಳಿಗೆ ಒಳ್ಳೇ ಮೋಹಕವಾಗುವವೆಂಬುವದರಲ್ಲಿ ಸಂಶಯವೇ ಇಲ್ಲ. ಚಿತ್ರಕಲೆಯ ಜ್ಞಾನವು ತಕ್ಕಮಟ್ಟಿಗಾದರೂ ಇರುವದು ಲೇಸು. ಪ್ರಸಂಗಬಿದ್ದಾಗ ಕರಿ ಹಲಿಗೆಯ ಮೇಲೆ ನಾಲ್ಕು ಗೆರೆಗಳನ್ನೆಳೆದು ಆಕೃತಿಯನ್ನು ತೆಗೆದು ತೋರಿಸುವಷ್ಟು ಗೊತ್ತಿದ್ದರಾಯಿತು. ಭೂಗೋಲದಲ್ಲಿ ಮಾದರಿ (Model)ಗಳ ಉಪಯೋಗವೂ ಸಹ ಹೇಳ ತೀರದಷ್ಟಿದೆ. ತಾಲೂಕ–ಜಿಲ್ಲೆ–ಪ್ರಾಂತ–ದೇಶಗಳ ವ್ಯಾಕೃತಿಕ ಸ್ವರೂಪದ ಮಾದರಿಗಳು, ವಾಯು-ಜಲ-ರೇಲ್ವೆ ಮಾರ್ಗಗಳ ಮಾದರಿಗಳು, ಎಸ್ಕಿಮೋ–ಕೆಫಿರ್ಗೀಯರು ಮತ್ತು ವರ ಮನೆ ವಾಹನಾದಿಗಳ ಮಾದರಿಗಳು, ಇಂತಹ ಇನ್ನೂ ಎಷ್ಟೋ ಮಾದರಿಗಳನ್ನು ಶಿಕ್ಷಕ–ಶಿಕ್ಷಕಿಯರು ರಚಿಸಬೇಕಾಗುತ್ತಿದೆ. ಇಂತಹವುಗಳನ್ನು ರಚಿಸಲು ಹಸ್ತ ಕೌಶಲ್ಯವು ಅವಶ್ಯವಲ್ಲವೇ? ಆದುದರಿಂದ ಭೂಗೋಲ ವನ್ನು ಕಲಿಸುವ ಶಿಕ್ಷಕ ಶಿಕ್ಷಕಿಯರು ಕೈಕೆಲಸದಲ್ಲಿಯೂ ಗತಿಯಿದ್ದವರಿರಬೇಕು. ತಕ್ಕಮಟ್ಟಿಗಾದರೂ ಈ ಕಲೆ ಯನ್ನು ಕೈವಶಮಾಡಿಕೊಳ್ಳುವದು ಲೇಸು.

(ಉ) ಚಿತ್ರ, ನಕ್ಷೆ, ಪಟ, ಮೊದಲಾದವುಗಳನ್ನು ಸಂಗ್ರಹಿಸುವ ಅಭಿರುಚಿಯುಳ್ಳವರಿರಬೇಕು:— ದೈನಿಕ ವರ್ತಮಾನ ಪತ್ರಗಳಲ್ಲಿಯೂ ಸಚಿತ್ರ ಮಾಸಿಕ ಗಳಲ್ಲಿಯೂ ಭೂಗೋಲಕ್ಕೆ ಉಪಯೋಗಕ್ಕೆ ಬೀಳುವಂತಹ ಎಷ್ಟೋ ಸುಂದರವಾದ ಚಿತ್ರಗಳೂ ನಕ್ಷೆಗಳೂ ಪಟ ಗಳೂ ಕಂಡು ಬರುತ್ತಿವೆ. ಅಂತಹವುಗಳನ್ನು ಕತ್ತರಿಸಿ ತಕ್ಕೊಂಡು ಕೂಡಹಾಕಲು ಶಕ್ಯವಿದೆ. ಇಂತಹ ಚಿತ್ರ ಗಳನ್ನೂ ನಕ್ಷೆಗಳನ್ನೂ ಪಟಗಳನ್ನೂ ಶೇಖರಿಸಿ ಸಾಲೆ ಯಲ್ಲೊಂದು ಚಿಕ್ಕ ಭೌಗೋಲಿಕ ಸಂಗ್ರಹಾಲಯವ ನ್ನೇರ್ಪಡಿಸಬಹುದಲ್ಲವೇ ? ಆ ಚಿತ್ರಗಳನ್ನು ಭೂಗೋ ಲದ ಪಾಠಗಳಲ್ಲಿ ಸಂದರ್ಭಾನುಸಾರವಾಗಿ ಉಪಯೋಗಿಸಿ ದರೆ, ಅಂತಹ ಪಾಠಗಳು ಮಕ್ಕಳಿಗೆ ಎಷ್ಟುಚಿತ್ತಾಕರ್ಷ ಕವಾಗುವವೆಂಬುದನ್ನು ಓದುಗರೇ ಊಹಿಸಬೇಕು,

ಸಾರಾಂಶವೆನೆಂದರೆ, ಮೇಲೆ ಹೇಳಿದ ಗುಣಗಳ ನ್ನೆಲ್ಲ ತಮ್ಮಲ್ಲಿ ಅಳವಡಿಸಿಕೊಂಡಿದ್ದರೆ, ಅವರು ನಿಜ ವಾಗಿ ಭೂಗೋಲದ ಆದರ್ಶ ಶಿಕ್ಷಕ-ಶಿಕ್ಷಕಿಯರಾಗು ವರು. ಅವರ ಕೈಯಲ್ಲಿ ತಯಾರಾಗುವ ಮಕ್ಕಳು ಉತ್ತಮ ನಾಗರಿಕರಾಗುವರೆಂಬಲ್ಲಿ ಸಂದೇಹವಿದೆಯೆ?

ಜೀವನ ಶಿಕ್ಷಣದಲ್ಲಿ ಶಿಕ್ಷಣಾಧಿಕಾರಿಗಳ ತರಬೇತಿ

ಲೇಖಕರು:— ಶ್ರೀ. ರಾ. ಶು. ಕುಪ್ಪಸದ ಎ. ಒ. ಡಿ. ಎಸ್. ಬಿ. ಧಾರವಾಡ

[ಪುಣೆಯಲ್ಲಿ ದಿನಾಂಕ ೫–೬–೫೨ ರಿಂದ ದಿನಾಂಕ ೧೪–೬–೫೨ ರ ವರೆಗೆ ನಡೆದ ಜೀವನ ಶಿಕ್ಷಣ ತರಬೇತಿ ವರ್ಗದಲ್ಲಿ ತಾವು ಪಡೆದ ಅನುಭವ ವಿಶೇಷಗಳನ್ನು ಇಲ್ಲಿ ವ್ಯಕ್ತಗೊಳಿಸಿದ್ದಾರೆ— ಪ್ರ. ಸಂ.]

ಇಂದಿನ ಸಂಧಿ ಸಮಯದಲ್ಲಿ ಜೀವನ ಶಿಕ್ಷಣದಲ್ಲಿ ತರಬೇತಿ ಹೊಂದುವುದು ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರೆಲ್ಲರಿಗೆ ಅತ್ಯವಶ್ಯ. ಅದಕ್ಕನುಸರಿಸಿ ಅ್ಯಡ್ಮಿನಿಸ್ಟ್ರೇಟಿವ್ವ ಆಫಿಸರರಿಗೆ, ಡಿಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರರಿಗೆ, ಅಸಿಸ್ಟಂಟ ಎಜ್ಯುಕೇಶಲ್ ಇನಸ್ಪೆಕ್ಟರರಿಗೆ ಇಂತಹ ಅಲ್ಪಾವಧಿ ತರಬೇತಿಯ ವರ್ಗವನ್ನು ತೆಗೆದುದು ಇದೇ ಪ್ರಥಮ ಸಲವೆಂದು ಹೇಳಬಹುದು. ಈ ವರ್ಗಕ್ಕೆ ಹಾಜರಾದ ನಾವೆಲ್ಲರೂ ಸಾಂಘಿಕ ಜೀವನದ ಹಲವಾರು ಅನುಭವಗಳನ್ನೂ, ತಜ್ಞರಿಂದ ಜೀವನ ಶಿಕ್ಷಣದ ಬಹುಮುಖ ವ್ಯಾಪ್ತಿಯನ್ನು ಅರಿತುಕೊಂಡೆವು. ಜೀವನ ಶಿಕ್ಷಣವನ್ನು ಯಶಸ್ವಿಯಾಗುವಂತೆ ಕಾರ್ಯರಂಗಕ್ಕೆ ಇಳಿಸುವಂತೆ ಶಕ್ತರಾಗಲು ಸುಸಜ್ಜಿತರಾದೆವೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ನಿತ್ಯದ ಕಚೇರಿಯ ಬಿಡುವಿಲ್ಲದ ಕೆಲಸದಿಂದ ಮುಕ್ತರನ್ನಾಗಿ ಮಾಡಿದ್ದಲ್ಲದೆ ಈ ತರಬೇತಿಯ ವರ್ಗವು ನಮಗೆ ಜೀವನ ಶಿಕ್ಷಣವನ್ನು ಕುರಿತು ಉಪಯುಕ್ತ ಜ್ಞಾನವನ್ನು ಮಾಡಿಕೊಟ್ಟಿತು, ಹೀಗೆ ಇದು ಜ್ಞಾನೋದಧಿಯಾದಂತೆ ಸಂತೋಷ ಶಿಬಿರವೂ ಆಗಿ ಪರಿಣಮಿಸಿತು.

ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳೂ ಒಂದೇ ಕುಟುಂಬದವರಂತೆ ಒತ್ತಟ್ಟಿಗೆ ಕಲೆತು, ಪ್ರತಿ ನಿತ್ಯದ ಪ್ರಾತಃಪ್ರಾರ್ಥನೆ, ಸ್ವಚ್ಛತೆಯ ಕೆಲಸ, ಸೂತ್ರ ಯಜ್ಞ, ಊಟ ಮೊದಲಾದ ಕೆಲಸಗಳನ್ನು ಜಾತಿ, ಪಂಥ, ಅಧಿಕಾರ ಸ್ಥಾನಗಳನ್ನು ಮರೆತು, ದಕ್ಷತೆಯಿಂದ ಮಾಡುತ್ತಿದ್ದುದು ಆನಂದದ ಸಂಗತಿಯೇ ಸರಿ. ದಿನಾಂಕ ೯–೬–೫೨ನೆಯ ದಿನ ರಾಜ್ಯದ ವರಿಷ್ಠ ಶಿಕ್ಷಣಾಧಿಕಾರಿಗಳಾದ ಶ್ರೀ. ಡಿ. ಸಿ. ಪಾವಟೆಯವರು ಅಂದು ಏರ್ಪಡಿಸಲಾದ ಭೋಜನ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಎಲ್ಲ ಡಿಪ್ಯುಟಿ ಡೈರೆಕ್ಟರರೂ ಈ ಸಮಾರಂಭಕ್ಕೆ ಆಗಮಿಸಿದ್ದರು. ರಾಜ್ಯದ ಶೈಕ್ಷಣಿಕ ಬಳಗವೇ ಆಗಮಿಸಿದ ಈ ಭೋಜನ ಸಮಾರಂಭವು ಕಣ್ಣುಗಳಿಗೂ ಹಬ್ಬವನ್ನುಂಟು ಮಾಡಿತು. ಎಜ್ಯುಕೇಶನಲ್ ಇನಸ್ಪೆಕ್ಟರರು ಬಂದಿದ್ದರೆ ಇದು ಇನ್ನಿಷ್ಟು ಸೌಂದರ್ಯವನ್ನುಂಟು ಮಾಡಬಹುದಿತ್ತು.

ದಿನಾಂಕ ೧೦–೬–೫೨ನೆಯ ದಿನ ನಾವು ಲೋಣಿಯಲ್ಲಿರುವ ಜೀವನ ಶಿಕ್ಷಣ ಕೇಂದ್ರಕ್ಕೆ ಭೆಟ್ಟಿಯಿತ್ತು, ಕೆಲವು ಸಮುನಾಯ ಪಾಠಗಳನ್ನು ನೀರಿಕ್ಷಿಸಿದೆವು; ಮರುದಿನ ಔಂಧದಲ್ಲಿರುವ ಔದ್ಯೋಗಿಕ ಕೇಂದ್ರಕ್ಕೆ ಭೆಟ್ಟಿಯಿತ್ತು. ವಿದ್ಯಾರ್ಥಿಗಳಿಗೆ ಜೀವನದ ಹಲವಾರು ಉದ್ಯೋಗಗಳನ್ನು ಕಲಿಸುವದನ್ನು ನೋಡಿದೆವು.

ಜೀವನ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ವಿಶೇಷವಾಗಿ ನಾವು ಎದುರಿಸಬೇಕಾದ ಅಡೆ–ತಡೆಗಳ ಬಗ್ಗೆ ವಿಶದವಾಗಿ ಚರ್ಚೆಯಾಗುತ್ತಿತ್ತು. ಜೀವನ ಶಿಕ್ಷಣದಲ್ಲಿ ನುರಿತ ಆಚಾರ್ಯ ಭಾಗವತ, ಶ್ರೀಮತಿ ಎಸ್. ಪಾನಂದಿಕರ. ಶ್ರೀಯುತರಾದ ಎಲ್. ಆರ್. ದೇಸಾಯಿ, ಅತೀತಕರ, ಮುಖ್ಯೋಳಕರ, ಮುಗನಭಾಯಿ ದೇಸಾಯಿ, ವಾಯ್. ಡಿ

ಖಾನ- ಜಿ. ಕೆ. ಅತಲೆ, ಮತ್ತಿತರರು ಅನೇಕ ವಿಷಯಗಳನ್ನು ಕುರಿತು ವ್ಯಾಖ್ಯಾನಗಳನ್ನು ಕೊಟ್ಟರು. ಡೆಪ್ಯುಟಿ ಡೈರೆಕ್ಟರರಾದ ಶ್ರೀ ಬಿ. ಎಸ್. ಮೀಮಾಂಸಿಯವರು ಯಾವತ್ತೂ ಕಾರ್ಯಕಲಾಪಗಳಲ್ಲಿ ನಮಗೆ ಮಾರ್ಗದರ್ಶಕರಾಗಿದ್ದರು; ಜೀವನ ಶಿಕ್ಷಣದ ಮುನ್ನಡೆಯ ಬಗ್ಗೆ, ಸರಕಾರದ ಧೋರಣೆಯ ಬಗ್ಗೆ ಸುಸ್ಪಷ್ಟವಾದ ಜ್ಞಾನವನ್ನಾಡಿಕೊಟ್ಟರು.

ಈ ಹತ್ತು ದಿನಗಳ ಅವಧಿಯನ್ನು ಶಿಬಿರದಲ್ಲಿಯ ನಾವೆಲ್ಲರೂ ಒಳ್ಳೆಯ ಉಪಯುಕ್ತವಾಗಿ ಮಾಡಿಕೊಂಡೆವೆಂದು ಬೇರೆ ಹೇಳಬೇಕಿಲ್ಲ. ಅಲ್ಲಿ ಪಡೆದ ಜ್ಞಾನವನ್ನು ಪ್ರತ್ಯಕ್ಷಕಾರ್ಯರೂಪಕ್ಕೆ ತಂದು ನಮ್ಮ ಅಂಕಿತದಲ್ಲಿರುವ ಮಕ್ಕಳ ಶಿಕ್ಷಣಾಭಿವೃದ್ಧಿಯನ್ನೂ ಮತ್ತು ಜನತೆಯ ಹಿತವನ್ನೂ ಸಾಧಿಸುವದು ನಮ್ಮನ್ನು ಕೂಡಿದೆ.

ದಿನಾಂಕ ೫ – ೬ – ೧೯೫೨ ನೆಯ ದಿನ ರಾಜ್ಯದ ಶಿಕ್ಷಣ ಮಂತ್ರಿಗಳಾದ ಮಾನ್ಯ ದಿನಕರರಾವ ದೇಸಾಯಿ ಅವರು ಈ ವರ್ಗದ ಉದ್ಘಾಟನೆ ಮಾಡಿದರು; ಅದೇ ಸಮಯದಲ್ಲಿ ಶಿಕ್ಷಣ ಖಾತೆಯ ಡೈರೆಕ್ಟರರಾದ ಶ್ರೀ. ಡಿ. ಸಿ. ಪಾವಟೆಯವರು ಪ್ರಾಸ್ತಾವಿಕವಾಗಿ ಕೆಲವು ಮಾತುಗಳನ್ನು ಹೇಳಿದರು. ದಿನಾಂಕ ೧೪ – ೬ – ೧೯೫೨ ನೆಯ ದಿನ ಈ ವರ್ಗದ ಸಮಾಪ್ತಿ ಸಮಾರಂಭವು ರಾಜ್ಯದ ಡೆಪ್ಯೂಟಿ ಶಿಕ್ಷಣ ಮಂತ್ರಿಗಳಾದ ಶ್ರಿಮತಿ ಇಂದುಮತಿ ಜೀಮನಲಾಲ ಅವರಿಂದ ನೆರವೇರಿಸಲ್ಪಟ್ಟಿತು. ಆವರು ಬೇಸಿಕ್ ಶಿಕ್ಷಣವನ್ನು ಕಾರ್ಯರೂಪಕ್ಕೆಳಿಸುವ ಬಗ್ಗೆ ಉಪಯುಕ್ತ ಸಲಹೆ–ಸೂಚನೆಗಳನ್ನು ಕೊಟ್ಟರು.

ಈ ರೀತಿಯಾಗಿ ಈ ತರಬೇತಿ ವರ್ಗವು ಜೀವನ ಶಿಕ್ಷಣದ ಜ್ಞಾನ ಮಾಡಿಕೊಟ್ಟಿತಲ್ಲದೆ ಎಲ್ಲ ಅಧಿಕಾರಸ್ಥರಿಗೆ ಒತ್ತಟ್ಟಿಗೆ ಕಲೆತು ಶಿಕ್ಷಣದ ಬಗ್ಗೆ ಚರ್ಚಿಸುವ ಹಾಗೂ ಸಾಂಘಿಕ ಜೀವನವನ್ನು ಸಾಗಿಸುವ ಸಂಧಿಯನ್ನು ಒದಗಿಸಿತೆಂದು ಹೇಳಬಹುದು.

———

ಗಾಂಧೀಜಿಯ ವಿಧಾಯಕ ವಿಚಾರಗಳ

ಭಾರತೀಯರ ಕಥೆಗಳು

ಕನ್ನಡ ೩ನೆಯ ವರ್ಗಕ್ಕೆ

ಲೇಖಕ:---ಶ್ರೀ ಹಿರೇಮಠ

ಬೆಲೆ ೮ ಆಣೆ

ಮ. ಬುದ್ಧನಿಂದ ಗಾಂಧೀಜಿಯವರೆಗಿನ ಕಥೆಗಳನ್ನು ಸರಳ ಶೈಲಿಯಲ್ಲಿ ರಚಿಸಿದೆ.

ಸಾಮಾನ್ಯ ಜ್ಞಾನ ಮತ್ತು ಧಾರವಾಡ ಜಿಲ್ಲೆಯ ಭೂಗೋಲ

ಪೌರನೀತಿ ಸಹಿತ ಬೆಲೆ ೧೦ ಆಣೆ.

೩ನೆಯ ವರ್ಗಕ್ಕೆ ಪಠ್ಯಪುಸ್ತಕದ ಜೊತೆಗೆ ಈ ಎರಡೇ ಪುಸ್ತಕಗಳು ಸಾಳು!

ಮಾರಾಟಗಾರರು:-ಆಕಳವಾಡಿ ಬುಕ್‌ಡಿಪೋ,

ಧಾರವಾಡ.

—:ಸುದ್ದಿಗಳು:—

ಗದಗ ತಾಲೂಕ

೧೯೫೨ ನೆಯ ಜುಲೈ ತಿಂಗಳಲ್ಲಿ ಹುಲಕೋಟಿ, ಮುಂಡರಗಿ, ಕಲಕೇರಿ, ಡಂಬಳ ಈ ಗ್ರಾಮಗಳಲ್ಲಿ ಧಾರವಾಡ ಜಿಲ್ಲಾ ಬೋರ್ಡ ಎ. ಒ. ಅವರಾದ ಶ್ರಿ ರಾ. ರು. ಕುಪ್ಪಸದ ಅವರ ಅಧ್ಯಕ್ಷತೆಯಲ್ಲಿ ಶೈಕ್ಷಣಿಕ ವಿಷಯಗಳ ಚರ್ಚೆಗಳೂ, ಚಟುವಟಿಕೆಗಳೂ ನಡೆದವು. ಅದೇ ಸಮಯದಲ್ಲಿ ಸೇವಾನಿವೃತ್ತರಾದ ಶ್ರಿ. ಕ. ಬ. ಅಂಗಡಿ ಅವರಿಗೆ ಬೀಳ್ಕೊಡುವ ಸಮಾರಂಭಗಳೂ ನಡೆದವು.

ಗದಗ

ದಿನಾಂಕ ೨೦-೭-೧೯೫೨ ನೆಯ ದಿನ ಮಾಡೆಲ್ ಹಾಯಸ್ಕೂಲದಲ್ಲಿ ಹುಲಕೋಟಿ ಕೋ. ಆ. ಎ. ಸೊಸಾಯಿಟಿಯ ಗಾನಶಿ ಸಾಲೆಗಳ ಶಿಕ್ಷಕರ ಪರಿಷತ್ತು ಶ್ರಿ.ಸಿ. ಎಸ್. ಪಾಟೀಲ. ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಪರಿಷತ್ತನ್ನು ಶ್ರಿ ಎಫ್. ಜಿ. ಪಾಟೀಲ ವಕೀಲ ಗದಗ ಅವರು ಉದ್ಘಾಟಿಸಿದರು.

ಶಿಕ್ಷಣದಲ್ಲಿ ಕೌಟುಂಬಿಕ ಜೀವನದ ಸ್ಥಾನ

(ಶಾಸ್ತ್ರೀಯ ವಿವೇಚನೆ)

ಲೇಖಕರು: ಶ್ರೀ. ನೀ. ರೇ. ಹಿರೇಮಠ, ಪ್ರಾಧ್ಯಾಪಕ, ಪದವೀಧರರ ಜೀವನ ಶಿಕ್ಷಣ ಕೇಂದ್ರ, ಧಾರವಾಡ.

(ಹಿಂದಿನ ಸಂಚಿಕೆಯಿಂದ ಮುಂದುವರಿದದ್ದು)

ಕಲಿಯುವಿಕೆಯ ಸನ್ನಿವೇಶಗಳು ಮತ್ತು ಕೌಟುಂಬಿಕ ಜೀವನ

ಮಾನಸ ಶಾಸ್ತ್ರದ ದೃಷ್ಟಿಯಿಂದ ವಿಚಾರಿಸಲುಕಲಿಯುವಿಕೆಯು ಆಂತರಿಕ ಕ್ರಿಯೆಯಾಗಿದೆ. ಕಲಿಯಬೇಕೆಂಬ ಇಚ್ಛೆ ಒಳಗಿನಿಂದ ಸ್ಫೂರ್ತಿಪಡೆದು ಬರಬೇಕು. ಅದಕ್ಕೆ ಒಳಗಿನಿಂದ ಬೇಡಿಕೆ ಬರಬೇಕು. ಶಿಕ್ಷಣದಿಂದ ವ್ಯಕ್ತಿ ವಿಕಾಸವು ನಿಜವಾಗಿಯೂ ಸಾಧಿಸಬೇಕಿದ್ದರೆ, ಈ ಸಾಮಾಜಿಕತೆಯ ಅವಶ್ಯಕತೆ ಮಗುವಿಗೆ ಅನಿಸಬೇಕು. ಆಮೇಲೆ ಅದರ ಬಗ್ಗೆ ಪ್ರತಿಕ್ರಿಯೆ ಗೈಯಲು ಅನಕೂಲ ಅವಕಾಶ ಬೇಕು. ಆಂದಾಗ ಸಾಮಾಜಿಕ ವ್ಯಕ್ತಿ ವಿಕಾಸವಾಗುವದು. ಈ ದೃಷ್ಟಿಯಿಂದ ವಿಚಾರಿಸಲು ಕೌಟುಂಬಿಕ ಜೀವನವು ಯೋಗ್ಯ ಪ್ರೇರಣೆ ಹಾಗು ಸನ್ನಿವೇಶಗಳನ್ನು ಒದಗಿಸುವದು.

ಶಾಲೆಯ ಪಾಠಗಳು, ಒಕ್ಕಲತನ, ಕಲೆ, ನೇಕಾರಿಕೆ ನೂಲುವದು, ಆಟಗಳು, ಮನರಂಜನೆಯ ಕಾರ್ಯಕ್ರಮಗಳು, ಹಬ್ಬ–ಹುಣ್ಣಿವೆಗಳು, ಉತ್ಸವಗಳು, ವನಭೋಜನ, ಗೆಳೆಯರ ಮನೆಗೆ ಭೆಟ್ಟಿ, ಪ್ರವಾಸಗಳು, ಚರ್ಚಾಕೂಟ ಮುಂತಾದ ಎಲ್ಲ ಕಾರ್ಯಗಳನ್ನು ಏರ್ಪಡಿಸುವ ಹೊಣೆಯನ್ನು ಆಯ್ಕೆ ಪೊಂದಿದ ವಿದ್ಯಾರ್ಥಿ ಮಂಡಲಗಳು ಹೊತ್ತಲ್ಲಿ ಶಾಲೆಯ ಸಾಂಘಿಕ (ಕೌಟುಂಬಿಕ) ಜೀವನವು ನಿಜವಾಗಿಯೂ ಸಜೀವ ಶಿಕ್ಷಣ ಸಾಧನವಾಗುವದು. ಕೆಲಸಗಳ ಯೋಜನೆ ಮತ್ತು ಸಂಘಟನೆ ಕಾರ್ಯನಿರ್ವಹಣ, ಗುಣದೋಷಗಳ ಪರಿಶೀಲನೆ, ಅವಶ್ಯಕ ಕೆಲಸಗಳ ರೂಢಿ ಮುಂತಾದವುಗಳ ಮೂಲಕ ನೈಸರ್ಗಿಕವಾದ ಪ್ರೇರಣೆಯೂ ಅದಕ್ಕನುಗುಣವಾಗಿ ಪ್ರತಿಕ್ರಿಯೆ ಗೈಯಲು ಅವಕಾಶವೂ, ಸನ್ನಿವೇಶವೂ, ದೊರೆಯುವವು. ತಮಗೆ ತಿಳಿಯುವ, ತಮಗೆ ಅವಶ್ಯವೆನಿಸುವ ಸಂಗತಿಗಳ ಬಗ್ಗೆ ವಿಚಾರಿಸುವದು, ಅವುಗಳ ಯೋಜನೆಗಳನ್ನು ತಯಾರಿಸುವದು, ಸಂಘಟಿಸುವದು, ಅವುಗಳನ್ನು ಕಾರ್ಯರೂಪದಲ್ಲಿ ತಂದು ಆನಂದ ಪಡುವದು, ಇಲ್ಲವೆ ಅನಾನುಕೂಲತೆಗಳನ್ನು ಎದುರಿಸಿ ಸುಧಾರಣೆ ಮಾಡಿಕೊಳ್ಳುವದು, ನಿಜವಾದ ಕಲಿಯುವಿಕೆಯ ಅಂಗಗಳು. ಮಕ್ಕಳು ತಮ್ಮ ತಮ್ಮೊಳಗಿನ ವ್ಯವಹಾರವು ಸುಗಮವಾಗಿ ಸಾಗುವ ಬಗೆ ಯಾವುದೆಂಬುವನ್ನು ಆಚರಿಸಿ ಮತ್ತು ಅನುಭವಿಸಿ ಆಯ್ದುಕೊಳ್ಳುವರು; ಮತ್ತು ಯೋಗ್ಯವಾದವುಗಳನ್ನು ರೂಢಿಯಲ್ಲಿ ತರುವರು. ಪ್ರಜಾಪ್ರಭುತ್ವದ ಉಗಮ ಮತ್ತು ಬೆಳವಣಿಗೆಗಳ ಗುಟ್ಟು ಇದರಲ್ಲಿದೆ. ಸರಿಯಾದ ಧೋರಣೆಗಳನ್ನು ಕಂಡು ಹಿಡಿದು ಸರಿಯಿಲ್ಲದವುಗಳನ್ನು ಬಿಟ್ಟುಗೊಟ್ಟು ಮಾನವ ಸಂಸ್ಕೃತಿಯನ್ನು ಮಕ್ಕಳು ತಮ್ಮ ಜೀವನದಲ್ಲಿ ಪುನಃ ಕಟ್ಟುವರು. ಇದೇ "ಸಂಶೋಧನ ಪದ್ಧತಿಯು"

ಸಾಮಾಜಿಕ ನಡವಳಿಯನ್ನು ಕಲಿಯುವ ಸಂಶೋಧನ ಪದ್ಧತಿ

ಚಟುವಟಿಕೆಯ ಮುಖಾಂತರವೇ ಮಗುವು ಬೆಳೆಯುವದು. ಆದರೆ ಚಟುವಟಿಕೆಯಿಂದ ಸಂತೋಷವು ಹೊರ ಹೊಮ್ಮಬೇಕು ಆಂದಾಗ ಚಟುವಟಿಕೆಯನ್ನು ಪುನಃ ಪುನಃ ಕೈಕೊಳ್ಳುವ ಮನಸ್ಸಾಗುವದು. ಮಾಡುವ ಕೆಲಸದಲ್ಲಿ ಮಾರ್ಪಾಡಾಗುವದು. ಇದೇ ಬೆಳವಣಿಗೆಯ ಗುಟ್ಟು; ಈ ಬೆಳವಣಿಗೆಯೇ ಸಾಮಾಜಿಕ ವ್ಯಕ್ತಿ ವಿಕಾಸ.

ಕೌಟುಂಬಿಕ ಜೀವನವು ಬುದ್ಧಿ ವಿಕಾಸದ ಸಾಧನ

ಸಾಲೆಯಲ್ಲಿಯ ಶಿಕ್ಷಣದಿಂದ ಹೆಚ್ಚಿಗೇನನ್ನೂ ಅಪೇಕ್ಷಿಸದೆ ಕೇವಲ ಬುದ್ಧಿ ವಿಕಾಸವಾದರೆ ಸಾಕೆಂದೆಣಿಸಿದರೂ ಕೌಟುಂಬಿಕ ಜೀವನದಲ್ಲಿ ಅಂಥ ಉತ್ತಮ ಸನ್ನಿವೇಶಗಳಿವೆ. ವಿಚಾರ ಸರಣಿಯಲ್ಲಿ ಎರಡು ವಿಧವಾಗಿದೆ. (೧) ಪ್ರಸಂಗ ನಿಷ್ಠ ವಿಚಾರ (Situational Thinkihg (೨) ವ್ಯಕ್ತಿನಿಷ್ಠ ವಿಚಾರ (Ego Centric Think-

ಪ್ರಸಂಗ ನಿಷ್ಠ ವಿಚಾರದಲ್ಲಿ ವ್ಯಕ್ತಿಯು ತಾನು ಎದುರಿಸ ಬೇಕಾದ ಸಮಸ್ಯೆಗಳಿಗೆ ಅನುಗುಣವಾಗಿ ವಿಚಾರಿಸುತ್ತಾನೆ. ಅಲ್ಲಿ ವಿಚಾರಿಸ ಬೇಕಾದ ವಿಷಯಕ್ಕೆ ಉದ್ದೇಶವೂ, ಅವಶ್ಯಕತೆಯೂ, ತೀಕ್ಷ್ಣತೆಯೂ ಇದ್ದು ತಾತ್ಕಾಲಿಕ ಬೇಡಿಕೆಯನ್ನು ಪೂರೈಸುವದಾದದರಿಂದ ನಿಜಾಂಶಗಳಿಂದ ಕೂಡಿದ್ದೂ ಆಗಿರುತ್ತದೆ. ಕಾಲ್ಪನಿಕತೆಗೆ ತಪ್ಪು ಹಿಡಿಗಳಿಗೆ ಅವಕಾಶವಿಲ್ಲ. ವಿಚಾರದ ಉತ್ತರ ರೂಪವಾಗಿ ಬರುವ ಆಚಾರದ ಒರೆಗಲ್ಲಿಗೆ ವಿಚಾರವೂ ಹತ್ತುವದರಿಂದ ವಿಚಾರ ಸರಣಿಯಲ್ಲಿ ಅಸಂಭದ್ಧತೆಗಳು ಬಿಸಿಯೂರುವ ಮುನ್ನವೇ ತಿಳಿದು ಬರುವವು. ಪ್ರಸಂಗನಿಷ್ಠ ವಿಚಾರ ಸರಣಿಯು ಜೀವನದ ಹಲವು ಮುಖಗಳಲ್ಲಿ ಹರಿಯುವದರಿಂದ ವೈವಿಧ್ಯ ಪೂರ್ಣವಾದುದೂ, ಸತ್ವಯುತವಾದುದೂ, ಜೀವನೋಪಿಯಾದುದೂ, ಇರುವದು.

ಗಾಂಧೀಜಿ ವಿಚಾರಿಸಿದ ವಿಷಯಗಳ ಮತ್ತು ಬರೆದ ಸಾಹಿತ್ಯದ ವೈವಿಧ್ಯತೆ, ನಿಚ್ಚಳತೆ ಮತ್ತು ಆಳುಗಳನ್ನು ಬಲ್ಲವರಿಗೆ, ಗಾಂಧೀಜಿಗೆ ಇಂತಹ ಮೇಧಾಶಕ್ತಿ ಎಲ್ಲಿಂದ ಬಂದಿತೆಂದು ಅಚ್ಚರಿಪಡುವಂತಿದೆ. ಆದರೆ ಅದೆಲ್ಲವೂ ನಿತ್ಯ ಜೀವನದಲ್ಲಿ ಅವರು ಎದುರಿಸ ಬೇಕಾದ ಮತ್ತು ನಚ್ಚಿನ ಗೆಳೆಯರು ಹಿಂಬಾಲಿಗರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸ ಬೇಕಾದ ಪ್ರಶ್ನೆಗಳಿಂದಲೇ ಹುಟ್ಟಿದವು. ಹೀಗೆಂದು ನೇಳಿ ಗಾಂಧೀಜಿ ತಮ್ಮ ಜೀವನದ ಕೊನೆಯ ಭಾಗದಲ್ಲಿ ಹತ್ತು ವರ್ಷಗಳನ್ನು ವಿೂಸಲಾಗಿಟ್ಟು ಸಾಹಿತ್ಯ ನಿರ್ಮಾಣ ಮಾಡಲು ಯತ್ನಿಸಿದ್ದರೆ, ಈಗಿನ ಕಾಲು ಭಾಗದಷ್ಟು ಸತ್ವಯುತವಾದ ತತ್ವಜ್ಞಾನವೂ ಕೂಡ ಹೊರಡುತ್ತಿರಲಿಲ್ಲ.

ಪ್ರಸಂಗ ನಿಷ್ಠವಾದ ವಿಚಾರ ಸರಣಿಯು ಜೀವನದ ವಿವಿಧ ಸನ್ನಿವೇಶಗಳಲ್ಲಿ ಭಾಗ ವಹಿಸುವ ವ್ಯಕ್ತಿಗಳ ವಿಚಾರ ವಿನಿಮಯಗಳಿಂದ ತಿಕ್ಕಲ್ಪಟ್ಟು, ವ್ಯಕ್ತಿಯ ಅಹಂಭಾವದ ತುಕ್ಕು ಭಸ್ಮವಾಗಿ ಚೊಕ್ಕ-ಚೆನ್ನವಾಗಿ ಹೊರಬೀಳುವದು. ಆದುದರಿಂದ ತ್ರಿಕಾಲಾಬಾಧಿತ ಸತ್ಯವಾಗಿ ರೂಪುಗೊಳ್ಳಲು ಆಸ್ಪದ ವಿದೆ.

ವ್ಯಕ್ತಿ ನಿಷ್ಠ ವಿಚಾರಗಳು ಎಷ್ಟೇ ಪ್ರತಿಭಾ ಸಂಪನ್ನವಾಗಿದ್ದರೂ ಕಾಲ್ಪನಿಕ, ಸಂಕುಚಿತ ಮತ್ತು ಏಕಪಕ್ಷೀಯ-ವಾಗಿರಲು ಸಾಧ್ಯವಿದೆ. ಪ್ರಸಂಗದ ಮತ್ತು ಇತರ ವ್ಯಕ್ತಿಗಳ ಪ್ರತಿ ವಿಚಾರಗಳ ಒರೆಗಲ್ಲಿಗೆ ಹತ್ತದಿರುವದರಿಂದ "ಕಾಮಣಿ ಗಣ್ಣಿನ" ನೋಟವಾಗಲೂ ಸಾಧ್ಯವಿದೆ. ಬೆಳೆಯುವ ಮಕ್ಕಳಿಗಂತೂ ಅನುಭವದ ಬೆಳಕಿಲ್ಲದಿರುವದರಿಂದ ಕತ್ತಲೆಯಲ್ಲಿ ಕಾಲು ಸವರಿ ನಡೆಯುವವನಂತೆ ವಿಚಾರ ಸರಣಿಯು ಎಡವುತ್ತ ಮುಗ್ಗರಿಸುತ್ತ ಗುರಿಮುಟ್ಟದೆ ಅಡ್ಡಹಾದಿ ಹಿಡಿಯೂ (ಅಸ್ಪದವೀಯ) ಬಹುದು. ತೂಗು--ಮಂಚದ ಮೇಲೆ ಕುಳಿತು ಮಾಡುವ ಪುಸ್ತಕದ ವಿಚಾರಗಳ ಪಾಡಿದು.

ಒಟ್ಟಿನ ಮೇಲೆ ಹೇಳುವದಾದರೆ, ಶಿಕ್ಷಣಾಲಯಗಳಲ್ಲಿಯೂ ಕೌಟುಂಬಿಕ ಜೀವನವು ಶಿಕ್ಷಣದ ಕಾಮಧೇನುವೆಂದರೆ ಅತಿಶಯೋಕ್ತಿಯಾಗಲಾರದು ಮಗುವಿನ ಸರ್ವತೋಮುಖ ವಿಕಾಸಕ್ಕೆ ಅಲ್ಲಿ ತಾಣವಿದೆ. ದೈನಂದಿನ ಕಾರ್ಯಕ್ರಮಗಳಲ್ಲಿ ಸ್ವಾವಲಂಬನ ತತ್ವವನ್ನು ಅನುಸರಿಸುವದರ ಫಲವಾಗಿ ದೇಹವು ನಿರೋಗಿಯಾಗಿಯೂ ಸದೃಢವಾಗಿಯೂ ಬೆಳೆಯುವದರಿಂದ ದೈಹಿಕ ವಿಕಾಸವಾಗುವದು. ಸಾಲೆಯ ಚಿಕ್ಕ ಸಮಾಜದಲ್ಲಿ ಎಲ್ಲರೂ ಸಮಭಾಗಿಗಳಾಗಿ, ದುಡಿಮೆಗಾರರಾಗಿ, ಮೇಲುಕೀಳುಗಳೆಂಬ ಭಾವನೆ ತೊರೆದು ಹಾಕಿ, "ತನ್ನಂತೆ ಪರರ ಬಗೆಯುವ" ಹೃದಯ ವೈಶಾಲ್ಯ ತಾನಾಗಿಯೇ ಬೆಳೆದು ಬರುವದು. ಇದೇ ಪ್ರೇಮ ವಿಕಾಸ, ಹೃದಯ ವಿಕಾಸ ಆಧ್ಯಾತ್ಮಿಕ ವಿಕಾಸ.

ಗುಂಪಿನವರೆಲ್ಲರೂ ಒಂದೆಂಬ ಭಾವನೆ ಬೆಳೆದು ಬರುವದರಿಂದ ಒಕ್ಕಟ್ಟಿನ ಮಹತ್ವವೂ, ಸಾಲೆಯ ಬಗ್ಗೆ ಅಭಿಮಾನವೂ, ಸ್ವಜನಾಭಿಮಾನವೂ, ಸ್ವದೇಶಾಭಿಮಾನವೂ ಬೆಳೆದು ಅದರ ಮುಖಾಂತರ ವಿಶ್ವ ಬಾಂಧವ್ಯದ ನಿಜವಾದ ತಳಹದಿಯು ಹಾಕಲ್ಪಡುವದು. ಹೀಗೆ ಶಾಲೆಯ ಚಿಕ್ಕಕುಟುಂಬದ ಅರಿವಿನ ಮುಖಾಂತರ ವಿಶ್ವ ಕುಟುಂಬದ ಅರಿವಿನ ತಳಹದಿಯೂ ಹಾಕಲ್ಪಡುವದು.

(೩) ಇದೆಲ್ಲವನ್ನೂ ಸಾಧಿಸುವವರು ಶಿಕ್ಷಕರು

ಶಿಕ್ಷಣ ತಜ್ಞರು ಅತ್ಯುತ್ತಮವಾದ ಮತ್ತು ಉದಾತ್ತವಾದ ಧ್ಯೇಯಗಳನ್ನು ಪ್ರತಿಪಾದಿಸಬಹುದು. ಅವುಗಳನ್ನು ಸಾಧಿಸುವ ಅಭ್ಯಾಸ ಕ್ರಮಗಳನ್ನೂ ಯೋಚಿಸ

ಬಹುದು. ಶಿಕ್ಷಣಾಧಿಕಾರಿಗಳು ಅದಕ್ಕನುಗುಣವಾದ ಆಡಳಿತ ಯಂತ್ರವನ್ನು ನಿರ್ಮಿಸಬಹುದು. ಆದರೆ ಅಷ್ಟರಿಂದಲೆ ಕಾರ್ಯ ಜರುಗದು. ಶಿಕ್ಷಕರು ಆವುಗಳನ್ನು ಅರಿತು ಆಚರಿಸಿದರೆ ಮಾತ್ರ ಇಂದಿನ ಮಕ್ಕಳು ಆದರ್ಶ ನಾಗರಿಕರಾಗಿ ಪರಿವರ್ತನೆ ಹೊಂದುವರು. ಶಿಕ್ಷಣವು ಅಪೇಕ್ಷಿಸಿದುದನ್ನು ಸಾಧಿಸುವವರು ಶಿಕ್ಷಕರೇ! ಹೊಲಿಗೆಯ ಯಂತ್ರದ ಸೂಜಿಯು ಎಷ್ಟೇ ಕಡಿಮೆ ಬೆಲೆಯದಾದರೂ ಅದು ಮುರಿದಲ್ಲಿ ಐನೂರು ರೂಪಾಯಿ ಕೊಟ್ಟು ಕೊಂಡ ಯಂತ್ರವೆಲ್ಲ ನಿಷ್ಫಲ. ಶಿಕ್ಷಕನು-ಕಾರ್ಯಕಾರೀ ಕೇಂದ್ರ. ಅವನಲ್ಲಿಯೇ ಸಾಮಾಜಿಕ ಒಲವು, ಅಭಿರುಚಿ, ಇಂಗಿತ ಮತ್ತು ಮಹತ್ವಗಳ ಪೂರ್ಣ ಅರಿವಾಗಬೇಕು. ಅವನು ಸರ್ವತೋಮುಖವಾಗಿ ವಿಕಾಸ ಹೊಂದಿದ ವ್ಯಕ್ತಿಯಾದಾಗ ಮಕ್ಕಳಲ್ಲಿ ಆ ಬಗೆಯ ವಿಕಾಸವನ್ನು ಮಾಡಬಲ್ಲನು. ಮೇಲೆ ವಿವರಿಸಿದ ಸಂಗತಿಗಳ ಪೂರ್ಣ ಅನುಭವವಾಗಿ ಅದರ ಲಾಭಗಳ ಸವಿಯನ್ನುಂಡು ಸ್ಫೂರ್ತಿ ಪಡೆಯದ ವಿನಃ ಅದನ್ನು ಮಕ್ಕಳಲ್ಲಿ ಬಿಂಬಿಸಲು ಸಾಧ್ಯವಿಲ್ಲ. ಪಠ್ಯದ ಪ್ರಾಥಮಿಕ, ಮಾಧ್ಯಮಿಕ, ಉಚ್ಚ ಶಿಕ್ಷಣಾಲಯಗಳಲ್ಲಿ ಪುಸ್ತಕ ಪ್ರಧಾನ ಶಿಕ್ಷಣ ಪಡೆದ ಶಿಕ್ಷಕರಲ್ಲಿ ಈ ದೃಷ್ಟಿ ಬೆಳೆಯಲು ಅಸ್ಪದವೇ ಇಲ್ಲ. ಅದು ಹಳೆಯ ಶಿಕ್ಷಣದ ವಿಷಾದಪೂರ್ಣ ವೈಶಿಷ್ಟ್ಯವು.

ಶಿಕ್ಷಕನು ಮಕ್ಕಳ ಆದರ್ಶ ಜೀವಿ

ಶಿಕ್ಷಕನು ಶಿಕ್ಷಣಾವಧಿಯ ಮಟ್ಟಿಗಾದರೂ ಮಕ್ಕಳ ಆದರ್ಶ ವ್ಯಕ್ತಿ. ಅವನ ಶಬ್ದಗಳಿಂದ ಕೃತಿಯಿಂದ ಮತ್ತು ಅವನ ವೈಯಕ್ತಿಕ ಜೀವನದಿಂದ ಎಷ್ಟೋ ಸಂಗತಿಗಳನ್ನು ಮಕ್ಕಳು ಅನುಸರಿಸುತ್ತಾರೆ. ಆದುದರಿಂದ ಶಿಕ್ಷಕನ ಜೀವನವು ಸಾಮಾಜಿಕತೆಗೆ ಪುಟ ಕೊಡುವಂತಹದಿರಬೇಕು. ಅಂತೆಯೇ ಶಿಕ್ಷಕರ ತರಬೇತಿಯಲ್ಲಿ ಕೌಟುಂಬಿಕ ಜೀವನಕ್ಕೆ ಹೊಸ ಶಿಕ್ಷಣದಲ್ಲಿ ಇಷ್ಟೊಂದು ಮಹತ್ವ ಬಂದಿದೆ.

"ಮೂರು ವರುಷದ ಬುದ್ಧಿ ನೂರು ವರುಷ" ಎಂಬಂತೆ ಎಳೆ ವಯಸ್ಸಿನಲ್ಲಿಯೇ ಮನೆಯ ವಾತಾವರಣದ ಮೂಲಕ ಈ ಶಿಕ್ಷಣ ಸಾಗಬೇಕಾದುದೇನೋ ನಿಜ ಆದರೆ ಅಶಿಕ್ಷಿತರೇ ಹೆಚ್ಚಾಗಿರುವ ಭಾರತದಲ್ಲಿ ಆ ಕಾರ್ಯವನ್ನು ಪ್ರಾಥಮಿಕ ಶಾಲೆಗಳೇ ಪ್ರಾರಂಭಿಸಬೇಕಾಗಿದೆ. ಪದ್ಯದ ತೊಡಕಿನ ಸಾಮಾಜಿಕ ಮತ್ತು ಆರ್ಥಿಕ ಕಾರ್ಯಗಳ ಫಲವಾಗಿ ತಾಯಿ-ತಂದೆಗಳಿಗೆ ಅಂಥ ಶಿಕ್ಷಣ ಕೊಡಲು ಸಮಯವಿಲ್ಲ. ಬಹು ಮುಖವಾಗಿ ಬೆಳೆದ ಸಾಮಾಜಿಕ ಜೀವನಕ್ಕಾಗಿ ತರಬೇತಿ ಕೊಡಲು ಬೇಕಾಗುವ ಜ್ಞಾನ ಮತ್ತು ತಂತ್ರಗಳು ಸಾಮಾನ್ಯ ತಾಯಿ-ತಂದೆಗಳಲ್ಲಿ ಇರುವದೂ ಅಪರೂಪ ಹೀಗಾಗಿ ಸಾಮಾಜಿಕ ವ್ಯಕ್ತಿಯ ತರಬೇತಿಯ ಭಾರವನ್ನು ಶಿಕ್ಷಕರೇ ಹೊರಬೇಕಾಗಿ ಬಂದಿದೆ. ಅಲ್ಲದೆ ತಾಯಿ-ತಂದೆ, ಬಂಧು-ಬಳಗದವರನ್ನು ಬಿಟ್ಟು ಒಂದು ಸಾಮಾಜಿಕ ಗುಂಪಿನ ಸಂಪರ್ಕವು ಮಗುವಿಗೆ ಮೊದಲು ಬಾರಿ ಬರುವದು ಶಾಲೆಯಲ್ಲಿಯೇ. ಶಾಲೆಯು ಒಂದು ನಿರ್ದಿಷ್ಟ ಗುರಿಯಿಂದ ಕೂಡಿದ ಸಮಾಜವು. ಶಿಕ್ಷಕರ ಅನುಭವಪೂರ್ಣವಾದ ಮಾರ್ಗದರ್ಶನವೂ ಅಲ್ಲಿದೆ. ಆಟ-ಪಾಠ, ಊಟ-ಉಪಚಾರ, ಪ್ರವಾಸ-ವಿನೋದ, ಮುಂತಾದ ಈ ಚಿಕ್ಕ ಸಮಾಜದ ಕಾರ್ಯಗಳ ಅರಿವಿನ ಮುಖಾಂತರ ಹಳ್ಳಿಯ ಇಲ್ಲವೆ ಪಟ್ಟಣದ, ಸಮಾಜದ ರಾಷ್ಟ್ರದ ಮತ್ತು ವಿಶ್ವದ ಕಾರ್ಯಗಳ ಅರಿವಾಗಲು ಸಹಾಯವಾಗುವದು. ಬಾವಿಯಲ್ಲಿ ಈಸಲು ಬಾರದವನು ಹರಿಯುವ ಹೊಳೆಯಲ್ಲಿ ಇಲ್ಲವೆ ಭೋರ್ಗರೆಯುವ ಸಮುದ್ರದಲ್ಲಿ ಧುಮುಕಬಹುದೇ ? ಶಾಲೆಯ ಆದರ-ಸಮಾಜದ ಅರಿವಿನ ಮುಖಾಂತರವೇ ವಿಶ್ವದ ಅರಿವಾಗುವದು. ನಮ್ಮ ರಾಜಕಾರಣಗಳಲ್ಲಿ ಈ ಹೊಂದಿಕೊಳ್ಳುವ ಮನೋವೃತ್ತಿ ಬೆಳೆಯದ್ದರಿಂದಲೇ ರಾಷ್ಟ್ರ-ಸಂಘದಲ್ಲಿ ಮಕ್ಕಳಿಗಿಂತಲೂ ಕಡೆಯಾಗಿ ಕಲಹಗಳು ನಡೆದಿವೆ.

ಉಚ್ಚ ಶಿಕ್ಷಣಾಲಯಗಳಲ್ಲಿ ಕೌಟಂಬಿಕ ಜೀವನ

ಪ್ರಾಥಮಿಕ ಶಾಲೆಗಳಲ್ಲಿ ಆರಂಭವಾದ ಈ ಸಾಮಾಜಿಕ ತರಬೇತಿಯು ಅಲ್ಲಿಯೇ ಕೊನೆಗೊಳ್ಳದೆ ಅದರ ಆದರ್ಶಗಳು ಮತ್ತು ತಂತ್ರಗಳು ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣಾಲಯಗಳಲ್ಲೂ ವಿಕಾಸ ಹೊಂದಬೇಕು. ಕೆಲವು ಮುಂದುವರಿದ ಮಾಧ್ಯಮಿಕ ಶಾಲೆಗಳಲ್ಲಿಯೂ, ಕಾಲೇಜು, ಮತ್ತು ವಿಶ್ವವಿದ್ಯಾಲಯದ ಸಂಸ್ಥೆಗಳಲ್ಲಿಯೂ ಕಂಡು ಬರುವ ಸಾಮಾಜಿಕ ತರಬೇತಿಯ ಆಲ್ಪಯೋಜನೆಗಳು ಕೇವಲ ಔಪಚಾರಿಕವಾಗಿ

(ಕೆಲವು ಸಲ ಅಶೈಕ್ಷಣಿಕವಾಗಿ) ಸಾಗದೇ ವಿದ್ಯಾರ್ಥಿ ಜೀವನವನ್ನೆಲ್ಲ ಆವರಿಸಿಕೊಂಡು ನಿರ್ದಿಷ್ಟ ಉದ್ದೇಶಗಳಿಂದ ಕೂಡಿ ಸಾಗಿಸಲ್ಪಡಬೇಕು. ಆಟ-ಕೂಟ, ಸ್ನೇಹ-ಸಮ್ಮೇಲನ, ಚರ್ಚಾಕೂಟಗಳಲ್ಲಿ ವರುಷಕ್ಕೊಂದೆರಡು ಸಲ ಕಾಣಿಸಿಕೊಂಡು ಮಾಯವಾಗದೇ ಶಿಕ್ಷಣಾಲಯಗಳ ಜೀವಾಳವಾಗಿ ಮಾರ್ಪಡಬೇಕು. ಶಿಕ್ಷಣ ಸಂಸ್ಥೆಯು ಗುರುಕುಲವಾಗಿ, ಆದರ್ಶ ಮನೆಯಾಗಿ, ಘಟನಾತ್ಮಕ ಮಾದರಿಯ ಸಮಾಜವಾಗಿ ಮಾರ್ಪಡಬೇಕು.

ಇದೆಲ್ಲವೂ ಶಿಕ್ಷಕರನ್ನು ಅವಲಂಬಿಸಿದೆ. ಶಿಕ್ಷಣದ ಘನವಾದ ತತ್ವಗಳನ್ನು ಮತ್ತು ಉದ್ದೇಶಗಳನ್ನು ಪುಸ್ತಕಗಳಲ್ಲಿಯೇ ಓದಿ ತಲೆದೂಗದೇ ಅವುಗಳನ್ನು ಕಾರ್ಯಕಾರಿ ಮಾಡುವದೆಂತು ಎಂಬುದನ್ನು ನಮ್ಮ ಉಚ್ಚ ಶಿಕ್ಷಣಾಲಯಗಳ ಅಧ್ಯಾಪಕರು ಶಾಂತಚಿತ್ತದಿಂದ ವಿಚಾರಿಸಲಿ. ಆಂದಾಗ ಶಿಕ್ಷಣದಲ್ಲಿ ಕೌಟುಂಬಿಕ ಜೀವನಕೆ ಮುಂದುವರಿದ ರಾಷ್ಟ್ರಗಳೂ, ವರ್ಧಾ ಶಿಕ್ಷಣ ಪ್ರಣಾಳಿಯೂ ಕೊಡುತ್ತಿರುವ ಮಹತ್ವದ ಅರಿವಾಗುವದು.

ಆದರ್ಶ ಶಿಕ್ಷಕ

ಲೇಖಕರು:—ಶ್ರೀ. ಎಸ್. ವ್ಹಿ. ಹಂಜಿ, ಎಂ. ಎ, ಬಿ, ಟಿ, ಡಿ, ಬಿ, ಈ.

ಸರಕಾರವು ನಿರ್ಮಾಣಮಾಡಿದ ಯಾವದಾದರೊಂದು ಖಾತೆಯಿಂದ ದೇಶಕ್ಕೆ ನಿಜವಾದ ಸೇವೆಯು ಸಲ್ಲುತ್ತಿದ್ದರೆ, ವಿದ್ಯಾಖಾತೆಯಿಂದಲೇ ಎಂದು ಹೇಳಬಹುದು. ಆದುದರಿಂದ ರಾಷ್ಟ್ರೀಯ ಜೀವನರಂಗದಲ್ಲಿ ಶಿಕ್ಷಕನ ಸ್ಥಾನವು ಬಹಳ ಶ್ರೇಷ್ಠವಾದುದು. ಒಂದು ರಾಷ್ಟ್ರವು ಪ್ರಗತಿ ಹೊಂದಿ, ಉತ್ಕರ್ಷವನ್ನು ಪಡೆಯಬೇಕಾದರೆ ಅಲ್ಲಿಯ ಶಿಕ್ಷಕರೇ ಪರಿಶ್ರಮ ಪಡಬೇಕಾಗುವದು. ಶಿಕ್ಷಕರು ಮಾರ್ಗದರ್ಶನಮಾಡಿ ಬಾಲಕರನ್ನು ಭಾವೀರಾಷ್ಟ್ರದ ಉದ್ಧಾರಕರನ್ನಾಗಿಮಾಡಬಹುದು; ಇಲ್ಲವೆ ಅವರನ್ನು ದುರ್ಮಾರ್ಗಕ್ಕೆ ಎಳಿಸಿ ರಾಷ್ಟ್ರದ ವಿಘಾತವನ್ನು ಮಾಡಬಹುದು. ರಾಷ್ಟ್ರದ ಉನ್ನತಿ ಮತ್ತು ಅವನತಿಗಳು ಶಿಕ್ಷಕರ ಮೇಲೆಯೇ ಹೆಚ್ಚಾಗಿ ಅವಲಂಬಿಸಿರುತ್ತವೆ. ಇಷ್ಟು ಮಹತ್ವದ ಸ್ಥಾನವನ್ನು ಪಡೆದ ಶಿಕ್ಷಕನು ಆದರ್ಶವ್ಯಕ್ತಿಯಾಗಿರಲೇಬೇಕು. ಅವನು ಸಕಲ ವಿದ್ಯಾಪ್ರವೀಣನೂ ಗುಣಶೀಲ ಸಂಪನ್ನನೂ ಆದ ಮಾನವನಾಗಿರಬೇಕು.

ಶಿಕ್ಷಕನು ಮೊಟ್ಟಮೊದಲು ತಾನು ಕಲಿಸಬೇಕಾದ ವಿಷಯಗಳ ಮೇಲೆ ಪ್ರಭುತ್ವವನ್ನು ಪಡೆಯಬೇಕು. ವಿಷಯ ಜ್ಞಾನವಿಲ್ಲದೆ ಯಾವ ಶಿಕ್ಷಕನು ಮುಂದೆ ಬರಲಾರನು. ಅಹರ್ನಿಶಿ ಜ್ಞಾನದಿಂದ ಅವನು ಬಾಲಕರಿಗೆ ವಿವೇಕಪೂರ್ಣ ಜ್ಞಾನವನ್ನು ದಯಪಾಲಿಸಲಾರನು. ಸಾಧ್ಯವಿದ್ದಷ್ಟು ಮಟ್ಟಿಗೆ ವಿವಿಧ ವಿಷಯಗಳ ಮೇಲೆ ಗ್ರಂಥಗಳನ್ನು ಪರಿಶೀಲಿಸಿ ಜ್ಞಾನವನ್ನು ಅಳವಡಿಸಿಕೊಳ್ಳಬೇಕು. ಒಂದೊಂದೆ ವಿಷಯದಲ್ಲಿ ಪಾರಂಗತವಾಗಲೇಬೇಕೆನ್ನುವವರು ಹಾಗೆಯೇ ಮಾಡಬಹುದು. ಒಮ್ಮೆ ಗಳಿಸಿದ ಜ್ಞಾನವು ಮರೆಯುವ ಸಂಭವವುಂಟು. ಆದುದರಿಂದ ಅವನು ಯಾವಾಗಲೂ ಓದಿದ ವಿಷಯಗಳನ್ನು ಪುನಃ ಪುನಃ ಓದಿ ಮನನ ಮಾಡಿಕೊಳ್ಳಬೇಕು ಮತ್ತು ಶಿಕ್ಷಕನು ಸದಾ ವಿದ್ಯಾರ್ಥಿಯಾಗಿರಬೇಕು.

ಅಂದರೆ ಹೊಸ ಹೊಸ ಪುಸ್ತಕಗಳನ್ನು ತರಿಸಿ ಇದ್ದ ಜ್ಞಾನವನ್ನು ಬೆಳಸಿಕೊಳ್ಳಬೇಕು.

ವಿಷಯ ಜ್ಞಾನವನ್ನಷ್ಟೇ ಗಳಿಸಿದರೆ ಸಾಲದು. ಆ ಆ ವಿಷಯಗಳನ್ನು ಕಲಿಸುವ ವಿಭಾಗಗಳ ಗ್ರಂಥಗಳೂ ಅನೇಕವಿವೆ. ಅವುಗಳನ್ನೆಲ್ಲ ಶಿಕ್ಷಕನು ಅವಲೋಕಿಸಿ, ಯಾವ ವಿಧಾನದಿಂದ ಕಲಿಸಿದರೆ ಬಾಲಕರಿಗೆ ವಿಷಯವು ಮನದಟ್ಟಾಗುವದು ಎಂಬುದನ್ನು ತಿಳಿದುಕೊಳ್ಳಬೇಕು. ಶಿಕ್ಷಕನಿಗೆ ಅನೇಕ ವಿಷಯಗಳು ಗೊತ್ತಿರಬಹುದು. ಒಂದು ವಿಷಯದ ಬಗೆಗೆ ವಿಶೇಷ ಜ್ಞಾನವಿರಬಹುದು. ಆದರೆ ಬಾಲಕರ ಮನೋವಿಜ್ಞಾನವನ್ನೂ ತಿಳಿಯದೆ, ಕಲಿಸುವ ವಿಧಾನಗಳನ್ನು ಮನವರಿಕೆ ಮಾಡಿಕೊಳ್ಳದಿದ್ದರೆ ಅವನ ಜ್ಞಾನವೆಲ್ಲವೂ ವ್ಯರ್ಥವಾಗಿ ಪರಿಣಮಿಸುವದು. ಸರ್ವಸಾಮಾನ್ಯ ದಡ್ಡ ಹುಡುಗನಿಗೂ ತಿಳಿಯುವ ಹಾಗೆ ಕಲಿಸಿದರೆ ಅವನೇ ನಿಜವಾದ ಶಿಕ್ಷಕನು. ಎಷ್ಟೋ ಶಿಕ್ಷಕರು ವಿದ್ಯಾಪರಿಪೂರ್ಣರಿದ್ದರೂ, ಕಲಿಸುವ ವಿಧಾನಗಳ ಜಾಣ್ಮೆಯಿಲ್ಲದ್ದರಿಂದ ತಮ್ಮ ಉದ್ಯೋಗ-ದಲ್ಲಿ ಹಿಂದೆ ಬಿದ್ದಿದ್ದಾರೆ.

ಇವುಗಳನ್ನು ಅಳವಡಿಸಿಕೊಂಡಮೇಲೆ ಶಿಕ್ಷಕನು ಕೆಲವು ಗುಣಗಳನ್ನು ಪಡೆದುಕೊಳ್ಳಬೇಕು. ಅವನು ಯಾವಾಗಲೂ ತಾಳ್ಮೆಯಿಂದ ದುಡಿಯುವ ವ್ಯಕ್ತಿಯಾಗಬೇಕು. ಶಿಕ್ಷಕನು ಆಲಸ್ಯವುಳ್ಳವನಾದರೆ ಕೆಲಸವಾಗದು. ತಾನುಕಲಿಸತಕ್ಕ ವಿಷಯಗಳನ್ನುಮನೆಯಲ್ಲಿ ಪುನಃ ಪುನಃ ನೋಡಿಕೊಂಡು ಹೋಗಬೇಕು; ಮತ್ತು ಬಾಲಕರಿಗೆ ಉತ್ಸಾಹದಿಂದ ಕಲಿಸಬೇಕು. ಚಟುವಟಿಕೆಯುಳ್ಳವನಾಗಿ ತನ್ನ ಕಾರ್ಯವನ್ನು ಮಾಡಿದರೆ ಬಾಲಕರೂ ಉತ್ಸಾಹಗೊಂಡು ಕೆಲಸಮಾಡುವರು. ಶಿಕ್ಷಕನೇ ಆಲಸ್ಯನಾಗಿ ಸುಮ್ಮನೆ ಕುಳಿತರೆ ಬಾಲಕರು ಅವನಗಿಂತಲೂ ಹೆಚ್ಚಿಗೆ ಆಲಸ್ಯವುಳ್ಳವರಾಗುತ್ತಾರೆ.

ಶಿಕ್ಷಕನು ಸರ್ವಬಾಲಕರ ಮೇಲೆ ಸಮತಾಭಾವವುಳ್ಳನಾಗಬೇಕು. ಬಾಲಕರಲ್ಲಿಯೂ ಬ್ರಾಹ್ಮಣ, ಲಿಂಗಾಯತ, ಜೈನ, ಕ್ರೈಶ್ಚನ್ ಮೊದಲಾದ ಜಾತೀಯತೆಯ ಭೇದ ಮಾಡಿ ಒಡಕು ಹುಟ್ಟಿಸುವದನ್ನು ನೋಡಿದರೆ ಬಹುಜನರಿಗೆ ಆಶ್ಚರ್ಯವೆನಿಸಲಿಕ್ಕಿಲ್ಲ. ಇದರಿಂದ ಯಾವ ಪ್ರಯೋಜನವೂ ಇಲ್ಲ. ಯಾವ ಮಹತ್ಕಾರ್ಯವೂ ಸಾಧಿಸುವದಿಲ್ಲ ಬಾಲಕರ ಆದರ, ಪ್ರೇಮ ಭಾವಗಳನ್ನು ಕಳೆದುಕೊಂಡು ಅಪಹಾಸ್ಯಕ್ಕೆ ಗುರಿಯಾಗುತ್ತಾನೆ. ಅದೇ ಎಲ್ಲರನ್ನು ಪ್ರೀತಿಯಿಂದ ಕಂಡು ತನ್ನ ವಿಷಯಗಳನ್ನು ಉತ್ತಮ ರೀತಿಯಿಂದ ಕಲಿಸಿದರೆ ಅವನು ಆದರ್ಶ ಶಿಕ್ಷಕನಾಗುವನು. ಶಿಕ್ಷಕನ ಕಾರ್ಯವು ತನ್ನ ವಿಷಯಗಳನ್ನು ಮನದಟ್ಟಾಗುವಂತೆ ವಿವೇಚನೆ ಮಾಡುವದೇ ಹೊರ್ತಾಗಿ, ಜಾತಿಭೇದವನ್ನು ಹುಟ್ಟಿಸಿ, ಜಾತೀಯತೆಯ ಜಗಳಗಳ ಬೀಜವನ್ನು ಬಾಲಕರ ಎಳೆಯ ಮನಸ್ಸಿನಲ್ಲಿ ಬಿತ್ತುವದು ಅಲ್ಲ. ಇದರಿಂದಲೇ ಮುಂದೆ ರಾಷ್ಟ್ರಕ್ಕೆ ಅನಿಷ್ಟ ಪರಿಣಾಮಗಳಾಗುವವು. ಆದುದರಿಂದ ಮುಖ್ಯಾಧಿಕಾರಿಗಳು, ವ್ಯವಸ್ಥಾಪಕರು ಹೀಗಾಗದಂತೆ ಎಚ್ಚರವಿಡುವದು ವಿಹಿತವು.

ಶಿಕ್ಷಕನು ನಿಸ್ವಾರ್ಥ ಬುದ್ಧಿಯಿಂದ ಕೆಲಸಮಾಡಿ ಬಾಲಕರ ಸೇವಾತತ್ಪರನಾಗಬೇಕು. ಅವನ ವೇತನವು ಹೆಚ್ಚಾಗಿರಬಹುದು, ಕಡಿಮೆಯಾಗಿರಬಹುದು. ಆದರೆ ಬಾಲಕರ ಉತ್ಕರ್ಷದ ಕಡೆಗೆ ಅವನ ಲಕ್ಷ್ಯವಿರಬೇಕೇ ಹೊರತು ತನ್ನ ಒಡೆತನ ಬಡತನಗಳ ಪಾಶಕ್ಕೆ ಒಳಗಾಗಬಾರದು. ಕಳಕಳಿಬುದ್ಧಿಯಿಂದ ಜ್ಞಾನದಾನ ಮಾಡಿ, ಅವರ ಸರ್ವತೋಮುಖವಾದ ವಿಕಾಸಕ್ಕೆ ಹೆಣಗಬೇಕು. ಅವನು ತನ್ನ ಜೀವನವನ್ನು ಶಿಕ್ಷಣದ ಪವಿತ್ರ ಕಾರ್ಯಕ್ಕೆ ಮೀಸಲಾಗಿಟ್ಟ ಮೇಲೆ ಅದನ್ನು ಪೂರ್ಣ ನೆರವರಿಸಬೇಕು ರಾಷ್ಟ್ರಕ್ಕೆ ನಿಜವಾದ ಸೇವೆಯು ಶಿಕ್ಷಕರಿಂದಲೇ ಸಲ್ಲುವದು. ಕಾರಣ ಶಿಕ್ಷಕರು ಇದನ್ನರಿತು ತಮ್ಮ ಕರ್ತವ್ಯವನ್ನು ಮನಃಪೂರ್ವಕವಾಗಿ ಮಾಡಿದರೆ ರಾಷ್ಟ್ರದ ಕಲ್ಯಾಣವು ಬೇಗನೆ ಆಗುವದು.

ಬಾಲಕರು ಅನುಕರಣ ಪ್ರಿಯರು. ಅವರು ಯಾವಾಗಲೂ ತಮ್ಮ ಶಿಕ್ಷಕರ ಸನ್ನಿಧಾನದಲ್ಲಿರುವದರಿಂದ ಅವರ ವೇಷಭೂಷ ನಡೆ, ನುಡಿ, ಆಚಾರ, ವಿಚಾರಗಳನ್ನು ಸಹಜವಾಗಿ ಅನುಕರಿಸುವರು. ಆದುದರಿಂದ ಶಿಕ್ಷಕರು ಅನುಕರಣ ಮಾಡಲು ಅರ್ಹವಾದ ಆದರ್ಶ ಗುಣಗಳುಳ್ಳವನಾಗಬೇಕು. ಅವನಿಗೆ ದುಶ್ಚಟಗಳಂತೂ ಇರಲೇ ಕೂಡದು ಅವನು ಉತ್ತಮಜೀವಿಯಾಗಿ ತನ್ನ ಸಮನ್ವಯ ವಿಕಾಸವನ್ನು ಹೊಂದಿದವನಾಗಬೇಕು. ಅವನು ದೇಹದಿಂದಲೂ ಮನಸ್ಸಿನಿಂದಲೂ, ನೀತಿಯಿಂದಲೂ ಬಲಶಾಲಿಯಾಗಿರಬೇಕು. ಸದಾ ಉಲ್ಲಾಸವೃತ್ತಿಯುಳ್ಳವನೂ, ಉದ್ಯೋಗಪ್ರಿಯನೂ ಆಗಿದ್ದು ತನ್ನ ಕರ್ತವ್ಯವನ್ನು ಅತ್ಯುತ್ತಮ ರೀತಿಯಿಂದ ನೆರವೇರಿಸ ಬೇಕು. ಪ್ರತಿಯೊಬ್ಬ ಶಿಕ್ಷಕನು ಹೀಗೆ ಆದರ್ಶ ವ್ಯಕ್ತಿಯಾಗಿ ಪರಿಣಮಿಸಿದರೆ ಸ್ವತಂತ್ರ ಭಾರತದ ಇಂದಿನ ವಿದ್ಯಾರ್ಥಿಗಳು ಮುಂದೆ ಉತ್ತಮ ನಾಗರಿಕರಾಗಿ ಧೈರ್ಯದಿಂದಲೂ ಉತ್ಸಾಹದಿಂದಲೂ ಬಾಳಿಬದುಕುವರು.

ಕೈನೂಲಿನ ಹೆಣಿಕೆಯ ಸೂಚನೆಗಳು

ಲೇಖಿಕೆಯರುಃ—ಶ್ರೀಮತಿ ತಾರಾಬಾಯಿ ಗೋಡಬೋಲೆ
ಅನುವಾದಿಕೆಯರುಃ—ಶ್ರೀಮತಿ ಯಮುನಾಬಾಯಿ ನಾಡಕರಣಿ, ಲೇ- ಸು. ಹೆ. ಟ್ರೇ. ಕಾಲೇಜ, ಧಾರವಾಡ

ಮಾನವನ ಜೀವನಕ್ಕೆ ಆಹಾರ, ಅರಿವೆ ಮತ್ತು ಆಶ್ರಯ ಇವು ಮೂರು ಮೂಲ ಬೇಡಿಕೆಗಳಾಗಿರುತ್ತವೆ. ಪ್ರತಂತ್ರ ದೇಶದ ಪ್ರತಿಯೊಬ್ಬ ಮನುಷ್ಯನು ಧನವಂತನಿರಲಿ ಅಥವಾ ಬಡವನಿರಲಿ ಅವಲಿಗೆ ಆಹಾರ, ಅರಿವೆ ಮತ್ತು ಆಶ್ರಯ (ಇರಲು ಒಂದು ಸ್ಥಳ) ಇವು ಇರಲೇಬೇಕು. ನಮ್ಮ ದೇಶವು ಬಹಳ ವರ್ಷಗಳ ವರೆಗೆ ಪರರ ಆಡಳಿತದಲ್ಲಿ ಇದ್ದುದರಿಂದ ನಮಗೆ ನಮ್ಮ ಅತ್ಯಾವಶ್ಯಕ ಬೇಡಿಕೆಗಳ ಸಲುವಾಗಿ ಪರರನ್ನು ಅವಲಂಬಿಸುವ ಹೊತ್ತು ಬಂದಿದೆ.

ಇದನ್ನೆಲ್ಲವನ್ನು ಅರಿತು ಪರಮ ಪೂಜ್ಯ ಗಾಂಧಿಯವರು ನಮ್ಮ ರಾಷ್ಟ್ರದವರಿಗೆ ಹಳ್ಳಿಗಳಿಗೆ ಹಿಂತಿರಲು ಸ್ವಾವಲಂಬನೋದ್ಯೋಗಗಳನ್ನು ಸುರುವುಮಾಡಲು ಮತ್ತು ಖಾದಿಯನ್ನು ಉಪಯೋಗಿಸಲು ಸಂದೇಶವನ್ನು ಕೊಟ್ಟಿದ್ದರು. ಅದಕ್ಕನುಸರಿಸಿ ನಮ್ಮ ಸರಕಾರದವರು ಎಲ್ಲೆಡೆಯಲ್ಲಿಯೂ ಪ್ರಯತ್ನಿಸುತ್ತಿದ್ದಾರೆ. ಸರ್ವೋದಯ ಮಂಡಳ ಯೋಜನೆಗಳು ಇಡೀ ದೇಶದಲ್ಲೆಲ್ಲ ನಡೆಯುತ್ತಿವೆ. ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ನೂಲುವ ಶಿಕ್ಷಣವು ಕೊಡಲ್ಪಡುತ್ತಿದೆ. ಪ್ರಾಥಮಿಕ ಶಿಕ್ಷಕರ ಶಿಕ್ಷಣ ಸಂಸ್ಥೆಯಲ್ಲಿ ರುಗ್ಗದ ಮೇಲೆ ಅರಿವೆಯನ್ನು ನೇಯುವ ವಿಷಯವನ್ನು ಅಭ್ಯಾಸಕ್ರಮದಲ್ಲಿ ಇಡಲಾಗಿದೆ.

ಇತ್ತೀತ್ತಲಾಗಿ ಪ್ರಾಥಮಿಕ ಶಾಲೆಗಳಲ್ಲಿ ನೂಲನ್ನು ತೆಗೆಯುತ್ತಿದ್ದಾಳೆ; ಆದರೆ ಆ ನೂಲನ್ನು ಸಣ್ಣ ಮಕ್ಕಳ ತೆಗೆಯುತ್ತಿದ್ದುದರಿಂದಲೂ ಮತ್ತು ಹೊಸದಾಗಿ ಕಲಿಯುವವರು ತೆಗೆಯುತ್ತಿದ್ದರಿಂದಲೂ ಅದು ನೇಯಲು ಯೋಗ್ಯವಾಗಿರುವದಿಲ್ಲವೆಂಬುದು ಅನುಭವಕ್ಕೆ ಬಂದ ಸಂಗತಿಯಾಗಿದೆ. ಸ್ವಾಭಾವಿಕವಾಗಿ ಅಂತಹ ನೂಲು ನಿರುಪಯೋಗವಾಗುವ ಸಂಭವವಿರುತ್ತದೆ. ಇಂಥ ನೂಲಿನ ಉಪಯೋಗವಾಗಬೇಕು ಮತ್ತು ವಸ್ತ್ರ ಸ್ವಾವಲಂಬನ ಕಾರ್ಯವು ತುಂಬಿ ಬರಬೇಕು ಎಂಬ ಉದ್ದೇಶದಿಂದ ನಾನು ಈ ಮುಂದಿನ ಸೂಚನೆಗಳನ್ನು ಶಿಕ್ಷಣಾಧಿಕಾರಿಗಳ ಮುಂದೆ ಇಟ್ಟಿದ್ದೆನು. ಆ ಸೂಚನೆಗಳೆಂದರೆ:—

(ಅ)ನೂತ ಮೇಲೆ ಆ ನೂಲನ್ನು ಮೂರು ನಾಲ್ಕು ತಕಲಿಗಳ ಮೇಲೆ ಅಥವಾ ಕುಕ್ಕಡಿಗಳ ಮೇಲೆ ಹಾಗೇ ಬಿಡಬೇಕು.

(ಬ) ಆ ನೂಲಿನ ಮೂರು ಎಳೆಗಳನ್ನು ತೆಗೆದುಕೊಂಡು ಮೂರು ಪದರಿನ ಉಣ್ಣೆ ಯಂತೆ ಉಂಡೆಗಳನ್ನು ಮಾಡಬೇಕು.

(ಕ) ಇಂಥ ನೂಲಿನ ಉಂಡೆ ತಯಾರ ಆದ ಮೇಲೆ ಉಣ್ಣೆಯಂತೆ ಪ್ರತಿಯೊಂದು ನಮೂನೆಯ ಬೇರೆ ಬೇರೆ ಹೆಣಿಕೆಯ ಸುಂದರವಾದ ಅರಿವೆಗಳನ್ನು ತಯಾರಿಸ ಬಹುದು.

(ಡ) ಇದರಲ್ಲಿ ನಿರುಪಯುಕ್ತ ನೂಲಿನ ಉಪಯೋಗವಾಗಿ ಹುಡುಗ ಹುಡಿಗೆಯರಿಗೆ ನೂಲಲು ಹುರುಪು ಬರುತ್ತದೆ. ರೂಢಿಯಿಂದ ಆ ಮಕ್ಕಳು ಹೆಚ್ಚಿನ ತರಗತಿಯ ನೂಲನ್ನು ತೆಗೆಯಹತ್ತಿದ್ದಾರೆ.

ಸ್ತ್ರೀಯರಿಗೆ ಬೇರೆ ಬೇರೆ ಪ್ರಕಾರದ ಹೆಣಿಕೆ ಹಾಕಿದ ಅರಿವೆಗಳನ್ನು ತಮ್ಮ ಮಕ್ಕಳಿಗೆ ಹಾಕಬೇಕೆಂಬ ಹಂಬಲ ವಿರುತ್ತದೆ. ಆ ಹಂಬಲವನ್ನು ಅಗ್ಗದಲ್ಲಿ ಪೂರ್ತಿಗೊಳಿಸಲು ಇದೊಂದು ದೊಡ್ಡ ಸಾಧನವು ದೊರಕಿದೆ. ಸ್ವತಃ ಹೆಣೆದ ಅರಿವೆ ಹಾಕಿಕೊಳ್ಳಲು ಆನಂದ

ವಾಗುತ್ತಿರಲು ಸ್ವತಃ ನೂತ ನೂಲಿನಿಂದ ಹೆಣೆದ ಅರಿವೆ ಹಾಕಿಕೊಳ್ಳಲು ಆ ಆನಂದವು ಇಮ್ಮಡಿಯಾಗುವದು. ಸಾವ್ಪಲಂಬನ ಮತ್ತು ಆರ್ಥಿಕ ದೃಷ್ಟಿಯಿಂದ ಆದು ಬಹಳ ಹಿತದಾಯಕ ಪ್ರಯೋಗವೆನಿಸಬಹುದು. ಆದ್ದರಿಂದ ಮಹತ್ವದ ಸೂಚನೆಗಳನ್ನು ಕೆಳಗೆ ಕೊಡುತ್ತಿದ್ದೇನೆ.

ಉಪಕರಣಗಳು (ಸಾಹಿತ್ಯ):—

ಕಬ್ಬಿಣದ ಸಳಿ, ಕುಡ, ಹಲಿಗೆ, ಬಿದರಿನ ಚಾಕು, ಅಥವಾ ಪಿಂಜಣ ಹಂಜಿ ಮಣೆ, ಬಿದರಿನ ಸಳಿ, ಮತ್ತು ಹಿಡಿಮಣೆ, ಚರಖಾ ಮತ್ತು ನಾಲ್ಕೈದು ಕದಿರು ಅಥವಾ ನಾಲ್ಕೈದು ತಕಲಿಗಳು, ೧ ಪೌಂಡು ಹತ್ತಿ ಅಥವಾ ಅರಳಿ, ೧೨ ನಂಬರಿನ ಇರಡು ಕಬ್ಬಿಣದ ಸೂಜಿಗಳು ಅಥವಾ ಒಂದು ಸೂಜಿನ್.

ಕ್ರಿಯೆ:— ಹೆಳದಿ ಹತ್ತಿ, ಕಚ್ಚಾಹತ್ತಿ ಮತ್ತು ಹೆಸರು ಇವುಗಳನ್ನು ತೆಗೆದು ಹತ್ತಿಯನ್ನು ಸ್ವಚ್ಛ ಮಾಡ



ಬೇಕು. ಆಮೇಲೆ ಕುಡ ಹಲಿಗೆಗಳ ಸಹಾಯದಿಂದ ಹತ್ತಿಯನ್ನು ಅರಿಯಿಬೇಕು. ಆಮೇಲೆ ಬಿದರಿನ ಚಾಕು ವಿನಿಂದ ಅಥವಾ ಪಿಂಜಣದಿಂದ ಅರಳಿಯದ್ದು ಹಿಂಜಬೇಕು. ಈ ಕೆಲಸವನ್ನು ಬರಿಯ ಕೈಯಿಂದಲೂ ಮಾಡಲು ಬರುತ್ತದೆ. ಆದರೆ ಅದಕ್ಕೆ ಸ್ವಲ್ಪ ಹೆಚ್ಚಿಗೆ ವೇಳೆ ಹತ್ತುತ್ತದೆ.

ಅರಳಿ ಸ್ವಚ್ಛವಾದ ಮೇಲೆ ಹಂಜಿಮಣೆ, ಬಿದರಿನ ಹಂಜಿಯು ಸಳಿ ಮತ್ತು ಹಿಡಿಮಣೆ ಇವುಗಳನ್ನು ಉಪಯೋಗಿಸಿ ಅರ್ಧ ಆಣೆಯಿಂದ ಒಂದಾಣೆ ತೂಕದ ಹಂಜಿಯನ್ನು ತಯಾರಿಸಬೇಕು.

ಹಂಜಿ ತಯಾರ ಆದಮೇಲೆ ಚರಖೆಯ ಮೇಲೆ ಅಥವಾ ತಕಲಿಯ ಮೇಲೆ ನೂಲಬೇಕು. ಕದರಿನ ಮೇಲೆ ಅಥವಾ ತಕಲಿಯ ಮೇಲಿನ ನೂಲನ್ನು ಲಡಿ ಮಾಡದೆ ಮೂರು ಅಥವಾ ನಾಲ್ಕು ಕದಿರು ಅಥವಾ ತಕಲಿಗಳನ್ನು ತಯಾರ ಮಾಡಬೇಕು. ಈ ನೂಲನ್ನು ಪ್ರಾಥಮಿಕ ಶಾಲೆಯ ಮಕ್ಕಳು ತೆಗೆದಿದ್ದರಿಂದ ಆದು

ಸಮಾನ ಇರುವದಿಲ್ಲ. ಕಚ್ಚಾ ಇರುತ್ತದೆ ಅದು ಮಸ್ಲಿನ್ ನಡೆಯುವದಿಲ್ಲ. ಆದ್ದರಿಂದ ಮೂರು ಅಥವಾ ನಾಲ್ಕು ಕದರುಗಳ ಮೇಲಿನ ಅಥವಾ ತಕಲಿಗಳ ಮೇಲಿನ ಬೇರೆ ಬೇರೆ ಎಳೆಗಳನ್ನು ಒಂದೆಡೆಗೆ ತೆಗೆದುಕೊಂಡು ಉಣ್ಣೆಯ ಉಂಡೆಯಂತೆ ಆದರ, ಉಂಡೆಗಳನ್ನು ಮಾಡಬೇಕು. ಉಂಡೆಗಳನ್ನು ತಯಾರಿಸುವಾಗ ನೂಲಿಗೆ ಹುರಿ ಅಥವಾ ಗಂಟು ಬೀಳದ ಹಾಗೆ ಜಗ್ಗಿ ಹಿಡಿದ

ಉಂಡೆಗಳನ್ನು ಮಾಡಬೇಕು. ಉಂಡೆಗಳನ್ನು ತಯಾರಿಸುವಾಗ ಬೇರೆಯವರ ಸಹಾಯವನ್ನು ತೆಗೆದುಕೊಳ್ಳಬೇಕು. ಒಬ್ಬರು ಉಂಡೆಯನ್ನು ಸುತ್ತಬೇಕು. ಇನ್ನೊಬ್ಬರು ನೆಲದ ಮೇಲಿನ ನೂಲಿನಿಂದ ತುಂಬಿದ ಕದರು ಅಥವಾ ತಕಲಿಗಳು ಒಂದರಲ್ಲೊಂದು ಸಿಕ್ಕಿಕೊಳ್ಳದ ಹಾಗೆ ನಿಂಗಡಿಸುತ್ತಿರಬೇಕು. ಒಂದು ವೇಳೆ ಯಾವುದಾದರೊಂದು ಕದರಿನ ಅಥವಾ ತಕಲಿಯ ಮೇಲಿನ ಎಳೆ ಹರಿದರೆ ಅದನ್ನು ಅಲ್ಲಿಯೇ ಜೋಡಿಸಿಕೊಳ್ಳಬೇಕು.

ಈ ಪ್ರಕಾಶ ಆ ನೂಲಿನ್ದ ಉಂಡೆಗಳು ತಯಾರಿಸಿದ ನೇಲೆ ನಮಗೆ ಇಷ್ಟವಿದ್ದ ಹೆಣಿಕೆಯ ವಸ್ತುಗಳನ್ನು ತಯಾರ ಮಾಡಬಹುದು. ಮೂರು ಪದರಿನ ಉಣ್ಣೆಯ ದಪ್ಪಳತೆಯಷ್ಟೇ ಈ ದಾರಕ್ಕೆ ದಪ್ಪಳತೆ ಬರುತ್ತದೆ. ಹನ್ನೆರಡು ನಂಬರಿನ ಸೂಜಿಗಳನ್ನು ಉಪಯೋಗಿಸಿದರೆ, ೪ ಟಾಕೆಗೆ ೧" ಇಂಚು ಮತ್ತು ೮ ಸಾಲಿಗೆ ಒಂದು ೩ ಹೀಗೆ ಉದ್ದ ಮತ್ತು ಅಡ್ಡಳತೆ ಬರುತ್ತದೆ. ಕೂಜನ್‌ದಿಂದ ಹೆಣೆಯುವದಾದರೆ ಎರಡೆಳೆಯ ಉಂಡೆ

ಯನ್ನು ತಯಾರಿಸಬೇಕು. ಅಂದರೆ ಅರಿವೆ ಬಳಹ ಕಷ್ಟವಾಗಲಾರದು. ಉಣ್ಣೆಯ ವಸ್ತುಗಳಿಗೆ ಹಿಡಿಯುವ ಸಾಕೆಗಳಿಗಿಂತ ಈ ದಾರದ ವಸ್ತುಗಳಿಗೆ ಕಡಿಮೆ ಟಾಕೆಗಳನ್ನು ಹಿಡಿಯಬೇಕಾಗುವದು. ಉದಾಹರಣಾರ್ಥವಾಗಿ ಉಣ್ಣೆಗೆ ೧೦೦ ಟಾಕೆ ತೆಗೆದು ಕೊಳ್ಳುವವಾದರೆ ಈ ದಾರಕ್ಕೆ ೯೦ ಟಾಕೆ ಸಾಕಾಗಬಹುದು. ಇಂಥ ನೂಲಿಂದ ಕೆಳಗಿನ ವಸ್ತುಗಳನ್ನು ತಯಾರಿಸಲು ಬರುತ್ತದೆ. ಬ್ಲೌಜ, ಗಂಜಿಫ್ರಾಕ, ಜಂಪರ, ಪ್ರಾಕ್ ಅಂಗಿ, ಕಿವಿಟೊಪ್ಪಿಗೆ, ಕಾಲುಚೀಲ (ಸಣ್ಣ ಮತ್ತು ದೊಡ್ಡಕೊರಳ ಪಟ್ಟಿ ಅಥವಾ ಸ್ಕಾರ್ಫ, ಸ್ವೇಟರ, (ತೋಳು ಇದ್ದ ಅಥವಾ ತೋಳು ಇಲ್ಲದ) ಚೀಲ, ಆಸನ, ಲೇಸು, ವಸ್ತ್ರ ವಗೈರೆ.

ವೈಶಿಷ್ಟ್ಯ:—

ಮೇಲಿನ ಎಲ್ಲ ವಸ್ತುಗಳು ಗಟ್ಟಿಮುಟ್ಟಾಗಿ ಹಾಗೇಯೇ ಉಣ್ಣೆಯಂತೆ ಬೆಚ್ಚಗಿರುತ್ತವೆ. ಯಾಕಂದರೆ ನೂಲಿನ ಮೇಲಿನ ಗುಂಜವು ಹಾಗೆಯೆ ಇರುತ್ತದೆ. ಅಗಸನಿಗೆ ಒಗೆಯಲು ಕೊಡಲಿಕ್ಕೆ ಅಥವಾ ಮಸಿಯಲ್ಲಿಯೇ ಒಗೆಯಲಿಕ್ಕೆ ಅಡ್ಡಿ ಇಲ್ಲ. ಉಣ್ಣೆಯ ಆರಿವೆಯಂತೆ ಇದಕ್ಕೆ ಹೆಸರು ಹತ್ತುವದಿಲ್ಲ. ವಸ್ತುವನ್ನು ತಯಾರಿಸಿದ ಮೇಲೆ ಅದಕ್ಕೆ ಬಣ್ಣ ಹಾಕಿಸಿದರೆ ಆ ವಸ್ತು ಉಣ್ಣೆಯದಿದೆಯೋ ಅಥವಾ ನೂಲಿನದಿದೆಯೋ ಎಂಬುದು ಕೂಡಾ ತಿಳಿಯುವದಿಲ್ಲ. ಆದರೆ ಆ ವಸ್ತುವನ್ನು ಉಪಯೋಗಿಸುವ ಮುಂಚೆ ನೀರಿನಲ್ಲಿ ೧೨ ತಾಸು ನೆನೆಇಟ್ಟು ಆ ಮೇಲೆ ಸಾಬಾಣಿನ ನೀರಿನಲ್ಲಿ ಸ್ವಚ್ಛವಾಗಿ ತೊಳೆದು ಸಾಧಾರಣ ಹಿಂಡಿ ಒಣಗಿಸಬೇಕು. ನೀರಿನಲ್ಲಿ ೧೨ ತಾಸು ನೆನೆಯುವದರಿಂದ ನೂಲು ತಾಳಿಕೆಯುಳ್ಳದ್ದಾಗುವದು. ಆ ಮೇಲೆ ಅದನ್ನು ಉಪಯೋಗಿಸುವದು ಹೆಚ್ಚು ಒಳಿತು.

ವೆಚ್ಚ:—

ಐದಾರು ಅಂಸು ನೂಲಿನಿಂದ ೩೨" ಇಂಚು ಸುತ್ತಳತೆಯ ಮತ್ತು ೧೮" ಇಂಚು ಉದ್ದಳತೆಯ ಬ್ಲೌಜು ತಯಾರಿಸಬಹುದು. ೧ ಪೌಂಡು ಹತ್ತಿಯಿಂದ ಐದಾರು ಅಂಸು ಒಳ್ಳೆಯ ನೂಲು ಹೊರಡುತ್ತದೆ. ಒಂದು ರೂಪಾಯಿಗೆ ಸಾಧಾರಣ ನಾಲ್ಕು ಪೌಂಡು ಹತ್ತಿ ದೊರೆಯುತ್ತದೆ. ಹೀಗೆ ಹಿಡಿದರೆ ಮೇಲಿನ ಐದಾರು ಅಂಸು ನೂಲಿಗೆ ನಾಲ್ಕು ಆಣೆ ಬೀಳುತ್ತದೆ. ಅಂದರೆ ಒಂದು ಬ್ಲೌಜ ತಯಾರಿಸಲು ಕಚ್ಚಾಮಾಲಿನ ಅಂದರೆ ನೂಲಿನ ಕಿಮ್ಮತ್ತು ನಾಲ್ಕು ಆಣೆ ಬೀಳುತ್ತದೆ. ಅದರಂತೆಯೇ ಹತ್ತಿಯನ್ನು ಸ್ವಚ್ಛಮಾಡುವದರಿಂದ ಹಿಡಿದು ಅದರ ನೂಲಿನ ಉಂಡೆಗಳನ್ನು ಮಾಡುವವರೆಗೆ ಆರು. ಅಂಸು ನೂಲಿಗೆ ಸಾಧಾರಣ ೧೬ ತಾಸುಗಳು ಹಿಡಿಯುತ್ತವೆ. ಅದರ ಬ್ಲೌಜ ಹೆಣೆಯರು ೩೪ ತಾಸು ಹತ್ತುತ್ತವೆ. ಈ

ಎಲ್ಲ ಕೆಲಸಕ್ಕೆ ಕೂಲಿ ಕಡಿಮೆ ಎಂದರೆ ತಾಸಿಗೆ ೨ ಆಣೆ ಹಿಡಿದರೂ ಒಂದು ಬ್ಲೋಜಿಗೆ ಐದು ರೂಪಾಯಿ ಕೂಲಿಯಾಗುತ್ತದೆ. ಮೇಲೆ ಸಾಹಿತ್ಯ ವಿಭಾಗದಲ್ಲಿ ಕೊಟ್ಟ ವಸ್ತುಗಳಿಗೆ ಭಾಂಡವಲದ ಖರ್ಚು ಸಾಧಾರಣ ೧೦–೧೨ ರೂಪಾಯಿ ಹತ್ತುತ್ತದೆ.

ಹೆಣೆಯುವ ಕೆಲಸವನ್ನು ಹೊತ್ತು ಸಿಕ್ಕಾಗ ಬೇಕಾದ ಸಮಯದಲ್ಲಿ ಮಾಡಬಹುದು. ಉದಾ:— ಉಗಿಬಂಡಿಯಲ್ಲಿ ಪ್ರವಾಸ ಮಾಡುವಾಗ, ಭಾಷಣ ಕೇಳುವಾಗ, ಪ್ರವಚನ ಸಮಯದಲ್ಲಿ ಅಥವಾ ಯಾರದಾದರೂ ಮನೆಗೆ ಭೆಟ್ಟಿಯಾಗಲು ಹೋದಾಗ ಹರಟೆ ಹೊಡೆಯುವಾಗ ಇತ್ಯಾದಿ,

ಸ್ವಲ್ಪದರಲ್ಲಿ ಹೇಳುವದೇನಂದರೆ, ಉಣ್ಣೆಯಿಂದಾಗುವ ಎಲ್ಲ ವಸ್ತುಗಳನ್ನು ಈ ನೈನೂಲಿನಿಂದ ತಯಾರಿಸಬಹುದು. ಅವು ತಾಳುವಂತಹವೂ ಇರುತ್ತವೆ ಮತ್ತು ಅದರ ಮಾನದಿಂದ ಕಿಮ್ಮತ್ತು ಬಹಳ ಕಡಿಮೆ ಬೀಳುತ್ತದೆ.

(ಮುಂದುವರಿಯುವದು)

ಪುಸ್ತಕ ವಿಮರ್ಶೆ

ಪುಸ್ತಕದ ಹೆಸರು:— **ಕಾವ್ಯೋದಯ,**
ಲೇಖಕರು:— **ನುಹದೇವ ಬಣಕಾರ**
ಪ್ರಕಾಶಕರು:— **ಎಮ್. ಜಿ. ಬಣಕಾರ ಅಧ್ಯಾಪಕರು ಕರ್ನಾಟಕ ಹಾಯಸ್ಕೂಲ, ಧಾರವಾಡ.**
ಪುಟಗಳು:— ೫೦ ಬೆಲೆ:— ೦.೧೨–೦

ಇದೀಗ ಕಾವ್ಯೋದಯವನ್ನು ಕಾವ್ಯದೇವಿಯ ಹರಕೆಯಿಂದ ಪಡೆದು ಶ್ರೀ ಮಹದೇವ ಬಣಕಾರ ಇವರು ಕೆಲವು ಕವನಗಳನ್ನು ಈ ಗ್ರಂಥದಲ್ಲಿ ಹೆಣೆದಿರುವರು. ಬಾಲಕವಿಯಲ್ಲಿ ಉದ್ದಾಮ ಕವಿಯಾಗಬಲ್ಲ ಲಕ್ಷಣಗಳು 'ಮುಂದಕ್ಕೆಲ್ಲಿಗೆ ?', 'ಕಾವ್ಯದೇವಿ', 'ಕೋಳಲಾಗಿದ್ದರೆ', 'ಮಡಿಯೊಡತಿ' ಮೊದಲಾದ ಕವನಗಳಲ್ಲಿ ಹುದುಗಿಕೊಂಡುದನು ವಾಚಕರು ಕಾಣಬಹುದು. 'ಸಂಜೆಯ ರವಿ', ಓ! 'ಕವಿಯ', 'ನೇಗಿಲ ಯೋಗಿ' ಈ ಕೆಲವು ಕವಿತೆಗಳಲ್ಲಿ ಅನುಭವದ ಆಳವು ಅಷ್ಟೊಂದು ಕಂಡು ಬರದಿದ್ದರೂ ಹೇಳುವ ಶೈಲಿ ಸುಂದರವಾಗಿದೆ. ಸೃಷ್ಟಿಯಲ್ಲಿ ಕಾಣುವ ಸೌಂದರ್ಯ, ಕಾರ್ಯಗಳನ್ನು ತನ್ನಲ್ಲಿ ಅರಗಿಸಿಕೊಂಡು ಪ್ರಶಾಂತ ಸಮಯದಲ್ಲಿ ಕವಿಯು ಕಾವ್ಯವನ್ನು ರಸದೂಟದಂತೆ ಉಣಬಡಿಸುವನು. ಶ್ರೀ ಬಣಕಾರ ಅವರು ಇನ್ನೂ ಹೆಚ್ಚಿಗೆ ಸಹಜ ರೀತಿಯ ಕವನಗಳನ್ನು ಹಾಡಿ ಕಾವ್ಯಾಕಾಶದಲ್ಲಿ ಗರಿಗೆದರಿ ಹಾರಲೆಂದು ಹಾರೈಸುವೆವು.

ಪುಸ್ತಕದ ಹೆಸರು:— **ಅಮೃತವಾಣಿ ಹಾಗೂ ಶಾಲಾ ಗೀತೆಗಳು**
ಸಂಪಾದಕರು:— **ಶ್ರೀ ಎಂ. ಆ, ಚಿಕ್ಕಮಠ ಹಾಗೂ ಶ್ರೀ ಶಿ. ಶಿ. ಹಿರೇಮಠ.**
ಪ್ರಕಾಶಕರು:— ,, ,,
ಪುಟಗಳು:—೭೨ ಬೆಲೆ:—**ಎಂಟಾಣೆ**

ಸಾಲೆಯಲ್ಲಿ ಪ್ರತಿನಿತ್ಯ ನಡೆಯುವ ಪ್ರಾರ್ಥನೆ, ಪ್ರಾರ್ಥನೆಯ ಕಾಲಕ್ಕೆ ನಡೆಯುವ **ಅಮೃತವಾಣಿ ಹೇಳುವ** ಕೆಲಸ, ಇದಕ್ಕೆ ಬೇಕಾಗುವ ಯೋಗ್ಯ ಪದ್ಯಗಳು ಮತ್ತು

ಸುರವಾಣಿಗಳು ಈ ಪುಸ್ತಕದಲ್ಲಿ ಸಂಗ್ರಹಿಸಲ್ಪಟ್ಟಿವೆ. ವೀಗ್ಯ ಪ್ರಾರ್ಥನಾ ಪದ್ಯಗಳು ದೊರಕವೆ ತೊಳ-ಡುವಂತಹ ಶಿಕ್ಷಕರಿಗೆ ಈ ಪುಸ್ತಕವು ಸಹಾಯಕಾರಿ ಾಗುವದೆಂದು ಆಶಿಸಲಾಗಿದೆ.

ಅಮೃತವಾಣಿಯಲ್ಲಿ ಕೆಲವು ದೊಡ್ಡವಿವೆ; ಕೆಲವು ಗಡ-ಗಿವೆ; ಹೀಗಿರದೆ ಒಂದೇ ವಾಕ್ಯದಿಂದ ಕೂಡಿ ಸುಲಭ ಗಿ ಅರ್ಥವಾಗುವಂತಹ ಮಕ್ಕಳ ಮನಕ್ಕೆ ಇನ್ನಿಷ್ಟು ುಭವಾಗಿ ಹೊಳೆಯುವಂತಹ ಅಮರವಾಣಿಗಳಿದ್ದಿ-ದೆ ಹೆಚ್ಚು ಶ್ರೇಯಸ್ಕರವಾಗುತ್ತಿತ್ತು.

ಪುಸ್ತಕದ ಹೆಸರು:— **ಭಾರತಕ್ಕೆ ಸ್ವರಾಜ್ಯ ದೊರೆತು-ದೇಕೆ ?**

ಲೇಖಕರು:— ಸಿಂಪಿ ಲಿಂಗಣ್ಣ

ಸಂಪಾದಕರು:— ಶಿವಾನಂದ

ಪುಟಗಳು:— ೪೦

ಈ ಚಿಕ್ಕಪುಸ್ತಕದಲ್ಲಿ ವಿಷಯ ವಿವೇಚನೆಯು ೧೨ ಭಾಗಗಳಲ್ಲಿ ಮಾಡಲ್ಪಟ್ಟಿದೆ. ಭಾರತದ ಗತ ವೈಭವವು ಲಯವಾಗಿ ನಿದ್ರಾವಸ್ಥೆಯಲ್ಲಿದ್ದ ಭಾರತೀಯರು ಪುನಃ ೇತರಿಸಿ ಸ್ವರಾಜ್ಯವನ್ನು ಗಳಿಸಿಕೊಂಡರೆಂಬುದನ್ನೂ ರಾಜ್ಯದ ಉದ್ದೇಶವು ಕೇವಲ ರಾಜಕೀಯ ಸ್ವಾತಂ-ತ್ರ್ಯವನ್ನು ಉಳಿಸಿಕೊಳ್ಳುವದಷ್ಟೇ ಅಲ್ಲದೆ ಭಾರತದ ಎಲ್ಲ ನತೆಗೆ ಆ ಸ್ವರಾಭ್ಯಾಸವಾಗಿ ತನ್ಮೂಲಕ ಜ್ಞಾನವನು ೇರುವದಿದೆಯೆಂಬುದನ್ನೂ ಇಲ್ಲಿ ಮಾರ್ಮಿಕವಾಗಿ ೇಖಕರು ವಿವರಿಸಿದ್ದಾರೆ. ಈಪುಸ್ತಕದಲ್ಲಿ ಲೇಖಕರು ಮಹರ್ಷಿ ಅರವಿಂದರ ವಿಚಾರ ಸರಣಿಯನ್ನು ಪರಿಚಯ ಮಾಡಿಕೊಡಲು ಯತ್ನಿಸಿದ್ದಾರೆ.

ಅಲ್ಪಮಟ್ಟಿಗೆ ಓದು ಕಲಿತ ಜನ ಸಾಮಾನ್ಯರಿಗೆ ದೇಶ, ಕರ್ತವ್ಯ ನಿಷ್ಠೆ ಮೊದಲಾದವುಗಳ ಬೋಧೆಯನ್ನು ಮಾಡುವ ಈ ಚಿಕ್ಕ ಹೊತ್ತಿಗೆಯು ಪೋಷಿಸಲ್ಪಡಲೆಂದು ಹಾರೈಸುವೆವು.

ಪುಸ್ತಕದ ಹೆಸರು:— **ದೀಪಗಳ ನೂಲೆ**

ಲೇಖಕರು:— **ಶ್ರೀ ಎಸ್. ಸಿ. ಹಿರೇಮಠ**

ಮತ್ತು ಪ್ರಕಾಶಕರು:—

ಪುಟಗಳು:— ೩೨ **ಬೆಲೆ:— ೧೨ ಆಣೆ.**

ವೃತ್ತಿಯಲ್ಲಿ ಕರಣಿಕರಾಗಿ ಭಾವದಲ್ಲಿ ಧಾರ್ಮಿಕರಾಗಿ ಹೃದಯದಲ್ಲಿ ಅನುಭಾವಿಗಳಾಗಿ ಶ್ರೀ ಹಿರೇಮಠರವರು ಈ ಕಾವ್ಯಗಂಗೆಯನ್ನು ಪ್ರಕಟಿಸಿದ್ದಾರೆ. ಅವರ ಆಳವಾದ ಅನುಭವದ, ಜೀವನವನ್ನು ಧರ್ಮದ, ಸತ್ಯದ ಹಾಗೂ ಶಾಶ್ವತವಾದ ತತ್ವಗಳ ಒರೆಗಲ್ಲಿಗೆ ಹಚ್ಚಿ ನೋಡುವ ರೀತಿ, ಕಂಡದ್ದನ್ನು ಕಂಡಂತೆ ಆಡುವ ಆ ಸ್ಥಿರತೆ ಹಾಗೂ ಮನೋ ನಿಶ್ಚಲತೆಗಳು, ಸಾತಂತ್ರ್ಯ ಪ್ರಿಯತೆ, ಚಿರಂತನ ಶಕ್ತಿಯಲ್ಲಿರತಕ್ಕ ಅಪಾರವಾದ ಭಕ್ತಿ ಇವೇ ಮೊದಲಾದುವನ್ನು ಅವರ ಇಲ್ಲಿಯ ಕವನಗಳಲ್ಲಿ ನೋಡ ಬಹುದು. ಸುಲಭವಾದರೂ ನಿರರ್ಗಳವಾಗಿ ಹರಿಯುವ ಅವರ ಶೈಲಿಯು ಈ ಕಾವ್ಯವನ್ನು ಮನಮುಟ್ಟುವಂತೆ ಮಾಡಿದೆ ಕನ್ನಡಿಗರು ಇದನ್ನು ಸ್ವಾಗತಿಸುವರೆಂದು ಕೋರುವೆವು.

—ಪ್ರಧಾನ ಸಂಪಾದಕರು.

"ಪ್ರೇಮವು ಅನ್ಯರನ್ನು ಸುಡುವದಿಲ್ಲ,
ಅದು ತಾನೇ ಪ್ರಜ್ವಲಿಸುತ್ತಿರುತ್ತದೆ."

—ಗಾಂಧೀಜಿ

ಸುದ್ದಿ:— ಧಾರವಾಡ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಹಾಗೂ ಎಜ್ಯುಕೇಶನಲ್ ಇನ್ಸ್‌ಪೆಕ್ಟರ ಕಚೇ-ಯ ಆವಾರದಲ್ಲಿ ಡಾ। ಚಿಕ್ಕರಮನೆ ಅವರ ಹಸ್ತದಿಂದ ಗಿಡಗಳನ್ನು ನೆಡಲಾಯಿತು.

ಪ್ರೌಢಶಿಕ್ಷಣದ ಕ್ಷಿತಿಜದ ಮುಗಿಲು

ಗದಗ ತಂಬೂರಿ

ಶ್ರೀ ವೀರಪ್ಪ ಕೌತಾಳ ಇವರ ಕಾರ್ಯದರ್ಶಿತ್ವದಲ್ಲಿ ಸೊಪ್ಪಿನ ಗದಗ-ಬೆಟ್ಟಿಗೇರಿ ಆ ಜಾ ದ ಹಿಂದ ಸೇವಾ ಸಮಿತಿಯು ಸಮಾಜ ಶಿಕ್ಷಣ ವರ್ಗಗಳನ್ನು ತೆರೆದಿದ್ದು ಬೀದಿಗಳಲ್ಲಿ ಶ್ರಮಜೀವಿ ಹೆಣ್ಣು ಮಕ್ಕಳಿಗಾಗಿ ವಯಸ್ಕರಿಗಾಗಿ ಶಾಲೆಯನ್ನು ತೆರೆಯುತ್ತಿದ್ದಾರೆ. ಇದಲ್ಲದೆ ಸಂಘವು ಸಮಾಜ ಸೇವೆಯ ಇನ್ನಿತರ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ.

ಗದಗ ಸ್ಟೂಡೆಂಟ್ಸ್ ಸೊಸೈಟಿಯ ಸ್ಕೂಲ್ ಆಫ್ ಕಾಮರ್ಸ್ ಕಾಲೇಜಿಗೆ ಸ್ವಂತ ಕಟ್ಟಡಗಳಿಗಾಗಿ ಕೊಟ್ಟಿರುವ ೧೦ ಲಕ್ಷ ರೂಪಾಯಿಗಳಿಂದ ಸ್ಥಾಪಿತವಾದದ್ದು ಒಂದು ಕೇರಿಯಲ್ಲಿ ವಾಚನಾಲಯವು. ಅಲ್ಲಿಯ ಹಿರಿಯ ಸಾಹಿತ್ಯಾಸಕ್ತರಲ್ಲಿ ಧಾರವಾಡದ ಭಾಗದ ಶಿಕ್ಷಣ ತಜ್ಞರಿಗೆ ಆದರಣೀಯರಾದ ಡಾ|| ಸಚಿವರಾದ ಅವರ ಅಮೃತ ಹಸ್ತದಿಂದ ದಿನಾಂಕ ೧೪-೭-೧೯೬೦ರಂದು ತೆರೆಯಲ್ಪಟ್ಟಿತು. ಈ ಸಮಯದಲ್ಲಿ ಸ್ಥಳೀಯ ಶಿಕ್ಷಕರೂ, ಪಾಲಕರೂ, ಪ್ರತಿಷ್ಠಿತ ನಾಗರಿಕರೂ ನಗರ ಸಭೆಯ ಅಧ್ಯಕ್ಷರೂ ಸ್ಕೂಲಬೋರ್ಡ ಚೇರಮನ್ನರೂ ನೆರೆದಿದ್ದರು. ಮುಖ್ಯ ಅತಿಥಿಗಳು ಸಮಯೋಚಿತ ಭಾಷಣ ಮಾಡಿದರು.

ಗದಗ

ಇಲ್ಲಿಯ ಗಾಂಧಿ ಸಂಜೀವ ಕ. ಸಂ. ಸಾಲೆಯ ೬, ೭, ೮ನೆಯ ತರಗತಿಗಳ ವಿದ್ಯಾರ್ಥಿಗಳಿಗಾಗಿ ಧಾರವಾಡಕ್ಕೆ ವೈಜ್ಞಾನಿಕ ಪ್ರವಾಸವನ್ನು ಕೈಗೊಂಡು ಕರ್ನಾಟಕ ಕಾಲೇಜಿನ ವಿಜ್ಞಾನ ವಿಭಾಗ, ಸರಕಾರಿ ಟೈಪಿನಿರಗುಡಿಕಾಲೇಜಿನ ಪ್ರಕಾಶನಾಲಯ ಗ್ರಂಥಾಲಯ ಮೊದಲಾದವುಗಳನ್ನು ಸಂದರ್ಶಿಸಿದರು.

ಗದಗ ನಿಲ್ದಾಣದಲ್ಲಿ ಕೂಲಿಯಿಲ್ಲದೆ ಬಂದಾ ಸಾಮಾ ಶಿಕ್ಷಣ ವರ್ಗವನ್ನು ನಡೆಯುತ್ತಿದೆ. ಅಲ್ಲಿಂ ಪ್ರೌಢರಿಗೆ ಒಂದು ಚಿನ್ನವಾಚನಾಲಯವನ್ನು ಪ್ರಾರಂಭಿಸಿದ್ದಾರೆ. ಈ ವಾಚನಾಲಯದ ಸ್ಥಾಪನೆಯ ಧ್ಯಾನಾಂಕ ೧೫-೮-೧೯೬೦ರಂದು ಧಾರವಾಡದ ಭಾ ಶಿಕ್ಷಣಾಧಿಕ್ಷಾರಿಗಳಾದ ಡಾ|| ಚಿಕ್ಕೆರಮನೆಯವರು ನೆರವೇರಿಸಿದರು. ಈ ಸಮಯದಲ್ಲಿ ಅನೇಕ ಪ್ರೌಢರೂ ಸೇರಿದ್ದರು. ವಿನೋದಾವಳಿಯ ಕಾರ್ಯಕ್ರಮವು ಜರುಗಿತು.

ಗಜೇಂದ್ರಗಡ

ಇಲ್ಲಿಯ ಪಾ ಸನಿಕ ಶಾಲೆಗಳ ಶಿಕ್ಷಕರ ಪ್ರಯತ್ನದಿಂದ ಮೂರು ದಿನಗಳ ಸಮಾಜ ಶಿಕ್ಷಣ ಕ್ಲಾಸುಗಳು ನಡೆದಿತ್ತವೆ. ಇವಲ್ಲದೆ ಸಮೀಪದ ಹಳ್ಳಿಯೊಂದರಲ್ಲಿ ಸಮಾಜ ಶಿಕ್ಷಣ ವರ್ಗವು ನಡೆಯುತ್ತಿದೆ. ಈ ಗಳಲ್ಲಿ ಹೆಚ್ಚಾಗಿ ಹಿಂದುಳಿದ ವರ್ಗದ ಪ್ರೌಢರೇ ವರು; ಮತ್ತು ಈ ವರ್ಗಗಳನ್ನು ಸ್ಥಳಿಕ ಶಿ ಪಠ್ಯೋತರ ಸಾಹಕಾರಿಕ ಚಟುವಣಿಕೆಯೆಂದು ಸುತ್ತಿರುವರು.

ಗೋಕಾಕ

ದಿನಾಂಕ ೧೪-೭-೧೯೬೦ರಂದು ಉಚ್ಚ ಶಿಕ್ಷಣ

ಲಕ್ಷ್ಮಣಕ್ಷೇಪ್ರಯತ್ನಾಣ್ಣ ಜೆಕ್ಕಿಶ್ರಲಿರ್ಣುಮ ಶ್ರಿಯಸ್ಸಂಂಕಿ ಗುಸ್ಸಣಿಗೆ ಅವರಿಗೆ ಬೀಳ್ಕೊಡುವ ಸಮಾರಂಭವನ್ನೇರ್ಪಡಿಸಿದ್ದರು.

ಚಾಲ್ಲಕೆರೆ

ಇಲ್ಲಿಯ ಕೇಂದ್ರ ಸಾಲೆಯ ವಿದ್ಯಾರ್ಥಿಗಳು ಬಾದಾಮಿ ಹಾಗೂ ಅಪರ ಸುತ್ತಮುತ್ತಲಿನ ಐತಿಹಾಸಿಕ ಸ್ಥಳಗಳನ್ನು ದಿನಾಂಕ ೧೫-೨-೫೫ರಂದು ಸಂದರ್ಶಿಸಿದರು.

ಗುಣಿಬಾಳ

ದಿನಾಂಕ ೧೫-೨-೫೫ರಂದು ಶ್ರೀ ಜಿ. ಬಿ. ಪಾಟೀಲ ಆನ್ಸರೆ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗುಸ್ಸ ಶಿಕ್ಷಕರ ಸಮ್ಮೇಳನವು ಜರುಗಿತು. ಮಾದರಿಯ ಪಾಠಗಳು, ಮಕ್ಕಳ ಮೇನರಂಜಕ ಕಾರ್ಯಕ್ರಮಗಳೂ ನಡೆದವು.

ಸಂದ್ರಗಡ್ಡ

ಇಲ್ಲಿಯ ಕೇಂದ್ರ ಸಾಲೆಯ ಮೇಲಿನ ವರ್ಗಗಳ ಬಾಲಕ-ಬಾಲಕಿಯರು ಹಳ್ಳಿಗಳಿಗೆ ಭೇಟಿ ಕೊಟ್ಟು ಪುರಕ್ಕೆ ಪ್ರವಾಸವಾಡಿ ಮಣ್ಣಿನ ವಸ್ತುಗಳನ್ನು ತಯಾರಿಸುವ ಕಾರಖಾನೆಯನ್ನು ಸಂದರ್ಶಿಸಿದರು.

ಯಕ್ಸಂಬಾ

೨೬-೨-೫೫ನೆಯ ದಿನ ಇಲ್ಲಿಯ ಕ್ರ. ಗಂ. ಸಂಸ್ಥೆಯಲ್ಲಿ ಶಾರದೋತ್ಸವದ ಅಂಗವಾಗಿ ಬಾಲಕರ ಸಂಭಾಷಣೆಗಳೂ, ಬಾಲಿಕೆಯರಿಂದ ಹೊಸ್ಸನ್ನ ಹುಚ್ಚಪ್ಪನ ಎಂಬ ಏಕಾಂಕ ನಾಟಕವೂ ಜರುಗಿದವು. ಶ್ರೀ ಒಸಪ್ಪಣ್ಣ ಕತ್ತಿ ಹಾಗೂ ಶ್ರೀ ಶಿವಪ್ಪಣ್ಣ ಲಂಬೆ ಇವರು ಬಾಲಕರಿಗೆ ಹತ್ತು ರೂಪಾಯಿ, ಬಾಲಿಕೆಯರಿಗೆ ಎರಡು ರೂಪಾಯಿ ಬೀಸೆ ಇನಾಮು ಕೊಟ್ಟರು.

ಬನವಾಸಿ

ಇಲ್ಲಿಯ ಸಾಲೆಯಿಂದ ಮುಲ್ಕೀ ಪರೀಕ್ಷೆ ಪ್ರಾಸಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ಶ್ರೀ ವಡಿಯೇರ ಇವರಿಂದ ಪ್ರಸ್ತುತಪಡಿಸಲಾಯಿತು. ಇಲ್ಲಿಯ ಬಜಾರ ಕೊಟ್ಟಣವೊಂದರಿಂದ ಬಡ್ಡಿಯ ಹಾಗೂ ಗೃಹಗಳನ್ನು ಕೊಳ್ಳಲು ಬೇಡಪೂರ್ಣ ಎಂಬ ವಿಷಯದ ಮೇಲೆ ಚರ್ಚೆ ಏರ್ಪಡಿಸಲಾಯಿತು. ೫, ೬ನೆಯ ಇಯತ್ತೆಗಳ ವಿದ್ಯಾರ್ಥಿಗಳು ಸಮೀಪದ ಒಂದು ಹಳ್ಳಿಗೆ ಪ್ರವಾಸ ಕೈಕೊಂಡಿದ್ದರು.

ಜುಮನಾಳ

ಇಲ್ಲಿಯ ಕೂಡಗಲ್ಲ ಸಾಲೆಯಲ್ಲಿ ದಿನಾಂಕ ೨೬-೨-೫೫ರಂದು ಸಮಾಜ ಶಿಕ್ಷಣ ವರ್ಗದ ಪ್ರಾರಂಭೋತ್ಸವವು ಡಿ.ಎ.ಇ.ಓ. ರಾದ ಶ್ರೀಯುತರಲ್ಲ ಅವರ ನೇತೃತ್ವದಲ್ಲಿ ನೇರವೇರಿತು.

ಸರೀಗಲ್ಲ

ರೋಣ ತಾಲೂಕ ಪೂರ್ವಭಾಗದ ೧೨ ಲೋ. ಬೋ. ಸಾಲೆಗಳ ಹಾಗೂ ೨ ಗಾವಠಿ ಸಾಲೆಗಳ ಶಿಕ್ಷಕ ಶಿಕ್ಷಕಿಯರು ಕೂಡಿ ಶೈಕ್ಷಣಿಕ ಪುರೋಗಾಮಿ ಸಮಿತಿಯನ್ನು ಜಿಲ್ಲಾಧಿ ಎ. ಓ. ಪ್ರವರ ಅಪ್ಪೇಕ್ಷೆಯನ್ನು ಪಡೆದು ಸ್ಥಾಪಿಸಿದರು. ಈ ಸಮಿತಿಯು ಆಗಾಗ ಶಿಕ್ಷಣೋಪಯೋಗಿ ವಿಷಯಗಳನ್ನು ಚರ್ಚಿಸುವ ಧ್ಯೇಯವನ್ನಿಟ್ಟುಕೊಂಡಿದೆ. ಈ ಸಮಿತಿಯ ಮೊದಲನೆಯ ಕಾರ್ಯಕ್ರಮಗಳು ಆಬ್ಬಿಗೇರಿ ಕ. ಗಂ. ಸಾಲೆಯಲ್ಲಿ ಶ್ರೀ ರಾ. ರು. ಕುಷ್ಟನವರ ಬಿ. ಎಸ್ಸಿ. ಬಿ. ಟಿ. ಅವರ ಹಿರಿಯತನದಲ್ಲಿ ನಡೆದವು. ಅದೇ ದಿನ ಹಂಜಿಜನ ಕೇರಿಯಲ್ಲಿ ಪಠಶಾಲೆಯ ಕೆಲಸವನ್ನು ಕೈಕೊಳ್ಳಲಾಗಿತ್ತು. ಅಲ್ಲಿ ಪ್ರೌಢಶಿಕ್ಷಣ ವರ್ಗವೊಂದನ್ನು ತೆರೆಯಲಾಯಿತು.

ಅಗರಖಂಡ

ದಿನಾಂಕ ೨೬-೨-೫೫ರಂದು ಈ ಭಾಗದ ಬೀಳ್ಕೊಡುಗೆ ಹಿರಿಯತನದಲ್ಲಿ ಒಂದು ಪ್ರ. ಶಿ. ವರ್ಗವು ತೆರೆಯಲ್ಪಟ್ಟಿತು.

ಚಿಕ್ಕಯಡಚಿ

೨೩-೭-೫೨ರಂದು ಇಲ್ಲಿಯ ಶ್ರೀ ಶಂಕರಗೌಡ್ರು ಶಿವನಗೌಡ್ರು ಪಾಟೀಲ ಇವರು ೧೧ ರೂಪಾಯಿ ಬೆಲೆಯ ಪೃಥ್ವಿ ನಕಾಶೆಯನ್ನು ಸಾಲೆಗೆ ಉಚಿತವಾಗಿ ಕೊಟ್ಟರು.

ಬಿದರಿ

೨೦-೭-೫೨ರಂದು ಗ್ರುಪ್ ಶಿಕ್ಷಕರ ಸಮ್ಮೇಲನವು ಶ್ರಿ ಕೃ. ವೆಂ. ಕೋರಿ ಇವರ ಹಿರಿಯತನದಲ್ಲಿ ನಡೆಯಿತು ಬೀಟ ಆಫೀಸರರಾದ ಶ್ರಿ ಚ. ಬ. ಸಾವಟೆ ಯವರು 'ಶಿಕ್ಷಕನ ವ್ಯಕ್ತಿತ್ವ' ಈ ವಿಷಯದಮೇಲೆ ಸ್ಫೂರ್ತಿದಾಯಕ ಭಾಷಣಮಾಡಿದರು. ಸ ಮಾ ಜ ಶಿಕ್ಷಣವರ್ಗವನ್ನು ತೆರೆಯಲಾಯಿತು.

ನಂದೀಕುರಳಿ

೨೭-೭-೫೨ರಂದು ಶ್ರಿ ಜಿ. ಬಿ. ಜಾಧವ ಇವರ ಹಿರಿಯತನದಲ್ಲಿ ಶಿಕ್ಷಕ-ಶಿಕ್ಷಿಕೆಯರ ಗ್ರುಪ್ ಸಮ್ಮೇಲನವು ಜರುಗಿತು.

ಧಾರವಾಡ

ಜುಲೈ ತಿಂಗಳಲ್ಲಿ ಇಲ್ಲಿಯ ಸರಕಾರಿ ಕ. ಗಂ. ಟ್ರೇನಿಂಗಕಾಲೇಜದಲ್ಲಿ ಶಿಕ್ಷಕ-ವಿದ್ಯಾರ್ಥಿಗಳ ಮಂತ್ರಿ ಮಂಡಲದ ಉದ್ಘಾಟನೆಯು ಶ್ರೀ- ಬ. ಮು. ಶಿಂತ್ರಿ ನಿವೃತ್ತ ಅ. ಎ. ಇ. ಧಾರವಾಡ ಇವರಿಂದ ನೆರವೇರಿತು. ಜಾರ್ಜ ಬರ್ನಾರ್ಡ ಶಾ ಅವರ ಸೂಕ್ತ ಉಕ್ತಿಗಳನ್ನು ಆಯ್ದುಕೊಂಡು, ಶ್ರೀ. ಶಿಂತ್ರಿ ಅವರು ಸಮಯೋಚಿತ ಭಾಷಣ ಮಾಡಿದರು.

ಈ ಸಲ 'ರಮಜಾನ್ ಈದ' ಹಬ್ಬವನ್ನು ಇಲ್ಲಿಯ ಮು. ಸ್ಕೂ. ಬೋ. ಎ. ಓ. ರವರಾದ ಶ್ರೀ. ಸತ್ತಾರ ಇವರ ಹಿರಿಯತನದಲ್ಲಿ ಆಚರಿಸಲಾಯಿತು. ಕುರಾನ ದಲ್ಲಿಯ ಶ್ಲೋಕಗಳನ್ನು ಉದಾಹರಿಸಿ, ಶ್ರೀ. ಸತ್ತಾರ ಅವರು ಬೋಧಪರ ಭಾಷಣ ಮಾಡಿದರು.

ಸ್ವಾಮಿ ವಿವೇಕಾನಂದರ ದಿ ನಾ ಚ ರ ಣೆ ಯನ್ನು ಶ್ರೀ. ಮ. ಗು. ಹಂದ್ರಾಳ ಇವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು. ಶ್ರೀ. ಎಸ್ ವಾಯ್. ಶೀಲವಂತ ಅವರು ಸ್ವಾಮಿ ವಿವೇಕಾನಂದರ ತುಂಬು ಜೀವನದ ಬಗೆಗೆ ಮಾರ್ಮಿಕವಾಗಿ ಮಾತಾಡಿದರು.

ದಿನಾಂಕ ೨೭-೭-೫೨ರಂದು ಇಲ್ಲಿಯ ಪ್ರಾರ್ಥನಾ ಮಂದಿರದಲ್ಲಿ ಹಿಂದೀ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರಿಗೆ ಪ್ರಮಾಣಪತ್ರಗಳನ್ನು ಮುಂಬಯಿ ರಾಜ್ಯ ವಿಧಾನ ಪರಿಷತ್ತಿನ ಸಭಾಪತಿಗಳಾದ ಮಾನ್ಯ ಶ್ರೀ ಆರ್. ಎಸ್. ಹುಕ್ಕೇರಿಕರ ಇವರ ಅಮೃತ ಹಸ್ತದಿಂದ ಹಂಚಲಾಯಿತು. ಶ್ರೀ. ಸಿದ್ಧನಾಥಪಂತ ಅವರು ಕರ್ನಾಟಕ ಪ್ರಾಂತೀಯ ಹಿಂದೀಪ್ರಚಾರ ಸಭೆಯ ವರದಿಯನ್ನು ಒಪ್ಪಿಸಿದರು. ಮುಖ್ಯ ಅತಿಥಿಗಳು ಸಮಯೋಚಿತ ಭಾಷಣ ಮಾಡಿದರು.

ನಿಮಗೆ ದೊರೆತಿವೆಯೆ ?

೧೯೫೨ರ ಸುಧಾರಿಸಿದ ಆವೃತ್ತಿಗಳು

★ ನೂತನಗಣಿತ ★

- ೧ನೆಯ ವರ್ಗಕ್ಕಾಗಿ ೦—೬—೦
- ೨ನೆಯ ,, ೦—೮—೦
- ೩ನೆಯ ,, ೦-೧೦—೦
- ೪ನೆಯ ,, ೦-೧೨—೦

(ಭೂಮಿತಿ, ಜಮಾಖರ್ಚು ಆಲೇಖ ಸಹ)

- ೫ನೆಯ ವರ್ಗಕ್ಕಾಗಿ ೦-೧೪—೦
- ೬ನೆಯ ,, ೧—೦—೦
- ೭ನೆಯ ,, ೧—೧೨—೦

ಸುಧಾರಿಸಿದ ಕೃತಿಗಳನ್ನು ತಮಗೆ ನೀಡಲು ಸಂತೋಷವೆನಿಸುತ್ತದೆ. ಪ್ರಾ. ಶಾ. ಪ್ರ. ಪ. ಪರೀಕ್ಷೆಗೆ ಬೀಜಗಣಿತ ವಿಷಯು ಇದ್ದುದು ಗೊತ್ತಿದೆಯೆ ? ೬ನೆಯ ಗಣಿತ ಎಲ್ಲ ವಿಭಾಗಗಳನ್ನು ಒಳಗೊಂಡು ಹೊರಡಿಸಲಾಗಿದೆ. ಸಂಗ್ರಹದಿಂದ ಈಗಲೇ ಪಡೆಯಿರಿ.

ಆಕಳವಾಡಿ ಬುಕ್‌ಡಿಪೋ, ಧಾರವಾಡ.

ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸುಸಂಧಿ!

೧೯೫೧ ಮತ್ತು ೧೯೫೨ನೆಯ ವರ್ಷಗಳ
ಮುಲ್ಕೀ ಪರೀಕ್ಷೆಯ ಎಲ್ಲ ವಿಷಯಗಳ
ಪ್ರಶ್ನೆಗಳನ್ನು ಬಿಡಿಸಿದ

"ಪ್ರಶ್ನೋತ್ತರ ದರ್ಪಣ"ವು

ಲೆ: ಆಯ್. ಎಸ್. ಅರಳಗುಪ್ಪಿ
ಬಿ. ಜಿ. ಸಿದ್ದನಗೌಡರ
ಎನ್. ಎಸ್. ಸವದಿ

ಸಿದ್ಧವಾಗಿದೆ. ಅನುಭವಿಕ ಶಿಕ್ಷಕರಿಂದ ಬರೆದು,
ಶಿಕ್ಷಣ ತಜ್ಞರಿಂದ ಪರಿಶೋಧಿಸಿದೆ.
ತ್ವರೆ ಮಾಡಿರಿ.

ವಿಳಾಸ: ಎಲ್. ಜಿ. ಹೊಸಮನಿ
ದೀಕ್ಷಿತವಾಡಿ, ಲೈನಬಜಾರ, ಧಾರವಾಡ.

ಬೆಲೆ: ೧—೧೨—೦

೭ನೆಯ ಇಯತ್ತೆಯ ಹೊಸ ಅಭ್ಯಾಸಪತ್ರಿಕೆ
ಯಂತೆ ಹೊಸ ಮಾದರಿಯಿಂದ ರಚಿಸಿದ

ಭಾರತ ರಾಜ್ಯ ಘಟನೆ

(ಸಚಿತ್ರ)

ಸುಧಾರಿಸಿದ ಎರಡನೆಯ ಆವೃತ್ತಿ
ಫೆಬ್ರುವರಿ ೧೯೫೨
ಲೇಖಕರು:— ವಿ. ಕ. ನಂದಗಾಂವ
ಬೆಲೆ ೦—೧೨—೦

ಮಾನ್ಯರಾದ ಎಸ್.ಎನ್. ಅಂಗಡಿ, ಪ್ರಿ ರೆಡ್ಡಿ, ಪ್ರಿ. ಜೋಶಿ, ಪ್ರಿ. ಇಂಚಲ, ಪ್ರಿ. ವರ್ಟಿ, ಪ್ರಿ. ಚಿಕ್ಕರಮನೆ, ಶ್ರೀ. ಗೋಖಲೆ ಕೇಶವರಾಯರು, ಶ್ರೀ. ಶಾನಭಾಗ (ಡಿ.ಎನ್.ಪಿ.) ಮುಂತಾದವರಿಂದಲೂ ಪಠ್ಯ ಪುಸ್ತಕ ಸಮಿತಿಯವರಿಂದಲೂ ಮಾನ್ಯ ಮಾಡಲ್ಪಟ್ಟಿದೆ.

ಪ್ರಕಾಶಕರು: ನಿ. ವಿ. ನಂದಗಾಂವ
೬೧೯ ಮರಗಲ್ಲಿ, ಬೆಳಗಾಂವ

ಅವಶ್ಯವಾಗಿ ಸಂಗ್ರಹಿಸಲೇಬೇಕಾದ ಪುಸ್ತಕಗಳು!

ಲೇಖಕ: ಗಲಗಲಿ

ನಮ್ಮ ರಾಜ್ಯಘಟನೆ

(ಬೆಲೆ: ೧೨ ಆಣೆ)

ಇಂದಿನ ಪರೀಕ್ಷೆಯ ಹೊಸ ಧೋರಣೆಯಂತೆ ಪುಸ್ತಕ ರಚಿಸಲಾಗಿದೆ. ಹೊಸ ಅಭ್ಯಾಸಪತ್ರಿಕೆಯ ಪ್ರಕಾರ ಎಲ್ಲ ವಿಷಯಗಳನ್ನು ಮಕ್ಕಳಿಗೆ ತಿಳಿಯುವಂತೆ ತಿಳಿಯಾದ ಭಾಷೆಯಲ್ಲಿ ವಿವೇಚಿಸಲಾಗಿದೆ. ಪ್ರತಿ ಪ್ರಕರಣದ ಕೊನೆಗೆ ಉಪಯುಕ್ತ ಹಾಗೂ ಮಹತ್ವದ ಪ್ರಶ್ನೆಗಳನ್ನೂ ಕೊಟ್ಟಿದೆ. ಕಾರಣ ಈ ಪುಸ್ತಕವನ್ನು ಪ್ರಾ. ಶಾ. ಪ್ರ. ಪ. ಪರೀಕ್ಷೆಯ ವಿದ್ಯಾರ್ಥಿಗಳು ಕೂಡಲೇ ಸಂಗ್ರಹಿಸುವದು ಜಾಣತನವೆಂದು ಬೇರೆ ಹೇಳಬೇಕಿಲ್ಲ.

ಪ್ರಶ್ನೋತ್ತರ-ಕರ್ನಾಟಕ
ಇತಿಹಾಸ

(ಬೆಲೆ: ೧೨ ಆಣೆ)

ಎಲ್ಲ ವಿಷಯಗಳನ್ನೊಳಗೊಂಡ ಇಂಥ ಪುಸ್ತಕ ಕರ್ನಾಟಕದಲ್ಲಿ ಇನ್ನೂವರೆಗೆ ಹೊರಬಿರಲಿಲ್ಲ. ಮಿ. ಸ್ಕೂಲ ಸ್ಕಾಲರಶಿಪ್ ಪರೀಕ್ಷೆಯ ವಿದ್ಯಾರ್ಥಿಗಳು ಈ ಪುಸ್ತಕವನ್ನು ಉಪಯೋಗಿಸಿ ತಮ್ಮ ಯಶದ ಮಾರ್ಗವನ್ನು ಸುಗಮ ಮಾಡಿಕೊಳ್ಳುವರೆಂದು ಆಶಿಸಿದರೆ ಅದೇನೂ ಅತಿಶಯೋಕ್ತಿಯಲ್ಲ. ಪ್ರಾಥಮಿಕ ೪ನೆಯ ತರಗತಿಯ ಮಕ್ಕಳಿಗೆ ಇದು ಮಾರ್ಗದರ್ಶನ ಮಾಡಬಲ್ಲದು. ಆದ್ದರಿಂದ ಈ ಪುಸ್ತಕ ನಿಮ್ಮಲ್ಲಿರದಿದ್ದರೆ ಕೂಡಲೇ ಸಂಗ್ರಹಿಸಿರಿ.

ಇಂದೇ ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಲು ಯತ್ನಿಸಿರಿ!!

ವ್ಯವಸ್ಥಾಪಕರಿಗೆ ಧಾರವಾಡ ಬುಕ್ ಡಿಪೋ

ಆರ್ಯಭಾರತಿ ಬುಕ್ ಡಿಪೋ (ಮಿಠಾಯಿ ಕೋಟ) ಧಾರವಾಡ

ತ್ವರೆ ಮಾಡಿರಿ! ಇಂದೇ ಸಂಗ್ರಹಿಸಿರಿ!

ಹಬ್ಬ—ಹುಣ್ಣಿವೆಗಳು

ಬೆಲೆ: ೦—೧೨—೦

ಎಲ್ಲರಲ್ಲಿಯೂ ಇರಬೇಕಾದ ಪುಸ್ತಕ. ಹಬ್ಬಗಳು ರೂಢಿಯಲ್ಲಿ ಏಕೆ ಬಂದವು? ಅವುಗಳಿಗಿರತಕ್ಕ ಐತಿಹಾಸಿಕ ಹಿನ್ನೆಲೆ ಮತ್ತು ಮಹತ್ವ ಕುರಿತು ಸರಳ ಶೈಲಿಯಲ್ಲಿ ನಿವೇದಿಸಲಾಗಿದೆ.

———

ತ್ವರೆ ಮಾಡಿರಿ! ಇದೀಗ ತಯಾರಾಗಿವೆ.

ಲಘುಪಾಠಮಾಲೆ—೧ ಇತಿಹಾಸ ಬೆಲೆ ೦-೬-೦

,, ೨ ಭೂಗೋಲ ಬೆಲೆ ೦-೬-೦

,, ೩ ಭೂಸ್ಥಿತಿ-ಜಮಾಖರ್ಚ ೧-೬-೦

,, ೪ ವ್ಯಾಕರಣ (ಅಚ್ಚಿನಲ್ಲಿ)

ಈ ಚಿಕ್ಕ ಪುಸ್ತಕಗಳು ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೂ ೫-೬ನೇ ಇಯತ್ತೆ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯುಕ್ತವಾಗಿವೆ. ಈಗಾಗಲೆ ಈ ಮಾಲೆಯು ಬಹುಜನರಿಂದ ಮನ್ನಣೆ ಪಡೆದಿದೆ.

ಅಕಳವಾಡಿ ಬುಕ್-ಡಿಪೋ, ಧಾರವಾಡ

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶೀ. ಎಸ್. ಕೆ. ಜೋಶಿ, ಮತ್ತು
ಶೀ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಿಗಳ ಹತ್ತರ ದೊರೆಯುವದು. ಬೆಲೆ ೧-೧೨-೦, ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಅಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

ವ್ಯಾವಹಾರಿಕ ಗಣಿತವು

(ಭಾಗ ೧, ೨, ೩)

೫, ೬, ೭ನೆಯ ಇಯತ್ತೆಯವರಿಗಾಗಿ

"ಅನೇಕ ವರ್ಷಗಳಿಂದ ನನಗೆ ಚೆನ್ನಾಗಿ ಪರಿಚಿತರಾದ ಶ್ರೀಮಾನ್ ಅನಂತರಾವ ಬೋಧೆಯವರ "ವ್ಯಾವಹಾರಿಕ ಗಣಿತ"ದ ಎಲ್ಲ ಭಾಗಗಳನ್ನು ನಾನು ಕೂಲಂಕುಷವಾಗಿ ಓದಿ ನೋಡಿದೆನು. ಈ ಪುಸ್ತಕವು ಅವರ ೩೫ ವರ್ಷಗಳ ಶಿಕ್ಷಣಕಾರ್ಯದ ಮತ್ತು ಅನುಭವದ ಪರಿಪಕ್ವವಾದ ಫಲವಾಗಿರುವದೆಂದು ಹೇಳಲಿಕ್ಕೆ ನನಗೆ ಸಂತೋಷವಾಗುತ್ತದೆ. ಇದು ಒಳ್ಳೆಯ ಯೋಜನೆಯ ತಳಹದಿಯ ಮೇಲೆ ರಚಿಸಿದ್ದಾಗಿದೆ; ಮತ್ತು ಹೊಸ ಅಭ್ಯಾಸಪತ್ರಿಕೆಯಂತೆ ಎಲ್ಲ ಅಂಶಗಳನ್ನು ಒಳಗೊಂಡಿದೆ. ಅಲ್ಲದೆ ಸರಿಯಾಗಿ ಅನುಕ್ರಮದಲ್ಲಿ ಕೊಡಲಾಗಿರುವ, ಉತ್ತಮವಾಗಿ ಆರಿಸಿದ ನಿತ್ಯಜೀವನದಿಂದ ಆಯ್ದುಕೊಂಡ ಉದಾಹರಣೆಗಳನ್ನು ಕೊಡಲಾಗಿದೆ. ಇದು ಇಂದು ಯೋಜನೆಯ ತಳಹದಿಯ ಮೇಲೆ ರಚಿಸಲಾದ ಪಠ್ಯಪುಸ್ತಕಗಳ ವಿರಲತೆಯಿಂದ ಉಂಟಾಗಿರುವ ಪ್ರತಿಕೂಲತೆಯನ್ನು ಹೋಗಲಾಡಿಸಿ ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿ ಕಂಡುಬರುವದರಲ್ಲಿ ಸಂಶಯವಿಲ್ಲ." ಎಂದು ಎಸ್. ಟಿ. ಕಾಲೇಜಿನ ಗಣಿತ ವಿಷಯದ ಪ್ರಾಧ್ಯಾಪಕರಾದ ಶ್ರೀಮಾನ್ ಪಿ. ಎಸ್. ಮಳಗಾವಕರರು M. A., B. T., M. Ed. ಇವರು ಹೇಳುತ್ತಾರೆ.

ಪ್ರತಿಗಳು ದೊರೆಯುವ ಸ್ಥಳ: ಎ. ವ್ಹಿ. ಬೋಧೆ ಫುಲಬಾಗ ೨೨೪/೪೭ ಬೆಳಗಾವಿ

ಪ್ರಾ. ಶಾ. ಪ್ರ. ಪ. ಪರೀಕ್ಷೆಯ ವಿದ್ಯಾರ್ಥಿಗಳಿಗೆ
ಅತ್ಯುಪಯುಕ್ತವಾದ ಹೊಸ ಪುಸ್ತಕಗಳು

೧. ಹೊಸ ಪ್ರಶ್ನೋತ್ತರ ಇತಿಹಾಸ

ಬರೆದವರು:— ಶ್ರೀ. ಭೀ. ಚಂ. ಪೂಜಾರ ಮಾಸ್ತರ, ಬೆಲೆ: ೧—೪—೦

ವಿದ್ಯಾರ್ಥಿಗಳು ಇತಿಹಾಸ ಪರೀಕ್ಷೆಯಲ್ಲಿ ಸಂಪೂರ್ಣ ಯಶಸ್ವಿಯಾಗುವಷ್ಟು ವಿಷಯವನ್ನು ಪ್ರಶ್ನೋತ್ತರ ರೂಪದಿಂದ ಬರೆದಿರುವರು. ೩೦೦-೪೦೦ ಪುಟದ ಇತಿಹಾಸ ಹಥ್ಯಪುಸ್ತಕ ಓದುವದ ಕ್ಕಿಂತಲೂ ಈ ಪುಸ್ತಕವನ್ನು ಓದಿದರೆ ವಿಶೇಷ ಸಹಾಯವಾಗುವದು.

ಈ ಪುಸ್ತಕದ ಕೊನೆಗೆ ರಾಜಕೀಯ ಮುಂದಾಳುಗಳ ಸಂಕ್ಷಿಪ್ತ ಚರಿತ್ರೆಯೂ ರಾಜ್ಯಘಟನೆಯ ಸಂಪೂರ್ಣ ವಿವರಣೆಯೂ ವಿವರಿಸಲ್ಪಟ್ಟಿದೆ. ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ತಕ್ಕ ಉತ್ತರಗಳನ್ನು ಕೊಡಲು ಸಮರ್ಥರಾಗುವಂತೆಯೂ ಪ್ರಶ್ನೆಗಳ ನಿಶ್ಚಿತ ಸ್ವರೂಪವನ್ನು ಚನ್ನಾಗಿ ತಿಳಿದುಕೊಳ್ಳುವಂತೆಯೂ ಬರೆಯಲ್ಪಟ್ಟಿದೆ. ಇಂದಿನ ವರೆಗೆ (ಐದು ವರ್ಷಗಳ) ಪರೀಕ್ಷೆಯ ಪ್ರಶ್ನೆಗಳನ್ನು ಬಿಡಿಸಿದ್ದಾರೆ. ಎಲ್ಲ ಪ್ರಶ್ನೋತ್ತರ ಇತಿಹಾಸ ಪುಸ್ತಕಗಳಿಗಿಂತಲೂ ಇದು ಹೊಸ ಪುಸ್ತಕವಾಗಿದೆ.

೨. ಹೊಸ ಪ್ರಶ್ನೋತ್ತರ ಜಮಾಖರ್ಚು

ಬರೆದವರು:— ಶ್ರೀ. ಭೀ. ಬಂ. ರಾಜಪುರೋಹಿತ ಮಾಸ್ತರ, ಬೆಲೆ ೧—೦—೦

'ಜಮಾಖರ್ಚು' ಈ ವಿಷಯವು ಬಹು ನೀರಸವಾದುದು. ಆದುದರಿಂದ ವಿದ್ಯಾರ್ಥಿಗಳು ಬಹಳ ತೊಂದರೆಗೊಳಗಾಗುವರು. ಈ ತೊಂದರೆ ನೀಗಿಸಲು ಈ ಪುಸ್ತಕವು ರಚಿಸಲ್ಪಟ್ಟಿದೆ. ವಿದ್ಯಾರ್ಥಿಗಳು ಇದೊಂದೆ ಪುಸ್ತಕ ಅಭ್ಯಸಿಸುವದರಿಂದ ಈ ವಿಷಯದ ಪರೀಕ್ಷೆಯಲ್ಲಿ ಅವರು ನಿಶ್ಚಿತವಾಗಿ ಯಶಸ್ವಿಯಾಗುವರು. ಇಂದಿನ ವರೆಗೆ ೫ ವರ್ಷಗಳ ಪರೀಕ್ಷೆಯ ಪ್ರಶ್ನೆಗಳ ಉತ್ತರಗಳನ್ನೂ ಕೆಲವು ಹೊಸ ಮಾದರಿಯ ಪ್ರಶ್ನೆಗಳನ್ನೂ ಈ ಪುಸ್ತಕದಲ್ಲಿ ನೋಡಬಹುದು.

ಪುಸ್ತಕ ಬೇಕಾದವರು ಕೂಡಲೇ ತರಿಸಿಕೊಳ್ಳಿರಿ.

ಸಿ. ಸಿ. ಶಾಬಾದಿಮಠ ಬುಕ್ಕಡಿಪೊ, ಗದಗ

ನಿಮ್ಮ ಸ್ಥಳಿಕ ಪುಸ್ತಕದ ಅಂಗಡಿಯಲ್ಲಿ ವಿಚಾರಿಸಿರಿ.

ಶಿಕ್ಷಕ ಬಂಧುಗಳೇ ತೊಂದರೆ ಪಡುವಿರೇಕೆ ನಿಮ್ಮ ಸಲುವಾಗಿಯೇ ತಯಾರ ಮಾಡಲಾಗಿದೆ.
ಇಂದೇ ತರಿಸಿರಿ! ಮರೆಯಬೇಡಿರಿ!

ಮೆ| ಗ. ಜ. ಗುಂಜೀಕರ, ಎ. ಓ. ಜಿಲ್ಲಾ ಸ್ಕೂಲ್‌ಬೋರ್ಡ, ವಿಜಾಪುರ
ಮೆ| ಎ. ಎಚ್. ದಳವಾಯಿ, ಡೆ. ಎ. ಇ. ಜಿಲ್ಲಾ, ವಿಜಾಪುರ

ಇವರುಗಳ ಮುನ್ನುಡಿ ಮತ್ತು ಪ್ರೋತ್ಸಾಹಗಳಿಂದ ಪ್ರಾಥಮಿಕ, ಮಾಧ್ಯಮಿಕ ಹಾಗೂ ಮೂಲ ಶಿಕ್ಷಣ ಬೋರ್ಡುಗಳಿಂದ ಸಂಯುಕ್ತವಾಗಿ ಪರಿಷ್ಕರಿಸಲ್ಪಟ್ಟು ಸ್ವೀಕೃತವಾದ

ಅಭ್ಯಾಸ ಪತ್ರಿಕೆಗಳು

೧ರಿಂದ ೪ನೆಯ ಇಯತ್ತೆ ಪೂರ್ಣ. ೫೦ ಪುಟಗಳದ್ದು ಬೆಲೆ ೮ ಆಣೆ.
೫ರಿಂದ ಪ್ರಾ. ಶಾ. ಪ್ರ. ಪತ್ರ ಪರೀಕ್ಷಾಪೂರ್ಣ ೧೦೨ ಪುಟಗಳುಳ್ಳದ್ದು
ಬೆಲೆ ೧೫ ಆಣೆ

ಬ. ದು ಹಿರೇಮಠ ಮಾಸ್ತರ ವಿಜಾಪುರ

ಚಿಂತೆ ! ಚಿಂತೆ !! ಚಿಂತೆ !!!

ಶಿಕ್ಷಕರಿಗೂ ಚಿಂತೆ !
ಪಾಲಕರಿಗೂ ಚಿಂತೆ !!
ಮಕ್ಕಳಿಗೂ ಚಿಂತೆ !!!

?

ಶಿಕ್ಷಕರ ಶ್ರಮ ಹಾಳು ! ಮಕ್ಕಳ ಓದು ಹಾಳು !! ಪಾಲಕರ ಹಣ ಹಾಳು !!!
ಇವುಗಳ ನಿವಾರಣೋಪಾಯ ಬೇಕೆ ? ಹಾಗಿದ್ದರೆ,
ಪರೀಕ್ಷೆಯ
ಸ್ಕಾಲರ್‌ಶಿಪ್ ಮತ್ತು ಮುಲ್ಕೀ ವಿದ್ಯಾರ್ಥಿಗಳಿಗಾಗಿ
ಹೊಸ ಅಭ್ಯಾಸ ಪತ್ರಿಕೆಯಂತೆ ಬರೆದ

ಪ್ರಶ್ನೋತ್ತರ ದೀಪಿಕೆ

ಇತಿಹಾಸ

ಬೆಲೆ ೦—೧೪—೦ (ಪೌರನೀತಿ ಸಹಿತ) (ಅಂಚೆ ವೆಚ್ಚ ಪ್ರತ್ಯೇಕ)

ಇದನ್ನು ತಪ್ಪದೇ ಓದಿರಿ. ಭಾರತದ ನಿರ್ಮಾತೃಗಳ ಜೀವನ ಚರಿತ್ರೆ, ರಾಜ್ಯಘಟನೆ,
ಮಂತ್ರಿಮಂಡಲಗಳ ವಿವರಣೆಯನ್ನೊಳಗೊಂಡಿರುವ ಏಕೈಕ ಹೊತ್ತಿಗೆ.
ಇಂದೇ ಬರೆಯಿರಿ ಅಥವಾ ಭೆಟ್ಟಿಯಾಗಿರಿ.

ವೀರಣ್ಣಾ ಬುಕ್ ಡಿಪೋ, ಮಾರುತಿ ಚೌಕಿ, ಬೆಳಗಾವಿ

ಮಕ್ಕಳ ಸಚಿತ್ರ ಅಂಕಗಣಿತ

ಪ್ರಾಥಮಿಕ ೧, ೨, ೩ನೆಯ ತರಗತಿಗಳಿಗೆ

ಹೊಸ ಅಭ್ಯಾಸಪತ್ರಿಕೆಯಂತೆ ಬರೆಯಲ್ಪಟ್ಟುವು! ಹೊಸ ಶಿಕ್ಷಣಪದ್ಧತಿಗೆ ಹೊಂದಿಕೊಳ್ಳುವಂತೆ ವಿಷಯ ವಿವೇಚನೆಯನ್ನೊಳಗೊಂಡುವು! ದಿನ ನಿತ್ಯದ ಜೀವನಕ್ಕೆ ಸಂಬಂಧಿಸಿದ ಉದಾಹರಣೆಗಳು! ಸುಲಭವಾದ ಶೈಲಿ, ಮಕ್ಕಳ ಮನಸೆಳೆಯುವ, ಕಣ್ಣಿಗೆಸುವ ಸುಂದರ ಚಿತ್ರಗಳು !! ಮಕ್ಕಳಿಗೆ ಅತ್ಯುಪಯುಕ್ತ!

೧ನೆಯ ತರಗತಿಯ ಅಂಕಗಣಿತ: ಬೆಲೆ ೦-೫-೦

೨ನೆಯ ತರಗತಿಯ ಅಂಕಗಣಿತ: ಬೆಲೆ ೦-೭-೦

೩ನೆಯ ತರಗತಿಯ ಅಂಕಗಣಿತ: ಬೆಲೆ ೦-೧೦-೦

ರಾಮಾಶ್ರಯ ಬುಕ್-ಡಿಪೊ, ಧಾರವಾಡ.

ಸ್ವತಂತ್ರ ಭಾರತೀಯ ರಾಜ್ಯತಂತ್ರ

(ಸಚಿತ್ರ)

ಲೇಖಕರು: ಶ್ರೀ. ನಾರಾಯಣ ಶರ್ಮ

ಎಸ್. ಎಸ್. ಸಿ (ಮ್ಯಾಟ್ರಿಕ್), ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ (ಮುಲ್ಕಿ) ಹಾಗು ಪ್ರಾಥಮಿಕ ಶಿಕ್ಷಕರ ಪ್ರಮಾಣಪತ್ರ ಪರೀಕ್ಷೆ (ಸಿ. ಟಿ. ಸಿ.) ಗಳ ಹೊಸ ಅಭ್ಯಾಸ ಪತ್ರಿಕೆಗಳಿಗೆ ಅನುಸಾರವಾಗಿ ಬರೆಯಲ್ಪಟ್ಟಿದು. ಇದೊಂದೇ ಪುಸ್ತಕದಲ್ಲಿ ಮೂರು ಪರೀಕ್ಷೆಗಳಿಗೆ ಅವಶ್ಯವಾದ ಭಾರತೀಯ ರಾಜ್ಯತಂತ್ರದ ತ್ರಿವೇಣೀ ಸಂಗಮ! ವಿಷಯಕ್ಕನುಗುಣವಾದ ಸುಂದರ ಚಿತ್ರಗಳು! ನಕಾಶೆಗಳು! ಚಿತ್ರಪಟಿಗಳು! ಗಹನವಾದ ವಿಷಯವನ್ನು ಸುಲಭವಾಗಿ ತಿಳಿಯುವ ಶೈಲಿಯಲ್ಲಿ ಪ್ರತಿಪಾದಿಸಲಾಗಿದೆ.

ಬೆಲೆ: ೧—೦—೦ ಮಾತ್ರ

ಪ್ರಕಾಶಕರು:

ರಾಮಾಶ್ರಯ ಬುಕ್-ಡಿಪೊ, ಧಾರವಾಡ.

Regd. No, B. 5375

ಗೌರೀಶ ಗ್ರಂಥ ಪ್ರಕಟನಾಲಯದಿಂದ ಪ್ರಕಟವಾದ ಹೊಸ ಹೊತ್ತಿಗೆಗಳು

೧. **ಕರ್ನಾಟಕದ ಐತಿಹಾಸಿಕ ಕಥೆಗಳು. ೪ನೇ ಇಯತ್ತಿಗೆ** ಬೆಲೆ ೦-೧೪-೦
ಲೇಖಕರು :- ಶ್ರೀಯುತ ಬಸಪ್ಪ ಮಲ್ಲಪ್ಪ ಶಿಂತ್ರಿ ಬಿ.ಎ.ಬಿ.ಟಿ.
ರಿಟಾಯರ್ಡ ಅ. ಎ. ಇ. ದಕ್ಷಿಣ ಭಾಗ, ಧಾರವಾಡ.

೨. **ಭೂಮಂಡಲ ಬೋಧಿನಿ ಭಾಗ ೧. ೪ನೆಯ ಇಯತ್ತಿಗೆ** ಬೆಲೆ ೦-೧೨-೦
ಲೇಖಕರು :- ಕೈ. ಶಿ. ಸೋ. ಕುಲಕರ್ಣಿ.

೩. **ಭೂಮಂಡಲ ಬೋಧಿನಿ ಭಾಗ ೨. ೫ನೆಯ ಇಯತ್ತಿಗೆ** ಬೆಲೆ ೧-೪-೦
ಲೇಖಕರು :- ಶ್ರೀಯುತ ಎ. ಜಿ. ಕುಲಕರ್ಣಿ ಬಿ.ಎ.ಬಿ.ಟಿ.
ಮತ್ತು ಶ್ರೀಯುತ ಕಾರಡಗಿ ಬಿ.ಎ.

೪. **ಭೂಮಂಡಲ ಬೋಧಿನಿ ಭಾಗ ೩. ೬ನೆಯ ಇಯತ್ತಿಗೆ** ಬೆಲೆ ೧-೧೦-೦
ಲೇಖಕರು :- ಸದರೀಯವರು

೫. **ಭೂಮಂಡಲ ಬೋಧಿನಿ ಭಾಗ ೪. ೭ನೆಯ ಇಯತ್ತಿಗೆ** ಬೆಲೆ ೨-೨-೦
ಲೇಖಕರು :- ಸದರೀಯವರು

೬. **ಸ್ವತಂತ್ರ ಭಾರತದ ಗಣರಾಜ್ಯ ಘಟನೆ. ೭ನೆಯ ಇಯತ್ತಿಗೆ** ಬೆಲೆ ೦-೧೨-೦
ಲೇಖಕರು :- ಆಪ್ಯ ರಂಗಾಚಾರ್ಯ ಎಂ. ಎ. (ಲಂಡನ್)

೭. **ಭಾರತ ರಾಜ್ಯಘಟನೆಯ ತಿಳಿಸೋಟ. ೬ನೆಯ, ೭ನೆಯ ಇಯತ್ತಿಗಳಿಗೆ** ಬೆಲೆ ೦-೮-೦
ಲೇಖಕರು :- ಶ್ರೀ. ಗ. ಸ. ಹಾಲಪ್ಪ ಎಂ. ಎ. ಮಹಾರಾಜಾ
ಕಾಲೇಜ, ಮೈಸೂರ.

ಮೇಲಿನ ಎಲ್ಲ ಪುಸ್ತಕಗಳು ಅವುಗಳ ಮುಂದೆ ಕಾಣಿಸಿದ ಇಯತ್ತಿಗಳಿಗೆ ೧೯೫೪ರ ವರೆಗೆ ಪಠ್ಯ ಪುಸ್ತಕಗಳೆಂದು ಸರಕಾರದವರಿಂದ ಮಂಜೂರಾಗಿವೆ.

೮. **ಮನಸ್ಸು ಮತ್ತು ಶಿಕ್ಷಣ ಸಮಸ್ಯೆ.** ಟ್ರೇನಿಂಗ ಕಾಲೇಜದ ೨ನೆಯ ವರ್ಷದವರಿಗೆ ಪೂರಕ-ವಾಚನವೆಂದು ಮಂಜೂರಾಗಿದೆ. ಬೆಲೆ ೦-೧೨-೦
ಲೇಖಕರು :- ಶ್ರೀ. ಕಾರಡಗಿ ವೀರಭದ್ರಪ್ಪನವರು ಎಂ. ಎ. ಎಲ್ ಎಲ್. ಬಿ.

೧. **ಮಾತಿನ ಮುನ್ನುಡಿ. ೪ನೆಯ ಇಯತ್ತಿಗೆ** ೩. **ಮಾತಿನ ಮುನ್ನುಡಿ. ೬ನೆಯ ಇಯತ್ತಿಗೆ**
೨. **ಮಾತಿನ ಮುನ್ನುಡಿ. ೫ನೆಯ ಇಯತ್ತಿಗೆ** ೪. **ಮಾತಿನ ಮುನ್ನುಡಿ. ೭ನೆಯ ಇಯತ್ತಿಗೆ**

೫. ಪತ್ರಗಳ ಸಂಚಯ. ೬-೭ನೆಯ ಇಯತ್ತಿಗಳಿಗೆ
ಇವೆಲ್ಲವೂ ಪೂರಕ ವಾಚನಗಳೆಂದು ಮಂಜೂರಾಗಿವೆ.

ಪ್ರಕಾಶಕರು :
ರಂಭುಲಿಂಗಪ್ಪ ವಿಠಮುದ್ರಪ್ಪ ಕುಲಕರ್ಣಿ, ಧಾರವಾಡ.

Printed by M. A. Kamat, B. sc. at Jai Hind Art Press, Javlipeth, Dharwar. Edited and Published by M. G. Handral B. M. Shintri, S. R. Tatti, & Y. D. Nadkarni Jointly at the Kannada Prathamik Shikshan Office Govt. Training College for Men, D

ಮಾಧುರಿಯ ಶ್ರೀಮಣಿ

ಮಹರ್ಷಿ ಶ್ರೀ. ಅರವಿಂದರು

ದಿವ್ಯ ಜೀವನ ಸ್ಮರಿಸಿ ಭವ್ಯಪಥವನು ಅರಸಿ
ಸವ್ಯ ಸಾಚಿಯೆ ನೀನು! ಯೋಗರಾಜದ ಪಥವ
ಜೀವನದ ಯೋಗದಲಿ ಯೋಗ ಜೀವನ ನೀಡಿ
ಜೀವಮಾನವನೆಲ್ಲ ಯೋಗಭೂಮಿಯ ಮಾಡಿ
ಶಾಶ್ವತವ ಸಂದೇಶ ವಿಶ್ವವೆಲ್ಲಕು ನೀಡಿ
ಭಾರತಕೆ 'ಸಪಜನ್ಮ' ಸುಧೆಯಿತ್ತ ಪೂರ್ಣಯೋಗಿ!

—ಸಿಂಪಿ ಲಿಂಗಣ್ಣ

[ಪ್ರಧಾನ ಸಂಪಾದಕರು:— ಶ್ರೀ. ಮು. ಗು. ಹಂದ್ರಾಳ]

ಬಿಡಿ ಪ್ರತಿ ಸಪ್ಟೆಂಬರ ೧೯೫೨ ವಾ. ಚಂದಾ

ಕನ್ನಡ ಪ್ರಾಥಮಿಕ ಶಿಕ್ಷಣ



ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಡಿ. ವ್ಹಿ. ಚಿಕ್ಕರಮನೆ, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾ
ಪ್ರಧಾನ ಸಂಪಾದಕರು : ಶ್ರೀ. ಎಂ. ಜಿ. ಹಂದ್ರಾಳ ಬಿ.ಎ.(ಆನರ್ಸ)ಬಿ. ಟಿ., ಡಿ. ಪಿ. ಇಡಿ;ಡಿ. ಬಿ.
ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾ

ಸಹಸಂಪಾದಕರು:

ಶ್ರೀಯುಮುನಾಬಾಯಿ ನಾಡಕರ್ಣಿ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾ
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗು

ಸಂಪುಟ ೯೨	ಸಪ್ಟಂಬರ ೧೯೫೨	ಸಂಚಿಕೆ

ವಿಷಯ

ಪ ರಿ ವಿ ಡಿ

೧. ಸಂಪಾದಕೀಯ ....
೨. ಜೀವನ ವಿಕಾಸ (ಕವಿತೆ)—ಶ್ರೀ ಡಿ. ಎಸ್. ಕರ್ಕಿ ....
೩. ಹಬ್ಬಹುಣ್ಣಿವೆಗಳೂ ಇವುಗಳ ದಿನಾಚರಣೆಯೂ—ಶ್ರೀ. ಶಿಂತ್ರಿ ಬಸಪ್ಪನವರು. ....
೪. ಕೈನೂಲಿನ ಹೆಣಿಕೆಯ ಸೂಚನೆಗಳು—(ಅನುವಾದ) ಶ್ರೀಮತಿ ಯಮುನಾಬಾಯಿ ನಾಡಕರ್ಣಿ (
೫. ಸ್ವಾತಂತ್ರ್ಯೋತ್ಸವ—ಶ್ರೀ. ಆಯ್. ಎಸ್. ಜಿದರಿ. .... (
೬. ಮಹರ್ಷಿ ಶ್ರೀ ಅರವಿಂದರು—ಶ್ರೀ. ಎಸ್. ವಾಯ್. ಶೀಲವಂತ .... (
೭. ಪುಸ್ತಕ ವಿಮರ್ಶೆ .... (
೮. ಸುದ್ದಿ ಸಂಗ್ರಹ .... (

ಮುಖಪೃಷ್ಠದ ಪಡಿಯಚ್ಚು ಮತ್ತು ಸ್ವಾತಂತ್ರ್ಯೋತ್ಸವದ ಎರಡು ಚಿಕ್ಕ ಪಡಿಯಚ್ಚುಗಳು.— "ನವಯು
ದಿನಪತ್ರಿಕೆ"ಯ ಕೃಪೆಯಿಂದ

ಸಂಪಾದಕೀಯ

ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಶಿಕ್ಷಣ:

ಭಾರತದ ಭಾಗ್ಯ ವಿಧಾತನ ಹೃದಯದಿಂದ ಸ್ಫುರಿಸಿ ಬಂದ ಹೊಸ ಶಿಕ್ಷಣದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಮಹತ್ವದ ಸ್ಥಾನವಿದೆಯೆಂಬುದನ್ನು ಮರೆಯುವಂತಿಲ್ಲ. ಮಗುವು ಉತ್ಪಾದಕ ಜೀವಿಯಾಗುವದರ ಜೊತೆಗೆ ಚಿನ್ನಲ್ಲಿ ಹುದುಗಿದ ಸಾಂಘಿಕ ಪ್ರವೃತ್ತಿಗಳ ಉದಾತ್ತೀಕರಣವನ್ನು, ಒಲವು-ನಿಲುವುಗಳ ಪ್ರಕಾಶನವನ್ನು, ಸೌಂದರ್ಯ ಭಾವನೆಯ ವಿಕಸನವನ್ನು, ಲಲಿತ ಕಲೆಗಳ ಬೆಳವಣಿಗೆಯನ್ನು, ವಿಚಾರ ಪ್ರಕಟನೆಯ ಶಕ್ತಿಯ ಏಳ್ಗೆಯನ್ನು, ಅನುಭವಗಳ ಹೆಚ್ಚಳವನ್ನು, ದೇವರಲ್ಲಿ ಶ್ರದ್ಧೆಯನ್ನು ಕಲ್ಪಿಸಿಕೊಳ್ಳುವದನ್ನು ಮಾಡಿಕೊಂಡು ಪ್ರಪಂಚದಲ್ಲಿ ಕಾಲಿಡುವ ಮುನ್ನ ಸ್ವಯಂಪೂರಿತ, ಸ್ವಾವಲಂಬಿ, ಸಮಾಜ ಪೋಷಕ ಸರ್ವಾಂಗಸುಂದರ ವ್ಯಕ್ತಿಯಾಗುವಂತೆ ಅತನನ್ನು ಮಾರ್ಪಡಿಸುವದೇ ಹೊಸ ಶಿಕ್ಷಣದ ಜೀವ-ಜೀವಾಳ. ಹೀಗೆ ಉದಾತ್ತೀಕರಣ ಹೊಂದಿ ಶಾಲೆಯಿಂದ ಹೊರಬೀಳುವ ಮಗುವು ರಾಷ್ಟ್ರದ ಆದರ್ಶ ನಾಗರಿಕನಾಗಿ ಪರಿಣಮಿಸುವದರಲ್ಲಿ ಸಂದೇಹವಿಲ್ಲ.

ಮಗುವಿನ ಸಂಪೂರ್ಣ ಉದಾತ್ತೀಕರಣವಾಗಬೇಕೆಂದು ಉತ್ಪಾದಕ ಉದ್ಯೋಗಕ್ಕೆ ಶಾಲೆಯಲ್ಲಿ ಸ್ಥಾನವಿರುವಂತೆ ಸಾಂಸ್ಕೃತಿಕ ಚಟುವಟಿಕೆಗಳಿಗೂ ಅಷ್ಟೇ ಮಹತ್ವದ ಸ್ಥಾನವನ್ನು ಕಲ್ಪಿಸಿಕೊಡಲಾಗಿದೆ. ಅಂದು ಅಭ್ಯಾಸೇತರ ಸಂಗತಿಗಳೆಂದು ಪರಿಗಣಿಸಲ್ಪಟ್ಟಿದ್ದ ಸಾಂಸ್ಕೃತಿಕ ಚಟುವಟಿಕೆಗಳು ಇಂದು ಅಭ್ಯಸಿತ ವಿಷಯಗಳೊಂದಿಗೆ ಪಗಂಡುಗೊಂಡಿವೆ; ಪ್ರಾಮುಖ್ಯತೆಯನು ಪಡೆದಿವೆ; ಶಾಲೆಯ ನಿತ್ಯದ ಜೀವನದಲ್ಲಿ ಸಮರಸಗೊಂಡು ಬಾಲಕರು, ಶಿಕ್ಷಕರು, ಪಾಲಕರು ಎಲ್ಲರನ್ನೂ ಒಂದಾಗಿ ಕಟ್ಟಿ ರಾಷ್ಟ್ರದ ಸರ್ವತೋಮುಖ ಏಳ್ಗೆಯತ್ತ ಮಕ್ಕಳನ್ನು ಆಣಿಗೊಳಿಸುತ್ತಿವೆ.

ಇಂತಿರುವ ಈ ಸಾಂಸ್ಕೃತಿಕ ಚಟುವಟಿಕೆಗಳು ದಸರೆ, ದೀಪಾವಳಿ, ಸಂಕ್ರಮಣ ಮೊದಲಾದ ಧಾರ್ಮಿಕ ಹಬ್ಬಗಳೆಂದು, ಕಾರಹುಣ್ಣಿಮೆ, ನಾಗಪಂಚಮಿ, ಕೀಗೆ ಹುಣ್ಣಿಮೆ, ಮುಂತಾದ ನೈಸರ್ಗಿಕ ಅಥವಾ ಕೃಷಿ ಹಬ್ಬಗಳೆಂದು, ಸ್ವಾತಂತ್ರ್ಯ ದಿನ, ಚರಖಾ ಜಯಂತಿ, ಟಿಳಕ, ಟಾಗೋರ, ಅರವಿಂದ, ಸ್ವಾಮಿ ವಿವೇಕಾನಂದ ಮೊದಲಾದ ಪುಣ್ಯ ಪುರುಷರ ಜಯಂತಿ ಇಲ್ಲವೆ ದಿನಗಳೆಂದು, ಪಾಲಕರ ದಿನ, ಶಾಲೆಯ ಹುಟ್ಟುಹಬ್ಬ ಮುಂತಾಗಿ ಇತರ ಚಟುವಟಿಕೆಗಳೆಂದು ಹೀಗೆ ಹಲವು ವಿಧವಾಗಿವೆ. ಈ ತೆರನಾದ ಸಾಂಸ್ಕೃತಿಕ ಚಟುವಟಿಕೆಗಳನ್ನು ಮಕ್ಕಳು ಸಂಘಟಿಸಿ ಆಚರಿಸಬೇಕು. ಇದರಿಂದ ಅವರಲ್ಲಿ ಸಂಘಟನೆ ಹಾಗೂ ಸಹಕಾರ ಪ್ರವೃತ್ತಿಗಳು ಬೆಳೆಯುವನಲ್ಲದೆ ತಮ್ಮ ನಾಡಿನ ಸಂಸ್ಕೃತಿಯ ನೈಜ ಸ್ವರೂಪವು ಗೊತ್ತಾಗಿ ರಾಷ್ಟ್ರೀಯ ಭಾವನೆಯು ಜಾಗ್ರತವಾಗುವದು.

ಶಾಲೆಗಳಲ್ಲಿ ಈ ಜಯಂತಿ, ಉತ್ಸವ ಹಾಗೂ ದಿನಗಳನ್ನು ಆಚರಿಸುವದು ಇತ್ತೀಚೆಗೆ ಯಾಂತ್ರಿಕವಾಗತೊಡಗಿರುವದು. ಅವುಗಳ ಮಹತ್ವವು ಅರಿಯದಿರುವದು, ಅವುಗಳನ್ನು ನಿತ್ಯ ಶಿಕ್ಷಣಕ್ರಮದಲ್ಲಿ ಅನುಬಂಧಿಸಿ ಬಳಸದಿರುವದೂ ಗೋಚರಿಸಹತ್ತಿದೆ. ಇದು ಮಾಯವಾಗಬೇಕು. ಈ ಸಾಂಸ್ಕೃತಿಕ ಚಟುವಟಿಕೆಗಳ ಆಚರಣೆಯೆಂದರೆ ಕೇವಲ ಯಾರಾದರೊಬ್ಬ ತಜ್ಞ ವ್ಯಾಖ್ಯಾತರನ್ನು ಆಮಂತ್ರಿಸಿ ಆ ಚಟುವಟಿಕೆಯ ಬಗೆಗೆ ವ್ಯಾಖ್ಯಾನ ಮಾಡಿಸಿದರೆ, ಹೆಚ್ಚೆಂದರೆ ಶಾಲೆಯನ್ನು ಸಂದರ್ಭಕ್ಕನುಸರಿಸಿ ತಳಿರು-ತೋರಣಗಳಿಂದ, ವರ್ಣರಂಜಿತ ಕಾಗದಗಳಿಂದ ಅಲಂಕರಿಸಿ ಚಟುವಟಿಕೆಗೆ ಸಂಬಂಧಿಸಿದ ಮಹಾವ್ಯಕ್ತಿಯ ಭಾವಚಿತ್ರವನ್ನಿಟ್ಟು ಕುಂಕುಮ-ತಿಲಕ-ಗಂಧ-ಪುಷ್ಪಗಳಿಂದ ಪೂಜಿಸಿ ಮಂಗಳಾರತಿ ಬೆಳಗಿ ಹಾಡಿ-ಪಾಡಿದರೆ ಮುಗಿಯಿತೆಂದು ತಿಳಿಯುವದು ಸಮಂಜಸವಾಗದು. ಹಾಗೆ ಭಾವಿಸಿದರೆ ಮೂಲಶಿಕ್ಷಣವು ಶಿಕ್ಷಣಕ್ಕೆ ಮೂಲವಾದಂತೆಯೇ ಸರಿ.

ಈ ಸಾಂಸ್ಕೃತಿಕ ಚಟುವಟಿಕೆಗಳು ನಿತ್ಯ ಶಿಕ್ಷಣದ ಕೇಂದ್ರಗಳಾಗಬೇಕು; ಶಿಕ್ಷಣ ಶಾಲೆಯಲ್ಲಿಯ ವಿಷಯ ಗ್ರಹಗಳನ್ನು ಜಾಲನಗೊಳಿಸುವ ಸೂರ್ಯಬಿಂಬವಾಗಬೇಕು. ಮೇಲೆ ಹೇಳಿದ ರೀತಿಯಲ್ಲಿ ಆಚರಿಸುವ ಮೊದಲು ಅವುಗಳನ್ನು ಸಂಘಟಿಸಬೇಕು. ಶಾಲೆಯಲ್ಲಿಯ ಪ್ರತಿ ವರ್ಗದ ಮಕ್ಕಳಿಗೆ ಅವರ ವಯೋಮಾನ, ಬುದ್ಧಿಮಟ್ಟ, ಮಾನಸಿಕ ಒಲವು-ನಿಲುವುಗಳನ್ನನುಲಕ್ಷಿಸಿ ಹಬ್ಬಗಳು, ಜಯಂತಿಗಳು, ದಿನಾಚರಣೆಗಳು ಮೊದಲಾದುವನ್ನು ಪೃಥಕ್ಕರಿಸಿ ಆಯಾ ಹಬ್ಬದ ಆಚರಣೆಯಲ್ಲಿ ಅನೇಕ ಘಟಕಗಳನ್ನು ಶೋಧಿಸಿ, ನಿರ್ಮಿಸಿಕೊಂಡು ಒಂದೊಂದು ಘಟಕವನ್ನು ಅದರ ಸುಲಭತೆ, ಕಠಿಣತೆಯಂತೆ ಬೇರೆ ಬೇರೆ ವರ್ಗಗಳಿಗೆ ಒಪ್ಪಿಸಬೇಕು. ಗಣೇಶೋತ್ಸವನ್ನೇ ಒಂದು ಆಚರಣೆಯನ್ನಾಗಿಟ್ಟುಕೊಂಡರೆ ತಳಿರು-ತೋರಣ ತಯಾರಿಸುವದನ್ನು ಒಂದು ವರ್ಗಕ್ಕೆ, ಮಂಟಪ ಕಟ್ಟುವದನ್ನು ಇನ್ನೊಂದು ವರ್ಗಕ್ಕೆ, ಪರಪರಿ ಕತ್ತರಿಸುವದನ್ನು ಮತ್ತೊಂದು ವರ್ಗಕ್ಕೆ, ಅವನ್ನು ಅಂಟಿಸಿ ಕಟ್ಟುವದನ್ನು ಮಗುದೊಂದು ವರ್ಗಕ್ಕೆ, ಗಣಪತಿ ತಯಾರಿಸುವದನ್ನು ಬೇರೊಂದು ವರ್ಗಕ್ಕೆ ಕೊಡುವದಲ್ಲದೆ ಗಣೇಶೋತ್ಸವದ ಬಗ್ಗೆ ಒಂದು ಸಂಭಾಷಣೆಯನ್ನು ರಚಿಸಿ ಸಂಭಾಷಿಸುವದು, ಇಲ್ಲವೆ ಒಂದು ಪದವನ್ನು ಕಟ್ಟಿ ಹಾಡುವದು ಅಥವಾ ಅದರ ಪೌರಾಣಿಕ ಹಿನ್ನೆಲೆಯನ್ನು ತಿಳಿಸಿಕೊಡುವದು, ವಿವಿಧ ಪ್ರಬಂಧಗಳನ್ನು ರಚಿಸುವದು ಇವೇ ಮೊದಲಾದುವು ಶಾಲೆಯ ವಿವಿಧ ವರ್ಗಗಳ ವಿದ್ಯಾರ್ಥಿಗಳ ಅವಗಾಹನೆಗೆ ತರಲ್ಪಡಬೇಕು. ಅಂದರೆ ಮಾತ್ರ ಈ ಸಾಂಸ್ಕೃತಿಕ ಚಟುವಟಿಕೆಗಳ ಕಾರ್ಯವು ಫಲಿಸಿದಂತಾಗುವದು.

ಇದೇ ಮೇರೆಗೆ ಧಾರ್ಮಿಕ, ಐತಿಹಾಸಿಕ ಮತ್ತು ರಾಷ್ಟ್ರೀಯ ಪುಣ್ಯಪುರುಷರ ಚರಿತ್ರೆಗಳನ್ನು ಆಯಾ ದಿನಗಳನ್ನು ಆಚರಿಸುವ ದಿನಗಳಲ್ಲಿ ತಿಳಿಸಿಕೊಡಬೇಕು. ಅದು ಸಮಯೋಚಿತವೂ, ಸಾಫಲ್ಯವೂ, ಸಪ್ರಯೋಜಕವೂ ಆಗುವದೆಂದು ಬೇರೆ ಹೇಳಬೇಕಿಲ್ಲ. ನಿಸರ್ಗದ ಹಬ್ಬಗಳ ಆಚರಣೆಯೆಂದು ಮಕ್ಕಳು ಹೊಲಗಳಲ್ಲಿ ಇಲ್ಲವೆ ನಿಸರ್ಗದ ನಿರಾಭರಣ ಸುಂದರ ಒಡಲಲ್ಲಿ ನಿಂತು ಸೌಂದರ್ಯವನ್ನು ಸವಿಯಲಿ; ಅಲ್ಲಿ ಅವರಿಗೆ ಪ್ರತ್ಯಕ್ಷವಾಗಿ ಆ ಹಬ್ಬದ ಮಹತ್ವವನ್ನು ಮಾಡಿಕೊಟ್ಟರೆ ಅದು ಸ್ಥಿರವಾಗಿ ಅವರ ಹೃದಯದಲ್ಲಿ ಉಳಿಯುವುದು. ಪಠ್ಯಪುಸ್ತಕಗಳಲ್ಲಿ ಬಂದ ಇಂತಹ ಪಾಠಗಳನ್ನು ಆಯಾ ಸಂದರ್ಭಗಳಲ್ಲಿಯೇ ಕಲಿಸುವ ಏರ್ಪಾಟನ್ನು ಮಾಡಿಕೊಳ್ಳುವುದು ಶ್ರೇಯಸ್ಕರ. ಭೂಗೋಲ, ಇತಿಹಾಸ, ಸಾಮಾನ್ಯವಿಜ್ಞಾನ ಮೊದಲಾದ ವಿಷಯಗಳಲ್ಲಿಯ ಪಾಠಗಳನ್ನು ಆಯಾ ಸಮಯಕ್ಕನುಸರಿಸಿ ಕಲಿಸುವ ಯೋಜನೆಯನ್ನು ಮಾಡಿಕೊಳ್ಳುವುದು ವಿಹಿತ.

ಹೊಸ ಶಿಕ್ಷಣದ ಅಂಗಗಳಲ್ಲಿ ಒಂದಾದ ಸಾಂಸ್ಕೃತಿಕ ಚಟುವಟಿಕೆಗಳ ಆಚರಣೆಯು, ಅದರ ತಿರುಳು ತಿಳಿಯಲ್ಪಟ್ಟು, ಸಂಘಟಿತ ರೂಪವಾಗಿ, ಶಾಲೆಯ ವಿವಿಧ ವಿಷಯಗಳನ್ನು ಆಕರ್ಷಿಸಿ, ಅನುಬಂಧಿಸಿ, ಸಾಂಸ್ಕೃತಿಕ ಮೇಘಮಾಲೆಯಲ್ಲಿ ಚರಿಸುವಂತೆ, ಚಲಿಸುವಂತೆ ಮಾರ್ಪಡಿಸಿ ಸಾಗಿಸಲ್ಪಟ್ಟರೆ ಮಕ್ಕಳ ಉನ್ನತಿ ಸಾಧಿಸುವದರಲ್ಲಿ, ಶಾಲೆಯ ಘನತೆಯು ಬೆಳೆಯುವದರಲ್ಲಿ, ಸಮಾಜದ ವಿಕಾಸವು ಅರಳಿ ಬರುವಲ್ಲಿ ಸಂದೇಹವಿಲ್ಲ. ಇದುವೇ ಹೊಸ ಶಿಕ್ಷಣದ ಅಪೇಕ್ಷೆ! ಇದುವೇ ಜೀವನ ಶಿಕ್ಷಣದ ಸಮೀಚನೆ!! ಇದುವೇ ಬಾಪೂಜಿಯ ಬಯಕೆ !!!

———

ಜೀವನ ವಿಕಾಸ

೧

ಜೀವನವು ವಿಕಶಿಸಲು ಮನ ಮನಪ ತೆರೆದೇಳಿ
ಹಳೆಯ ಕೊಳೆಯನು ದೂರ ದೂರ ತಳ್ಳಿ
ಕೊನರಲನುವಾಗುವುದು ನಾಡ ಹೂದೋಟದಲಿ
ಹೂವಿಡಿದ ಬಗೆ ಬಗೆಯ ಬಾಳಬಳ್ಳಿ

೨

ಶುದ್ಧ ದೃಷ್ಟಿಯ ಕಿರಣ ಹರಡಲಾಂತರ್ಯದಲಿ
ಅಂಕುರಿಸುವುದು ತಾನೇ ಜೀವನಲತೆ
ಹಸನಾಗಿರಲು ಭಾವ ಹೊಸತಾಗುವುದು ಜೀವ
ನರ್ತಿಸುವುದೆಲ್ಲಲ್ಲು ನವನವ್ಯತೆ.

೩

ಇಂದಿನೊಡಲೊಳಗಿಹುದು ನಾಳೆ ತೋರುವ ಲೀಲೆ
ಇಂದು ಚಿಗುರುವ ಬಳ್ಳಿಗಿರಲಿ ಬೆಳಕು
ಇಂದು ಚೇತನ ನೀಡಿದವರ ನೆನೆವುದು ನಾಳೆ
ನಂಟುತನವಹುದಿಂತು ಯುಗಕು ಯುಗಕು

೪

ವ್ಯಕ್ತಿ ವ್ಯಕ್ತಿಯ ಗುಪ್ತ ಶಕ್ತಿಯೊಳಗಡಗಿಹುದು
ವ್ಯಕ್ತವಾಗಲಹ ಜೀವನ ವಿಕಾಸ
ಒಲವಿನಲಿ ಗೆಲವಿನಲಿ ಬೆಳೆಯಲಿರಲವಕಾಶ
ಸೂಸುವುದು ಭಾರತದ ತುಂಬ ಹಾಸ.

ಡಿ. ಎಸ್. ಕರ್ಕಿ, ಎಂ. ಎ., ಪಿ. ಎಚ್‌ಡಿ.,
ಲಿಂಗರಾಜ ಕಾಲೇಜು,
ಬೆಳಗಾಂವಿ

ಸುದ್ದಿಗಳು

ದಿನಾಂಕ ೧೫-೮-೨೨ನೆಯ ದಿನ ಜಾಲಿಹಾಳ, ಬೆಳವಣಿಕೆ, ಹಿರೇಕುಂಬಿ, ಮಳಗಿ, ಆಳಗವಾಡಿ, ಹೊಸಕೋಟೆ, ಗದಗ, ತಳಕವಾಡ, ಈ ಊರುಗಳ ಸಾಲೆಗಳಲ್ಲಿ ಸ್ವಾತಂತ್ರ್ಯೋತ್ಸವು ಆಚರಿಸಲ್ಪಟ್ಟಿತೆಂದು ವರದಿಗಳು ಬಂದಿವೆ.

ಹೊಸಕೋಟೆ:— ಇಲ್ಲಿಯ ಕ. ಗ. ಸಾಲೆಯಲ್ಲಿ ೭ನೆಯ ಇಯತ್ತೆಯ ವಿದ್ಯಾರ್ಥಿಗಳು ಚಿಕ್ಕ ಶೈಕ್ಷಣಿಕ ಪ್ರವಾಸ ಕೈಕೊಂಡು ಲೋಕಾಪುರದಲ್ಲಿರುವ ಪಾಟೆಯ ಕಾರಖಾನೆಯನ್ನು ಸಂದರ್ಶಿಸಿದರು.

ರಾಯಾಪೂರ: ಇಲ್ಲಿ ದಿ. ೭-೭-೨೨ರಂದು ಧಾರವಾಡ, ಹುಬ್ಬಳ್ಳಿ ತಾಲೂಕುಗಳ ಕೆಲವು ಖಾಸಗಿ ಸಾಲೆಗಳ ಶಿಕ್ಷಕರ ಶೈಕ್ಷಣಿಕ ಸಮ್ಮೇಲನವು ಶ್ರೀ. ರಾ. ರು. ಕುಪ್ಪಸದ ಬಿ. ಓ. ಡಿ. ಎಸ್. ಬಿ. ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಧಾರವಾಡ: ಇಲ್ಲಿಯ ಸರಕಾರಿ ಕ. ಗಂ. ಟ್ರೇ. ಕಾಲೇಜದಲ್ಲಿ ದಿ. ೧೩-೮-೨೨ರಂದು ಶ್ರೀ. ಸಾಲಿ ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಶ್ರೀ ಕೃಷ್ಣಾಷ್ಟಮಿಯನ್ನು ಆಚರಿಸಲಾಯಿತು.

ತಿದ್ದುಪಡೆ

ಕಳೆಡ ಆಗಷ್ಟ ತಿಂಗಳ ಸಂಚಿಕೆಯಲ್ಲಿ ಸ್ಕಾಲರಶಿಪ್ ಪರೀಕ್ಷೆಗಳ ಮಾಹಿತಿಯನ್ನು ಕೆಳಗಿನಂತೆ ತಿದ್ದಿಕೊಂಡು ಓದಬೇಕು:—

ಮಿಡಲ್ ಸ್ಕೂಲ ಸ್ಕಾಲರಶಿಪ್ಪಿನ ವಯೋಮಿತಿಯು ಮುಂದುವರಿದ ವರ್ಗದ ಉಮೇದವಾರರಿಗೆ ೧೨ ವರ್ಷ ಮತ್ತು ಹಿಂದುಳಿದ ವರ್ಗದ ಉಮೇದವಾರರಿಗೆ ೧೧ ವರ್ಷ ಇರುತ್ತದೆ. —**ಪ್ರ. ಸಂಪಾದಕ**

ಕಂಬನಿ

ಕರ್ನಾಟಕದ ವಿರಕ್ತಾಗ್ರಣಿಗಳೂ ಮೈಸೂರ ಆರು ಕುಲಗುರುಗಳೂ ಬಹು ಭಾಷಾ ವಿಶಾರದರೂ ವಿಶಾಲ ಹೃದಯಿಗಳೂ ಬಡವರ ಭಾಗ್ಯಶಾಲಿಗಳೂ ವಿದ್ಯಾ ಪ್ರೇಮಿಗಳೂ ಆದ ಶ್ರೀ ಮ। ನಿ। ಪ್ರ। ಗೌರೀಶಂಕರ ಸ್ವಾಮಿಗಳು ಗವಿಮಠ ಮೈಸೂರ ಇವರು ದಿನಾಂಕ ೧೨—೮—೧೯೨೨ರಂದು ಶಿವಾಧೀನರಾದರೆಂಬ ಪಂಗತಿಯು ಅವರ ಅನೇಕ ಭಕ್ತರಿಗೆ ಖೇದವನ್ನುಂಟು ಮಾಡಿದೆ. ಪರಮಾತ್ಮನು ಅವರ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲಿ.

ಮುಲ್ಕೀ ಪರೀಕ್ಷೆ ಪಾಸಾಗಲು ಒಂದೇ ದಾರಿಯು

ಲೇಖಕರು :— ಕೃ. ಶ್ರೀ. ಕುಲಕರ್ಣಿಕೃತ

ಹೊಸ ಪುಸ್ತಕಗಳು

೧. ಪ್ರ.	ಪೌರನೀತಿ(ರಾಜ್ಯದಾಡಳಿತ ಸಹಿತ)	೧ರೂ.	
೨. ,,	ಭೂಗೋಲ	೧—೦—೦	
೩. ,,	ಇತಿಹಾಸ	೧—೦—೦	
೪. ,,	ಭೂಮಿತಿ	೧—೦—೦	
೫. ,,	ಭಾಷಾಭ್ಯಸನ	೧—೦—೦	
೬. ,,	ಭಾರತ ಇತಿಹಾಸ (ಕೈಪಿಡಿ)	೧—೮—೦	
೭. ,,	ಸಂಗ್ರಹಗಳು	೧—೮—೦	
೮. ,,	ಆರೋಗ್ಯ ವಿಜ್ಞಾನ	೦—೯—೦	
೯. ,,	ಪ್ರ. ಶಾಸ್ತ್ರೀಯ ವಿಷಯ	೦—೯—೦	
೧೦. ,,	ಭಾರತೀಯ ರಾಜ್ಯಘಟನೆ	೦—೧೦—೦	
೧೧. ,,	ರಾಷ್ಟ್ರೀಯ ಮಹಾಪುರುಷರು	೦—೧೨—೦	
೧೨. ,,	ಮಾದರಿಯ ಬರೆಹಗಳು	೦—೧೨—೦	
೧೩. ,,	ಪ್ರಶ್ನೋತ್ತರ ಜಮಾಖರ್ಚ	೦—೧೨—೦	
೧೪. ,,	ಗಣಿತಪ್ರಕಾಶ	೦—೧೨—೦	
೧೫. ,,	ಪ್ರ. ಗೃಹವಿಜ್ಞಾನ	ಅಚ್ಚಿನಲ್ಲಿ	
೧೬. ,,	ತತ್ಸಮತದ್ಭವಗಳ ಕೈಪಿಡಿ	,,	
೧೭. ,,	ಸಚಿತ್ರ ಸಂಪೂರ್ಣ	,,	

ಇತಿಹಾಸ ೩ನೇ ಇಯತ್ತೆ

N. B.— ಕನ್ನಡ ಶಾಲೆಯ ಹುಡುಗರ ಲೀವ್ವಿಂಗ ಸರ್ಟಿಫಿಕೇಟ್ ಪಾಮ್ರುಗಳು ಸಿಗುತ್ತವೆ.

ಪ್ರಕಾಶಕರು:— ಕೆ. ಎಸ್. ಕುಲಕರ್ಣಿ

ಬುಕ್ ಡಿಪೋ ಸ್ಟೇಶನ್ ರೋಡ, ಹುಬ್ಬಳ್ಳಿ.

ಹಬ್ಬಹುಣ್ಣಿವೆಗಳೂ ಅವುಗಳ ದಿನಾಚರಣೆಯೂ

ಲೇಖಾಂಕ (ಣ)

ಲೇಖಕರು : ಶ್ರೀಯುತ ಶಿಂತ್ರಿ ಬಸಪ್ಪನವರು ಬಿ.ಎ.ಬಿ.ಟಿ.
ನಿವೃತ್ತ ಅಸಿಸ್ಟಂಟ್
ಎಜ್ಯುಕೇಶನಲ್ ಇನ್‌ಸ್ಪೆಕ್ಟರ
ದಕ್ಷಿಣ ಭಾಗ, ಧಾರವಾಡ.

ಮಕರ ಸಂಕ್ರಮಣ

ದೀವಳಿಗೆ ಹಬ್ಬವಾದ ತರುವಾಯ ಎರಡು ತಿಂಗಳುಗಳ ವರೆಗೆ ಹಬ್ಬಗಳೇ ಇರುವದಿಲ್ಲ. ಯಾಕಂದರೆ, ಇದು ಭರತಿ ಸುಗ್ಗಿಯ ಕಾಲವು. ಈ ಹಬ್ಬವು ಬರುವದರೊಳಗಾಗಿ ಬತ್ತಿದ ರಾಶಿಗಳೂ ಜೋಳದ (ಮುಂಗಾರಿ) ರಾಶಿಗಳೂ ಮನೆಗೆ ಬಂದಿರುತ್ತವೆ. ಆಕ್ಕಡಿ ಕಾಳಿನ ಸುಗ್ಗಿಗೆ ಇನ್ನೂ ಕೆಲ ಸಮಯ ಬೇಕು. ಈ ಬಿಡುವಿನಲ್ಲಿಯೇ ಈ ಹಬ್ಬವು ಬರುತ್ತಿದೆ. ಆದುದರಿಂದ ಈ ಹಬ್ಬವನ್ನು ಎಲ್ಲರೂ ಆಚರಿಸುವದುಂಟು. ಇದು ಪ್ರತಿವರುಷ ಜಾನೇವರಿ ಹದಿನಾಲ್ಕನೆಯ ತಾರೀಖಿನ ದಿವಸ ಬರುತ್ತದೆ. ಇದು ಮೂರು ದಿನಗಳ ಹಬ್ಬವು. ಸಂಕ್ರಮಣದ ಮುನ್ನಾ ದಿನಕ್ಕೆ ಭೋಗಿ ಹಬ್ಬವೆಂದು ಹೆಸರಿದೆ. ಈ ದಿನ ಎಲ್ಲರೂ ಮೈಗೆ ಎಳ್ಳು ಹಚ್ಚಿಕೊಂಡು ಜಳಕ ಮಾಡಿ ಹೊಸ ಧಾನ್ಯಗಳ ಅಡಿಗೆಯನ್ನು ಊಟ ಮಾಡುವರು. ಎಳ್ಳು ಹಚ್ಚಿದ ರೊಟ್ಟಿಯು ಮತ್ತು ಭರತ (ಬದನೇಕಾಯಿ, ಅವರಿಕಾಯಿ ಮತ್ತು ಗಜ್ಜರಿ, ಇವುಗಳನ್ನು ಕೂಡಿಸಿ ಮಾಡಿದ ಅಡಿಗೆಯು)ವು ಈ ದಿನ ಎಲ್ಲ ಜನರ ಮನೆಯೊಳಗಿನ ಅಡಿಗೆಯು. ಹೊಸ ಫಲಗಳಾದ ಕಬ್ಬು, ಗೋದಿ ಉಮ್ಮಿಗೆ, ಹಿಂಗಾರಿ ಜೋಳದ ಸೀತನಿ (ಬೆಳಸಿ), ಸುಲಗಾಯಿ (ಕಡಲೆ ಗಿಡ), ಬಾರಿಕಾಯಿ ಮೊದಲಾದವುಗಳನ್ನು ಈ ದಿನ ತಿನ್ನಬೇಕು. ಇವೆಲ್ಲವುಗಳನ್ನು ತಿನ್ನಬೇಕೆಂಬ ನಿಯಮವಿಲ್ಲ; ಸಾಧ್ಯವಿದ್ದವುಗಳನ್ನು ಮಾತ್ರ ತಿನ್ನಬೇಕು. ಮರುದಿನವೇ ಮಕರ ಸಂಕ್ರಮಣ ಹಬ್ಬವು. ಈ ದಿನ ಸೂರ್ಯನು ಮಕರ ರಾಶಿಯನ್ನು ಪ್ರವೇಶಿಸುತ್ತಾನೆ. ಆದುದರಿಂದ ಇದಕ್ಕೆ ಮಕರ ಸಂಕ್ರಮಣವೆಂಬ ಹೆಸರು ಬಂದಿದೆ. ಸೂರ್ಯನು ಇಂದು ಮಕರ ರಾಶಿಯನ್ನು ಪ್ರವೇಶಿಸಿ ಉತ್ತರಕ್ಕೆ ಸರಿಯುತ್ತ ಸರಿಯುತ್ತ ಹೋಗುವದರಿಂದ ಇದಕ್ಕೆ ಉತ್ತರಾಯಣ ಪುಣ್ಯಕಾಲವೆಂದು ಹೆಸರಿದೆ. ಇಂದಿನಿಂದ ಸೂರ್ಯನು ಉತ್ತರಕ್ಕೆ ಸರಿಯುತ್ತ ಹೋಗುವದರಿಂದ ಹಗಲು ದೊಡ್ಡದಾಗುತ್ತ ಹೋಗುತ್ತದೆ. ಸುಗ್ಗಿಯಲ್ಲಿ ಸಂಣದಾಗಿದ್ದ ಹಗಲು ಇಂದಿನಿಂದ ಹೆಚ್ಚು ಹೆಚ್ಚು ದೊಡ್ಡದಾಗುತ್ತ ಹೋಗುವದರಿಂದುಂಟಾದ ಆನಂದದ ಕುರುಹೇ ಈ ಸಂಕ್ರಮಣ ಹಬ್ಬವು. ಈ ದಿನ ಎಲ್ಲರೂ ಮುನ್ನಾ ದಿನದಂತೆ ಮೈಗೆ ಎಳ್ಳು ಹಚ್ಚಿ ಸ್ನಾನ (ತಿಲಸ್ನಾನ) ಮಾಡುವರು. ಊಟ ಮಾಡುವ ಮೊದಲು ಎಳ್ಳು-ಬೆಲ್ಲ ತಿನ್ನುವರು. ಆಪ್ತೇಷ್ಟರಿಗೆಲ್ಲ ಎಳ್ಳು-ಬೆಲ್ಲವನ್ನು ಇಲ್ಲವೆ ಕುಸುರೆಳ್ಳುಗಳನ್ನು ಕೊಟ್ಟು ನಾವೆಲ್ಲರೂ ಎಳ್ಳು-ಬೆಲ್ಲದಂತೆ ಇರೋಣವೆಂದು ಹಾರೈಸುವದುಂಟು. ಎಳ್ಳು-ಬೆಲ್ಲವು ಎಷ್ಟು ಸಿಹಿ ಹತ್ತುವದೋ ಅಷ್ಟು ಹಿತಕರವಾದ ಸಖ್ಯತ್ವದಿಂದ ನಾವೆಲ್ಲರೂ ಇರೋಣವೆಂದು ಇಚ್ಛಿಸುವದುಂಟು. ದಸರೆಯಂತೆ ಪರಸ್ಪರರಲ್ಲಿ ಸ್ನೇಹ-ಸಹಕಾರದ ಭಾವನೆಗಳನ್ನು ಹುಟ್ಟಿಸುವದು ಈ ಹಬ್ಬದ ಮೂಲೋದ್ದೇಶವು. ಸರ್ವೂರಲ್ಲಿದ್ದವರಿಗೆ ಪೋಸ್ಟಿನ ದ್ವಾರ ಪಾರ್ಸೇಟಿನಲ್ಲಿ ಕುಸುರೆಳ್ಳುಗಳನ್ನು ಹಾಕಿ ತಮ್ಮ ಸದಿಚ್ಛೆಯನ್ನು ಬರೆದು ಕಳಿಸುವದುಂಟು. ಹೊಳೆ-ಹಳ್ಳಗಳ ದಂಡೆಯ ಮೇಲಿದ್ದ ಊರುಗಳ ಜನರು ಈ ಹಬ್ಬವನ್ನು ಒಳ್ಳೇ ವೈಭವದಿಂದ ಆಚರಿಸುವದುಂಟು. ತಮ್ಮ ಊರ ದೇವರ ಪಲ್ಲಕ್ಕಿಯನ್ನು ಹೊರಡಿಸಿ ಊದುತ್ತ ಬಾರಿಸುತ್ತ ಎಲ್ಲರೂ ಸಾಮೂಹಿಕವಾಗಿ ಹೊಳೆಗೆ ಹೋಗಿ ತಿಲಸ್ನಾನ ಮಾಡಿ ಉತ್ಸವ ಮೂರ್ತಿಗೂ ತಿಲಸ್ನಾನ ಮಾಡಿಸಿಕೊಂಡು ಬರುವದುಂಟು. ಮರುದಿನವೇ ಸಂಕ್ರಮಣದ ಕರಿಯು. ಈ ದಿನ ತಮ್ಮೂರಿಗೆ ಸಮೀಪವಿದ್ದ ಸಂಗಮಕ್ಕೆ ಚಕ್ಕಡಿ ಹೂಡಿಕೊಂಡು ಹೋಗಿ ಸಂಗಮೇಶ್ವರನಿಗೆ ಕಾಯಿ

ಡೆಯಿಸಿಕೊಂಡು ಬರುವದುಂಟು. ಹೀಗೆ ಮಾಡಿದರೆ
ನಗಳಿಗೆ ಬಾಯಿಚೀನೆ-ಕಾಲುಬೇನೆಗಳು ಬರುವದಿ
ಲ್ಲೆಂಬ ಭಾವನೆಯಿದೆ. ಹೊಳೆ-ಹಳ್ಳಗಳು ಕೂಡಿದ
ಲ್ಲಿಳಕ್ಕೆ ಸಂಗಮವೆನ್ನುವರು. ಸಂಗಮವಿದ್ದಲ್ಲಿ ಈಶ್ವರನ
ನಿಡಿ ಇದ್ದೇ ಇರುವದು. ತಮ್ಮೂರಿಗೆ ಸಮೀಪವಿದ್ದ
ಇಂತಹದೊಂದು ಸಂಗಮಕ್ಕೆ ಈ ದಿನ ಸಂದರ್ಶನವನ್ನಿಟ್ಟು
ಕೊಳ್ಳುವದುಂಟು. ಸಂಗಮವು ಸಮೀಪವಿಲ್ಲದ ಊರು
ಗಳ ಜನರು ತಮ್ಮೂರ ಸಮೀಪದಲ್ಲಿದ್ದದ್ದೊಂದು ದೇವ
ಸ್ಥಾನಕ್ಕೆ ಜಸ್ತಡಿ ಹೂಡಿಕೊಂಡು ಹೋಗಿ ಕಾಯಿ
ಡೆಯಿಸಕೊಂಡು ಬರುವದುಂಟು. ಈ ದಿನವೂ ಮೈಗೆ
ಎಳ್ಳು ಹಚ್ಚಿಕೊಂಡು ಜಳಕ ಮಾಡುವರು. ನಮ್ಮ
ಪೂರ್ವಜರು ಎಳ್ಳ ಅಮಾವಾಸ್ಯೆಯಿಂದ ಇಲ್ಲಿಯ ವರೆಗೆ
ಎಳ್ಳಿಗೆ ಇಷ್ಟೇಕೆ ಮಹತ್ವವನ್ನು ಕೊಟ್ಟಿರುವರೆಂಬುದ
ನ್ನಷ್ಟು ನೋಡೋಣ. ಈಗ ಭರತಿ ಚಳಿಗಾಲವು.
ಈಶಾನ್ಯದ ಮನ್ಸೂನ ಗಾಳಿಗಳು ಒಳ್ಳೇ ಭರದಿಂದ
ಬೀಸುತ್ತಿರುತ್ತವೆ. ಇವು ನೆಲದ ಮೇಲಿಂದ ಬೀಸುವ
ಗಾಳಿಗಳು. ಆದುದರಿಂದ ಇವು ಒಣ ಗಾಳಿಗಳು.
ಜನರ ತುಟಿ-ಮೋರೆ-ಮೈಗಳು ಈ ಒಣ ಗಾಳಿಗಳಿಂದ
ಬಿರುಸಾಗಿ ಬಿರಿತಿರುತ್ತವೆ. ಎಳ್ಳು ಸ್ನಿಗ್ಧ (ಎಂಣೆಯ)
ಪದಾರ್ಥವು. ಎಂಣೆಯು ನಮ್ಮ ತ್ವಚವನ್ನು ಮಿದುವು
ಮಾಡುತ್ತಿದೆ. ಮಿದುವಿದ್ದ ತ್ವಚೆಯು ಬಿರಿಯವದಿಲ್ಲ.
ಆದುದರಿಂದ ಈ ಅವಧಿಯಲ್ಲಿ ಮೈಗೆಲ್ಲ ಎಳ್ಳು ಹಚ್ಚಿ
ಕೊಂಡು ಜಳಕ ಮಾಡಬೇಕೆಂಬ ನಿಯಮವನ್ನು ನಮ್ಮ
ಪೂರ್ವಜರು ಹಾಕಿಟ್ಟಿದ್ದಾರಿದೆ. ಈ ಕಾಲದಲ್ಲಿ ಮುಂಜಾನೆ
ವಿಪರೀತ ಥಂಡಿಯು ಬೀಳುವದರಿಂದ ಎದ್ದ ಕೂಡಲೆ
ಜನರ ಹೊಟ್ಟೆಯು ಸ್ವಚ್ಛವಾಗುವದು ಬಹುತರವಾಗಿ
ಕಡಿಮೆ. ಯಾಕಂದರೆ, ಹೊಟ್ಟೆಯೊಳಗಿನ ಕರಳುಗಳು
ಕಿಟ್ಟ ಥಂಡಿಯಿಂದ ಜಾಡ್ಯತೆಯನ್ನು ಹೊಂದಿ ತಮ್ಮ
ಕೆಲಸವನ್ನು ಸರಿಯಾಗಿ ಮಾಡುವದಿಲ್ಲ. ಎಳ್ಳಿನಂತಹ
ಸ್ನಿಗ್ಧ ಪದಾರ್ಥವನ್ನು ತಿಂದರೆ ಅದರೊಳಗಿನ ಎಂಣೆಯಿಂದ
ಕರಳುಗಳು ಹೆರಿದಂತಾಗಿ ಹುರುಪಿನಿಂದ ಕೆಲಸ ಮಾಡಿ
ಒಳಗಿನ ಮಲವನ್ನೆಲ್ಲ ಹೊರದೂಡುತ್ತಿವೆ. ಇದರಿಂದ
ಹೊಟ್ಟೆಯು ಸ್ವಚ್ಛವಾಗಿ ಹಸಿವೆಯು ಚನ್ನಾಗಿ ಆಗು
ತ್ತಿದೆ- ಈ ಕಾರಣದಿಂದ ಈ ಕಾಲದಲ್ಲಿ ಒಂದಿಲ್ಲೊಂದು
ಆಡಿಗೆಯಲ್ಲಿ ಎಳ್ಳನ್ನು ಹಾಕಿ ಮಾಡುವದುಂಟು.
ಮೇಲಾಗಿ, ಎಳ್ಳು ಶಕ್ತಿವರ್ಧಕವಿದ್ದು ಮೈಯಲ್ಲಿ ಕಾವನ್ನು
ಹುಟ್ಟಿಸುತ್ತಿದೆ. ಪ್ರತಿವರುಷ ನಮಗೊದಗುತ್ತಿರುವ ಈ
ಲಾಭವು ನಮ್ಮ ಹಿರಿಯರ ಅನುಭವದ ಫಲವಲ್ಲವೇ?
ಇಂತಹ ಒಳ್ಳೇ ಉಪಯುಕ್ತವಾದ ಪರಂಪರೆಯನ್ನು
ನಾವೆಲ್ಲರೂ ತ್ರಿಕರಣ ಪೂರ್ವಕವಾಗಿ ಪಾಲಿಸುವದು
ನಮ್ಮೆಲ್ಲರ ಕರ್ತವ್ಯವಲ್ಲವೇ? ಕುಸುರೆಳ್ಳುಗಳನ್ನು ತಯಾರ
ಮಾಡುವ ಇಲ್ಲವೆ, ಮಕರ ಸಂಕ್ರಮಣದ ಶುಭೇಚ್ಛೆ
ಯನ್ನು ಬರೆದು ಕಳಿಸುವ ಪತ್ರವನ್ನು ತಯಾರಿಸುವ
ಚಟುವಟಿಕೆಯೊಂದನ್ನಿಟ್ಟುಕೊಂಡು ಈ ಹಬ್ಬದ ವಿವರ
ಗಳನ್ನೂ ಮತ್ತು ಅವುಗಳಿಗೆ ಸಂಬಂಧಿಸಬಹುದಾದ
ಬೇರೆ ವಿಷಯಗಳನ್ನು ಸಮವಾಯ ಪದ್ಧತಿಯಿಂದ
ಕಲಿಸಲು ಶಕ್ಯವಿದೆ.

ಮಹಾಶಿವರಾತ್ರಿ

ಸಂಕ್ರಮಣದ ಹಬ್ಬದ ತರುವಾಯ ಸುಮಾರು
ಎರಡು ತಿಂಗಳುಗಳ ವರೆಗೆ ಪುನಃ ಹಬ್ಬಗಳಿಲ್ಲ.
ಯಾಕಂದರೆ, ಹೆಸರು-ತೊಗರಿ-ಮಡಿಕೆ ಮೊದಲಾದ
ಅಕ್ಕುಡಿ ಕಾಳುಗಳನ್ನು ಬಡಿದು ರಾಶಿಗಳನ್ನು ತಯಾರ
ಮಾಡುವದು, ಕಣಿಕೆಯನ್ನು ಹೇರಿಕೊಂಡು ಹೋಗಿ
ಬಣವೆ ಒಟ್ಟುವದು, ಗೋದಿಯನ್ನು ತುಳಿಸಿ ರಾಶಿ
ಮಾಡುವದು, ಮೊದಲಾದ ಕೆಲಸಗಳು ಎಡೆಬಿಡದೆ ಈ
ಎರಡು ತಿಂಗಳುಗಳ ಅವಧಿಯಲ್ಲಿ ನಡೆದಿರುತ್ತಿವೆ. ಮಹಾ
ಶಿವರಾತ್ರಿಯು ಬರುವ ಹೊತ್ತಿಗೆ ಆ ಕೆಲಸಗಳೆಲ್ಲ ಮುಗಿ
ದಿರುತ್ತವೆ. ಹತ್ತಿಯ ಸುಗ್ಗಿಗೆ ಇನ್ನೂ ಕೆಲ ದಿನಗಳು
ಬೇಕು. ಈ ಬಿಡುವಿನಲ್ಲಿ ಈ ಹಬ್ಬವು ಬರುವದುಂಟು.
ಮಾಘ ಬಹುಳ ಚತುರ್ದಶಿಯು ಮಹಾ ಶಿವರಾತ್ರಿಯು.
ಇಡೀ ದಿವಸ ಎಲ್ಲರೂ ಉಪವಾಸ ಮಾಡಿ ಸಂಜೆಗ
ಈಶ್ವರನ ಪೂಜೆಯಾದನಂತರ ಫರಾಳ ಮಾಡುವ
ದುಂಟು. ಹೊಳೆ-ಹಳ್ಳಗಳ ದಂಡೆಯ ಮೇಲಿದ್ದ ಊರು-
ಗಳ ಜನರೆಲ್ಲರೂ ಹೊಳೆ-ಹಳ್ಳಗಳಲ್ಲಿ ಸ್ನಾನ ಮಾಡಿ
ಮಡಿಯಿಂದ ಮಹೇಶ್ವರನ ಗುಡಿಗೆ ಹೋಗಿ ಮೂರ್ತಿ
ಯನ್ನು ಪೂಜಿಸುವದುಂಟು. ಊರಲ್ಲಿದ್ದ ಈಶ್ವರಲಿಂಗ
ಗಳಿಗೆಲ್ಲ ಈ ದಿನ ಅಭಿಷೇಕ ಮಾಡಿ ಪೂಜಿಸುವದುಂಟು.
ಈ ದಿನ ರಾತ್ರಿ ದೊಡ್ಡವರೆಲ್ಲರೂ ನಿದ್ದೆ ಮಾಡದೆ ಶಿವ

ಣಾಮಸ್ಮರಣೆ ಮಾಡುತ್ತ ಜಾಗರಣೆಯನ್ನು ಮಾಡುವ ರುಂಟು. ಕೆಲವರು ಈಶ್ವರನ ಗುಡಿಗೆ ಹೋಗಿ ಅಲ್ಲಿ ಇಡೀ ರಾತ್ರಿ ನಡೆಯುವ ಮಹೇಶ್ವರನ ಭಜನೆಯಲ್ಲಿ ಭಾಗ ವಹಿಸುವದುಂಟು. ಮರುದಿನ ಅಂದರೆ ಅಮಾ ವಾಸ್ಯೆಯ ದಿನ ಮುಂಜಾನೆ ಬೇಗನೆ ಪಾರಣೆಯು. ಈ ದಿನ ಬಹುತರವಾಗಿ ಎಲ್ಲ ಜನರ ಮನೆಯ ಊಟವು ಹೆಸರು ಗೋದಿಯ ಪಾಯಸ (ಹುಗ್ಗಿ)ವು. ಯಾಕಂದರೆ, ಇದರೊಳಗೆ ಗೋದಿಯ ರಾಶಿಯು ಮನೆಗೆ ಬಂದಿರುವ ಶಿಕ್ಷಕ-ಶಿಕ್ಷಕಿಯರು ಮಹೇಶ್ವರನ ಚಿತ್ರ (ಫೋಟೋ) ವನ್ನಿಟ್ಟು ಪೂಜಿಸುವ ಇಲ್ಲವೆ ಅರಲಿನಿಂದ ಈಶ್ವರ-ಲಿಂಗವನ್ನು ತಯಾರಿಸುವ ಚಟುವಟಿಕೆ ಯಿಂದನ್ನಿಟ್ಟುಕೊಂಡು ಈ ಹಬ್ಬದ ಬಗೆಗೂ ಮತ್ತು ಇದಕ್ಕೆ ಸಂಬಂಧಿಸಿ ಕಲಿಸಬಹುದಾದ ಬೇರೆ ವಿಷಯ-ಗಳ ಬಗೆಗೂ ಮಕ್ಕಳಿಗೆ ಮನನದಟ್ಟಾಗುವಂತೆ ತಿಳಿಸಿ ಕಾಣಬೇಕು.

ಹೋಳಿ ಹುಣ್ಣಿಮೆ

ಇದು ವರುಷದ ಕೊನೆಯ ಹಬ್ಬವು. ಫಾಲ್ಗುಣ ಶುದ್ಧ ಪೌರ್ಣಿಮೆಯ ದಿನ ಕಾಮನ ಹೋಳಿಯನ್ನು ಮಾಡುವದರಿಂದ ಈ ಹುಣ್ಣಿಮೆಗೆ ಹೋಳಿ ಹುಣ್ಣಿಮೆ ಯೆಂಬ ಹೆಸರು ಬಂದಿದೆ. ಫಾಲ್ಗುಣ ಶುದ್ಧ ಪಾಡ್ಯದ ದಿನ ಚಿಕ್ಕ ಮಕ್ಕಳೆಲ್ಲರೂ ಸೂರ್ಯಾಸ್ತವಾದ ತರುವಾಯ ಪಶ್ಚಿಮ ದಿಕ್ಕಿನಲ್ಲಿ ಚಂದ್ರನನ್ನು ಹುಡುಕಲು ಒಳಗೆ ಕಂಡಿಟ್ಟುಕೊಂಡು ಎತ್ತರವಾದೊಂದು ಜಾಗಕ್ಕೆ ಹೋಗಿ ನಿಲ್ಲುವದುಂಟು. ಚಂದ್ರನ ಬಿಂಬದ ಮೊದಲು ಕಂಡಕೂಡಲೆ ಎಲ್ಲರೂ ಶಂಖವಾದ್ಯ ಮಾಡುತ್ತ ಮನೆ ಹಾದಿ ಹಿಡಿಯುವರು. ಅಂದಿನಿಂದ ಹದಿನೈದು ದಿನಗಳ ವರೆಗೆ ಅವರು ಹೊಯ್ಕೊಳ್ಳುವದುಂಟು. ಫಾಲ್ಗುಣ ಶುದ್ಧ ದ್ವಾದಶಿಯ ದಿವಸ ಕಾಮುಂಣನನ್ನು ಮಾಡಲು ಜನರು ತಿರುಗಾಡುವದುಂಟು. ಕೆಲವು ಸ್ಥಾಂಗಳಲ್ಲಿ ಕಾಮುಂಣನನ್ನು ಒಳ್ಳೇ ವೈಭವದಿಂದ ಕೂಡಿಸುವರು. ಹುಣ್ಣಿಮೆಯ ದಿವಸ ರಾತ್ರಿ ಕಾಮ ದಹನವಾಗುವದು. ಮರುದಿನ ಅಂದರೆ ಕರಿ ದಿನ ಕಳೆಯಾಡುವರು. ಇದಕ್ಕೊಂದು ಪೌರಾಣಿಕ ಕಥೆ ಯಿದೆ. ಒಂದಾನೊಂದು ಕಾಲದಲ್ಲಿ ತಾರಕಾಸುರನೆಂಬ ರಾಕ್ಷಸನು ಸುರರಿಗೆ ನಾನಾ ತರಹದ ಕಾಟವನ್ನು ಕೊಡ ಹತ್ತಿದನು. ಸುರರೆಲ್ಲರು ಕೂಡಿಕೊಂಡು ಹೋಗಿ ಶ್ರೀ ವಿಷ್ಣುವಿನ ಮೊರೆ ಹೊಕ್ಕರು. ''ಇದು ನನ್ನಿಂದಾಗುವ ಕೆಲಸವಲ್ಲ. ಮಹೇಶ್ವರನ ಹೊಟ್ಟೆಯಿಂದ ಒಬ್ಬ ಮಗನು ಹುಟ್ಟಿ ಬರಬೇಕು. ಅವನಿಂದ ತಾರಕಾಸುರನ ಸಂಹಾರವಾಗುವದು'' ಎಂದು ವಿಷ್ಣುವು ಹೇಳಿ ಕಳುಹಿಸಿದನು. ಮಹೇಶ್ವರನು ಮೈಗೆಲ್ಲ ಬೂದಿ ಬಡಕೊಂಡು ಸುಡಗಾಡಗಟ್ಟೆಯಲ್ಲಿರತಕ್ಕವನು. ಅವನಿಗೆ ಕಾಮವಾಸನೆ ಹುಟ್ಟುವದು ಶಕ್ಯವೇ ಇಲ್ಲ. ಆದುದರಿಂದ ಇದರ ಬಗೆಗೆ ಯಾವ ಉಪಾಯವು ತೋಚದೆ ದೇವ-ದೇವತೆಗಳೆಲ್ಲ ದೊಡ್ಡದೊಂದು ಚಿಂತೆಯಲ್ಲಿ ಬಿದ್ದರು. ಅದೇ ವೇಳೆಗೆ ನಾರದರು ತಂಬೂರಿ ಹಿಡಕೊಂಡು ಅಲ್ಲಿಗೆ ಬಂದರು. ನಾರದರಿಗೆ ಆದ ಸಂಗತಿಯನ್ನೆಲ್ಲ ಅರುಹಿದರು. ಈ ಕೆಲಸವನ್ನು ನಿರ್ವಹಿಸಲು ಕಾಮನೊಬ್ಬನೇ ಸಮರ್ಥನೆಂದು ಹೇಳಿ ನಾರದರು ಮಾಯವಾದರು. ದೇವ-ದೇವತೆಗಳೆಲ್ಲ ಕಾಮನಿದ್ದೆಡೆಗೆ ಹೋಗಿ ಹೇಗಾದರೂ ಮಾಡಿ ಮಹೇಶ್ವರನಲ್ಲಿ ಕಾಮವಾಸನೆಯನ್ನು ಹುಟ್ಟಿಸೆಂದು ಅಂಗಲಾಚಿ ಬೇಡಿಕೊಂಡರು. ಮಹೇಶ್ವರನ ಜೆಸರನ್ನು ತಕ್ಕೊಂಡ ಕೊಡಲೆ ಕಾಮನು ಅಂಜಿ ನಡುಗಿದನು. ಈ ಕೆಲಸದಲ್ಲಿ ತಾನು ಉಳಿಯುವದಿಲ್ಲವೆಂದು ಅವನ ಮನಸ್ಸಿಗೆ ಖಾತ್ರಿಯಾಯಿತು. ಆದಾಗ್ಯೂ, ತಾನೊಬ್ಬನು ಸಾಯುವದರಿಂದ ಸುರರೆಲ್ಲರ ಕಲ್ಯಾಣವಾಗುವದೆಂಬ ಒಂದೇ ಒಂದು ಸುವಿಚಾರವನ್ನಿಟ್ಟುಕೊಂಡು ಈ ಗಂಡಾಂತರದ ಕೆಲಸಕ್ಕೆ ಕೈ ಹಾಕಲು ಒಪ್ಪಿಕೊಂಡನು. ನೋಡಿರಿ! ಕಾಮನು ಎಂತಹ ಸ್ವಾರ್ಥತ್ಯಾಗಿಯು! ಎಲ್ಲರ ಸುಖಕ್ಕಾಗಿ ತನ್ನ ಜೀವವನ್ನೇ ಅರ್ಪಣ ಮಾಡಲು ಹಿಂದು ಮುಂದು ನೋಡಲಿಲ್ಲ. ಇವನ ನಿಃಸ್ವಾರ್ಥ ಬುದ್ಧಿಗೆ ಮೇರೆಯೇ ಇಲ್ಲದಾಗಿದೆ. ಇರಲಿ, ಈ ಸಮಯದಲ್ಲಿ ಮಹೇಶ್ವರನು ಹೇಮಕೂಟದ ತಪೋವನದಲ್ಲಿ ತಪಸ್ಸಿಗೆ ಕುಳಿತಿದ್ದನು. ಕಾಮನು ಹೋಳಿ ಹುಣ್ಣಿಮೆಯ ದಿನ ರಾತ್ರಿ ಹುಬ್ಬಾ(ಪೂರ್ವಾ)ನಕ್ಷತ್ರದ ಯೋಗವಿದ್ದಾಗ ನಡೆದನು. ಯಾಕಂದರೆ ಪೌರ್ಣಿಮೆಯ ಬೆಳದಿಂಗಳೂ ಹುಬ್ಬಾ ನಕ್ಷತ್ರವೂ ಕಾಮವಾಸನೆಗೆ ಉತ್ತೇಜನ ಕೊಡುವಂತ

ಹವು. ಮುಂಕ್ರಿಯಾದ ವಸಂತನನ್ನು ತನ್ನಗೂಡ
ಕರಕೊಂಡು ನಡೆದಿದ್ದನು. ಹೋಳಿ ಹುಂಣಿವೆಗೆ
ವಸಂತ ಋತುವು ಹಣಿಕಿ ಹಾಕುತ್ತಲಿರುವದು ಮತ್ತು
ಈ ಋತುವು ಕಾಮವಾಸನೆಯು ಚಿಗುರಲು ಒಳ್ಳೇ
ಕಾಲವು. ಹೋಗುವಾಗ ತನ್ನ ವಾಹನವಾದ ಗಿಳಿಯ
ಮೇಲೆ ಕುಳಿತು ಒಳ್ಳೇ ವೈಭವದಿಂದ ಸಾಗಿದ್ದನು.
ಗಿಳಿಯ ಹಸಿರು ಬಣ್ಣವೂ ಅದರ ಇಂಪಾದ ಧ್ವನಿಯೂ
ಕಾಮವಾಸನೆಗೆ ಸಹಾಯಕಾರಿಗಳು. ತಪೋವನಕ್ಕೆ
ಹೋಗಿ ಮಹೇಶ್ವರನ ಹಿಂದುಗಡೆ ಇದ್ದದ್ದೊಂದು
ಹೊಸದಾಗಿ ಚಿಗಿತ ಮತ್ತು ಹಚ್ಚಗಿನ ಬಂಣದಿಂದೊ
ಪ್ಪುವ ಮಾವಿನ ಗಿಡದ ಮೇಲೆ ಕುಳಿತು ತನ್ನ ಹೂವಿನ
ಪಂಚ ಬಾಣಗಳನ್ನು ಬಿಲ್ಲಿಗೆ (ಕಾಮನ ಬಿಲ್ಲಿಗೆ) ಹೂಡಿ
ಮಹೇಶ್ವರನಿಗೆ ಗುರಿಯಿಟ್ಟು ಹೊಡೆದನು. ಅದರ
ಪರಿಣಾಮದಿಂದ ಮಹೇಶ್ವರನು ಕಣ್ಣು ತೆರೆದು ಅಲ್ಲಿಯೇ
ನಿಂತಿದ್ದ ಪಾರ್ವತಿ ದೇವಿಯನ್ನು ಮೋಹಿಸಿದನು.
ತನ್ನ ಮನಸ್ಸನ್ನು ಚಂಚಲಗೊಳಿಸಿದವರಾರೆಂದು
ಮಹೇಶ್ವರನು ಅಲೋಚಿಸುತ್ತಿರುವಷ್ಟರಲ್ಲಿ ಅಲ್ಲಿಯೇ
ಮಾವಿನ ಗಿಡದ ಮೇಲೆ ಕುಳಿತಿದ್ದ ಕಾಮನನ್ನು ನೋಡಿ
ಸಿಟ್ಟಿಗೆದ್ದು ತನ್ನ ಹಣೆಯ ಮೇಲಿನ ಕಣ್ಣನ್ನು ತೆರೆದನು.
ಕೂಡಲೇ ಕಾಮನು ಸುಟ್ಟು ಭಸ್ಮವಾದನು. ಕಾಮನ
ರಕ್ತವು ಮಹೇಶ್ವರನ ಮೈಗೆಲ್ಲ ಸಿಡಿಯಿತು. ಇದರ
ಅನುಕರಣವನ್ನೇ ನಾವು ಪ್ರತಿ ವರುಷ ಹೋಳಿ ಹುಂಣಿ
ವೆಯಲ್ಲಿ ಮಾಡುತ್ತಿರುವೆವು. ಹುಂಣಿವೆಯ ದಿನ
ಕಾಮನ ಪ್ರತಿಮೆಯನ್ನಿಟ್ಟು ಅದರ ಸುತ್ತಲೂ ಕುಳ್ಳು-
ಕಟ್ಟಿಗೆಗಳನ್ನಿಟ್ಟು ಕಾಮದಹನ ಮಾಡುವೆವು. ಈಶ್ವರನ
ಮೈಯು ಕಾಮರಕ್ತದಿಂದ ಮುಳುಗಿತ್ತಾದುದರಿಂದ
ನಾವು ಓಕಳಿ ಆಡುವೆವು. ತಮ್ಮ ಸಂಕಟ ಕಾಲದಲ್ಲಿ
ತನ್ನ ಜೀವವನ್ನೇ ಆಹುತಿಯಾಗಿ ಕೊಟ್ಟು ತಮ್ಮೆಲ್ಲರ
ಪ್ರಾಣಗಳನ್ನುಳಿಸಿದಂತಹ ಆದರ್ಶ ಮತ್ತು ಉದಾರ
ಸ್ವಭಾವದ ಕಾಮನು ತಮ್ಮೆಲ್ಲರ ಕೈಬಿಟ್ಟು ಹೋದ
ನೆಂದು ತಿಳಿದು ದೇವ-ದೇವತೆಗಳೆಲ್ಲರು ಹೊಯ್ಕೊಂಡು
ಬಡಕೊಂಡು ಅಳಪತ್ತಿದರು! ಕಾಮನ ಹೆಂಡತಿಯಾದ
ರತಿದೇವಿಯ ದುಃಖಕ್ಕಂತೂ ಮಿತಿಯಿರಲಿಲ್ಲ! ಅದುದ
ರಿಂದ ನಾವೂ ಹೊಯ್ಕೊಳ್ಳುತ್ತೇವೆ. ತಾತ್ವಿಕ ದೃಷ್ಟಿ
ಯಿಂದ ವಿಚಾರ ಮಾಡಿ ನೋಡಿದರೆ, ಕಾಮದಹ
ಮಾಡಿ ಹೊಯ್ಕೊಂಡರೆ ಒ ಹಬ್ಬದ ನಿಜವಾದ ಆಚರ
ಯನ್ನು ಮಾಡಿದಂತಾಗಲಿಲ್ಲ. ನಮ್ಮಲ್ಲಿದ್ದ ಕಾ
ವಾಸನೆಯನ್ನು ನಾವು ಸುಟ್ಟು ಹಾಕಬೇಕು. ಇದುವೆ
ಈ ಹಬ್ಬದ ನಿಜವಾದ ಆಚರಣೆಯು. ಇದುವೆ
ಮಹೇಶ್ವರನು ನಮಗೆಲ್ಲ ಹಾಕಿ ಕೊಟ್ಟ ಮೇಲ್ಪಂಕ್ತಿಯು
ಎಲ್ಲ ಜನರ ಹಿತದ ಸಲುವಾಗಿ ತನ್ನ ಜೀವವನ್ನೆ
ಅರ್ಪಣ ಮಾಡಿದ ಕಾಮನು ಜಗತ್ತಿಗೇ ವಂದ್ಯನು
ಆದರ್ಶನು. ಇಂತಹ ನಿಃಸ್ವಾರ್ಥ ಬುದ್ಧಿಯ ಜನರಿ
ರಾಷ್ಟ್ರವು ಘನತೆಯ ಶಿಖರಕ್ಕೇರುವದು ನಿಶ್ಚಿತ. ಶಿಕ್ಷಕ
ಶಿಕ್ಷಕಿಯರು ಈ ತಾತ್ವಿಕ ವಿಚಾರವನ್ನು ಚೆನ್ನಾ
ಮನದಟ್ಟಾದು ಮಕ್ಕಳ ಮನಸಿನ ಮೇಲೆ ಚೆನ್ನಾ
ಬಿಂಬಿಸಿ ಕುಳ್ಳು-ಕಟ್ಟಿಗೆಗಳನ್ನು ಕಳುವು ಮಾಡ
ವುದು, ಕತ್ತೆಯ ಮೇಲೆ ಕೂಡ್ರುವದು, ಅವಾಚ
ಹಾಡುಗಳನ್ನು ಹಾಡುವದು, ಇವೆಲ್ಲವೂ ನಮ
ಧರ್ಮಕ್ಕೂ ಸಂಸ್ಕೃತಿಗೂ ತೀರಾ ವಿರುದ್ಧವಾದವ
ಗಳೆಂದು ಅವರ ಮನಸಿನ ಮೇಲೆ ಪರಿಣಾಮವಾಗ
ವಂತೆ ಹೇಳಿ ಅವರು ಇಂತಹ ಹೇಯ ಕೃತಿಗಳಿಗೆ ಕೈ
ಹಾಕದಂತೆ ಮುಂಜಾಗ್ರತೆಯನ್ನು ವಹಿಸಿಕೊಳ್ಳುವಹೆ
ಳಿತು. ಪರಂಪರೆಯಿಂದ ಬಂದ ಪದ್ಧತಿಗನುಸರಿ
ಹುಂಣಿವೆಯ ದಿನ ರಾತ್ರಿ ಐದಾರು ಕುಳ್ಳು ಕಟ್ಟಿಗೆ
ಳನ್ನು ಇಟ್ಟು ಕಾಮದಹನ ಮಾಡಿ ಮರುದಿನ ಓಕ
ಯನ್ನಾಡಿದರಾಯಿತು. ಉಳಿದ ನೀಚ ಕೃತಿಗಳ
ನಮ್ಮ ಪರಂಪರೆಯವಲ್ಲ. ಕಾಮದಹನ ಮಾಡಲು
ಬೇಕಾಗುವ ಕಾಮನ ಪ್ರತಿಮೆಯನ್ನು ತಯಾರಿಸುವ
ಜಟುವಟಿಕೆಯನ್ನಿಟ್ಟುಕೊಂಡು ಈ ಹಬ್ಬದ ಬಗೆ
ಮೇಲೆ ಹೇಳಿದ ವಿವರಗಳನ್ನೆಲ್ಲ ಮಕ್ಕಳಿಗೆ ಮನವರಿ
ಯಾಗುವಂತೆ ಚಿತ್ತಾಕರ್ಷಕವಾಗಿ ಹೇಳಬೇಕು. ಮತ್ತು
ಸಂಬಂಧಿಸಬಹುದಾದ ಬೇರೆ ವಿಷಯಗಳ ಸಂಗತಿ
ಗಳನ್ನು ಕಲಿಸಬೇಕು. ಒಂದು ವೇಳೆ ತಮ್ಮ ಊರಲ್ಲಿ
ಕಾಮಣ್ಣನನ್ನು ಕೂಡ್ರಿಸಿದ್ದರೆ, ನಿರೀಕ್ಷಣೆ ಮಾಡುವ
ಜಟುವಟಿಕೆಯನ್ನಿಟ್ಟುಕೊಂಡು ಮಕ್ಕಳನ್ನೆಲ್ಲ ಅಲ್ಲಿಗೆ
ಕರೆದುಕೊಂಡು ಹೋಗಿ ನಿರೀಕ್ಷಣೆ ಮಾಡಿಸಿಕೊಂಡು
ಬಂದು ಈ ಹಬ್ಬದ ವಿವರಗಳನ್ನೂ ಮತ್ತು ಹೊಂದಿಕೆ

ಯೋಗುವಂತಹ ಬೇರೆ ವಿಷಯಗಳ ಸಂಗತಿಗಳನ್ನೂ ಕಲಿಸಲು ಬರುವಂತಿದೆ.

ಉಡುಪಸಂಚಾರ

ಪೂರ್ವ ಪೀಠಿಕೆಯಲ್ಲಿ ನಿವೇದಿಸಿಕೊಂಡಂತೆ ಪ್ರತಿಯೊಂದು ಹಬ್ಬದ ಆಚರಣೆಯ ಬಗೆಗೆ ಜನಸಾಮಾನ್ಯರಲ್ಲಿ ನೆಲೆಸಿ ರೂಢಿಗಳು, ಆ ಗೆ ನಮ್ಮ ಪೂರ್ವಜರು ಕಲ್ಪಿಸಿದ ಉದ್ದೇಶಗಳು, ಆ ದಲ್ಲಿ ಹುದುಗಿ ರುವಂತಿದ್ದ ತಪ್ಪುಗಳು. ಈಗಿನ ಯಾಂತ್ರಿಕ ಜೀವನದ ಜಂಜಾಟದ ನಡುವೆ ಸರಿಹೋಗುವ ಪ್ರಾಸ್ತುತಕಾರಣಗಳು, ಇತ್ಯಾದಿ ಗಳನ್ನು ವಿಸ್ತಾರವಾಗಿ ನಮಗೆ ತಿಳಿದಷ್ಟು ವಿವೇಚಿಸಲಾಯಿತು. ಈ ವಿವೇಚನೆಯ ಜೊತೆಗೆ ನಮ್ಮ ಹಬ್ಬ-ಹುಣ್ಣಿಮೆಗಳೆಲ್ಲ ಬೇಸಾಯಕ್ಕೂ ಅದರಲ್ಲಿ ತೊಡಗಿದ ಜನರ ಜೀವನಕ್ರಮಕ್ಕೂ ಹೊಂದಿಕೆಯಾಗುವ ಹಾಗೆ ಹೇಗೆ ಹೆಣೆಯಲ್ಪಟ್ಟಿರುವವೆಂಬ ತತ್ವವನ್ನು ಶೈಲಿಗೆಳೆದು ತೋರಿಸಿದ್ದುದನ್ನು ಓದುಗರು ಮರೆತಿರಲಿಕ್ಕಿಲ್ಲವಷ್ಟೇ. ಈ ದೆಗ್ಗುರಿಯನ್ನಿಟ್ಟುಕೊಂಡೇ ಈ ಲೇಖಾಂಕಗಳನ್ನೆಲ್ಲ ಬರೆಯಲ್ಪಡುತ್ತಿದೆ. ನಾವು ವಿವೇಚಿಸಿದ ಹಬ್ಬ-ಹುಣ್ಣಿಮೆಗಳ ಮಾಲಿಕೆಯಲ್ಲಿ ಕೆಲವು ಹಬ್ಬಗಳು ಲೋಪವಾಗಿವೆ ಎಂಬ ಆಕ್ಷೇಪವನ್ನು ಕೆಲವರು ಎತ್ತುವ ಸಂಭವವಿದೆ. ಅಂತಹವರು ಈ ಲೇಖಾಂಕಗಳನ್ನು ಬರೆಯುವಲ್ಲಿಟ್ಟುಕೊಂಡ ನಮ್ಮ ಮೂಲೋದ್ದೇಶದ ಕಡೆಗೆ ದಯವಿಟ್ಟು ನಮ್ಮ ಗಮನವನ್ನೀಯುವಬೇಳಿತು. ನಮ್ಮ ನಾಡು ವೈವಿಧ್ಯಪೂರ್ಣವಾದದ್ದಿದೆ. ನಮ್ಮಲ್ಲಿ ಹಳ್ಳಿಗಳು ಅತಿ ಹೆಚ್ಚು ಮತ್ತು ಕಡಿಮೆ. ಆದುದರಿಂದ ಹಳ್ಳಿಗಾಡಿನಲ್ಲಿಯು ಜನಸಾಮಾನ್ಯರಲ್ಲಿ ಆಚರಿಸಲ್ಪಡುವ ಹಬ್ಬ-ಹುಣ್ಣಿಮೆಗಳನ್ನಷ್ಟೇ ವಿವೇಚಿಸಲಾಗಿದೆ.

ಗಾಂಧಿ ಜಯಂತಿ, ನೇತಾಜಿ ಬೋಸ ಜಯಂತಿ ಸ್ವಾತಂತ್ರ್ಯೋತ್ಸವ, ಮೊದಲಾದ ರಾಷ್ಟ್ರೀಯ ಹಬ್ಬ-ಹುಣ್ಣಿಮೆಗಳು. ಈ ನಮ್ಮ ಹಬ್ಬ-ಹುಣ್ಣಿಮೆಗಳ ಮಾಲಿಕೆಯಲ್ಲಿ ಸಮಾವೇಶವಾಗಿಲ್ಲ. ಯಾಕಂದರೆ ಇವೆಲ್ಲ ಮೊನ್ನೆ ಮೊನ್ನೆ ನಮ್ಮೆಲ್ಲರ ಕಣ್ಮುಂದೆ ಘಟಿಸಿದ ಸಂಗತಿಗಳು. ಇವುಗಳ ಬಗೆಗೆ ನಮ್ಮ ಓದುಗರಿಗೆ ಜೆನ್ನಾಗಿ ಗೊತ್ತಿರಲು ಸಾಕು. ವರ್ತಮಾನ ಪತ್ರಿಕೆಗಳಲ್ಲಿಯೂ ಮಾಸಿಕಗಳಲ್ಲಿಯೂ ಇವುಗಳ ವಿಷಯವಸ್ತು ಆಗಾಗ ಮಾಹಿತಿಯು ಸಾಕಷ್ಟು ಸಲ್ಲುತ್ತಿದೆ. ಮೇಲಾಗಿ ಪರಂಪರೆಯಿಂದ ಬಂದ ಹಬ್ಬ-ಹುಣ್ಣಿಮೆಗಳ ಬಗೆಗಷ್ಟೇ ಈ ಲೇಖಾಂಕಗಳನ್ನು ಬರೆಯಬೇಕೆಂಬ ಉದ್ದೇಶವನ್ನಿಟ್ಟುಕೊಂಡಿದ್ದೆವೆಂದು ಆವುಗಳ ಬಗೆಗೆ ಬರೆಯಲಿಲ್ಲ. ಅವರಂತೆಯೇ ಶೈಕ್ಷಣಿಕ ಉತ್ಸವಗಳಾದ ಬಾಲವರ ದಿನ, ಮಕ್ಕಳ ದಿನ, ಶಾಲೆಯ ಹುಟ್ಟು-ಹಬ್ಬ, ಶಿಕ್ಷಣ ಸಪ್ತಾಹ, ಇವುಗಳ ಬಗೆಗೂ ಬರೆಯಲಿಲ್ಲ. ಯಾಕಂದರೆ, ಇವು ಸಹ ಪರಂಪರೆಯಿಂದ ಬಂದ ಹಬ್ಬ ಹುಣ್ಣಿಮೆಗಳಲ್ಲ.

ಪರಂಪರೆಯಿಂದ ಬಂದ ಹಬ್ಬ-ಹುಣ್ಣಿಮೆಗಳು, ರಾಷ್ಟ್ರೀಯ ಹಬ್ಬಗಳು, ಶೈಕ್ಷಣಿಕ ಉತ್ಸವಗಳು, ಮೊದಲಾದ ಸಾಮಾಜಿಕ ಕಾರ್ಯಗಳಿಗೆ ನಮ್ಮ ಈಗಿನ ಹೊಸ ಅಭ್ಯಾಸ ಪತ್ರಿಕೆಯಲ್ಲಿ ವಿಶಿಷ್ಟವಾದೊಂದು ಸ್ಥಾನ ಮಾನ ದೊರೆತಿದುದು ನಿಜಕ್ಕೂ ತುಂಬಾ ಆನಂದದ ಸಂಗತಿಯು. ಹಬ್ಬ ಹುಣ್ಣಿಮೆಗಳ ಬಗೆಗೆ ನಿಜವಾದ ಕಲ್ಪನೆಯು ನಮ್ಮ ಓದುಗರಿಗೆಲ್ಲ ಇರುವದು ಅವಶ್ಯವೆಂದು ಭಾವಿಸಿದ್ದಾಗಿದೆ. ಆ ಭಾವನೆಯಿಂದಲೇ ಈ ಲೇಖಾಂಕಗಳನ್ನೆಲ್ಲ ಬರೆದದ್ದಾಗಿದೆ. ಪ್ರತಿಯೊಂದು ಹಬ್ಬದ ಬಗೆಗೆ ನಮಗೆ ಸಾಧ್ಯವಿದ್ದಷ್ಟು ವಿವರಗಳನ್ನು ಕೊಟ್ಟಿದ್ದಾಯಿತು. ನಮ್ಮ ಓದುಗರಲ್ಲಿ ಕೆಲವರಿಗೆ ಇದಕ್ಕೂ ಹೆಚ್ಚು ವಿವರಗಳು ಗೊತ್ತಿರಬಹುದೆಂದು ನಮ್ಮ ಗ್ರಹಿಕೆ. ಅಂತಹ ಸಹೃದಯರು ತಮಗೆ ಗೊತ್ತಿದ್ದ ಹೆಚ್ಚಿನ ವಿವರಗಳನ್ನು ನಮಗೆ ದಯವಿಟ್ಟು ಬರೆದು ತಿಳಿಸಬೇಕೆಂದು ವಿನಂತಿಯು. ಈ ಪ್ರಕಾರ ಹೊಸ ವಿವರಗಳನ್ನು ಲೇಖರಿಸಿ ಇನ್ನೊಂದು ಲೇಖಾಂಕವನ್ನು ಬರೆದು ಪ್ರಸಿದ್ಧಿಸಬೇಕೆಂಬುದು ನಮ್ಮ ಮನೀಷೆಯು.

— ಜಯಸಿಂದ —

ಕೈನೂಲಿನ ಹೆಣಿಕೆಯ ಸೂಚನೆಗಳು

ಲೇಖಿಕೆಯರುಃ—ಶ್ರೀಮತಿ ತಾರಾಬಾಯಿ ಗೋಡಬೊಲೆ
ಅನುವಾದಿಕೆಯರುಃ—ಶ್ರೀಮತಿ ಯಮುನಾಬಾಯಿ ಸಾಡಳಕರಣಿ, ಲೇ- ಸು. ಹೆ. ಟ್ರೇ. ಕಾಲೇಜ, ಧಾರವಾಡ

ಕೈನೂಲಿನ ಒಂದು ಬ್ಲೌಜಿನ ಹೆಣಿಕೆಯ ನಮೂನೆಯನ್ನು ಕೆಳಗೆ ಕೊಟ್ಟಿರುತ್ತದೆ.

ಬ್ಲೌಜಿನ ಹೆಣಿಕೆಯು ಒಂದು ನಮೂನೆಃ—

ಒಂದು ಬ್ಲೌಜಿಗೆ ಐದು ಅಂಶ ನೂಲು ಹಿಡಿಯುತ್ತದೆ. ನೂಲಿನ ಪ್ರಮಾಣವನ್ನು ಅಂದಾಜಿನ ಮೇಲೆಯೇ ತೂತ್ತು ಪಡಿಸಬೇಕಾಗುತ್ತದೆ.

ಪ್ರಮಾಣಃ— ಉದ್ದ ೧೮" ಸುತ್ತಳತೆ ೩೨"

ಉಪಕರಣಃ— ೧೧ ಅಥವಾ ೧೨ ನಂಬರಿನ ೨ ಸೂಜಿಗಳು.

ಬೆನ್ನಿನ ಭಾಗಃ— ೧೨ ನಂಬರಿನ ಸೂಜಿಯ ಮೇಲೆ ೧೦೮ ಟಾಕೆಗಳನ್ನು ಹಾಕಬೇಕು; ಒಂದು ಸಾದಾ ಟಾಕೆ ಮತ್ತು ಒಂದು ತಿರುವು ಟಾಕೆ. ಈ ಪ್ರಕಾರ ಹೆಣಿಕೆ ಹಾಕಿ ಮೂರು ಇಂಚಿನ ವರೆಗೆ ಹೆಣೆಯಬೇಕು. ಇದು ಬ್ಲೌಜಿನ ಕೆಳಪಟ್ಟಿ ಆಯಿತು. (ಇದರ ನಂತರ ಮೇಲೆ ತಮಗೆ ಸೇರಿದ ಹೆಣಿಕೆಯನ್ನು ಹಾಕಬಹುದು). ಆ ಮೇಲೆ ಸಾದಾ ಮತ್ತು ತಿರುವು ಟಾಕೆಗಳ ಹೆಣಿಕೆ ಹಾಕಿ ಮೂರು ಇಂಚಿನ ಪಟ್ಟಿ ಕೂಡಿ ಒಟ್ಟು ೧೨" ಉದ್ದಳತೆ ಆಗಬೇಕು. ಕೈಬದಿಯು ಉದ್ದಳತೆಯ ೪ ಇರಬೇಕು ಅಂದರೆ ೧೪" ಉದ್ದ ಬ್ಲೌಜಿಗೆ ಆರು ಇಂಚು ಕೈಬದಿ ಇರಬೇಕಾಗುವದು. ಕೈಬದಿಯ ಪಲುವಾಗಿ ಎರಡೂ ಬದಿಗೆ ಸೂಜಿಯ ಮೇಲಿನ ಮೊದಲಿನ ೬ ಟಾಕೆಗಳನ್ನು ಬಂದ ಮಾಡಬೇಕು. ಪ್ರತಿಯೊಂದು ಸಾಲಿನ ಮೊದಲು ಎರಡೂ ಟಾಕೆಯೊಳಗಿಂದ ಒಂದು ಸಾದಾಟಾಕೆ ಹಾಕಿ ಮತ್ತೆ ಎರಡೂ ಬದಿಗೆ ನಾಲ್ಕು ನಾಲ್ಕು ಟಾಕೆ ಕದಿಮೆ ಮಾಡಬೇಕು. ಪ್ರತಿಯೊಂದು ಬದಿಗೆ ೧೦ ಟಾಕೆಯ ಪ್ರಕಾರ ೨೦ ಟಾಕೆಗಳು ಕಡಿಮೆ ಆಗುತ್ತವೆ. ಟಾಕೆ ಕಡಿಮೆ ಮಾಡಿದ್ದರಿಂದ ಸಾಲಿನಿಂದ ಐದು ಇಂಚು ಉದ್ದಳತೆಯ ವರೆಗೆ ಹೆಣೆಯಬೇಕು. ಆಮೇಲಿನ ಸಾಲುಗಳನ್ನು ಹೆಣೆಯುವಾಗ ಮೊದಲಿನ ೨೯ ಟಾಕೆಗಳಿಗೆ ಮೇಲಿನಂತೆ ಸಾದಾ ಮತ್ತು ತಿರುವು ಟಾಕೆಯ ಹೆಣಿಕೆ ಹಾಕಿ ಮುಂದಿನ ೩೦ ಟಾಕೆಗಳನ್ನು ತಿರುವು ಮತ್ತು ಸಾದಾ ಟಾಕೆಗಳನ್ನು ಹಾಕಬೇಕು. ಪುನಃ ಕಟ್ಟಕಡೆಯ ೨೯ ಟಾಕೆಗಳಿಗೆ ಮೇಲಿನಂತೆ ಹೆಣಿಕೆ ಹಾಕಬೇಕು. ಪ್ರತಿಯೊಂದು ಸಾಲಿನ ಮೊದಲನೇ ಮತ್ತು ಕಟ್ಟಕಡೆಯ ೨೯ ಟಾಕೆಯಲ್ಲಿಯ ಒಂದೊಂದು ಟಾಕೆಯನ್ನು "ತಿರುವು ಸಾದಾ" ಟಾಕೆ ಈ ಹೆಣಿಕೆಯಲ್ಲಿ ಸೇರುವಂತೆ ಹಾಕಬೇಕು. ಮಧ್ಯದಲ್ಲಿಯ ಕುತ್ತಿಗೆಯ ಟಾಕೆಯನ್ನು ಗಂಟು ಬೀಳುವಂತೆ ಸಾದಾ ಟಾಕೆಯ ಮೇಲೆ ತಿರುವು ಟಾಕೆ ಮತ್ತು ತಿರುವು ಟಾಕೆಯ ಮೇಲೆ ಸಾದಾ ಟಾಕೆ ಈ ಪ್ರಕಾರ ಹೆಣೆಯಬೇಕು. ಆ ಸಾಲಿನಲ್ಲಿ ಎರಡೂ ಬದಿಯ ೪ ಟಾಕೆಗಳು ಕುತ್ತಿಗೆಯಲ್ಲಿ ಸೇರಿ, ಒಟ್ಟಿಗೆ ಕುತ್ತಿಗೆಯ ಹೆಣಿಕೆಯ ೪ ಟಾಕೆಗಳಾಗುವವು ಮತ್ತು ಸಾದಾ ಹೆಣಿಕೆಯ ಎರಡೂ ಬದಿಗೆ ೨೧ ಟಾಕೆ ಉಳಿಯುವವು. ಈ ಪ್ರಕಾರ ೬" ಉದ್ದಳತೆಯವರೆಗೆ ಪೂರ್ಣವಾಗುವದು. ಬಂದು ಮಾಡುವಾಗ ೨೯ ಟಾಕೆ ಹೆಣೆದುಕೊಂಡು ಮಧ್ಯದಲ್ಲಿಯ ೩೦ ಟಾಕೆಗಳನ್ನು ಬಂದ ಮಾಡಬೇಕು ಮತ್ತು ಮುಂದಿನ ೨೯ ಟಾಕೆಗಳನ್ನು ಹೆಣೆಯುವಾಗ ಮೊದಲನೆಯ ಸಾಲಿಗೆ ೧೦ ಟಾಕೆಗಳನ್ನು ಹೆಣೆಯಬೇಕು ಮತ್ತು ಪುನಃ ಹೊರಳಬೇಕು. ಮೂರನೆಯ ಸಾಲಿಗೆ ೨೦ ಟಾಕೆಗಳನ್ನು ಹೆಣೆದು ಪುನಃ ಹೊರಳಬೇಕು. ಐನೇ ಸಾಲಿಗೆ ಎಲ್ಲ ೨೯ ಟಾಕೆಗಳನ್ನು ಹೆಣೆಯಬೇಕು. ಇದರಿಂದ ಭುಜಗಳಿಗೆ ಸ್ವಲ್ಪ ಇಳಿತವು ಬರುತ್ತದೆ. ೨೯ ಟಾಕೆಗಳನ್ನು ಪೂರ್ಣ ಹೆಣೆದ ಮೇಲೆ ಆ ಎಲ್ಲವುಗಳನ್ನು ಬಂದ ಮಾಡಬೇಕು. ಎರಡನೆಯ ಭುಜಕ್ಕೂ ಹೀಗೆ ದಾರ ಬಿಟ್ಟು, ಐದು ಸಾಲು ಹೆಣೆದು ಪೂರ್ಣ ಮಾಡಬೇಕು ಅಂದರೆ ಬೆನ್ನ ಭಾಗವು ಪೂರ್ಣವಾಯಿತು.

ಮುಂದಿನ ಭಾಗಃ— ಮೊದಲಿನ ೧೨"ಉದ್ದಳತೆಯವರೆಗೆ ಬೆನ್ನಿನ ಭಾಗದಂತೆಯೇ ಹೆಣೆಯಬೇಕು. ಆ ಮೇಲೆ ಕೈಬದಿಗಳನ್ನು ಬೆನ್ನಿನ ಭಾಗದಂತೆಯೇ ಹೆಣೆಯಬೇಕು. ಆದರೆ ಅದನ್ನು ಮಾಡುವ ರೀತಿಯೆ

ುಧ್ಯ ಭಾಗದಲ್ಲಿ ಮೊದಲನೆಯ ಸಾಲಿನಲ್ಲಿ ಎರಡು ೂರನೆಯ ಸಾಲಿನಲ್ಲಿ ಸಾಲ್ಯು ಹೀಗೆ ೧೬ ಸಾಲಿವೆ,೧೬ ಾಕೆಗಳನ್ನು ತಿರುವು ಟಾಕೆಯ ಮೇಲೆ ಸಾದಾ ಮತ್ತು ಎದಾ ಮೇಲೆ ತಿರುವು ಈ ಪ್ರಕಾರ ಹೆಣೆಯಬೇಕು. ಮೇಲೆ ಅದರ ಎರಡು ಭಾಗಗಳನ್ನು ಮಾಡಿ ಒಂದು ಾಗವನ್ನು ಕಿನೇ ಸೂಜಿಯ ಮೇಲೆ ತೆಗೆದಿಡಬೇಕು. ೈತಿಯೊಂದು ಸೂಜಿಯ ಮೇಲೆ ನಾಲ್ಕತ್ತುನಾಲ್ಕು ಾಕೆಗಳೂ ಬರಬಹುದು. ಅವುಗಳನ್ನು ಹೆಣೆಯುವಾಗ ುತ್ತಿಗೆ ಬದಿಯ ತುದಿಯ ಆ ಟಾಕೆಗಳನ್ನು ಯಾವತ್ತೂ ಾದೇ ಹೆಣಿಕೆಯ ಅಂದರೆ ಸಾದಾ ಮೇಲೆ ತಿರುವು ಎತ್ತು ತಿರುವು ಮೇಲೆ ಸಾದಾ ಟಾಕೆ ಹೀಗೆ ಹೆಣೆಯ ೀಕು. ಈ ಆ ಟಾಕೆಯ ಮೊದಲಿನ ಟಾಕೆಯೊಳಗಿಂದ ಳತೆಯ ನಾಲ್ಕನೆಯ ಸಾಲಿಗೆ ಎರಡರೊಳಗಿಂದ ಒಂದು ಾಕೆಯಂತೆ ಒಟ್ಟಿಗೆ ೧೫ ಟಾಕೆಗಳನ್ನು ಕಡಿಮೆ ನೂಡ ೀಕು. ಅಂದರೆ ಸೂಜಿಯ ಮೇಲೆ ೭೯ ಟಾಕೆಗಳು ುಳಿಯುತ್ತವೆ. ಹೀಗೆ ಕೈಬದಿ ೬'' ಅದು ಆಗುವ ವರೆಗೆ ಹೆಣೆಯಬೇಕು ಮತ್ತು ಆಕಡೆಗೆ ಕುತ್ತಿಗೆಯನ್ನು ಬೆನ್ನಿನ ಾಗದಂತೆ ಇಳಿಸಿ ಬಂದಮಾಡಬೇಕು. ಎರಡನೆಯ ಾಗದ ಳಗ ಟಾಕೆಗಳನ್ನು ಸೂಜಿಯ ಮೇಲೆ ತೆಗೆದು-ೂಂಡು ಹಾಗೆಯೇ ಹೆಣೆಯಬೇಕು. ಬೆನ್ನಿನ ಭಾಗ ುತ್ತು ಮುಂಭಾಗವನ್ನು ಭುಜದ ಕಡೆಗೆ ಜೋಡಿಸ ೀಕು. ಬೇಕಾಗಿದ್ದರೆ ತೋಳುಗಳನ್ನು ಮಾಡಬಹುದು. ಲ್ಲವಾದರೆ ಕೈಬದಿಯ ೧೦೮ ಟಾಕೆಗಳನ್ನು ಸೂಜಿಯ ೀಲೆ ತೆಗೆದುಕೊಂಡು ಆ ಸಾಲು ತಿರುವಿ ಮೇಲೆ ಸಾದಾ ುತ್ತು ಸಾದಾದ ಮೇಲೆ ತಿರುವು ಹೀಗೆ ಹೆಣೆಯಬೇಕು ುತ್ತು ಮುಂದಿನ ಭಾಗ ಹಿಂದಿನ ಭಾಗಗಳನ್ನು ೋಡಿಸಬೇಕು.

ತೋಳು :— ಸೂಜಿಯ ಮೇಲೆ ೭೨ ಚುಟಿಕೆ-ಗಳನ್ನು ಹಾಕಬೇಕು. ಮೊದಲಿನ ಎರಡುಸಾಲಿಗೆ ಸುರುಮಾಡುವದರಲ್ಲಿ ಎರಡುಟಾಕೆಯನ್ನು ಬೆಳೆಯಿಸ ಬೇಕು. ಆದರ ಮುಂದಿನ ಎರಡು ಸಾಲಿಗೆ ಸುರು-ಮಾಡುವದರಲ್ಲಿ ಒಂದೊಂದು ಟಾಕೆಯನ್ನು ಬೆಳೆಯಿಸ-ಬೇಕು. ಆ ಮೇಲೆ ಎರಡು ಸಾಲು ಟಾಕೆಯನ್ನು ಬೆಳೆಯಿಸದೆ ಹೆಣೆಯಬೇಕು. ಮೇಲಿನ ಪ್ರಕಾರ ಪ್ರತಿ ಆರುಸಾಲಿಗೆ ೬ ಟಾಕೆಯಂತೆ ೩೬ ಟಾಕೆಯನ್ನು ಬೆಳೆಯಿಸಬೇಕು. ಅಂದರೆ ೧೦೮ ಟಾಕೆಗಳಾಗುವವು. ೧೦೮ ಟಾಕೆಗಳ ಮೇಲೆ ಆ ಟಾಕೆಯನ್ನು ಹಾಕಬೇಕು. ಆ ಮೇಲೆ ೬ ನೆಯ ಸಾಲಿಗೆ ಎರಡೂ ಬದಿಗೆ ಎರಡರೊಳಗಿಂದ ಒಂದು ಟಾಕೆಯಂತೆ ೧೫ ಟಾಕೆಗಳನ್ನು ಕಡಿಮೆ ಮಾಡಬೇಕು. ಆ ಮೇಲೆ ಪ್ರತಿ ನಾಲ್ಕನೆಯ ಸಾಲಿನ ಎರಡೂ ತುದಿಗೆ ಎರಡಲ್ಲೊಂದರಂತೆ ಟಾಕೆ ಹಾಕಿ ೧೫ ಟಾಕೆ ಕಡಿಮೆ ಮಾಡಬೇಕು. ೬೭ ಟಾಕೆ-ಗಳು ಉಳಿದಮೇಲೆ ಒಂದು ಸಾದಾ ಒಂದು ತಿರುವು ಟಾಕೆಹೆಣಿಕೆಹಾಕಿ ಒಂದು ಇಂಚಿನ ಪಟ್ಟಿ ತಯಾರಿಸ-ಬೇಕು. ಇದರಂತೆಯೆ ಎರಡನೆಯತೋಳನ್ನು ತಯಾರಿಸಬೇಕು. ಕೈಬದಿ ಮತ್ತು ತೋಳಿನಬದಿ ಭಾಗವನ್ನು ಮುಂಚೆ ದಾರದಿಂದ ಹೊಲಿದುಕೊಳ್ಳಬೇಕು. ಆ ಮೇಲೆ ಬ್ಲೌಜಿನ ಕೆಳತುದಿಯಿಂದ ಹೊಲಿಯಲು ಸುರುವು ಮಾಡಿ ತೋಳಿನ ತುದಿಯವರೆಗೆ ಹೊಲಿಯಬೇಕು. ಎರಡೂ ತುದಿಗಳು ಸರಿಯಾಗಿ ಹೊಂದಿಕೊಳ್ಳುವಂತೆ ದಕ್ಷತೆ ವಹಿಸಬೇಕು.

ಹೆಣೆಯುವ ಮತ್ತು ಹೆಣಿಕೆಯ ವಿಶೇಷ ಮಾಹಿತಿಯು ಜೀಕಾಗಿದ್ದರೆ ಶ್ರೀ. ಜಯವಂತಬಾಯಿ ದೇಶಮುಖ ಪುಣೆ ಇವರ " ಲೋಕರಂಜೀ ಪ್ರಸಾಧನೆ " ಎಂಬ ಪುಸ್ತಕವನ್ನಾಗಲಿ ಅಥವಾ ಬೇರೆ ಇತರ ಪುಸ್ತಕವನ್ನಾ-ಗಲಿ ನೋಡಿಕೊಳ್ಳಬೇಕು.

ಸುದ್ದಿ

ದಿನಾಂಕ ೨೩-೮-೧೯೩೧ ರಂದು ಹೊನ್ನಾವರ ಕ್ಯಂ. ಶಾಲೆಯಲ್ಲಿ ಮೈ ಎ. ಇ.ರಾದ ಡಾ. ಚಿಕ್ಕರಮಪೆ ವರ ಅಧ್ಯಕ್ಷತೆಯಲ್ಲಿ ಗ್ರೂಪ್ ಶಿಕ್ಷಕರ ಶಿಕ್ಷಣ ಸಮ್ಮೇಲನವು ಯಶಸ್ವಿಯಾಗಿ ಜರುಗಿತು.

ಸ್ವಾತಂತ್ರ್ಯೋತ್ಸವ

[ದಿನಾಂಕ ೧೫-೮-೧೯೫೦ ರಂದು ನಮ್ಮ ಕಾಲೇಜಿನಲ್ಲಿ ಜರುಗಿದ ಸ್ವಾತಂತ್ರ್ಯೋತ್ಸವಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಗುಡ್ಲಪ್ಪನವರು ಪಠಿಸಿದ ಭಾಷಣದ ಮುಖ್ಯಾಂಶಗಳನ್ನು ಇಲ್ಲಿ ಕೊಡಲಾಗಿ.]

ಸಂಗ್ರಾಹಕರು:— ಶ್ರೀ ಅಯ್ಯಂ. ಎಸ್. ಮುದರಿ.

ಇಂದಿನ ಶುಭದಿನ ಸ್ವತಂತ್ರ ಭಾರತದ ಕಾರ್ಯಕಲಾಪಗಳು ಇಂತಹ ಶಿಕ್ಷಣ ಸಂಸ್ಥೆಯಿಂದ ಆರಂಭವಾಗುತ್ತಿರುವದು ನಿಜವಾಗಿಯೂ ಸಂತೋಷದ ಸಂಗತಿ. ಭಾವಿ ನಾಗರಿಕರನ್ನು ತಯಾರ ಮಾಡುವಂಥ ಶಿಕ್ಷಣ ಸಂಸ್ಥೆಯಲ್ಲಿ ಮಾತನಾಡುವ ಯೋಗ ದೊರೆತದ್ದು ನನ್ನ ಭಾಗ್ಯ.

ಭಾರತಕ್ಕೆ ಸ್ವತಂತ್ರವಾಗಿ ಇಂದಿಗೆ ಐದು ವರುಷಗಳು ಮುಗಿದು ಆರನೆಯ ವರ್ಷವು ಇಂದಿನಿಂದ ಆರಂಭವಾಗಲಿದೆ, ೧೯೪೭ ರ ಆಗಷ್ಟ ೧೫ ರಂದು ದಿಲ್ಲಿಯಲ್ಲಿ ಸ್ವಾತಂತ್ರ್ಯೋತ್ಸವವು ಸಂಭ್ರಮದಿಂದ ಆಚರಿಸಲ್ಪಡುತ್ತಿದ್ದರೂ ರಾಷ್ಟ್ರಪಿತ ಪೂಜ್ಯ, ಅಮರ ಬಾಪೂಜಿಯವರು ಕಲಕತ್ತೆಯ ಆರ್ಧ ಸುಟ್ಟ ಮನೆಯೊಂದರಲ್ಲಿ ಕುಳಿತು ಉಪವಾಸ, ಮೌನ, ತ್ಯಾಗಾರ್ಥನೆಯನ್ನು ನಡೆಸಿದ ಸನ್ನಿವೇಶವನ್ನು ನೆನೆದುಕೊಂಡರೆ ಯಾರಿಗೆ ತಾನೆ ರೋಮಾಂಚವಾಗದಿರಲಿಕ್ಕಿಲ್ಲ! ದೇಶದಲ್ಲಿ ಸಂಭವಿಸಿದ ಜಾತೀಯ ಭೂತವನ್ನು ನಿರ್ಮೂಲನಗೊಳಿಸಿ ನಾಡಿನಲ್ಲಿ ಎಲ್ಲೆಡೆಗೆ ಸುಖ, ಶಾಂತಿ, ಸಮೃದ್ಧಿಗಳು ನೆಲೆಸುವಂತೆ ಪೂಜ್ಯ ಬಾಪೂಜಿಯವರು ಶ್ರಮಿಸಿದರೆಂಬುದನ್ನು ಮಾರ್ಗದರ್ಶನವಾಗಿಟ್ಟುಕೊಂಡು ಅವರು ಹಾಕಿಕೊಟ್ಟ ಸತ್ಪಥದಲ್ಲಿ ಕಾರ್ಯ ಪ್ರವೃತ್ತರಾಗೋಣ. ರಾಜಕೀಯ ಸ್ವಾತಂತ್ರ್ಯ, ಆಹಾರ ಸ್ವಾವಲಂಬನ ಮೊದಲಾದುವು ನಮಗೆ ದೊರೆಯಬೇಕಾಗಿದೆ. ರಾಷ್ಟ್ರದ ಚುಕ್ಕಾಣಿಯನ್ನು ಹಿಡಿದು ರಾಷ್ಟ್ರವನ್ನು ಮುನ್ನಡೆಸುತ್ತಿರುವ ಪಂಡಿತ ಜವಾಹರಲಾಲ ನೆಹರೂ ಹಾಗೂ ಇನ್ನಿತರ ಮುಖಂಡರನ್ನು ಅನುಸರಿಸಿ ಅವರಿಗೆ ಬೆಂಬಲಿಗರಾಗಿ ನಿಂತು ಸುರಾಜ್ಯವನ್ನಾಗಿ ನಿರ್ಮಿಸೋಣ.

ಈ ಕೆಲಸವು ಶಿಕ್ಷಕರಿಂದ ಸುಲಭ ಸಾಧ್ಯವೆಂದು ಬೇರೆ ಹೇಳಬೇಕಿಲ್ಲ. ಶಿಕ್ಷಕರು ಹಿಂದಿನ ಪರಂಪರೆ ಅಂದರೆ ತಾವೂ ನೌಕರವಾರರೂ ಎಂಬ ಭಾವನೆಯನ್ನು ತ್ಯಜಿಸಿ ರಾಷ್ಟ್ರದ ಭಾವೀ ಪ್ರಜೆಗಳನ್ನು ತಯಾರಿಸುವ ಹೊಣೆಗಾರಿಕೆಯು ತಮ್ಮ ಮೇಲಿದೆಯೆಂಬುದನ್ನು ಅರಿಯಬೇಕು. "ನೌಕರಿಗಾಗಿ ಶಿಕ್ಷಣ" ಎಂಬ ತತ್ವವು ಈಗ ನೋಗಬೇಕಾಗಿದೆ. ಪರಾವಲಂಬಿಗಳಾಗಿರುವಂತೆ ಮಾಡುವ ಶಿಕ್ಷಣವು ಶಿಕ್ಷಣವಲ್ಲ. ಪ್ರತಿಯೊಬ್ಬನೂ ಶಿಕ್ಷಣ ಮುಗಿಸಿಕೊಂಡು ಬಂದನಂತರ ಸ್ವಾವಲಂಬಿಯಾಗಿರಬೇಕು. ಈ ತತ್ವವನ್ನು ಆಧಾರವಾಗಿಟ್ಟುಕೊಂಡು ಗಾಂಧೀಜಿಯವರು ಮೂಲ ಶಿಕ್ಷಣ ಪದ್ಧತಿ ಹಾಕಿಕೊಟ್ಟರು. ಈ ಶಿಕ್ಷಣವು ಅಕ್ಷರಶಃ ಕೃತಿಯಲ್ಲಿ ಬರಬೇಕು. ಅಂದರೆ ಮಾತ್ರ ವಿದ್ಯಾರ್ಥಿಗಳಲ್ಲಿ ಉದ್ಯೋಗದ ಜೊತೆಗೆ ಬೌದ್ಧಿಕ ಜ್ಞಾನವೂ, ರಾಷ್ಟ್ರಾಭಿಮಾನವು ಬೆಳೆದು ಅವರು ಸ್ವತಂತ್ರ ರಾಷ್ಟ್ರದ ಯೋಗ್ಯ ನಾಗರಿಕರಾಗುವರು.

ಕೊನೆಯದಾಗಿ ಒಂದೇ ಮಾತು ಹೇಳುವೆ. ಭಾರತವು ತನ್ನು ಅಪೇಕ್ಷಿಸುವದು ದುಡಿಮೆ. ಭಾರತದ ಪ್ರತಿಯೊಬ್ಬ ನಾಗರಿಕನು ಸತತೋದ್ಯೋಗಿಯಾಗಬೇಕು. ಆಲಸ್ಯ, ಕೃತಿ, ಪರಾವಲಂಬನತನ ಇವುಗಳಿಗೆ ಎಡೆಗೊಡದೆ ಪ್ರತಿಯೊಬ್ಬನೂ ಕಾರ್ಯದಲ್ಲಿ ತೊಡಗಿ, ಆ ಕಾರ್ಯವನ್ನು ಆಂತಃಕರಣ ಶುದ್ಧಿಯಿಂದ ಮಾಡಿ ತನ್ನ ಹಾಗು ನಾಡಿನ ಸುಸ್ಥಿತಿಗೆ, ಸ್ವಾವಲಂಬನತನಕ್ಕೆ, ಆರ್ಥಿಕ ಸಮೃದ್ಧಿಗೆ ಕಾರಣನಾಗಬೇಕು. ದುಡಿಮೆಯು ಸುರಾಜ್ಯದ ತಳಹದಿಯೆಂಬುದನ್ನು ಜ್ಞಾಪಿಸಿ ಎಲ್ಲರೂ ಒಂದಾಗಿ ದುಡಿಯೋಣ.

ಇದಿನ ಶುಭಪ್ರಸಂಗಕ್ಕೆ ನನ್ನನ್ನು ಬರಮಾಡಿಕೊಂಡು ಕೆಲವು ಮಾತುಗಳನ್ನು ಹೇಳಲು ಅನುವುಮಾಡಿಕೊಟ್ಟದ್ದಕ್ಕೆ ನಿಮ್ಮ ಮುಖ್ಯಾಧ್ಯಾಪಕರಿಗೂ ನಿಮಗೂ ನನ್ನ ಧನ್ಯತೆಗಳು.

★ ಸ್ವಾತಂತ್ರ್ಯೋತ್ಸವ ★

೧೫ ಅಗಷ್ಟ ೧೯೫೨

ಂಡುಮುಕ್ಕಳ ಸರಕಾರಿ ಟ್ರೇನಿಂಗ ಕಾಲೇಜಿದಲ್ಲಿ
ಪ್ರಿ. ಪಂದ್ರಾಳರು ಶ್ರೀ ಹಳ್ಳಿಕೇರಿ
ಗುದ್ಲೆಪ್ಪನವರನ್ನು ಧ್ವಜವಂದನೆಯ ಸ್ಥಾನಕ್ಕೆ
ಕರೆದೊಯ್ಯುತ್ತಿರುವರು.



ಧ್ವಜವಂದನೆಯ ದೃಶ್ಯ.

ಶ್ರೀ. ಹಳ್ಳಿಕೇರಿಯವರಿಂದ ಧ್ವಜಾರೋಹಣ

ಹೆಣ್ಣುಮುಕ್ಕಳ ಸರಕಾರಿ ಟ್ರೇನಿಂಗ ಕಾಲೇಜಿದಲ್ಲಿ
ಶ್ರೀ. ಕೊಪ್ಪೀಕರ, ಆ. ಎ. ಇನಸ್ಪೆಕ್ಟರ ಅವರ
ಹಿರಿಯತನದಲ್ಲಿ ಸ್ವಾತಂತ್ರ್ಯೋತ್ಸವದ ದೃಶ್ಯ.



ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ

ವನಮಹೋತ್ಸವ

ಬಾಲಕ ಚಿಕ್ಕರಮನೆ ಇವನು
ಸಸಿ ನೆಡುತ್ತಿರುವನು, ಇನ್ನೂ ಅನೇಕರು ನೀರು
ಹಾಕುತ್ತಿರುವರು.

ಶ್ರೀ. ಎಸ್. ವ್ಹಿ. ಜೇವೂರ
ಇನೆಯ ಅಸಿಸ್ಟಂಟ ಎ. ಇನ್ಸಪೆಕ್ಟರ ಧಾರವಾಡ
ಅವರು ಸಸಿ ನೆಡುತ್ತಿರುವರು.

ಡಾ॥ ಚಿಕ್ಕರಮನೆ ಇವರು
ಹಿನ್ನೆಲೆಯಲ್ಲಿ ವನಮಹೋತ್ಸವವನ್ನು
ಉದ್ಘಾಟಿಸುತ್ತಿರುವರು.

ನಿವೃತ್ತ ಶಿಕ್ಷಣಾಧಿಕಾರಿಗಳಾದ
ಶ್ರೀ. ವ್ಹಿ. ಎಸ್. ಸಾಡಕರ್ಣಿ ಅವರು
ಸಸಿ ನೆಡುತ್ತಿರುವರು.

ಮಹರ್ಷಿ ಶ್ರೀ ಅರವಿಂದರು

ಲೇಖಕರು:— ಶ್ರೀ. ಎಸ್. ವಾಯ್. ಶೀಲವಂತ, ಬಿ. ಎ., ಬಿ. ಟಿ., ಡಿ. ಪಿ. ಇಡಿ., ಡಿ. ಬಿ. ಇ.

ಯುಗಯುಗಗಳಿಂದಲೂ ನಡೆದು ಬಂದ ಭಾರತದ ಉಜ್ವಲವಾದ ಸಂಸ್ಕೃತಿಯನ್ನೇ ಎರಕ ಹೊಯ್ದು ರೂಪು ಗೊಳಿಸಿದಂತಿದ್ದ, ಆಧುನಿಕ ಭಾರತದ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ವ್ಯಾಧಿಗಳಿಗೆ ದಿವ್ಯೌಷಧಿಯನ್ನಿತ್ತ ಧನ್ವಂತರಿಯಂತಿದ್ದ, ಸುಮಾರು ನಲವತ್ತು ವರುಷಗಳ ಪರ್ಯಂತ ಘೋರ ತಪವನ್ನಾಚರಿಸಿ ಪಡೆದ ಪ್ರಖರವಾದ ಆಧ್ಯಾತ್ಮಿಕ ಬಲದಿಂದ ಸರ್ವಮಾನ್ಯವಾದ 'ಮಹರ್ಷಿ' ಎಂಬ ಬಿರುದಿಗೆ ಅರ್ಹವಾದ, ಇಹವನ್ನು ಹಳಿಯದೆ, ತ್ಯಜಿಸದೆ, ಆದರ ಆಧಾರದಿಂದಲೇ ಪರವನ್ನು ಸಾಧಿಸಿ, ಅವೆರಡನ್ನೂ ತನ್ನ ಜೀವಮಾನದಲ್ಲಿಯೇ ಸಂಯೋಜಿಸಿ ನರನು ಸ್ವಯಂ-ನಾರಾಯಣನಾಗಬಹುದಲ್ಲದೆ ಪರರನ್ನೂ ದೈವತ್ವಕ್ಕೇರಿಸುವ ಅದ್ಭುತವಾದ ಸಾಮರ್ಥ್ಯವನ್ನು ಪಡೆಯಬಲ್ಲ ಎಂಬ ಸ್ಫೂರ್ತಿದಾಯಕವಾದ ಸಂದೇಶವನ್ನು ಮಾನವ ಕೋಟಿಗೆ ಬಿತ್ತರಿಸಿದ ಮಹಾಯೋಗಿ ಶ್ರೀ ಅರವಿಂದರ ಜೀವನವನ್ನೂ ಜೀವನ ಮಹತಿಯನ್ನೂ ಸಾಧ್ಯವಿದ್ದಮಟ್ಟಿಗೆ ತಿಳಿದುಕೊಂಡು ತನ್ಮೂಲಕ ತನ್ನ ಜೀವನವನ್ನು ಉನ್ನತವಾದ ಮಟ್ಟಕ್ಕೆ ಒಯ್ಯಲು ಪ್ರತಿಯೊಬ್ಬ ಮಾನವನು ಪ್ರಯತ್ನಿಸುವದು ಉಚಿತವು. ಭಾರತೀಯರದಂತೂ ಅದ್ಯತ್ಯಂತ ಪವಿತ್ರವಾದ, ಶ್ರೇಷ್ಠವಾದ ಕರ್ತವ್ಯವಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಶ್ರೀ. ಅರವಿಂದರು ೧೮೭೨ ನೆಯ ಇಸ್ವಿಯ ಅಗಷ್ಟ ೧೫ ನೆಯ ತಾರೀಖಿಗೆ ಕಲಕತ್ತೆಯಲ್ಲಿ ಜನ್ಮ ತಾಳಿದರು. ೧೮೭೯ ರಲ್ಲಿ ಅಂದರೆ ಕೇವಲ ೭ ವರುಷದವರಿದ್ದಾಗಲೇ, ತಮ್ಮ ಇಬ್ಬರು ಅಣ್ಣಂದಿರೊಡನೆ ನಿದ್ಯಾಭ್ಯಾಸಕ್ಕಾಗಿ ಇಂಗ್ಲಂಡಿಗೆ ಹೋಗಿ ಅಲ್ಲಿ ೧೪ ವರುಷಗಳವರೆಗೆ ವಾಸವಾಗಿದ್ದರು. ೧೮೮೧ ರಲ್ಲಿ ಲಂಡನ್ನಿನಲ್ಲಿಯ ಸೆಂಟ ಪಾಲ್ಸ ಸ್ಕೂಲಿನಲ್ಲಿ ಕಲಿಯಹತ್ತಿದರು. ೧೮೮೭ ರಲ್ಲಿ ಕೇಂಬ್ರಿಜದಲ್ಲಿಯ ಕಿಂಗ್ಸ ಕಾಲೇಜನ್ನು ಪ್ರವೇಶಿಸಿದರು. ಅದೇ ವರುಷ ಅವರು ಆಯ್. ಸಿ. ಎಸ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಆದರೆ ೨ ವರುಷಗಳ ಉಮೇದವಾರಿಕೆಯ (Probation) ನಂತರ ಕೊಡಬೇಕಾಗಿದ್ದ ಅಶ್ವಾರೋಹಣ ಪರೀಕ್ಷೆಗೆ ಕೂಡ್ರದೆ ಇದ್ದುದರಿಂದ ಅವರಿಗೆ ಆಯ್. ಸಿ. ಎಸ್. ಪದವಿಯು ಸಿಕ್ಕಲಿಲ್ಲ.

ಇದೇ ಕಾಲಕ್ಕೆ ಬಡೋದೆಯ ಆಗಿನ ಮಹಾರಾಜರು ಲಂಡನ್ನಿನಲ್ಲಿ ಇದ್ದರು. ಅವರಿಗೂ ಶ್ರೀ ಅರವಿಂದರಿಗೂ ಪರಿಚಯವಾಯಿತು. ತತ್ಪರಿಣಾಮವಾಗಿ ಶ್ರೀ ಅರವಿಂದರೂ ೧೮೯೩ ರ ಫೆಬ್ರುವರಿ ತಿಂಗಳಲ್ಲಿ ಇಂಗ್ಲಂಡಿನಿಂದ ಮರಳಿ ಬಂದು ಬಡೋದೆಯಲ್ಲಿ ನೌಕರಿ ಹಿಡಿದರು. ಅವರು ಮೊದಲು ಕಂದಾಯ ಖಾತೆಯಲ್ಲಿಯೂ, ಆಮೇಲೆ ಕ್ರಮವಾಗಿ ಮಹಾರಾಜರ ಆಪ್ತ ಕಾರ್ಯದರ್ಶಿಗಳಾಗಿಯೂ ಇಂಗ್ಲಿಷದ ಪ್ರಾಧ್ಯಾಪಕರಾಗಿಯೂ ಕೊನೆಗೆ ಬಡೋದಾ ಕಾಲೇಜಿನ ವ್ಹಾಯಿಸ ಪ್ರಿನ್ಸಿಪಾಲರಾಗಿಯೂ ಕಾರ್ಯ ಮಾಡಿದರು. ಈ ತೆರನಾಗಿ ಅವರು ಕಳೆದ ೧೩ ವರುಷಗಳ ಕಾಲವು ಅವರ ಆತ್ಮ ಸಂಸ್ಕಾರದ, ಸಾಹಿತ್ಯಿಕ ವಿವಿಧ ಚಟುವಟಿಕೆಗಳ ಮತ್ತು ತಮ್ಮ ಮುಂದಿನ ಜೀವನದ ಭದ್ರವಾದ ತಳಹದಿಯನ್ನು ಹಾಕಿದ ಕಾಲವು. ವಿಲಾಯತಿಯಲ್ಲಿದ್ದಾಗ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಸಂಪೂರ್ಣವಾಗಿ ಅದ್ದಿ ತೆಗೆದಂತಿದ್ದ ಅವರು ಆ ಅವಧಿಯಲ್ಲಿ ಸಂಸ್ಕೃತ ಮತ್ತು ಕೆಲವು ಪ್ರಚಲಿತ ಭಾಷೆಗಳ ಅಭ್ಯಾಸ ಮಾಡಿ ಭಾರತೀಯ ಸಂಸ್ಕೃತಿ ಮತ್ತು ನಾಗರಿಕತೆಗಳ ತಿರುಳನ್ನು ಸಂಪೂರ್ಣವಾಗಿ ಅಳವಡಿಸಿ ಆರಗಿಸಿಕೊಂಡರು. (ಅನೇಕ ಭಾಷೆಗಳ ಮೇಲೆ ಪ್ರಭುತ್ವವನ್ನು ಸಂಪಾದಿಸುವದರಲ್ಲಿಯಂತೂ ಅವರು ಸವ್ಯಸಾಚಿಯಾಗಿದ್ದರೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.) ಅದೇ ಕಾಲಕ್ಕೆ ಅವರು ಮೌನವಾಗಿ ತಿರೆಯ ಮರೆಯಲ್ಲಿಯೇ ರಾಜಕಾರಣದಲ್ಲಿ ತೊಡ

ಗಿದ್ದರು. ಆದರೆ ೧೯೦೫ ರಲ್ಲಿ ಪ್ರಾರಂಭವಾದ ವಂಗಭಂಗ ಚಳವಳಿಯು ಅವರನ್ನು ಬಹಿರಂಗವಾಗಿ ರಾಜಕೀಯ ರಂಗದಲ್ಲಿ ಕಾಲಿಡಲು ಹಚ್ಚಿತು. ೧೯೦೬ ರಲ್ಲಿ ಬಡೋದೆಯ ಸಂಸ್ಥಾನದಲ್ಲಿಯ ನೌಕರಿಯನ್ನು ಬಿಟ್ಟು ಕಲಕತ್ತೆಯಲ್ಲಿ ಅದೇ ಸ್ಥಾಪಿತವಾದ ಬಂಗಾಲ ನ್ಯಾಶನಲ್ ಕಾಲೇಜಿನ ಪ್ರಿನ್ಸಿಪಾಲರಾದರು.

ಶ್ರೀ ಅರವಿಂದರು ಕೇವಲ ಎಂಟು ವರುಷಗಳ ವರೆಗೆ ಅಂದರೆ ೧೯೦೨ ರಿಂದ ೧೯೧೦ ರ ವರೆಗೆ ರಾಜಕಾರಣದಲ್ಲಿ ತೊಡಗಿದ್ದರೂ ಅವರು ವಹಿಸಿದ ಪಾತ್ರವು ಮಹತ್ತ್ವವಾಗಿದ್ದಿತು. ಅವರು ಕಾಂಗ್ರೆಸಿನಲ್ಲಿ ಹೊಸದಾಗಿ ತಲೆಯೆತ್ತಿದ, ಮತ್ತು ಪುರೋಗಾಮಿಯಾದ, ಆದರೆ ವಿರೋಧಿಗಳಿಂದ ಜಹಾಲ ಮತವಾದಿ ಎಂದು ಕರೆಯಲ್ಪಡುತ್ತಿದ್ದ 'ಹೊಸ ಪಕ್ಷ' (New Party)ವನ್ನು ಸೇರಿದರು. ಆಯರ್ಲಂಡದಲ್ಲಿ ಯಶಸ್ವಿಯಾದ ಸಿನ್ ಫೆನ್ ಮಾದರಿಯ ಆಂದೋಲನವನ್ನು ನಡೆಯಿಸಿ ಸ್ವರಾಜ್ಯವನ್ನು ಸಂಪಾದಿಸುವದು ಈ ಪಕ್ಷದ ಮುಖ್ಯ ಗುರಿಯಾಯಿತು. ಅದಕ್ಕಾಗಿ ಕಾಂಗ್ರೆಸ್ಸನ್ನು ವಶಪಡಿಸಿಕೊಂಡು ಜನತೆಯನ್ನು ತನ್ನೆಡೆಗೆ ಒಲಿಸಿಕೊಳ್ಳುವದು, ರಾಷ್ಟ್ರದ ಎಲ್ಲ ಶಕ್ತಿಗಳನ್ನು ಸಂಘಟಿಸುವದು, ದೇಶೀಯ ಉದ್ಯಮಗಳಿಗೆ ಉತ್ತೇಜನ ಕೊಡುವದು, ಕಾಯದೆ ಕೋರ್ಟುಗಳನ್ನು ಬಹಿಷ್ಕರಿಸುವದು, ಅವುಗಳ ಬದಲಾಗಿ ಪಂಚಾಯತಿ ಕಛೇರಿಗಳನ್ನು ಸುರುವು ಮಾಡುವದು, ಸರಕಾರೀ ಶಾಲೆ ಕಾಲೇಜುಗಳ ಮೇಲೆ ಬಹಿಷ್ಕಾರ ಹಾಕಿ ರಾಷ್ಟ್ರೀಯ ಭಾವನೆಯನ್ನು ಉದ್ದೀಪನಗೊಳಿಸುವ ಶಾಲೆ ಕಾಲೇಜುಗಳನ್ನು ಸ್ಥಾಪಿಸುವದು, ರಾಷ್ಟ್ರವನ್ನು ಸಂರಕ್ಷಿಸಲು ಸಮಾಜದಲ್ಲಿ ಶಾಂತಿಯನ್ನು ಕಾಯಲು ತರುಣರ ಪಡೆಗಳನ್ನು ಸಜ್ಜುಗೊಳಿಸುವದು, ಸಾಧ್ಯವಿದ್ದಮಟ್ಟಿಗೆ ಸಾತ್ವಿಕ ಪ್ರತಿಭಟನೆಯ ಧೋರಣೆಯನ್ನು ಅನುಸರಿಸುವದು, ಇವು 'ಹೊಸ ಪಕ್ಷವು' ತನ್ನ ಮುಂದೆ ಇಟ್ಟುಕೊಂಡ ಕಾರ್ಯಕ್ರಮದ ಮುಖ್ಯ ಅಂಗಗಳಾಗಿದ್ದವು. ಕಾಂಗ್ರೆಸ್ಸನ್ನು ವಶಪಡಿಸಿಕೊಂಡು ಅದನ್ನು ಒಂದು ಒಳ ಸರಕಾರದ ಸೂತ್ರಚಾಲಕನನ್ನಾಗಿ ಮಾಡುವದು ಅದರ ಆಕಾಂಕ್ಷೆಯಾಗಿದ್ದಿತು. 'ವಂದೇ ಮಾತರಂ' ಎಂಬ ದಿನ ಪತ್ರಿಕೆಯು ಅದರ ಮುಖಪತ್ರವಾಗಿತ್ತು. ಶ್ರೀ ಅರವಿಂದರೇ ಆ ಪತ್ರಿಕೆಯ ಹಿಂದಿನ ಪ್ರೇರಕ ಶಕ್ತಿಯಾಗಿದ್ದರು. ಅದು ತುಸು ಹೆಚ್ಚು ಕಡಿಮೆ ಒಂದು ವರುಷದ ಮಟ್ಟಿಗೆ ಮಾತ್ರ ನಡೆಯಿತು. ಆದರೆ ಆ ಅಲ್ಪಾವಧಿಯಲ್ಲಿಯೇ ಅದರಲ್ಲಿ ಪ್ರಕಟವಾಗಿ ದೇಶದ ತುಂಬೆಲ್ಲ ಹರಡಿದ ವಿಚಾರಗಳು, ತತ್ತ್ವಪ್ರಣಾಲಿಯು ಭಾರತದ ರಾಜಕೀಯದ ಸ್ವರೂಪವನ್ನೇ ಬದಲಾಯಿಸಿ ಅದರ ಮೇಲೆ ತಮ್ಮ ಚಿರಮುದ್ರೆಯನ್ನೊತ್ತಿದ್ದವು. ಆದರೆ ಅವನ್ನು ಕಾರ್ಯರೂಪಕ್ಕೆ ತರುವಷ್ಟು ಭಾರತವು ಪಕ್ವವಾಗಿರಲಿಲ್ಲ.

ಇವೆಲ್ಲದರ ಪರಿಣಾಮವಾಗಿ ಶ್ರೀ ಅರವಿಂದರೆ ೧೯೦೭ ರಲ್ಲಿ ಪ್ರಜೆಯ ಕ್ಷೋಭೆಗೊಳಿಸಲು ಪ್ರಯತ್ನಿಸಿದರೆಂಬ ಆಪಾದನೆಗೆ ಗುರಿಯಾದರು. ಆದರೆ ನಿರ್ದೋಷಿಗಳೆಂದು ಬಿಡಲ್ಪಟ್ಟರು. ಆದೇ ವರುಷ ಸುರತದಲ್ಲಾದ 'ರಾಷ್ಟ್ರೀಯ ಪರಿಷತ್ತಿ'ನ ಅಧ್ಯಕ್ಷ ಸ್ಥಾನವನ್ನು ವಹಿಸಿದರು.

ಇದೇ ಸುಮಾರಿಗೆ ಬಡೋದೆಯಲ್ಲಿ ಶ್ರೀ ಅರವಿಂದರು ಮಹಾರಾಷ್ಟ್ರದ ಖ್ಯಾತಿವೆತ್ತ ಯೋಗಿವರ್ಯರಾದ ಲೇಲೆ ಮಹಾರಾಜರ ಸಂದರ್ಶನವಾಯಿತು. ಅವರಿಂದಲೆ ಶ್ರೀ ಅರವಿಂದರು ಯೋಗದ ಪ್ರಥಮ ಪಾಠಗಳನ್ನು ಕಲಿತರು. ಕೇವಲ ಮೂರೇ ದಿನಗಳಲ್ಲಿ ಆಧ್ಯಾತ್ಮಿಕ ಅವಸ್ಥೆಗಳಲ್ಲಿ ಅತ್ಯಂತ ಮಹತ್ವದ್ದೆಂದು ಪರಿಗಣಿಸಲ್ಪಟ್ಟ ಮನಸ್ಸಿನ ಮೌನ ಅಥವಾ ಮಾನಸಿಕ ಶೂನ್ಯತೆಯನ್ನು (Silence of the mind) ಸಾಧಿಸಿದರು.

ಅಲಿಪೂರ ಒಳಸಂಚಿನಲ್ಲಿ ಅವರ ಅಂಗವಿದೆಯೆಂಬ ಸಂಶಯದ ಮೇಲೆ ಮೇ ೧೯೦೮ ರಲ್ಲಿ ಅವರು ಬಂಧಿಸಲ್ಪಟ್ಟರು. ಅಲಿಪೂರ ಜೇಲಿನಲ್ಲಿ ಒಂದು ವರುಷದ ವರೆಗೆ ವಿಚಾರಣೆಯಾಗಲಿರುವ ಕೈದಿ (under trial prisoner) ಎಂದು ಕೊಳೆಯ ಬೇಕಾಯಿತು. ಕೊನೆಗೆ ನಿರ್ದೋಷಿಯೆಂದು ಬಿಡುಗಡೆಹೊಂದಿದರು.

ಮೇ ೧೯೦೯ ರಲ್ಲಿ ಅವರು ಬಂಧಮುಕ್ತರಾದಾಗ ಅವರ ರಾಜಕೀಯ ಪಕ್ಷವು (New Party)ಸಂಪೂರ್ಣವಾಗಿ ಒಡೆದು ನಾಮಶೇಷವಾಗಿತ್ತು. ಅವರು ಏಕಾಕಿಯಾಗಿ ಆಂದೋಲನವನ್ನು ಮುಂದುವರಿಸಿದರು. ಅದಕ್ಕಾಗಿ, 'ಕರ್ಮಯೋಗಿನ್';ಎಂಬ ಇಂಗ್ರೇಜಿ ಸಾಪ್ತಾಹಿಕವನ್ನೂ 'ಧರ್ಮ' ಎಂಬ ಬಂಗಾಲಿ ಸ್ತಾಪಾಹಿಕವನ್ನೂ ಪ್ರಾರಂಭಿಸಿದರು. ಆದರೆ ತಮ್ಮ ಧೋರಣೆಯನ್ನು ಅನು

ಸರಿಸಲು, ಗಾಂಧೀಜಿಯವರು ದಕ್ಷಿಣ ಆಫ್ರಿಕೆಯಲ್ಲಿ ನಡೆಯಿಸಿದಂಥ ಸತ್ಯಾಗ್ರಹವನ್ನು ಹೂಡಲು ಜನತೆಯು ಸನ್ನದ್ಧವಾಗಿಲ್ಲವೆಂಬುದು ಮನವರಿಕೆಯಾದುದರಿಂದ ಮತ್ತು ಅಲಿಪೂರ ಜೇಲಿನಲ್ಲಿ ಇದ್ದಾಗ ಅವರ ಮನಸ್ಸು ಯೋಗಸಾಧನೆಯಲ್ಲಿ ಸಂಪೂರ್ಣವಾಗಿ ನೆಟ್ಟುದರಿಂದ ಅವರು ೧೯೧೦ರ ಆರಂಭದಲ್ಲಿ ರಾಜಕೀಯ ಸನ್ಯಾಸವನ್ನು ಸ್ವೀಕರಿಸಿದರು.

೧೯೧೦ ರಿಂದ ೫-೧೨-೧೯೫೦ಕ್ಕೆ ಅವರು ಮಹಾಸಮಾಧಿಯನ್ನು ಹೊಂದುವವರೆಗಿನ ಕಾಲವು. ಅವರ ಅವ್ಯಾಹತಯೋಗಸಾಧನೆಯ ಮತ್ತು ಸಿದ್ಧಿಯ ಕಾಲವು. ಈ ಅವಧಿಯಲ್ಲಿ ಅವರು ಪಡೆದ ಅನುಭಾವ, ದಿವ್ಯ ದರ್ಶನ ಇವುಗಳ ಯಥಾರ್ಥವಾದ ಕಲ್ಪನೆಯನ್ನು ಮಾನವ ಕುಲಕ್ಕೆ ಮಾಡಿಕೊಡುವ 'The Light Divine' ಎಂಬ, ಮೇರುಕೃತಿಯನ್ನೂ, Essays on the Gita, Synthesis of Yoga, The Human Cycle, The Ideal of Human Unity ಎಂಬ ಉದ್ಗ್ರಂಥಗಳನ್ನೂ, ಹಲವಾರು ಕಾವ್ಯಗಳನ್ನೂ, ಗೀತಗಳನ್ನೂ ಬರಹಗಳನ್ನೂ ಪ್ರಕಟಿಸಿದರು.

ಅವರು ಮೊದಲು ಸಾಧನೆಯಲ್ಲಿ ತೊಡಗಿದಾಗ ಅವರಿಗೆ ನಾಲ್ಕೈದು ಜನ ಶಿಷ್ಯರಿದ್ದರು. ಬರಬರುತ್ತ ಸಾಧಕರ ಸಂಖ್ಯೆಯು ಬೆಳೆಯುತ್ತ ಹೋಗಿ ಪಾಂಡಿಚೆರಿಯಲ್ಲಿಯ ಅವರ ಸಾಧನಕೇಂದ್ರವು "ಶ್ರೀ ಅರವಿಂದ ಆಶ್ರಮ"ವಾಗಿ ಪರಿಣಮಿಸಿತು. ಪೂಜ್ಯ 'ಮಾತಾಜಿ'ಯವರ ನೇತೃತ್ವದಲ್ಲಿ ಶ್ರೀ ಅರವಿಂದರ ಕಾರ್ಯವು ಮುಂದುವರೆದಿದೆ. ಪ್ರಪಂಚದಲ್ಲೆಲ್ಲ ಹರಡಿದ ಲಕ್ಷಾಂತರ ಜನ ಅನುಯಾಯಿಗಳು ಅವರು ತೋರಿದ ದಾರಿಯಲ್ಲಿ ಬೆಳಕು ಕಂಡು ತಮ್ಮ ಜೀವನವನ್ನು ಪಾವನಗೊಳಿಸುತ್ತಲಿದ್ದಾರೆ.

(ಮುಂದುವರಿಯುವದು)

ನಿಮಗೆ ದೊರೆತಿವೆಯೆ ?

೧೯೫೨ರ ಸುಧಾರಿಸಿದ ಆವೃತ್ತಿಗಳು

★ ನೂತನ ಗಣಿತ ★

● ೧ನೆಯ ವರ್ಗಕ್ಕಾಗಿ	೦—೬—೦	(ಭೂಮಿತಿ, ಜವಾಖರ್ಚು ಆಲೇಖ ಸಹ)	
● ೨ನೆಯ ,,	೦—೮—೦	● ೫ನೆಯ ವರ್ಗಕ್ಕಾಗಿ	೦-೧೩—೦
● ೩ನೆಯ ,,	೦-೧೦—೦	● ೬ನೆಯ ,,	೧—೦—೦
● ೪ನೆಯ ,,	೦-೧೨—೦	● ೭ನೆಯ ,,	೧-೧೨—೦

ಸುಧಾರಿಸಿದ ಕೃತಿಗಳನ್ನು ತಮಗೆ ನೀಡಲು ಸಂತೋಷವೆನಿಸುತ್ತದೆ. ವ್ಯಾ. ಶಾ. ಪ್ರ. ಸ. ಪರೀಕ್ಷೆಗೆ ಬೀಜಗಣಿತ ವಿಷಯ ಇದ್ದುದು ಗೊತ್ತಿದೆಯೆ ? ೬ನೆಯ ಗಣಿತ ಎಲ್ಲ ವಿಭಾಗಗಳನ್ನು ಒಳಗೊಂಡು ಹೊರಡಿಸಲಾಗಿದೆ. ಪಂಗ್ರಹದಿಂದ ಈಗಲೇ ಪಡೆಯಿರಿ.

ಆಳಲವಾಡಿ ಬುಕ್‌ಡಿಪೋ, ಧಾರವಾಡ.

ಪುಸ್ತಕ ವಿಮರ್ಶೆ

ಪುಸ್ತಕದ ಹೆಸರು:– ಶಾಲೆಯ ಶಿಶು ಸಂಗೀತೆ (ಭಾಗ ೧, ೨, ೩,)

ಲೇಖಕರು:– ಶ್ರೀ ಕೆ. ಜಿ. ಘುಲಂಬ್ರೇಕರ, ತಿಲಕವಾಡಿ ಸದಾಶಿವ ಪೇಠ, ಪುಣೆ ೨.

ಬೆಲೆ:– ಪ್ರತಿಯೊಂದು ಭಾಗಕ್ಕೆ ೮ ಆಣೆಗಳು ಮಾತ್ರ.

ಈ ಪುಸ್ತಕಗಳು ಸಂಗೀತ ವಿಷಯದ ಬಗೆಗೆ ಇದ್ದು ಪೂರ್ಣ ಪ್ರಾಥಮಿಕ ಶಾಲೆಗಳ ೫,೬,೭ನೆಯ ಇಯತ್ತೆಗಳಿಗೂ ಮತ್ತು ಮಾಧ್ಯಮಿಕ ಶಾಲೆಗಳಿಗೂ ಉಪಯುಕ್ತ ಇವೆ. ಈ ಪುಸ್ತಕಗಳಲ್ಲಿ ಸಾಮಾನ್ಯ ಪದ್ಯಗಳಲ್ಲದೆ ಪ್ರಾರ್ಥನಾ ಗೀತಗಳು, ಸ್ವಾಗತಪರ ಪದ್ಯಗಳು, ಕೂಚು ಗೀತೆಗಳು, ಜಾನಪದ ಹಾಡುಗಳು, ಆಭಂಗಗಳು ಇವೇ ಮೊದಲಾದ ವಿಶಿಷ್ಟತಮ ಪದ್ಯಗಳಿರುವವು. ಇದು ಈ ಪುಸ್ತಕಗಳ ವೈಶಿಷ್ಟ್ಯ. ಈ ಎಲ್ಲ ತರಹದ ಕವನಗಳಿಗೆ ಮನವನ್ನಾಕರ್ಷಿಸಬಲ್ಲ ಧಾಟಿಯೂ ಇದೆ.

———

ಪುಸ್ತಕದ ಹೆಸರು:– ಕನಸಿನ ರಾಣಿ, ಪುಟಗಳು ೪೮
ಲೇಖಕರು:– ಕನಿರುದ್ರ, ಬೆಲೆ:– ೧–೦–೦
ಪ್ರಕಾಶಕರು', ಪ್ರೋ. ಎಂ. ಎಸ್. ಸುಂಕಾಪುರ, ಬಾಗಿಲುಕೋಟೆ.

ಕನ್ನಡ ಸಾಹಿತ್ಯದ ಮೇಲೆ ಅಪಾರವಾದ ಮಮತೆಯಿಂದ ಅಭ್ಯಾಸ ಮಾಡುತ್ತ ಬಂದ ಕವಿರುದ್ರರ ಸತತಾಭ್ಯಾಸದ ಫಲವಾಗಿ 'ಕನಸಿನ ರಾಣಿ'ಯು ಮೈದಾಳಿದ್ದಾಳೆ. ೩೦ ಕವನಗಳಿಂದ ಕೂಡಿದ ಈ ಚಿಕ್ಕ ಹೊತ್ತಿಗೆಯ ರೂಪದಲ್ಲಿ ಕನಸಿನ ರಾಣಿಯು ೩೦ ಸುರಭಿಕುಸುಮಗಳಿಂದ ಶೃಂಗಾರಿತಳಾಗಿ ನೆನಸಿನ ರಾಣಿಯೋಪಾದಿಯಲ್ಲಿ ವಾಚಕರ ಮನವನ್ನು ತಣಿಸಲೆತ್ನಿಸಿದರೆ ಅದೇನೂ ಅಚ್ಚರಿಯಲ್ಲೆಂಬುದು ಕವನಗಳನ್ನು ಹಾಡುವದರಿಂದ ಹೊಳೆಯದಿರದು. ಹೃದಯದ ಪಟಲಕ್ಕೆ ಮುಟ್ಟಿ ಕವಿತ್ವದ ಸ್ಪರ್ಶಗಳನ್ನು ಮುಟ್ಟಿದಾಕ್ಷಣ ಭಾವಗೀತೆಗಳಾಗಿ ರೂಪುಗೊಂಡ ಅನುಭವಗಳು ಇಲ್ಲಿ ಕಾಣಿಸಿಕೊಂಡಿವೆ.

ನಾದದ ಲಹರಿ ಮೃದುತ್ವವು ಇಲ್ಲಿ ಅಂತೂ ಕವನಗಳಿಗೆ ಹಿನ್ನೆಲೆಯಾಗಿ ನಿಂತಿದೆ. ಇಂತಹ ಮೃದುತ್ವದ ಕಡಲಲ್ಲಿ ತೇಲಾಡಿ, ಲೋಲಾಡುವದರಲ್ಲಿ ಸಂದೇಹವಿಲ್ಲ ವಾಚಕರಿಗೆ.

———

ಪುಸ್ತಕದ ಹೆಸರು:– "ಭಾರತದಲ್ಲಿ ಪ್ರಜಾಪ್ರಭುತ್ವ"
ಬೆಲೆ:– ೦–೪–೦
ಲೇಖಕರು:– ಶ್ರೀ ನೆಗಳೂರ ರಂಗನಾಥ ಎಮ್.ಎ.
ಪುಟಗಳು:– ೩೪
ಸಂಪಾದಕರು:– ಶ್ರೀ ಶಿವಾನಂದ

ಈ ಚಿಕ್ಕ ಹೊತ್ತಿಗೆಯಲ್ಲಿ ಲೇಖಕರು ಪ್ರಜಾಪ್ರಭುತ್ವದ ಅರ್ಥ ಮೊದಲು ಮಾಡಿಕೊಂಡು ಭಾರತದಲ್ಲಿ ಅದರ ಯಶವು ಮೊಳಗುವ ಪರಿಯೆಂತೆಂಬುದನ್ನು ಜೆನ್ನಾಗಿ ವಿಶದೀಕರಿಸಿದ್ದಾರೆ. ಪ್ರಜೆಯಂದರೆ ಯಾರು? ಪ್ರಭುತ್ವವೆಂದರೇನು? ನಾಗರಿಕತ್ವ ಎಂದರೇನು? ನಾಗರಿಕ-ನಾಗರಿಕನಲ್ಲದವ ಇವರೀರ್ವರಲ್ಲಿ ಇರುವ ಅಂತರವೇನು? ನಾಗರಿಕನ ಹಕ್ಕುಗಳು ಯಾವವು? ಇವೇ ಮೊದಲಾದ ವಿಷಯಾಂಗಗಳನ್ನು ವಿಶದೀಕರಿಸಿ ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದರೆ ಸಾರ್ವತ್ರಿಕ ಶಿಕ್ಷಣವು ಅವಶ್ಯ ಬೇಕು ಎಂಬ ಮಾತನ್ನು ತಿಳಿಸಿ ಹೇಳಿದ್ದಾರೆ. ಕೇವಲ ೩೪ ಪುಟಗಳಲ್ಲಿ, ಅಲ್ಪ ಬೆಲೆಯಲ್ಲಿ, ಸುಲಭ ರೀತಿಯಲ್ಲಿ ಭಾರತದಲ್ಲಿ ಪ್ರಜಾಪ್ರಭುತ್ವ, ಈ ವಿಷಯವನ್ನು ತಿಳಿಸಲೆಳಸಿದ ಈ ಚಿಕ್ಕಗ್ರಂಥವು ಸ್ವಾಗತಾರ್ಹವಿದೆಯೆಂದು ಹೇಳಬಯಸುವೆವು.

———

ಪುಸ್ತಕದ ಹೆಸರು:— ಭಾರತೀಯ ಮಹಾಪುರುಷರ ಕಥೆಗಳು, ಪುಟಗಳು:– ೯೦ ಬೆಲೆ:– ೦–೮–೦
ಕತೆಗಾರರು:–ಶ್ರೀ ರಾಘವೇಂದ್ರ ಕುಲಕರ್ಣಿ .
ಪ್ರಕಾಶಕರು:–ಶ್ರೀ ಬಿ.ಎಂ. ಪಟ್ಟಣಶೆಟ್ಟಿ, ಗಾಂಧಿರೋಡ, ವಿಜಾಪುರ.

ಗೌತಮ ಬುದ್ಧನಿಂದ ಮೊದಲು ಮಾಡಿಕೊಂಡು

ಮಹರ್ಷಿ ಶ್ರೀ ಅರವಿಂದರು

ಲೇಖಕರು:— ಶ್ರೀ. ಎಸ್. ವಾಯ್. ಶೀಲವಂತ, ಬಿ. ಎ., ಬಿ. ಟಿ., ಡಿ. ಪಿ. ಇಡಿ., ಡಿ. ಬಿ. ಇ.

ಯುಗಯುಗಗಳಿಂದಲೂ ನಡೆದು ಬಂದ ಭಾರತದ ಉಜ್ವಲವಾದ ಸಂಸ್ಕೃತಿಯನ್ನೇ ಎರಕ ಹೊಯ್ದು ರೂಪು ಗೊಳಿಸಿದಂತಿದ್ದ, ಆಧುನಿಕ ಭಾರತದ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ವ್ಯಾಧಿಗಳಿಗೆ ದಿವ್ಯೌಷಧಿಯನ್ನಿತ್ತ ಧನ್ವಂತರಿಯಂತಿದ್ದ, ಸುಮಾರು ನಲವತ್ತು ವರುಷಗಳ ಪರ್ಯಂತ ಘೋರ ತಪವನ್ನಾಚರಿಸಿ ಪಡೆದ ಪ್ರಖರವಾದ ಆಧ್ಯಾತ್ಮಿಕ ಬಲದಿಂದ ಸರ್ವಮಾನ್ಯವಾದ 'ಮಹರ್ಷಿ' ಎಂಬ ಬಿರುದಿಗೆ ಅರ್ಹವಾದ, ಇಹವನ್ನು ತೊಳೆಯದೆ, ತ್ಯಜಿಸದೆ, ಅದರ ಆಧಾರದಿಂದಲೇ ಪರವನ್ನು ಸಾಧಿಸಿ, ಅನೆರಡನ್ನೂ ತನ್ನ ಜೀವಮಾನದಲ್ಲಿಯೇ ಸಂಯೋಜಿಸಿ ನರನು ಸ್ವಯಂ-ನಾರಾಯಣನಾಗಬಹುದಲ್ಲದೆ ಪರರನ್ನೂ ದೈವತ್ವಕ್ಕೇರಿಸುವ ಅದ್ಭುತವಾದ ಸಾಮರ್ಥ್ಯವನ್ನು ಪಡೆಯಬಲ್ಲ ಎಂಬ ಸ್ಫೂರ್ತಿದಾಯಕವಾದ ಸಂದೇಶವನ್ನು ಮಾನವ ಕೋಟಿಗೆ ಬಿತ್ತರಿಸಿದ ಮಹಾಯೋಗಿ ಶ್ರೀ ಅರವಿಂದರ ಜೀವನವನ್ನೂ, ಜೀವನ ಮಹತಿಯನ್ನೂ ಸಾಧ್ಯವಿದ್ದಮಟ್ಟಿಗೆ ತಿಳಿದುಕೊಂಡು ತನ್ಮೂಲಕ ತನ್ನ ಜೀವನವನ್ನು ಉನ್ನತವಾದ ಮಟ್ಟಕ್ಕೆ ಒಯ್ಯಲು ಪ್ರತಿಯೊಬ್ಬ ಮಾನವನು ಪ್ರಯತ್ನಿಸುವದು ಉಚಿತವು. ಭಾರತೀಯರದಂತೂ ಅದ್ಯತ್ಯಂತ ಪವಿತ್ರವಾದ, ಶ್ರೇಷ್ಠವಾದ ಕರ್ತವ್ಯವಾಗಿದೆಯೆಂದರೆ ತಪ್ಪಾಗಲಿಕ್ಕಿಲ್ಲ.

ಶ್ರೀ. ಅರವಿಂದರು ೧೮೭೨ ನೆಯ ಇಸ್ವಿಯ ಆಗಷ್ಟ ೧೫ ನೆಯ ತಾರೀಖಿಗೆ ಕಲಕತ್ತೆಯಲ್ಲಿ ಜನ್ಮ ತಾಳಿದರು. ೧೮೭೯ ರಲ್ಲಿ ಅಂದರೆ ಕೇವಲ ೭ ವರುಷದವರಿದ್ದಾಗಲೇ, ತಮ್ಮ ಇಬ್ಬರು ಅಣ್ಣಂದಿರೊಡನೆ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿಗೆ ಹೋಗಿ ಅಲ್ಲಿ ೧೪ ವರುಷಗಳವರೆಗೆ ವಾಸವಾಗಿದ್ದರು. ೧೮೮೪ ರಲ್ಲಿ ಲಂಡನ್ನಿನಲ್ಲಿಯ ಸೆಂಟ್ ಪಾಲ್ಸ ಸ್ಕೂಲಿನಲ್ಲಿ ಕಲಿಯತೊಡಗಿದರು. ೧೮೯೦ ರಲ್ಲಿ ಕೇಂಬ್ರಿಜದಲ್ಲಿಯ ಕಿಂಗ್ಸ ಕಾಲೇಜನ್ನು ಪ್ರವೇಶಿಸಿದರು. ಅದೇ ವರುಷ ಅವರು ಐಯ್. ಸಿ. ಎಸ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಆದರೆ ೨ ವರುಷಗಳ ಉಮೇದವಾರಿಕೆಯ (Probation) ನಂತರ ಕೊಡಬೇಕಾಗಿದ್ದ ಅಶ್ವಾರೋಹಣ ಪರೀಕ್ಷೆಗೆ ಕೂಡ್ರದೆ ಇದ್ದುದರಿಂದ ಅವರಿಗೆ ಐಯ್. ಸಿ. ಎಸ್. ಪದವಿಯು ಸಿಕ್ಕಲಿಲ್ಲ.

ಇದೇ ಕಾಲಕ್ಕೆ ಬಡೋದೆಯ ಆಗಿನ ಮಹಾರಾಜರು ಲಂಡನ್ನಿನಲ್ಲಿ ಇದ್ದರು. ಅವರಿಗೂ ಶ್ರೀ ಅರವಿಂದರಿಗೂ ಪರಿಚಯವಾಯಿತು. ತತ್ಪರಿಣಾಮವಾಗಿ ಶ್ರೀ ಅರವಿಂದರೂ ೧೮೯೩ ರ ಫೆಬ್ರುವರಿ ತಿಂಗಳಲ್ಲಿ ಇಂಗ್ಲೆಂಡದಿಂದ ಮರಳಿ ಬಂದು ಬಡೋದೆಯಲ್ಲಿ ನೌಕರಿ ಹಿಡಿದರು. ಅವರು ಮೊದಲು ಕಂದಾಯ ಖಾತೆಯಲ್ಲಿಯೂ, ಆಮೇಲೆ ಕ್ರಮವಾಗಿ ಮಹಾರಾಜರ ಆಪ್ತ ಕಾರ್ಯದರ್ಶಿಗಳಾಗಿಯೂ ಇಂಗ್ಲಿಷಿನ ಪ್ರಾಧ್ಯಾಪಕರಾಗಿಯೂ ಕೊನೆಗೆ ಬಡೋದಾ ಕಾಲೇಜಿನ ವ್ಹಾಯಿಸ ಪ್ರಿನ್ಸಿಪಾಲರಾಗಿಯೂ ಕಾರ್ಯ ಮಾಡಿದರು. ಈ ತೆರನಾಗಿ ಅವರು ಕಳೆದ ೧೩ ವರುಷಗಳ ಕಾಲವು ಅವರ ಆತ್ಮ ಸಂಸ್ಕಾರದ, ಸಾಹಿತ್ಯಿಕ ವಿವಿಧ ಚಟುವಟಿಕೆಗಳ ಮತ್ತು ತಮ್ಮ ಮುಂದಿನ ಜೀವನದ ಭವ್ಯವಾದ ತಳಹದಿಯನ್ನು ಹಾಕಿದ ಕಾಲವು. ವಿಲಾಯತಿಯಲ್ಲಿದ್ದಾಗ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಸಂಪೂರ್ಣವಾಗಿ ಅದ್ದಿ ತೆಗೆದಂತಿದ್ದ ಅವರು ಆ ಅವಧಿಯಲ್ಲಿ ಸಂಸ್ಕೃತ ಮತ್ತು ಕೆಲವು ಪ್ರಚಲಿತ ಭಾಷೆಗಳ ಅಭ್ಯಾಸ ಮಾಡಿ ಭಾರತೀಯ ಸಂಸ್ಕೃತಿ ಮತ್ತು ನಾಗರಿಕತೆಗಳ ತಿರುಳನ್ನು ಸಂಪೂರ್ಣವಾಗಿ ಅಳವಡಿಸಿ ಅರಗಿಸಿಕೊಂಡರು. (ಅನೇಕ ಭಾಷೆಗಳ ಮೇಲೆ ಪ್ರಭುತ್ವವನ್ನು ಸಂಪಾದಿಸುವದರಲ್ಲಿಯಂತೂ ಅವರು ಸವ್ಯಸಾಚಿಯಾಗಿದ್ದರೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.) ಆದೇ ಕಾಲಕ್ಕೆ ಅವರು ಮೌನವಾಗಿ ತೆರೆಯ ಮರೆಯಲ್ಲಿಯೇ ರಾಜಕಾರಣದಲ್ಲಿ ಕೂಡ

ಗಿದ್ದರು. ಆದರೆ ೧೯೦೫ ರಲ್ಲಿ ಪ್ರಾರಂಭವಾದ ವಂಗಭಂಗ ಚಳವಳಿಯು ಅವರನ್ನು ಬಹಿರಂಗವಾಗಿ ರಾಜಕೀಯ ರಂಗದಲ್ಲಿ ಕಾಲಿಡಲು ಹಚ್ಚಿತು. ೧೯೦೬ ರಲ್ಲಿ ಬಡೋದೆಯ ಸಂಸ್ಥಾನದಲ್ಲಿಯ ನೌಕರಿಯನ್ನು ಬಿಟ್ಟು ಕಲಕತ್ತೆಯಲ್ಲಿ ಅದೇ ಸ್ಥಾಪಿತವಾದ ಬಂಗಾಲ ನ್ಯಾಶನಲ್ ಕಾಲೇಜಿನ ಪ್ರಿನ್ಸಿಪಾಲರಾದರು.

ಶ್ರೀ ಅರವಿಂದರು ಕೇವಲ ಎಂಟು ವರುಷಗಳ ವರೆಗೆ ಅಂದರೆ ೧೯೦೨ ರಿಂದ ೧೯೧೦ ರ ವರೆಗೆ ರಾಜಕಾರಣದಲ್ಲಿ ತೊಡಗಿದ್ದರೂ ಅವರು ವಹಿಸಿದ ಪಾತ್ರವು ಮಹತ್ತರವಾಗಿದ್ದಿತು. ಅವರು ಕಾಂಗ್ರೆಸಿನಲ್ಲಿ ಹೊಸದಾಗಿ ತಲೆಯೆತ್ತಿದ, ಮತ್ತು ಪುರೋಗಾಮಿಯಾದ, ಆದರೆ ವಿರೋಧಿಗಳಿಂದ ಜಹಾಲ ಮತವಾದಿ ಎಂದು ಕರೆಯಲ್ಪಡುತ್ತಿದ್ದ 'ಹೊಸ ಪಕ್ಷ' (New Party)ವನ್ನು ಸೇರಿದರು. ಆಯರ್ಲಂಡದಲ್ಲಿ ಯಶಸ್ವಿಯಾದ ಸಿನ್ ಫೆನ್ ಮಾದರಿಯ ಆಂದೋಲನವನ್ನು ನಡೆಯಿಸಿ ಸ್ವರಾಜ್ಯವನ್ನು ಸಂಪಾದಿಸುವದು ಈ ಪಕ್ಷದ ಮುಖ್ಯ ಗುರಿಯಾಯಿತು. ಅದಕ್ಕಾಗಿ ಕಾಂಗ್ರೆಸ್ಸನ್ನು ವಶಪಡಿಸಿಕೊಂಡು ಜನತೆಯನ್ನು ತನ್ನೆಡೆಗೆ ಒಲಿಸಿಕೊಳ್ಳುವದು, ರಾಷ್ಟ್ರದ ಎಲ್ಲ ಶಕ್ತಿಗಳನ್ನು ಸಂಘಟಿಸುವದು, ದೇಶೀಯ ಉದ್ಯಮಗಳಿಗೆ ಉತ್ತೇಜನ ಕೊಡುವದು, ಕಾಯದೆ ಕೋರ್ಟುಗಳನ್ನು ಬಹಿಷ್ಕರಿಸುವದು, ಅವುಗಳ ಬದಲಾಗಿ ಪಂಚಾಯತಿ ಕಚೇರಿಗಳನ್ನು ಸುರುವು ಮಾಡುವದು, ಸರಕಾರೀ ಶಾಲೆ ಕಾಲೇಜುಗಳ ಮೇಲೆ ಬಹಿಷ್ಕಾರ ಹಾಕಿ ರಾಷ್ಟ್ರೀಯ ಭಾವನೆಯನ್ನು ಉದ್ದೀಪನಗೊಳಿಸುವ ಶಾಲೆ ಕಾಲೇಜುಗಳನ್ನು ಸ್ಥಾಪಿಸುವದು, ರಾಷ್ಟ್ರವನ್ನು ಸಂರಕ್ಷಿಸಲು ಸಮಾಜದಲ್ಲಿ ಶಾಂತಿಯನ್ನು ಕಾಯಲು ತರುಣರ ಪಡೆಗಳನ್ನು ಸಜ್ಜುಗೊಳಿಸುವದು, ಸಾಧ್ಯವಿದ್ದಮಟ್ಟಿಗೆ ಸಾತ್ವಿಕ ಪ್ರತಿಭಟನೆಯ ಧೋರಣೆಯನ್ನು ಅನುಸರಿಸುವದು, ಇವು 'ಹೊಸ ಪಕ್ಷವು' ತನ್ನ ಮುಂದೆ ಇಟ್ಟುಕೊಂಡ ಕಾರ್ಯಕ್ರಮದ ಮುಖ್ಯ ಅಂಗಗಳಾಗಿದ್ದವು. ಕಾಂಗ್ರೆಸ್ಸನ್ನು ವಶಪಡಿಸಿಕೊಂಡು ಅದನ್ನು ಒಂದು ಒಳ ಸರಕಾರದ ಸೂತ್ರಚಾಲಕನನ್ನಾಗಿ ಮಾಡುವದು ಅದರ ಆಕಾಂಕ್ಷೆಯಾಗಿದ್ದಿತು. 'ವಂದೇ ಮಾತರಂ' ಎಂಬ ದಿನ ಪತ್ರಿಕೆಯು ಅದರ ಮುಖಪತ್ರವಾಗಿತ್ತು. ಶ್ರೀ ಅರವಿಂದರೇ ಆ ಪತ್ರಿಕೆಯ ಹಿಂದಿನ ಪ್ರೇರಕ ಶಕ್ತಿಯಾಗಿದ್ದರು. ಅದು ತುಸು ಹೆಚ್ಚು ಕಡಿಮೆ ಒಂದು ವರುಷದ ಮಟ್ಟಿಗೆ ಮಾತ್ರ ನಡೆಯಿತು. ಆದರೆ ಈ ಅಲ್ಪಾವಧಿಯಲ್ಲಿಯೇ ಅದರಲ್ಲಿ ಪ್ರಕಟವಾಗಿ ದೇಶದ ತುಂಬೆಲ್ಲ ಹರಡಿದ ವಿಚಾರಗಳು, ತತ್ತ್ವಪ್ರಣಾಲಿಯು ಭಾರತದ ರಾಜಕೀಯದ ಸ್ವರೂಪವನ್ನೇ ಬದಲಾಯಿಸಿ ಅದರ ಮೇಲೆ ತಮ್ಮ ಚಿರಮುದ್ರೆಯನ್ನೊತ್ತಿದ್ದವು. ಆದರೆ ಅವನ್ನು ಕಾರ್ಯರೂಪಕ್ಕೆ ತರುವಷ್ಟು ಭಾರತವು ಪಕ್ವವಾಗಿರಲಿಲ್ಲ.

ಇವೆಲ್ಲದರ ಪರಿಣಾಮವಾಗಿ ಶ್ರೀ ಅರವಿಂದರೇ ೧೯೦೭ ರಲ್ಲಿ ಸ್ವಜೆಯ ಕ್ಷೋಭೆಗೊಳಿಸಲು ಪ್ರಯತ್ನಿಸಿದರೆಂಬ ಆಪಾದನೆಗೆ ಗುರಿಯಾದರು. ಆದರೆ ನಿರ್ದೋಷಿಗಳೆಂದು ಬಿಡಲ್ಪಟ್ಟರು. ಅದೇ ವರುಷ ಸುರತದಲ್ಲಾದ 'ರಾಷ್ಟ್ರೀಯ ಪರಿಷತ್ತಿ'ನ ಅಧ್ಯಕ್ಷ ಸ್ಥಾನವನ್ನು ವಹಿಸಿದರು.

ಇದೇ ಸುಮಾರಿಗೆ ಬಡೋದೆಯಲ್ಲಿ ಶ್ರೀ ಅರವಿಂದರಿಗೆ ಮಹಾರಾಷ್ಟ್ರದ ಖ್ಯಾತಿವೆತ್ತ ಯೋಗಿವರ್ಯರಾದ ಲೇಲೆ ಮಹಾರಾಜರ ಸಂದರ್ಶನವಾಯಿತು. ಅವರಿಂದಲೇ ಶ್ರೀ ಅರವಿಂದರು ಯೋಗದ ಪ್ರಥಮ ಪಾಠಗಳನ್ನು ಕಲಿತರು. ಕೇವಲ ಮೂರೇ ದಿನಗಳಲ್ಲಿ ಆಧ್ಯಾತ್ಮಿಕ ಅವಸ್ಥೆಗಳಲ್ಲಿ ಅತ್ಯಂತ ಮಹತ್ವದ್ದೆಂದು ಪರಿಗಣಿಸಲ್ಪಟ್ಟ ಮನಸ್ಸಿನ ಮೌನ ಅಥವಾ ಮಾನಸಿಕ ಶೂನ್ಯತೆಯನ್ನು (Silence of the mind) ಸಾಧಿಸಿದರು.

ಅಲಿಪೂರ ಒಳಸಂಚಿನಲ್ಲಿ ಅವರ ಅಂಗವಿದೆಯೆಂಬ ಸಂಶಯದ ಮೇಲೆ ಮೇ ೧೯೦೮ ರಲ್ಲಿ ಅವರು ಬಂಧಿಸಲ್ಪಟ್ಟರು. ಅಲಿಪೂರ ಜೇಲಿನಲ್ಲಿ ಒಂದು ವರುಷದ ವರೆಗೆ ವಿಚಾರಣೆಯಾಗಲಿರುವ ಕೈದಿ (under trial prisoner) ಎಂದು ಕೊಳೆಯ ಬೇಕಾಯಿತು. ಕೊನೆಗೆ ನಿರ್ದೋಷಿಯೆಂದು ಬಿಡುಗಡೆಹೊಂದಿದರು.

ಮೇ ೧೯೦೯ ರಲ್ಲಿ ಅವರು ಬಂಧಮುಕ್ತರಾದಾಗ ಅವರ ರಾಜಕೀಯ ಪಕ್ಷವು (New Party)ಸಂಪೂರ್ಣವಾಗಿ ಒಡೆದು ನಾಮಶೇಷವಾಗಿತ್ತು. ಅವರು ಏಕಾಕಿಯಾಗಿ ಆಂದೋಲನವನ್ನು ಮುಂದುವರಿಸಿದರು. ಅದಕ್ಕಾಗಿ, 'ಕರ್ಮಯೋಗಿನ್';ಎಂಬ ಇಂಗ್ರೇಜಿ ಸಾಪ್ತಾಹಿಕವನ್ನೂ 'ಧರ್ಮ' ಎಂಬ ಬಂಗಾಲಿ ಸ್ತಾಪಾಹಿಕವನ್ನು ಪ್ರಾರಂಭಿಸಿದರು. ಆದರೆ ತಮ್ಮ ಧೋರಣೆಯನ್ನು ಅನು

ರಿಸಲು, ಗಾಂಧೀಜಿಯವರು ದಕ್ಷಿಣ ಆಫ್ರಿಕೆಯಲ್ಲಿ ನಡೆಯಿ ಸಿದಂಥ ಸತ್ಯಾಗ್ರಹವನ್ನು ಹೂಡಲು ಜನತೆಯು ಸನ್ನದ್ಧವಾಗಿಲ್ಲವೆಂಬುದು ಮನವರಿಕೆಯಾದುದರಿಂದ ಮತ್ತು ಅಲಿಪೂರ ಜೇಲಿನಲ್ಲಿ ಇದ್ದಾಗ ಅವರ ಮನಸ್ಸು ಯೋಗಸಾಧನೆಯಲ್ಲಿ ಸಂಪೂರ್ಣವಾಗಿ ನೆಟ್ಟುದರಿಂದ ಇವರು ೧೯೧೦ರ ಆರಂಭದಲ್ಲಿ ರಾಜಕೀಯ ಸನ್ಯಾಸ ವನ್ನು ಸ್ವೀಕರಿಸಿದರು.

೧೯೧೦ ರಿಂದ ೫-೧೨-೧೯೫೦ಕ್ಕೆ ಅವರು ಮಹಾ ಸಮಾಧಿಯನ್ನು ಹೊಂದುವವರೆಗಿನ ಕಾಲವು. ಅವರ ಭವ್ಯಾಹತಯೋಗಸಾಧನೆಯ ಮತ್ತು ಸಿದ್ಧಿಯ ಕಾಲವು. ಈ ಅವಧಿಯಲ್ಲಿ ಅವರು ಪಡೆದ ಅನುಭಾವ, ದಿವ್ಯ ದರ್ಶನ ಇವುಗಳ ಯಥಾರ್ಥವಾದ ಕಲ್ಪನೆಯನ್ನು ಮಾನವ ಕುಲಕ್ಕೆ ಮಾಡಿಕೊಡುವ 'The Light Divine' ಎಂಬ, ಮೇರುಕೃತಿಯನ್ನೂ, Essays on the Gita, Synthesis of Yoga, The Human Cycle, The Ideal of Human Unity ಎಂಬ ಉದ್ಗ್ರಂಥಗಳನ್ನೂ, ಹಲವಾರು ಕಾವ್ಯಗಳನ್ನೂ, ಗೀತಗಳನ್ನೂ ಬರಹಗಳನ್ನೂ ಪ್ರಕಟಿಸಿದರು.

ಅವರು ಮೊದಲು ಸಾಧನೆಯಲ್ಲಿ ತೊಡಗಿದಾಗ ಅವರಿಗೆ ನಾಲ್ಕೈದು ಜನ ಶಿಷ್ಯರಿದ್ದರು. ಬರಬರುತ್ತ ಸಾಧಕರ ಸಂಖ್ಯೆಯು ಬೆಳೆಯುತ್ತಹೋಗಿ ಪಾಂಡಿಚೆರಿಯಲ್ಲಿಯ ಅವರ ಸಾಧನರಂಗವು "ಶ್ರೀ ಅರವಿಂದ ಆಶ್ರಮ"ವಾಗಿ ಪರಿಣಮಿಸಿತು. ಪೂಜ್ಯ 'ಮಾತಾಜಿ'ಯವರ ನೇತೃತ್ವದಲ್ಲಿ ಶ್ರೀ ಅರವಿಂದರ ಕಾರ್ಯವು ಮುಂದುವರೆದಿದೆ. ಪ್ರಪಂಚದಲ್ಲೆಲ್ಲ ಹರಡಿದ ಲಕ್ಷಾಂತರ ಜನ ಅನುಯಾಯಿಗಳು ಅವರು ತೋರಿದ ದಾರಿಯಲ್ಲಿ ಬೆಳಕು ಕಂಡು ತಮ್ಮ ಜೀವನವನ್ನು ಪಾವನಗೊಳಿಸುತ್ತಲಿದ್ದಾರೆ.

(ಮುಂದುವರಿಯುವದು)

ನಿಮಗೆ ದೊರೆತಿವೆಯೆ ?

೧೯೫೨ರ ಸುಧಾರಿಸಿದ ಆವೃತ್ತಿಗಳು

★ ನೂತನ ಗಣಿತ ★

● ೧ನೆಯ ವರ್ಗಕ್ಕಾಗಿ	೦—೬—೦	(ಭೂನಿತಿ, ಜವಾಹರು ಆಲೇಖ ಸಹ)	
● ೨ನೆಯ ,,	೦—೮—೦	● ೫ನೆಯ ವರ್ಗಕ್ಕಾಗಿ	೦-೧೩—೦
● ೩ನೆಯ ,,	೦—೧೦—೦	● ೬ನೆಯ ,,	೧—೦—೦
● ೪ನೆಯ ,,	೦-೧೨—೦	● ೭ನೆಯ ,,	೧-೧೨—೦

ಸುಧಾರಿಸಿದ ಕೃತಿಗಳನ್ನು ತಮಗೆ ನೀಡಲು ಸಂತೋಷವೆನಿಸುತ್ತದೆ. ಪ್ರಾ. ಶಾ. ಪ್ರ. ಪ. ಪರೀಕ್ಷೆಗೆ ಬೀಜಗಣಿತ ವಿಷಯ ಇದ್ದುದು ಗೊತ್ತಿದೆಯೆ ? ೬ನೆಯ ಗಣಿತ ಎಲ್ಲ ವಿಭಾಗಗಳನ್ನು ಒಳಗೊಂಡು ಹೊರಡಿಸಲಾಗಿದೆ. ಸಂಗ್ರಹದಿಂದ ಈಗಲೇ ಪಡೆಯಿರಿ.

ಆಕಳವಾಡಿ ಬುಕ್‌ಡಿಪೋ, ಧಾರವಾಡ.

ಪುಸ್ತಕ ವಿಮರ್ಶೆ

ಪುಸ್ತಕದ ಹೆಸರು:— ಶಾಲೆಯ ಶಿಶು ಸಂಗೀತೆ (ಭಾಗ ೧, ೨, ೩,)

ಲೇಖಕರು:— ಶ್ರೀ ಕೆ. ಜಿ. ಘುಲಂಬ್ರೇಕರ, ತಿಲಕವಾಡಿ ಸದಾಶಿವ ಪೇಠ, ಪುಣೆ ೨.

ಬೆಲೆ:— ಪ್ರತಿಯೊಂದು ಭಾಗಕ್ಕೆ ೮ ಆಣೆಗಳು ಮಾತ್ರ.

ಈ ಪುಸ್ತಕಗಳು ಸಂಗೀತ ವಿಷಯದ ಬಗೆಗೆ ಇದ್ದು ಪೂರ್ಣ ಪ್ರಾಥಮಿಕ ಸಾಲೆಗಳ ೫,೬,೭ನೆಯ ಇಯತ್ತೆಗಳಿಗೂ ಮತ್ತು ಮಾಧ್ಯಮಿಕ ಸಾಲೆಗಳಗೂ ಉಪಯುಕ್ತ ಇವೆ. ಈ ಪುಸ್ತಕಗಳಲ್ಲಿ ಸಾಮಾನ್ಯ ಪದ್ಯಗಳಲ್ಲದೆ ಪ್ರಾರ್ಥನಾ ಗೀತಗಳು, ಸ್ವಾಗತಪರ ಪದ್ಯಗಳು, ಕೂಚು ಗೀತೆಗಳು, ಜಾನಪದ ಹಾಡುಗಳು, ಅಭಂಗಗಳು ಇವೇ ಮೊದಲಾದ ವಿಶಿಷ್ಟತಮ ಪದ್ಯಗಳಿರುವವು. ಇದು ಈ ಪುಸ್ತಕಗಳ ವೈಶಿಷ್ಟ್ಯ. ಈ ಎಲ್ಲ ತರಹದ ಕವನಗಳಿಗೆ ಮನವನ್ನಾಕರ್ಷಿಸಬಲ್ಲ ಧಾಟಿಯೂ ಇದೆ.

———

ಪುಸ್ತಕದ ಹೆಸರು:— ಕನಸಿನ ರಾಣಿ, ಪುಟಗಳು ೪೮

ಲೇಖಕರು:— ಕವಿರುದ್ರ, ಬೆಲೆ:— ೧—೦—೦

ಪ್ರಕಾಶಕರು', ಪ್ರೋ. ಎಂ. ಎಸ್. ಸುಂಕಾಪುರ, ಬಾಗಿಲುಕೋಟೆ.

ಕನ್ನಡ ಸಾಹಿತ್ಯದ ಮೇಲೆ ಅಪಾರವಾದ ಮಮತೆಯಿಂದ ಅಭ್ಯಾಸ ಮಾಡುತ್ತ ಬಂದ ಕವಿರುದ್ರರ ಸತತಾಭ್ಯಾಸದ ಫಲವಾಗಿ 'ಕನಸಿನ ರಾಣಿ'ಯು ಮೈದಾಳಿದ್ದಾಳೆ. ೩೦ ಕವನಗಳಿಂದ ಕೂಡಿದ ಈ ಚಿಕ್ಕ ಹೊತ್ತಿಗೆಯ ರೂಪದಲ್ಲಿ ಕನಸಿನ ರಾಣಿಯು ೩೦ ಸುರಭಿಕುಸುಮಗಳಿಂದ ಶೃಂಗಾರಿತಳಾಗಿ ನೆನಸಿನ ರಾಣಿಯೋಪಾದಿಯಲ್ಲಿ ವಾಚಕರ ಮನವನ್ನು ತಣಿಸಲೆತ್ನಿಸಿದರೆ ಅದೇನೂ ಅಚ್ಚರಿಯಲ್ಲೆಂಬುದು ಕವನಗಳನ್ನು ಹಾಡುವದರಿಂದ ಹೊಳೆಯದಿರದು. ಹೃದಯದ ಪಟಲಕ್ಕೆ ಮುಟ್ಟಿ ಕವಿತ್ವದ ಸ್ಪರ್ಶಗಳನ್ನು ಮುಟ್ಟಿದಾಕ್ಷಣ ಭಾವಗೀತೆಗಳಾಗಿ ರೂಪುಗೊಂಡ ಅನುಭವಗಳು ಇಲ್ಲಿ ಕಾಣಿಸಿಕೊಂಡಿವೆ.

ನಾದದ ಲಹರಿ ಮೃದುತ್ವವು ಇಲ್ಲಿ ಅಂತೂ ಕವನಗಳಿಗೆ ಹಿನ್ನೆಲೆಯಾಗಿ ನಿಂತಿದೆ. ಇಂತಹ ಮೃದುತ್ವದ ಕಡಲಲ್ಲಿ ತೇಲಾಡಿ, ಲೋಲಾಡುವದರಲ್ಲಿ ಸಂದೇಹವಿಲ್ಲ ವಾಚಕರಿಗೆ.

———

ಪುಸ್ತಕದ ಹೆಸರು:— "ಭಾರತದಲ್ಲಿ ಪ್ರಜಾಪ್ರಭುತ್ವ"

ಬೆಲೆ:— ೦—೪—೦

ಲೇಖಕರು:— ಶ್ರೀ ನೆಗಳೂರ ರಂಗನಾಥ ಎಮ್. ಎ

ಪುಟಗಳು:— ೩೪

ಸಂಪಾದಕರು:— ಶ್ರೀ ಶಿವಾನಂದ

ಈ ಚಿಕ್ಕ ಹೊತ್ತಿಗೆಯಲ್ಲಿ ಲೇಖಕರು ಪ್ರಜಾಪ್ರಭುತ್ವದ ಅರ್ಥ ಮೊದಲು ಮಾಡಿಕೊಂಡು ಭಾರತದಲ್ಲಿ ಅದರ ಯಶವು ನೊಳಗುವ ಪರಿಯೆಂತೆಂಬುದನ್ನು ಚೆನ್ನಾಗಿ ವಿಶದೀಕರಿಸಿದ್ದಾರೆ. ಪ್ರಜೆಯಂದರೆ ಯಾರು? ಪ್ರಭುತ್ವವೆಂದರೇನು? ನಾಗರಿಕತ್ವ ಎಂದರೇನು? ನಾಗರಿಕ. ನಾಗರಿಕನಲ್ಲದವ ಇವರೀರ್ವರಲ್ಲಿ ಇರುವ ಅಂತರವೇನು? ನಾಗರಿಕನ ಹಕ್ಕುಗಳು ಯಾವವು? ಇವೇ ಮೊದಲಾದ ವಿಷಯಾಂಗಗಳನ್ನು ವಿಶದೀಕರಿಸಿ ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದರೆ ಸಾರ್ವತ್ರಿಕ ಶಿಕ್ಷಣವು ಅವಶ್ಯ ಬೇಕು ಎಂಬ ಮಾತನ್ನು ತಿಳಿಸಿ ಹೇಳಿದ್ದಾರೆ. ಕೇವಲ ೩೪ ಪುಟಗಳಲ್ಲಿ, ಅಲ್ಪ ಬೆಲೆಯಲ್ಲಿ, ಸುಲಭ ರೀತಿಯಲ್ಲಿ ಭಾರತದಲ್ಲಿ ಪ್ರಜಾಪ್ರಭುತ್ವ, ಈ ವಿಷಯವನ್ನು ತಿಳಿಸಲೆಳಸಿದ ಈ ಚಿಕ್ಕಗ್ರಂಥವು ಸ್ವಾಗತಾರ್ಹವಿದೆಯೆಂದು ಹೇಳಬಯಸುವೆನು.

———

ಪುಸ್ತಕದ ಹೆಸರು:— ಭಾರತೀಯ ಮಹಾಪುರುಷರ ಕಥೆಗಳು, ಪುಟಗಳು:— ೯೦ ಬೆಲೆ:— ೦—೮—೦.

ಕರ್ತೆಗಾರರು:—ಶ್ರೀ ರಾಘವೇಂದ್ರ ಕುಲಕರ್ಣಿ

ಪ್ರಕಾಶಕರು:—ಶ್ರೀ ಬಿ.ಎಂ. ಪಟ್ಟಣಶೆಟ್ಟಿ, ಗಾಂಧಿರೋಡ, ವಿಜಾಪುರ.

ಗೌತಮ ಬುದ್ಧನಿಂದ ಮೊದಲು ಮಾಡಿಕೊಂಡು

ಮಹಾತ್ಮಗಾಂಧೀಜಿಯವರೆಗೆ ಒಟ್ಟು ಇಪ್ಪತ್ತೆರಡು ಜನ ಮಹಾಪುರುಷರ ಕಥೆಗಳನ್ನು ಶ್ರೀ ಕುಲಕರ್ಣಿಯವರು ಸುಲಭ ಶೈಲಿಯಲ್ಲಿ ಸಂಕ್ಷಿಪ್ತವಾಗಿ ಬರೆಯಲು ಮುತ್ನಿಸಿದ್ದಾರೆ ಮಕ್ಕಳ ಚಾರಿತ್ರಿಕ ವಿಕಾಸ'ಕ್ಕೆ ಒಳ್ಳೆಯ ಚರಿತ್ರ ಪುರುಷರ ಕಥೆಗಳು ಅವಶ್ಯ. ಈ ಕಥೆಗಳನ್ನು ಶಿಕ್ಷಕರು ಓದಿಕೊಂಡು ಮಕ್ಕಳಿಗೆ ತಮ್ಮದೇ ಆದ ರಸವತ್ತಾದ ಶೈಲಿಯಲ್ಲಿ ಹೇಳಿದರೆ ಆ ಮಹಾವ್ಯಕ್ತಿಗಳ ವ್ಯಕ್ತಿತ್ವವು ಸ್ಪಷ್ಟವಾಗುವುದಲ್ಲದೆ ಮಕ್ಕಳ ಸ್ಪಭಾವ ವರ್ಧನೆಯೂ ಆಗುವದರಲ್ಲಿ ಸಂದೇಹವಿಲ್ಲ-

ಪ್ರಧಾನ ಸಂಪಾದಕರು.

ಸುದ್ದಿ ಸಂಗ್ರಹ

ವಿಜಾಪುರ ೧-೮-೫೨

ವಿಜಾಪುರ ಜಿಲ್ಲಾ ಮನರಂಜನ ಚಟುವಟಿಕೆಗಳನ್ನು ಸಂಘಂಧೀಕರಿಸುವ ಗೊತ್ತುವಳಿಯ ಪ್ರಕಾರ, ವಿಜಾಪುರ ತಾಲೂಕಿನ ಕನಮಡಿ, ಬಾಬಾನಗರ, ಬಿಜ್ಜರಗಿ, ಹೊನವಾಡ ಈ ನಾಲ್ಕು ಹಳ್ಳಿಗಳಲ್ಲಿ ೨೯-೭-೫೨ ರಿಂದ ೨೧-೭-೫೨ರ ವರೆಗೆ ಪ್ರತಿಯೊಂದು ಹಳ್ಳಿಯಲ್ಲಿ ಒಂದೊಂದು ದಿನದಂತೆ ಮನರಂಜನ ಕಾರ್ಯಕ್ರಮಗಳು ಏರ್ಪಡಿಸಲ್ಪಟ್ಟವು. ವನಮಹೋತ್ಸವದ ಅಂಗವಾಗಿ ಮೊದಲು ಸಸಿಗಳನ್ನು ನೆಡುವ ಕಾರ್ಯಕ್ರಮವಾದ ಬಳಿಕ ಮನರಂಜನ ಚಟುವಟಿಕೆಗಳು ಕೈಕೊಳ್ಳಲ್ಪಡುತ್ತಿದ್ದವು. ಸಾಯಂಕಾಲ ೬ ಘಂಟೆಗೆ ಪ್ರಾರಂಭವಾಗಿ ರಾತ್ರಿ ೧೧ ಗಂಟೆಗೆ ಕೊನೆಗೊಳ್ಳುತ್ತಿದ್ದವು. ಕಾರ್ಯಕ್ರಮದಲ್ಲಿ ಜಿಲ್ಲಾ ಶಿಕ್ಷಣ ಖಾತೆ, ಪ್ರಸಿದ್ಧ ಖಾತೆ, ಹಾಗೂ ಪಾನ ನಿರೋಧ ಖಾತೆಗಳು ಕೂಡಿಯೇ ಭಾಗವಹಿಸಿ ಅವಕ್ಕೆ ಒಳ್ಳೇ ಕಳೆಯನ್ನು ತಂದುಕೊಟ್ಟವು, ಪ್ರತಿಯೊಂದು ಹಳ್ಳಿಯಲ್ಲಿ ಊರಿಗೆ ಊರೇ ಚಟುವಟಿಕೆಗಳನ್ನು ನೋಡಿ ಆನಂದದಲ್ಲಿ ನಲಿದಾಡಿತು. ಶಾಲಾ ಬಾಲಕ-ಬಾಲಿಕೆಯರ ವಿವಿಧ ವಿನೋದಾವಳಿಗಳು ಬಳಿಕ ಗೀಗೀ ಪದಗಳು, ಕಟ್ಟಕಡೆಗೆ ಚಲಚಿತ್ರ ಪ್ರದರ್ಶನ ಇವು ನಿತ್ಯದ ಚಟುವಟಿಕೆಗಳು ಇದ್ದವು. ಈ ಸಮಯದಲ್ಲಿ ಮೇಲೆ ವಿವರಿಸಿದ ಖಾತೆಗಳ ಅಧಿಕಾರ ವರ್ಗದಿಂದ ವನ ಮಹೋತ್ಸವ, ಸಾಮಾಜಿಕ ಶಿಕ್ಷಣ ಒತ್ತಾಯ ಶಿಕ್ಷಣ, ಪಾನ ನಿರೋಧ ಮುಂತಾದ ವಿಷಯಗಳ ಮೇಲೆ ಪರಿಣಾಮಕಾರಕ ಭಾಷಣಗಳು ಆದವು. ಪ್ರತಿಯೊಂದು ಹಳ್ಳಿಯಲ್ಲಿ ಉತ್ತನುವಾಗಿ ಅಭಿನಯಿಸಿದ ಶಾಲಾ ಬಾಲಕ-ಬಾಲಿಕೆಯರಿಗೆ ಪಾನ ನಿರೋಧ ಖಾತೆಯಿಂದ ೧೫ ರೂಪಾಯಿ ಇನಾಮು ಹಂಚಲ್ಪಟ್ಟಿತು.

ಪ್ರತಿಯೊಂದು ಹಳ್ಳಿಯಲ್ಲಿ ಸ್ಥಾನಿಕ ಮನರಂಜನ ಸಮಿತಿಯನ್ನು ಸ್ಥಾಪಿಸಿಕೊಂಡು ಈಗ ಹಂಚಲ್ಪಟ್ಟ ಹಣ ಹಾಗೂ ಊರವರ ಸಹಾಯ ಧನದಿಂದ ಇಂಥ ಚಟುವಟಿಕೆಗಳಿಗೆ ಬೇಕಾಗುವ ಉಪಕರಣಗಳನ್ನು ಕೊಳ್ಳಬೇಕೆಂದು ತಿಳಿಸಲಾಯಿತು.

ಪ್ರಯೋಗಾರ್ಥವಾಗಿ ಇಟ್ಟುಕೊಂಡ ಈ ಕಾರ್ಯಕ್ರಮಗಳು ಒಳ್ಳೇ ಯಶಸ್ವಿಯಾಗಿ ಪರಿಣಮಿಸಿದವು.

ಸಹಿ/ ವಾಯ್. ಬಿ. ಯಾರಗಲ್
ಚೇರಮನ್. ಡಿ. ಕೊ. ಕಮಿಟಿ ವಿಜಾಪುರ

ಸುಂಕೇರಿ: ದಿನಾಂಕ ೩-೮-೧೯೫೨ರಂದು ಇಲ್ಲಿಯ ಮರಾಠಿ ಶಾಲೆಯ ಹೊಸ ಇಮಾರತಿಯ ಉದ್ಘಾಟನಾ ಸಮಾರಂಭವು ಶ್ರೀ ಗಣಪತರಾವ ತೆಲಂಗ ಇವರ ಹಸ್ತದಿಂದ ನೆರವೇರಿತು.

ಕಂಭಾಪುರ: ಗದಗ ತಾಲೂಕ ಕಂಭಾಪುರ ಗ್ರಾಮದಲ್ಲಿ ದಿನಾಂಕ ೭-೮-೫೨ ರಂದು ಅಲ್ಲಿಯ ಕನ್ನಡ ಶಾಲೆಯ ಇಮಾರತಿಯು ಧಾರವಾಡ ಜಿಲ್ಲಾ ಕಲೆಕ್ಟರರಾದ ಶ್ರೀ ರಿಬೆಲೊ ಅವರ ಹಸ್ತದಿಂದ ತೆರೆಯಲ್ಪಟ್ಟಿತು. ಸ್ಥಳಿಕ ನಿವೃತ್ತ ಪ್ರಾಥಮಿಕ ಶಿಕ್ಷಕರಾದ ಶ್ರೀ ಆಡಿವೆಪ್ಪ ಕುರಹಟ್ಟಿ ಅವರು ಶಾಲೆಯ ಇಮಾರತಿಯ ಸ್ಥಳವನ್ನು ದಾನವಾಗಿ ಕೊಟ್ಟಿರುವರು. ಊರ ಜನರು ತಮ್ಮ ಸ್ವಂತ ಖರ್ಚಿನಿಂದ ಹಾಗು ಸ್ವಪರಿಶ್ರಮ ವಹಿಸಿ ಈ ಇಮಾರತಿಯನ್ನು ಪೂರ್ತಿಗೊಳಿಸಿರುವರೆಂದು ಶಾಲಾ ಕಟ್ಟಡ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ.ಎಸ್, ಪಾಟೀಲ ಅವರು ತಿಳಿಸುತ್ತಾರೆ.

ಹೂವಿನ ಹಿಪ್ಪರಿಗಿ: ದಿನಾಂಕ ೧೦-೮-೧೯೫೨ ರಂದು ಇಲ್ಲಿಯ ಕ. ಗಂ. ಶಾಲೆಯಲ್ಲಿ ಶ್ರೀ ಯರಗಲ್ ಸಾಹೇಬರ ಅಧ್ಯಕ್ಷತೆಯಲ್ಲಿ ಗ್ರುಪ್ ಶಿಕ್ಷಕರ ಸಮ್ಮೇಲನವು ನೆರವೇರಿಸಲ್ಪಟ್ಟಿತು. ಶಿಕ್ಷಕರ ಮಾದರಿಯ ಪಾಠಗಳು ಹಾಗು ಬಾಲಕರ ವಿನೋದಾವಳಿಗಳು ಜರುಗಿದವು.

ಹುಲಗೂರ : ದಿನಾಂಕ ೧೦-೭-೧೯೫೨ ರಂದು ಇಲ್ಲಿಯ ಹರಿಜನ ಕೇರಿಯಲ್ಲಿ ಸಮಾಜ ಶಿಕ್ಷಣ ವರ್ಗವನ್ನು ತೆರೆಯಲಾಯಿತು.

ನವಲಗುಂದ : ದಿನಾಂಕ ೨೯-೭-೧೯೫೨ರಂದು ಶ್ರೀ ಕೊಪ್ಪಿಕರ ಎನೆಯ ಅಸಿ.ಎ.ಇ. ಅವರ ಹಿರಿಯತನದಲ್ಲಿ ಇಲ್ಲಿ ಗ್ರುಪ್ ಶಿಕ್ಷಕರ ಸಮ್ಮೇಲನವು ಯಶಸ್ವಿಯಾಗಿ ನಡೆಯಿತು; ಮೂಲೋದ್ಯೋಗ ವಿಷಯದ ಬಗೆಗೆ ಉಪಯುಕ್ತ ಚರ್ಚೆ, ಮಕ್ಕಳ ವಿನೋದಾವಳಿ, ಏಕಾಂಕ ನಾಟಕ ಮೊದಲಾದುವು ಜರುಗಿದವು.

ಬ್ಯಾಡಿಗಿ: ಶ್ರೀ ಎಸ್.ವ್ಹಿ. ಜೇವೂರ ಎನೆಯ ಅಸಿ.ಇ. ಇವರಿಂದ ಇಲ್ಲಿಯ ಕ. ಗಂ. ಶಾಲೆಯಲ್ಲಿ ದಿನಾಂಕ ೨೨-೭-೫೨ರಂದು ಮಕ್ಕಳ ವಾಚನಾಲಯವು ತೆರೆಯಲ್ಪಟ್ಟಿತು.

ಕೋಡ: ಈ ಗ್ರಾಮದಲ್ಲಿ ಗ್ರುಪ್ ಶಿಕ್ಷಕರ ಸಭೆಯು ನಡೆದು ಸಮಾಜ ಶಿಕ್ಷಣ, ಸಕ್ತಿ ಶಿಕ್ಷಣ, ಪಠ್ಯ ಪುಸ್ತಕಗಳು ಇವುಗಳ ಬಗ್ಗೆ ಚರ್ಚೆ ನಡೆಯಿತು.

ಹಾವೇರಿ : ದಿನಾಂಕ ೧೬-೭-೫೨ ರಂದು ಡಿ.ವಿ.ಇ ರಾದ ಶ್ರೀ ದಳವಾಯಿ ಅವರು ಇಲ್ಲಿಯ ಎನೆಯ ನಂ. ಕ.ಗಂ. ಶಾಲೆಯಲ್ಲಿ ಸ್ಥಳಿಕ ಶಿಕ್ಷಕ-ಶಿಕ್ಷಿಕೆಯರನ್ನು ದ್ವೇಶಿಸಿ ಪಠ್ಯೇತರ ಚಟುವಟಿಕೆಗಳ ಬಗ್ಗೆ ತಿಳಿಸಿ ಹೇಳಿದರು. ಇದೇ ಶಾಲೆಯಲ್ಲಿ ದಿನಾಂಕ ೨೩-೭-೫೨ ರಂದು ಶ್ರೀ ಎಸ್. ವ್ಹಿ. ಜೇವೂರ ಅವರ ಅಧ್ಯಕ್ಷತೆಯಲ್ಲಿ ಮೂಲ ಶಿಕ್ಷಣದ ಬಗ್ಗೆ ಚರ್ಚೆ ನಡೆಯಿತು. ೧ನೆಯ ನಂಬರ ಶಾಲೆಯಲ್ಲಿ ೭-೮-೫೨ರಂದು ಬಹುಮಾನ ವಿತರಣ ಹಾಗು ವನಮಹೋತ್ಸವ ಸಮಾರಂಭಗಳು ನಗರಾಧ್ಯಕ್ಷರಾದ ಶ್ರೀ. ಜಿ.ಜಿ. ಮಾಗಾವಿ ಅವರ ಹಿರಿಯತನದಲ್ಲಿ ನಡೆದವು.

ಹಾಪನೂರ : ಇಲ್ಲಿಯ ಕ. ಗಂ. ಶಾಲೆಯ ಗುರುಗಳೂ ವಿದ್ಯಾರ್ಥಿಗಳೂ ಕೂಡಿಕೊಂಡು ಗ್ರಾಮ ಪಂಚಾಯತಿಯಿಂದ ೧೦೦ ರೂಪಾಯಿ ಧನಸಹಾಯ ಪಡೆದು ೪೮'×೧೨' ಅಳತೆ ಒಂದು ಗೊಡೆಯನ್ನು ಕಟ್ಟಿದರಲ್ಲದೆ ಅದಕ್ಕೆ ಬೇಕಾಗುವ ಕಲ್ಲು, ಮಣ್ಣು ಹೆಂಡಿಗಳನ್ನು ಸ್ವತಃ ಹೊತ್ತು ತಂದು ಮೇಲ್ಮುದ್ದಿಯನ್ನು ತಾವೇ ಹಾಕಿ ಒಂದು ಕೋಣೆಯನ್ನು ಮಾಡಿಕೊಂಡರು. ಇಂಥ ಮಾದರಿ ಕೆಲಸ ಮಾಡಿದ ಶಾಲೆಯಲ್ಲಿ ದಿನಾಂಕ ೧೫-೭-೫೨ರಂದು ಪಾಲಕರ ದಿನಾಚರಣೆಯನ್ನು ಮಾಡಲಾಯಿತು. ಶೈಕ್ಷಣಿಕ ಗ್ರುಪ್ ಸಮ್ಮೇಲನವು ಜರುಗಿತು.

ಕಬ್ಬೂರ : ದಿನಾಂಕ ೨೪-೭-೫೨ರಂದು ಶೈಕ್ಷಣಿಕ ಗ್ರುಪ್ ಸಮ್ಮೇಲನವು ಜರುಗಿತು.

ರೋಣ : ದಿನಾಂಕ ೧೭-೭-೫೨ ರಂದು ಮೇ ಎಜ್ಯುಕೇಶನಲ್ ಇನಸ್ಪೆಕ್ಟರ ಅವರ ಮಾರ್ಗದರ್ಶನದಲ್ಲಿ ಮೂಲ ಶಿಕ್ಷಣದ ಬಗ್ಗೆ ಚರ್ಚೆ ನಡೆಯಿತು.

ಅಣ್ಣಿಗೇರಿ : ಶ್ರೀ ಜಿ. ಕೆ. ಕೊಪ್ಪಿಕರ ಅವರ ಹಿರಿಯತನದಲ್ಲಿ ಇಲ್ಲಿಯ ಕೇಂದ್ರಶಾಲೆಯಲ್ಲಿ ಶಿಕ್ಷಕ ಶಿಕ್ಷಿಕೆಯರ ಮಾಸಿಕ ಸಮ್ಮೇಲನವು ನಡೆಯಿತು.

ಹುಬ್ಬಳ್ಳಿ : ದಿನಾಂಕ ೯-೮-೫೨ನೆಯ ದಿನ ಇಲ್ಲಿಯ ೨ನೆಯ ನಂ. ಕ. ಗಂ. ಶಾಲೆಯಲ್ಲಿ ವನಮಹೋತ್ಸವವು ಶ್ರೀ. ಎಂ. ಎಂ. ಹೆನಸಿಯವರ ಹಿರಿಯತನದಲ್ಲಿ ಆಚರಿಸಲ್ಪಟ್ಟಿತು. ಇದೇ ಶಾಲೆಯಲ್ಲಿ ಹುಬ್ಬಳ್ಳಿ ಟ್ರೇ.ಕಾ. ಪಿನ್ಸಿಪಾಲರಾದ ಶ್ರೀ ಇಂಚಲ ಅವರು 'ಶಬರಿ' ಎಂಬ

ಕವಿತೆಯ ಮಾದರಿ ಪಾಠ ಕೊಟ್ಟರು. ೧-೮-೫೨ನೆಯ ದಿನ ನಗರಾಧ್ಯಕ್ಷರಾದ ಶ್ರೀ ಕೊರವಿ ಸಂಗಪ್ಪಣ್ಣ ನವರ ಹಿರಿಯತನದಲ್ಲಿ ಮಕ್ಕಳ ದಿನಾಚರಣೆ ವಿಜೃಂಭಣೆಯಿಂದ ಜರುಗಿತು. ಇದೇ ಸಮಯದಲ್ಲಿ 'ಮಕರಂದ' ಎಂಬ ಮಕ್ಕಳ ಕೈಬರಹದ ಮಾಸಿಕ ಉದ್ಘಾಟನೆಯೂ ನಡೆಯಿತು. ವಿದ್ಯಾರ್ಥಿ ಮಂತ್ರಿಮಂಡಳದವರು ಅಚ್ಚು ಕಟ್ಟುತನದಿಂದ ಈ ಎಲ್ಲ ಕಾರ್ಯಗಳನ್ನು ನಿರ್ವಹಿಸಿದರು. ಇಲ್ಲಿಯ ಮರಾಠಿ ಸಾಲೆಗಳ ಸಮ್ಮೇಲನವು ೪-೮-೫೨ರಂದು ಶ್ರೀ ಕೊಪ್ಪಿಕರ ಅವರ ಅಧ್ಯಕ್ಷತೆಯಲ್ಲಿ ಜರುಗಿತು.

ಗೋಕಾಕ:— ದಿನಾಂಕ ೨೭-೭-೫೨ ರಂದು ಇಲ್ಲಿಯ ಕ. ಗ. ಶಾಲೆಯಲ್ಲಿ ಶಾರದಾ ಪೂಜೋತ್ಸವವು ಸ್ಕೂಲ ಕಮೀಟಿ ಚೇರಮನ್‌ರಾದ ಶ್ರೀ ಗೌಡಪ್ಪಣ್ಣ ಪಾಟೀಲ ಅವರ ಹಿರಿಯತನದಲ್ಲಿ ನಡೆಯಿತು. ಬಾಲಕರ ಶಾರೀರಿಕ ಚಟುವಟಿಕೆಗಳು, ಸಂಭಾಷಣೆಗಳು ಮತ್ತು ಏಕಾಂಕ ನಾಟಕಗಳು ಚಿತ್ತಾಕರ್ಷಕವಾಗಿದ್ದವು. ಅಧ್ಯಕ್ಷರು ೧೧ ರೂಪಾಯಿ ಬಹುಮಾನವನ್ನು ಮಕ್ಕಳಿಗೆ ಕೊಟ್ಟರು.

ಮನಮದಾಪುರ:— ದಿನಾಂಕ ೨೮, ೨೯-೭-೧೯೫೨ ದಿನಗಳಲ್ಲಿ ಡಿ| ಎ| ಇ| ರಾದ ಶ್ರೀ ರಾಯಣ್ಣನವರ ಇವರ ಹಿರಿಯತನದಲ್ಲಿ ಗ್ರುಪ್ ಶಿಕ್ಷಕರ ಸಮ್ಮೇಲನವು ವಿಜೃಂಭಣೆಯಿಂದ ಜರುಗಿತು. ಬಾಲಕರ ವಿನೋದಾವಳಿಗಳು ಹಾಗೂ ಏಕಾಂಕ ನಾಟಕಗಳು ಆಕರ್ಷಕವಾಗಿದ್ದವು.

ಬುಡರಕಟ್ಟಿ:— ದಿನಾಂಕ ೨೨-೭-೫೨ ರಂದು ಇಲ್ಲಿಯ ಕ. ಗ. ಸಾಲೆಯಲ್ಲಿ ಸರಸ್ವತಿ ಪೂಜೆಯು ಶ್ರೀ ರಣಗಟ್ಟಿಮಠ ಇವರ ಅಧ್ಯಕ್ಷತೆಯಲ್ಲಿ ಜರುಗಿ ಬಾಲಕರ ಏಕಾಂಕಗಳನ್ನು ನೋಡಿ ಮನಮೆಚ್ಚಿ ಇಬ್ಬರು ಸಭ್ಯ ಗೃಹಸ್ಥರು ಒಂದು ಪುಸ್ತಕ ಹಾಗೂ ಒಂದು ರೂಪಾಯಿ ಬಹುಮಾನ ಕೊಟ್ಟರು.

ಧಾರವಾಡ:— ಇಲ್ಲಿಯ ಸರಕಾರೀ ಕ. ಗ. ಟ್ರೇನಿಂಗ ಕಾಲೇಜದಲ್ಲಿ ದಿನಾಂಕ ೧-೮-೫೨ ರಂದು ಲೋಕಮಾನ್ಯ ಟಿಳಕರ ದಿನಾಚರಣೆಯನ್ನು ಶ್ರೀ ವ್ಹಿ. ಆರ್. ಮುಧೋಳಕರ ಇವರ ಹಿರಿಯತನದಲ್ಲಿ ಆಚರಿಸಲಾಯಿತು. ಅತಿಥಿಗಳು ಲೋಕಮಾನ್ಯರ ರಾಜಕಾರಣ ನೀತಿಯನ್ನು ಹಾಗೂ ಅವರ ಆದರ್ಶ ಜೀವನವನ್ನು ವಿವರಿಸಿ ಹೇಳಿದರು. ದಿನಾಂಕ ೩-೮-೫೨ರಂದು ಸನಮಹೋತ್ಸವ ಕಾರ್ಯವನ್ನು ಡಾ| ಚಿಕ್ಕರಮನೆ ಅವರ ಹಸ್ತದಿಂದ ನೇರವೇರಿಸಲಾಯಿತು. ಅಧ್ಯಕ್ಷರು ಗಿಡಗಳನ್ನು ನೆಡುವ ಚಟುವಟಿಕೆಯನ್ನು ಕುರಿತು ಶೈಕ್ಷಣಿಕ ತತ್ವಗಳನ್ನು ತಿಳಿಸಿ ಹೇಳಿದರು. ದಿನಾಂಕ ೪-೮-೫೨ ರಂದು ಕಾಲೇಜದ ವಸ್ತು-ಪ್ರದರ್ಶನಾಲಯ ಹಾಗೂ ಸಹಕಾರೀ ವಸ್ತು ಭಾಂಡಾರ ಇವುಗಳ ಉದ್ಘಾಟನೆಯನ್ನು ೧ ನೆಯ ಅ. ಎ. ಇ. ರಾದ ಶ್ರೀ ಜೇಪೂರ ಅವರು ನೆರವೇರಿಸಿ ಸಮಯೋಚಿತ ಭಾಷಣ ಮಾಡಿದರು. ದಿನಾಂಕ ೭-೮-೫೨ ರಂದು ಕವೀಂದ್ರ ರವೀಂದ್ರರ ದಿನಾಚರಣೆಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಶ್ರೀ ಆರ್. ಸಿ. ಹಿರೇಮಠ ಇವರ ಹಿರಿಯತನದಲ್ಲಿ ಆಚರಿಸಲಾಯಿತು. ವಿಶ್ವಕವಿ ರವೀಂದ್ರರ ಅಮರವಾಣಿ, ತ್ಯಾಗ-ಸೇವೆ ಇವುಗಳ ಬಗೆಗೆ ಮಾರ್ಮಿಕವಾಗಿ ಮಾತನಾಡಿದರು. ದಿನಾಂಕ ೧೫-೮-೫೨ ರಂದು ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಮುಖ್ಯ ಕಾರ್ಯದರ್ಶಿಗಳು, ಧಾರವಾಡ ಜಿಲ್ಲಾ ಕಾಂಗ್ರೆಸ್ ಕಮೀಟಿಯ ಅಧ್ಯಕ್ಷರು ಮುಂಬಯಿ ಶಾಸನ ಸಭಾ ಸದಸ್ಯರೂ ಆದ ಶ್ರೀ ಹಳ್ಳಿಕೇರಿ ಗುದ್ಲೆಪ್ಪನವರಿಂದ ಧ್ವಜಾರೋಹಣವಾಯಿತು. ಅದೇ ಸಮಯದಲ್ಲಿ ಅವರು ಸ್ವಾತಂತ್ರ್ಯೋತ್ಸವ ಮತ್ತು ಶಿಕ್ಷಕರ ಮುಂದಿನ ಹೊಣೆ ಇವುಗಳನ್ನು ಕುರಿತು ಉದ್ಬೋಧಕ ಭಾಷಣ ಮಾಡಿದರು.

ವಿಶೇಷ ಸುದ್ದಿ

ಮೈ| ಎಜ್ಯುಕೇಶನಲ್ ಇನಸ್ಪೆಕ್ಟರ ಇವರ ನಂ. $\frac{E/TB—356}{16-8-1952}$ **ನೆಯದರನ್ವಯ ಶ್ರೀ ಚಿತಳಿ** ಮತ್ತು ಶ್ರೀ ಲಕ್ಕುಂಡಿ ಇವರು ಬರೆದ **'ನವಭಾರತ ಸಾಂಸ್ಕೃತಿಕ ಇತಿಹಾಸ'** – ೧ ನೆಯ ಆವೃತ್ತಿ – ೧೯೫೨ ಎಂಬ ಪುಸ್ತಕವು ಮಾಧ್ಯಮಿಕ ಸಾಲೆಗಳ ೧೦ ನೆಯ ಮತ್ತು ೧೧ ನೆಯ ಇಯತ್ತೆಗಳಿಗಾಗಿ ಪಠ್ಯ ಪುಸ್ತಕವೆಂದು ಮಂಜೂರಾಗಿದೆ. ಈ ಪುಸ್ತಕವನ್ನು ಮುಂಬಯಿ ಮ್ಯಾಕ್‌ಮಿಲನ್ ಕಂಪನಿಯವರು ಪ್ರಕಟಿಸಿರುವರು.

ಮುಂಬಯಿ ವಿದ್ಯಾಖಾತೆಯ ಪಠ್ಯ ಪುಸ್ತಕ ಸಮಿತಿಯಿಂದ ಮಂಜೂರಾಗಿ, ಈಗಾಗಲೇ ವಿಜಾಪುರ ಜಿಲ್ಲೆಯ ಮಾಧ್ಯಮಿಕ ಶಾಲೆಗಳಲ್ಲಿಯೂ, ಧಾರವಾಡ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿಯೂ ಉಪಯೋಗದಲ್ಲಿರುವ ಹಾಗೂ **ಕರ್ನಾಟಕ ವಿದ್ಯಾವರ್ಧಕ ಸಂಘ** ಧಾರವಾಡ ಇವರಿಂದ ಪಾರಿತೋಷಕ ಪಡೆದ ಗ್ರಂಥ.

ಮಹಾತ್ಮಾ ಗಾಂಧಿ

(ಮಹಾತ್ಮರ ಜೀವನ ಚರಿತ್ರೆ ಹಾಗೂ ವಿಚಾರ ಸಂಗ್ರಹ)

ದ್ವಿತೀಯ ಮುದ್ರಣ.

ಲೇಖಕರು:—**ಸ. ವೀ. ಹಂಜಿ,** ಎಂ. ಎ., ಬಿ. ಟಿ., ಡಿ. ಬಿ. ಈ.

೭೯ ವರ್ಷಗಳ ತ್ಯಾಗಪೂರ್ಣ, ತಪಸ್ಸಿನ ಹಾಗೂ ಸೇವಾಮಯ ಮಹಾನ್ ಜೀವನದ ಪ್ರಮಾಣ ಗ್ರಂಥ.

ಮಹಾತ್ಮರ ಸಮಗ್ರ ಜೀವನವನ್ನು ಸರಳ ಶೈಲಿಯಲ್ಲಿ ಚಿತ್ರಿಸುವ ಮೊದಲನೆಯ ಗ್ರಂಥ.

ಪ್ರೊ. ಶಿ. ಶಿ. ಬಸವನಾಳ ಅವರ ಮುನ್ನುಡಿ ಹಾಗೂ ಮಾನ್ಯ ಶ್ರೀ **ಆರ್. ಆರ್. ದಿವಾಕರ** ಅವರ ಅಭಿನಂದನೆಯೊಡನೆ ವಿಸುಗುವ ಗ್ರಂಥ.

ಪ್ರತಿಯೊಬ್ಬ ಕನ್ನಡಿಗನು ಅವಶ್ಯವಾಗಿ ಓದಬೇಕೆಂದು ಬಿನ್ನಹ.

ಕ್ರೌನ್ ೮. ಪ. ಪುಟ. ೧೮೪+೨೦೦

ಬೆಲೆ, ಉತ್ತಮ ಪ್ರತಿ. ರೂ ೨—೦—೦

ಸಾದಾ ಪ್ರತಿ ರೂ ೧—೮—೦ (ವಿದ್ಯಾರ್ಥಿಗಳ ಸಲುವಾಗಿ)

ಗ್ರಂಥಗಳು ಸಿಗುವ ವಿಳಾಸಃ—

ಎಸ್. ವ್ಹಿ. ಹಂಜಿ.

ಬಸವೇಶ್ವರ ಟ್ರೇನಿಂಗ ಕಾಲೇಜ, **ಬಾಗಲಕೋಟೆ.**

ಪುಟ ೨೬೦) **ಮೂಲ ಶಿಕ್ಷಣ** (ಬೆಲೆ: ೩-೦-೦

ಲೇಖಕರು:— **ಶ್ರೀ. ಮು. ಗು. ಹಂದ್ರಾಳ,** ಬಿ. ಎ., (ಆನರ್ಸ) ಬಿ. ಟಿ.

(ಪಿನ್ಸಿಪಾಲ, ಸರಕಾರಿ ಕ. ಗಂ. ಟ್ರೇ. ಕಾ. ಧಾರವಾಡ.)

ಮೂಲ ಶಿಕ್ಷಣದ ಬಗೆಗೆ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಪೊತ್ತಿಕೆಯಾಗಿದೆ.

ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿ ಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ.

ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ.

ಆಕಳವಾಡಿ ಬುಕ್ ಡಿಪೋ, ಧಾರವಾಡ.

ಪ್ರಾ. ಶಾ. ಪ್ರ. ಪ. ಪರೀಕ್ಷೆಯ ವಿದ್ಯಾರ್ಥಿಗಳಿಗೆ
ಅತ್ಯುಪಯುಕ್ತವಾದ ಹೊಸ ಪುಸ್ತಕಗಳು

೧. ಹೊಸ ಪ್ರಶ್ನೋತ್ತರ ಇತಿಹಾಸ

ಬರೆದವರು:— ಶ್ರೀ. ಭೀ. ಶಂ. ಪೂಜಾರ ಮಾಸ್ತರ, ಬೆಲೆ: ೦—೪—೦

ವಿದ್ಯಾರ್ಥಿಗಳು ಇತಿಹಾಸ ಪರೀಕ್ಷೆಯಲ್ಲಿ ಸಂಪೂರ್ಣ ಯಶಸ್ವಿಯಾಗುವಷ್ಟು ವಿಷಯವನ್ನು ಪ್ರಶ್ನೋತ್ತರ ರೂಪದಿಂದ ಬರೆದಿರುವರು. ೩೦೦-೪೦೦ ಪುಟದ ಇತಿಹಾಸ ಪಠ್ಯಪುಸ್ತಕ ಓದುವದ ಕ್ಕಿಂತಲೂ ಈ ಪುಸ್ತಕವನ್ನು ಓದಿದರೆ ವಿಶೇಷ ಸಹಾಯವಾಗುವದು.

ಈ ಪುಸ್ತಕದ ಕೊನೆಗೆ ರಾಜಕೀಯ ಮುಂದಾಳುಗಳ ಸಂಕ್ಷಿಪ್ತ ಚರಿತ್ರೆಯೂ ರಾಜ್ಯಘಟನೆಯ ಸಂಪೂರ್ಣ ವಿವರಣೆಯೂ ವಿವರಿಸಲ್ಪಟ್ಟಿದೆ. ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ತಕ್ಕ ಉತ್ತರಗಳನ್ನು ಕೊಡಲು ಸಮರ್ಥರಾಗುವಂತೆಯೂ ಪ್ರಶ್ನೆಗಳ ನಿಶ್ಚಿತ ಸ್ವರೂಪವನ್ನು ಚನ್ನಾಗಿ ತಿಳಿದುಕೊಳ್ಳುವಂತೆಯೂ ಬರೆಯಲ್ಪಟ್ಟಿದೆ. ಇಂದಿನ ವರೆಗೆ (ಐದು ವರ್ಷಗಳ) ಪರೀಕ್ಷೆಯ ಪ್ರಶ್ನೆಗಳನ್ನು ಬಿಡಿಸಿದ್ದಾರೆ. ಎಲ್ಲ ಪ್ರಶ್ನೋತ್ತರ ಇತಿಹಾಸ ಪುಸ್ತಕಗಳಿಗಿಂತಲೂ ಇದು ಹೊಸ ಪುಸ್ತಕವಾಗಿದೆ.

೨. ಹೊಸ ಪ್ರಶ್ನೋತ್ತರ ಜಮಾಖರ್ಚು

ಬರೆದವರು:— ಶ್ರೀ. ಭೀ. ಬಂ. ರಾಜಪುರೋಹಿತ ಮಾಸ್ತರ, ಬೆಲೆ ೦—೦—೦

'ಜಮಾಖರ್ಚು' ಈ ವಿಷಯವು ಬಹು ನೀರಸವಾದುದು. ಆದುದರಿಂದ ವಿದ್ಯಾರ್ಥಿಗಳು ಬಹಳ ತೊಂದರೆಗೊಳಗಾಗುವರು. ಈ ತೊಂದರೆ ನೀಗಿಸಲು ಈ ಪುಸ್ತಕವು ರಚಿಸಲ್ಪಟ್ಟಿದೆ. ವಿದ್ಯಾರ್ಥಿಗಳು ಇದೊಂದೆ ಪುಸ್ತಕ ಅಭ್ಯಸಿಸುವದರಿಂದ ಈ ವಿಷಯದ ಪರೀಕ್ಷೆಯಲ್ಲಿ ಅವರು ನಿಶ್ಚಿತವಾಗಿ ಯಶಸ್ವಿಯಾಗುವರು. ಇಂದಿನ ವರೆಗೆ ೫ ವರ್ಷಗಳ ಪರೀಕ್ಷೆಯ ಪ್ರಶ್ನೆಗಳ ಉತ್ತರಗಳನ್ನೂ ಕೆಲವು ಹೊಸ ಮಾದರಿಯ ಪ್ರಶ್ನೆಗಳನ್ನೂ ಈ ಪುಸ್ತಕದಲ್ಲಿ ನೋಡಬಹುದು.

ಪುಸ್ತಕ ಬೇಕಾದವರು ಕೂಡಲೇ ತರಿಸಿಕೊಳ್ಳಿರಿ.

ಪಿ. ಸಿ. ಶಾಬಾದಿಮಠ ಬುಕ್ಕಡಿಪ್ಪೊ, ಗದಗ

ನಿಮ್ಮ ಸ್ಥಳಿಕ ಪುಸ್ತಕದ ಅಂಗಡಿಯಲ್ಲಿ ವಿಚಾರಿಸಿರಿ.

ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸುಸಂಧಿ!

೧೯೫೧ ಮತ್ತು ೧೯೫೨ನೆಯ ವರ್ಷಗಳ
ಮುಲ್ಕೀ ಪರೀಕ್ಷೆಯ ಎಲ್ಲ ವಿಷಯಗಳ
ಪ್ರಶ್ನೆಗಳನ್ನು ಬಿಡಿಸಿದ

"ಪ್ರಶ್ನೋತ್ತರ ದರ್ಪಣ"ವು

ಲೆ: ಆಯ್. ಎಸ್. ಅರಳಗುಪ್ಪಿ
ಬಿ. ಬಿ. ಸಿದ್ದನಗೌಡರ
ಎನ್. ಎಸ್. ಸವದಿ

ಸಿದ್ಧವಾಗಿದೆ. ಅನುಭವಿಕ ಶಿಕ್ಷಕರಿಂದ ಬರೆದು,
ಶಿಕ್ಷಣ ತಜ್ಞರಿಂದ ಪರಿಶೋಧಿಸಿದೆ.
ತ್ವರೆ ಮಾಡಿರಿ.

ವಿಳಾಸ: ಎಲ್. ಜಿ. ಹೊಸಮನಿ
ದೀಕ್ಷಿತವಾಡೆ, ಲೈನಬಜಾರ, ಧಾರವಾಡ.

ಬೆಲೆ: ೧—೧೨—೦

ಒನೆಯ ಇಯತ್ತೆಯ ಹೊಸ ಅಭ್ಯಾಸಪತ್ರಿಕೆ
ಯಂತೆ ಹೊಸ ಮಾದರಿಯಿಂದ ರಚಿಸಿದ

ಭಾರತ ರಾಜ್ಯ ಘಟನೆ

(ಸಚಿತ್ರ)

ಸುಧಾರಿಸಿದ ಎರಡನೆಯ ಆವೃತ್ತಿ
ಫೆಬ್ರುವರಿ ೧೯೫೨
ಲೇಖಕರು:— ವಿ. ಕ. ನಂದಗಾಂವ

ಬೆಲೆ ೦—೧೨—೦

ಮಾನ್ಯರಾದ ಎಸ್.ಎನ್. ಅಂಗಡಿ, ಪ್ರಿ ರೆಡ್ಡಿ, ಪ್ರಿ. ಜೋಶಿ, ಪ್ರಿ. ಇಂಚಲ, ಪ್ರಿ. ವರ್ಟಿ, ಪ್ರಿ. ಚಿಕ್ಕರಮನೆ, ಶ್ರೀ. ಗೋಖಲೆ ಕೇಶವರಾಯರು, ಶ್ರೀ. ಶಾನಭಾಗ (ಡಿ.ಎಸ್.ಪಿ.) ಮುಂತಾದವರಿಂದಲೂ ಪಠ್ಯ ಪುಸ್ತಕ ಸಮಿತಿಯವರಿಂದಲೂ ಮಾನ್ಯ ಮಾಡಲ್ಪಟ್ಟಿದೆ.

ಪ್ರಕಾಶಕರು: ವಿ. ವಿ. ನಂದಗಾಂವ
೬೧೯ ಮಠಗಲ್ಲಿ, ಬೆಳಗಾಂವ

ಅವಶ್ಯವಾಗಿ ಸಂಗ್ರಹಿಸಲೇಬೇಕಾದ ಪುಸ್ತಕಗಳು!

ಲೇಖಕ: ಗಲಗಲಿ

ನಮ್ಮ ರಾಜ್ಯಘಟನೆ

(ಬೆಲೆ: ೧೨ ಆಣೆ)

ಇಂದಿನ ಪರೀಕ್ಷೆಯ ಹೊಸ ಧೋರಣೆಯಂತೆ ಪುಸ್ತಕ ರಚಿಸಲಾಗಿದೆ. ಹೊಸ ಅಭ್ಯಾಸಪತ್ರಿಕೆಯ ಪ್ರಕಾರ ಎಲ್ಲ ವಿಷಯಗಳನ್ನು ಮಕ್ಕಳಿಗೆ ತಿಳಿಯುವಂತೆ ತಿಳಿಯಾದ ಭಾಷೆಯಲ್ಲಿ ವಿವೇಚಿಸಲಾಗಿದೆ. ಪ್ರತಿ ಪ್ರಕರಣದ ಕೊನೆಗೆ ಉಪಯುಕ್ತ ಹಾಗೂ ಮಹತ್ವದ ಪ್ರಶ್ನೆಗಳನ್ನೂ ಕೊಟ್ಟಿದೆ. ಕಾರಣ ಈ ಪುಸ್ತಕವನ್ನು ಪ್ರಾ. ಶಾ. ಪ್ರ. ಪ. ಪರೀಕ್ಷೆಯ ವಿದ್ಯಾರ್ಥಿಗಳು ಕೂಡಲೇ ಸಂಗ್ರಹಿಸುವದು ಜಾಣತನವೆಂದು ಬೇರೆ ಹೇಳಬೇಕಿಲ್ಲ.

ಪ್ರಶ್ನೋತ್ತರ-ಕರ್ನಾಟಕ ಇತಿಹಾಸ

(ಬೆಲೆ: ೧೨ ಆಣೆ)

ಎಲ್ಲ ವಿಷಯಗಳನ್ನೊಳಗೊಂಡ ಇಂಥ ಪುಸ್ತಕ ಕರ್ನಾಟಕದಲ್ಲಿ ಇನ್ನೂವರೆಗೆ ಹೊರಬರಿಲ್ಲ. ಮಿ. ಸ್ಕೂಲ ಸ್ಕಾಲರಶಿಪ್ ಪರೀಕ್ಷೆಯ ವಿದ್ಯಾರ್ಥಿಗಳು ಈ ಪುಸ್ತಕವನ್ನು ಆಭ್ಯಸಿಸಿ ತಮ್ಮ ಯಶದ ಮಾರ್ಗವನ್ನು ಸುಗಮ ಮಾಡಿಕೊಳ್ಳುವರೆಂದು ಆಶಿಸಿದರೆ ಅದೇನೋ ಅತಿಶಯೋಕ್ತಿಯಲ್ಲ. ಪ್ರಾಥಮಿಕ ಶಾಲೆಯ ತರಗತಿಯ ಮಕ್ಕಳಿಗೆ ಇದು ಮಾರ್ಗದರ್ಶನ ಮಾಡಬಲ್ಲದು. ಆದ್ದರಿಂದ ಈ ಪುಸ್ತಕ ನಿಮ್ಮಲ್ಲಿರದಿದ್ದರೆ ಕೂಡಲೇ ಸಂಗ್ರಹಿಸಿರಿ.

ಇಂದೇ ನಿಮ್ಮ ಪ್ರತಿಗಳನ್ನು ತರಿಸಿಕೊಂಡು ಯಶಸ್ಸನ್ನು ಗಳಿಸಿರಿ!!

ವ್ಯಾಪಾರಸ್ಥರಿಗೆ ಧಾರಳ ಕಮೀಶನ್

ಆಕಳವಾಡಿ ಬುಕ್ ಡಿಪೋ, (ವಿಜಯ ರೋಡ) ಧಾರವಾಡ

ತ್ವರೆ ಮಾಡಿರಿ! ಇಂದೇ ಸಂಗ್ರಹಿಸಿರಿ!

ಹಬ್ಬ—ಹುಣ್ಣಿವೆಗಳು

ಬೆಲೆ: ೦—೧೫—೦

ಎಲ್ಲರಲ್ಲಿಯೂ ಇರಬೇಕಾದ ಪುಸ್ತಕ. ಹಬ್ಬಗಳು ರೂಢಿಯಲ್ಲಿ ಏಕೆ ಬಂದವು? ಅವುಗಳಿಗಿರತಕ್ಕ ಐತಿಹಾಸಿಕ ಹಿನ್ನೆಲೆ ಮತ್ತು ಮಹತ್ವ ಕುರಿತು ಸರಳ ಶೈಲಿಯಲ್ಲಿ ವಿವೇಚಿಸಲಾಗಿದೆ.

——

ತ್ವರೆ ಮಾಡಿರಿ! ಇದೀಗ ತಯಾರಾಗಿವೆ.

ಲಘುಪಾಠಮಾಲೆ—೧ ಇತಿಹಾಸ ಬೆಲೆ ೦-೬-೦

,, ೨ ಭೂಗೋಲ ಬೆಲೆ ೦-೬-೦

,, ೩ ಭೂಮಿತಿ-ಜಮಾಖರ್ಚ ೧-೬-೦

,, ೪ ವ್ಯಾಕರಣ (ಅಚ್ಚಿನಲ್ಲಿ)

ಈ ಚಿಕ್ಕ ಪುಸ್ತಕಗಳು ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೂ ೫-೬ನೇ ಇಯತ್ತೆ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯುಕ್ತವಾಗಿವೆ. ಈಗಾಗಲೆ ಈ ಮಾಲೆಯು ಬಹುಜನರಿಂದ ಮನ್ನಣೆ ಪಡೆದಿದೆ.

ಆಕಳವಾಡಿ ಬುಕ್-ಡಿಪೋ, ಧಾರವಾಡ

ಪ್ರಾಥಮಿಕ ಶಾಲಾ ಪ್ರಶಸ್ತಿಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು
ಶ್ರೀ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಿಗಳ ಹತ್ತರ ದೊರೆಯುವದು. ಬೆಲೆ ೧-೧೫-೦, ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಅಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಜಿ. ವಾಯ್. ರಾಣೆ

ಪ್ರಕಾಶಕರು, ಕಳಸ, ಕಸಬಾ ಪೇಟೆ, ಪುಣೆ.

ವ್ಯಾವಹಾರಿಕ ಗಣಿತವು

(ಭಾಗ ೧, ೨, ೩)

೫, ೬, ೭ನೆಯ ಇಯತ್ತೆಯವರಿಗಾಗಿ

"ಅನೇಕ ವರ್ಷಗಳಿಂದ ನನಗೆ ಚೆನ್ನಾಗಿ ಪರಿಚಿತರಾದ ಶ್ರೀಮಾನ್ ಅನಂತರಾವ ಬೋಡೆಯವರ "**ವ್ಯಾವಹಾರಿಕ ಗಣಿತ**"ದ ಎಲ್ಲ ಭಾಗಗಳನ್ನು ನಾನು ಕೂಲಂಕುಷವಾಗಿ ಓದಿ ನೋಡಿದೆನು. ಈ ಪುಸ್ತಕವು ಅವರ ಹಿರಿ ವರ್ಷಗಳ ಶಿಕ್ಷಣಕಾರ್ಯದ ಮತ್ತು ಅನುಭವದ ಪರಿಪಕ್ವವಾದ ಫಲವಾಗಿರುವದೆಂದು ಹೇಳಲಿಕ್ಕೆ ನನಗೆ ಸಂತೋಷವಾಗುತ್ತದೆ. ಇದು ಒಳ್ಳೆಯ ಯೋಜನೆಯ ತಳಹದಿಯ ಮೇಲೆ ರಚಿಸಿದ್ದಾಗಿದೆ; ಮತ್ತು ಹೊಸ ಅಭ್ಯಾಸಪತ್ರಿಕೆಯಂತೆ ಎಲ್ಲ ಅಂಶಗಳನ್ನು ಒಳಗೊಂಡಿದೆ. ಅಲ್ಲದೆ ಸರಿಯಾಗಿ ಅನುಕ್ರಮದಲ್ಲಿ ಕೊಡಲಾಗಿರುವ, ಉತ್ತಮವಾಗಿ ಆರಿಸಿದ ನಿತ್ಯಜೀವನದಿಂದ ಅಯ್ದುಕೊಂಡ ಉದಾಹರಣೆಗಳನ್ನು ಕೊಡಲಾಗಿದೆ. ಇದು ಇಂದು ಯೋಜನೆಯ ತಳಹದಿಯ ಮೇಲೆ ರಚಿಸಲಾದ ಪಠ್ಯಪುಸ್ತಕಗಳ ವಿರಲತೆಯಿಂದ ಉಂಟಾಗಿರುವ ಪ್ರತಿಕೂಲತೆಯನ್ನು ಹೋಗಲಾಡಿಸಿ ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿ ಕಂಡುಬರುವದರಲ್ಲಿ ಸಂಶಯವಿಲ್ಲ." ಎಂದು ಎಸ್. ಟಿ. ಕಾಲೇಜಿನ ಗಣಿತ ವಿಷಯದ ಪ್ರಾಧ್ಯಾಪಕರಾದ ಶ್ರೀಮಾನ್ ಪಿ. ಎಸ್. ಮಳಗಾವಕರರು M. A., B. T., M. Ed. ಇವರು ಹೇಳುತ್ತಾರೆ.

ಪ್ರತಿಗಳು ದೊರೆಯುವ ಸ್ಥಳ: ಎ. ಬ್ಹಿ. ಬೋಡೆ ಫುಲಬಾಗ ೨೨೪/೪೭ ಬೆಳಗಾವಿ

ಶಿಕ್ಷಕ ಬಂಧುಗಳೇ ತೊಂದರೆ ಪಡುವಿರೇಕೆ ನಿಮ್ಮ ಸಲುವಾಗಿಯೇ ತಯಾರ ಮಾಡಲಾಗಿದೆ.
ಇಂದೇ ತರಿಸಿರಿ! ಪುರೆಯಬೇಡಿರಿ!

ಮೆ। ಗ. ಜ. ಗುಂಜೀಕರ, ಏ. ಓ. ಜಿಲ್ಲಾ ಸ್ಕೂಲ್‌ಬೋರ್ಡ, ವಿಜಾಪುರ
ಮೆ। ಎ. ಎಚ್. ದಳವಾಯಿ, ಡಿ. ಎ. ಇ. ಜಿಲ್ಲಾ, ವಿಜಾಪುರ
ಇವರುಗಳ ಮುನ್ನಡಿ ಮತ್ತು ಪ್ರೋತ್ಸಾಹಗಳಿಂದ ಪ್ರಾಥಮಿಕ, ಮಾಧ್ಯಮಿಕ ಹಾಗೂ ಮೂಲ
ಶಿಕ್ಷಣ ಬೋರ್ಡುಗಳಿಂದ ಸಂಯುಕ್ತವಾಗಿ ಪರಿಷ್ಕರಿಸಲ್ಪಟ್ಟು ಸ್ವೀಕೃತವಾದ

ಅಭ್ಯಾಸ ಪತ್ರಿಕೆಗಳು

೧ರಿಂದ ೪ನೆಯ ಇಯತ್ತೆ ಪೂರ್ಣ. ೫೦ ಪುಟಗಳದ್ದು ಬೆಲೆ ೮ ಆಣೆ.
೫ರಿಂದ ಪ್ರಾ. ಶಾ. ಪ್ರ. ಪತ್ರ ಪರೀಕ್ಷಾಪೂರ್ಣ ೧೦೨ ಪುಟಗಳುಳ್ಳದ್ದು
ಬೆಲೆ ೧೨ ಆಣೆ

ಬ. ದು. ಹಿರೇಮಠ ಮಾಸ್ತರ, ವಿಜಾಪುರ

ಚಿಂತೆ! ಚಿಂತೆ!! ಚಿಂತೆ!!!

ಶಿಕ್ಷಕರಿಗೂ ಚಿಂತೆ!
ಪಾಲಕರಿಗೂ ಚಿಂತೆ!!
ಮಕ್ಕಳಿಗೂ ಚಿಂತೆ!!!

?

ಶಿಕ್ಷಕರ ಶ್ರಮ ಹಾಳು! ಮಕ್ಕಳ ಓದು ಹಾಳು!! ಪಾಲಕರ ಹಣ ಹಾಳು!!!
ಇವುಗಳ ನಿವಾರಣೋಪಾಯ ಬೇಕೆ? ಹಾಗಿದ್ದರೆ,
ಪರೀಕ್ಷೆಯ
ಸ್ಕಾಲರ್‌ಶಿಪ್ ಮತ್ತು ಮುಲ್ಕೀ ವಿದ್ಯಾರ್ಥಿಗಳಿಗಾಗಿ
ಹೊಸ ಅಭ್ಯಾಸ ಪತ್ರಿಕೆಯಂತೆ ಬರೆದ

ಪ್ರಶ್ನೋತ್ತರ ದೀಪಿಕೆ

ಇತಿಹಾಸ

ಬೆಲೆ ೦—೧೪—೦ (ಪೌರನೀತಿ ಸಹಿತ) (ಅಂಚೆ ವೆಚ್ಚ ಪ್ರತ್ಯೇಕ)

ಇದನ್ನು ತಪ್ಪದೇ ಓದಿರಿ. ಭಾರತದ ನಿರ್ಮಾತೃಗಳ ಜೀವನ ಚರಿತ್ರೆ, ರಾಜ್ಯಘಟನೆ,
ಮಂತ್ರಿಮಂಡಲಗಳ ವಿವರಣೆಯನ್ನೊಳಗೊಂಡಿರುವ ಏಕೈಕ ಹೊತ್ತಿಗೆ.
ಇಂದೇ ಬರೆಯಿರಿ ಅಥವಾ ಭೆಟ್ಟಿಯಾಗಿರಿ.

ನೀಲಾ ಬುಕ್ ಡಿಪೋ, ಮಾರುತಿ ಬೀದಿ, ಬೆಳಗಾವಿ

ಮಕ್ಕಳ ಸಚಿತ್ರ ಅಂಕಗಣಿತ

ಪ್ರಾಥಮಿಕ ೧, ೨, ೩ನೆಯ ತರಗತಿಗಳಿಗೆ

ಹೊಸ ಅಭ್ಯಾಸಪತ್ರಿಕೆಯಂತೆ ಬರೆಯಲ್ಪಟ್ಟಿವು! ಹೊಸ ಶಿಕ್ಷಣಪದ್ಧತಿಗೆ ಹೊಂದಿಕೊಳ್ಳುವಂತೆ ವಿಷಯ ವಿವೇಚನೆಯನ್ನೊಳಗೊಂಡುವು! ದಿನ ನಿತ್ಯದ ಜೀವನಕ್ಕೆ ಸಂಬಂಧಿಸಿದ ಉದಾಹರಣೆಗಳು! ಸುಲಭವಾದ ಶೈಲಿ, ಮಕ್ಕಳ ಮನಸೆಳೆಯುವ, ಕಣ್ಣೆಳೆಸುವ ಸುಂದರ ಚಿತ್ರಗಳು!! ಮಕ್ಕಳಿಗೆ ಅತ್ಯುಪಯುಕ್ತ!

೧ನೆಯ ತರಗತಿಯ ಅಂಕಗಣಿತ: ಬೆಲೆ ೦-೫-೦

೨ನೆಯ ತರಗತಿಯ ಅಂಕಗಣಿತ: ಬೆಲೆ ೦-೭-೦

೩ನೆಯ ತರಗತಿಯ ಅಂಕಗಣಿತ: ಬೆಲೆ ೦-೧೦-೦

ರಾಮಾಶ್ರಯ ಬುಕ್-ಡಿಪೊ, ಧಾರವಾಡ.

ಸ್ವತಂತ್ರ ಭಾರತೀಯ ರಾಜ್ಯತಂತ್ರ

(ಸಚಿತ್ರ)

ಲೇಖಕರು: **ಶೀ. ನಾರಾಯಣ ಶರ್ಮ**

ಎಸ್. ಎಸ್. ಸಿ (ಮ್ಯಾಟ್ರಿಕ್), ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ (ಮುಲ್ಕಿ) ಹಾಗು ಪ್ರಾಥಮಿಕ ಶಿಕ್ಷಕರ ಪ್ರಮಾಣಪತ್ರ ಪರೀಕ್ಷೆ (ಪಿ. ಟಿ. ಸಿ.) ಗಳ ಹೊಸ ಅಭ್ಯಾಸ ಪತ್ರಿಕೆಗಳಿಗೆ ಅನುಸಾರವಾಗಿ ಬರೆಯಲ್ಪಟ್ಟಿದು. ಇದೊಂದೇ ಪುಸ್ತಕದಲ್ಲಿ ಮೂರು ಪರೀಕ್ಷೆಗಳಿಗೆ ಅವಶ್ಯವಾದ ಭಾರತೀಯ ರಾಜ್ಯತಂತ್ರದ ತ್ರಿವೇಣೀ ಸಂಗಮ! ವಿಷಯಕ್ಕನುಗುಣವಾದ ಸುಂದರ ಚಿತ್ರಗಳು! ನಕಾಶೆಗಳು! ಚಿತ್ರಪಟಗಳು! ಗಹನವಾದ ವಿಷಯವನ್ನು ಸುಲಭವಾಗಿ ತಿಳಿಯುವ ಶೈಲಿಯಲ್ಲಿ ಪ್ರತಿಪಾದಿಸಲಾಗಿದೆ.

ಬೆಲೆ: ೧—೦—೦ ಮಾತ್ರ

ಪ್ರಕಾಶಕರು:

ರಾಮಾಶ್ರಯ ಬುಕ್-ಡಿಪೊ. ಧಾರವಾಡ

Regd. No, B. 5375

ಗೌರೀಶ ಗ್ರಂಥ ಪ್ರಕಟನಾಲಯದಿಂದ ಪ್ರಕಟವಾದ ಹೊಸ ಹೊತ್ತಿಗೆಗಳು

೧. **ಕರ್ನಾಟಕದ ಐತಿಹಾಸಿಕ ಕಥೆಗಳು.** ೪ನೇ ಇಯತ್ತಿಗೆ — ಬೆಲೆ ೦-೧೪ ೦
ಲೇಖಕರು :- ಶ್ರೀಯುತ ಬಸಪ್ಪ ಮಲ್ಲಪ್ಪ ಶಿಂತ್ರಿ ಬಿ.ಎ.ಬಿ.ಟಿ.
ರಿಟಾಯರ್ಡ ಅ. ಎ. ಇ. ದಕ್ಷಿಣ ಭಾಗ, ಧಾರವಾಡ.

೨. **ಭೂಮಂಡಲ ಬೋಧಿನಿ ಭಾಗ ೧.** ೪ನೆಯ ಇಯತ್ತಿಗೆ — ಬೆಲೆ ೦-೧೨-೦
ಲೇಖಕರು :- ಕೈ. ಶಿ. ಸೋ. ಕುಲಕರ್ಣಿ.

೩. **ಭೂಮಂಡಲ ಬೋಧಿನಿ ಭಾಗ ೨.** ೫ನೆಯ ಇಯತ್ತಿಗೆ — ಬೆಲೆ ೧ ೪ ೦
ಲೇಖಕರು :- ಶ್ರೀಯುತ ಎ ಜಿ. ಕುಲಕರ್ಣಿ ಬಿ.ಎ.ಬಿ.ಟಿ.
ಮತ್ತು ಶ್ರೀಯುತ ಕಾರಡಗಿ ಬಿ.ಎ.

೪. **ಭೂಮಂಡಲ ಬೋಧಿನಿ ಭಾಗ ೩.** ೬ನೆಯ ಇಯತ್ತಿಗೆ — ಬೆಲೆ ೧-೧೦-೦
ಲೇಖಕರು :- ಸದರೀಯವರು

೫. **ಭೂಮಂಡಲ ಬೋಧಿನಿ ಭಾಗ ೪.** ೭ನೆಯ ಇಯತ್ತಿಗೆ — ಬೆಲೆ ೨-೨-೦
ಲೇಖಕರು :- ಸದರೀಯವರು

೬. **ಸ್ವತಂತ್ರ ಭಾರತದ ಗಣರಾಜ್ಯ ಘಟನೆ.** ೭ನೆಯ ಇಯತ್ತಿಗೆ — ಬೆಲೆ ೦-೧೨-೦
ಲೇಖಕರು :- ಆಪ್ಯ ರಂಗಾಚಾರ್ಯ ಎಂ. ಎ. (ಲಂಡನ)

೭. **ಭಾರತ ರಾಜ್ಯಘಟನೆಯ ತಿಳಿನೋಟ.** ೬ನೆಯ, ೭ನೆಯ ಇಯತ್ತಿಗಳಿಗೆ — ಬೆಲೆ ೦-೮-೦
ಲೇಖಕರು :- ಶ್ರೀ. ಗ. ಸ. ಹಾಲಪ್ಪ ಎಂ. ಎ. ಮಹಾರಾಜಾ
ಕಾಲೇಜ, ಮೈಸೂರ.

ಮೇಲಿನ ಎಲ್ಲ ಪುಸ್ತಕಗಳು ಅವುಗಳ ಮುಂದೆ ಕಾಣಿಸಿದ ಇಯತ್ತಿಗಳಿಗೆ ೧೯೫೪ರ ವರೆಗೆ **ಪಠ್ಯ ಪುಸ್ತಕಗಳೆಂದು ಸರಕಾರದವರಿಂದ ಮಂಜೂರಾಗಿವೆ.**

೮. **ಮನಸ್ಸು ಮತ್ತು ಶಿಕ್ಷಣ ಸಮಸ್ಯೆ.** ಟ್ರೇನಿಂಗ ಕಾಲೇಜದ ೨ನೆಯ ವರ್ಷದವರಿಗೆ ಪೂರಕ-ವಾಚನವೆಂದು ಮಂಜೂರಾಗಿದೆ. — ಬೆಲೆ ೦-೧೨-೦
ಲೇಖಕರು :- ಶ್ರೀ. ಕಾರಡಗಿ ವೀರಭದ್ರಪ್ಪನವರು ಎಂ. ಎ. ಎಲ್ ಎಲ್. ಬಿ.

೧. **ಮಾತಿನ ಮುನ್ನಡೆ.** ೪ನೆಯ ಇಯತ್ತಿಗೆ | ೩. **ಮಾತಿನ ಮುನ್ನಡೆ.** ೬ನೆಯ ಇಯತ್ತಿಗೆ
೨. **ಮಾತಿನ ಮುನ್ನಡೆ.** ೫ನೆಯ ಇಯತ್ತಿಗೆ | ೪. **ಮಾತಿನ ಮುನ್ನಡೆ.** ೭ನೆಯ ಇಯತ್ತಿಗೆ

೫. ಪತ್ರಗಳ ಪರಿಚಯ. ೬-೭ನೆಯ ಇಯತ್ತಿಗಳಿಗೆ.
ಇವೆಲ್ಲವೂ ಪೂರಕ ವಾಚನಗಳೆಂದು ಮಂಜೂರಾಗಿವೆ.

ಪ್ರಕಾಶಕರು :
ಕಂಥುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ, ಧಾರವಾಡ.

inted by M. A. Kamat. B. sc. at Jai Hind Art Press, Javlipeth, Dharwar. Edited
jintly a

ಕನ್ನಡ

ಪೃಥ್ವಿಮಿಕ ಪತ್ರಿಕೆ



" ಸತ್ಯ — ಅಹಿಂಸೆಯ ಸಾಕ್ಷಾತ್ಕಾರವೇ ಜೀವನದ ಗುರಿ "

—ಗಾಂಧೀಜಿ

ಪ್ರಧಾನ ಸಂಪಾದಕರು:—ಡಿ. ವಿ. ಗು. ಹಂದ್ರಾಳ

★ ಅಕ್ಟೋಬರ ೧೯೫೨ ★

ಬಿಡಿ ಪ್ರತಿ ೦—೬—೦ ★ ವಾ. ಚಂದಾ ೪—೦—೦

ಮುಂಬಯಿ ವಿದ್ಯಾಖಾತೆಯ ಪಠ್ಯ ಪುಸ್ತಕ ಸಮಿತಿಯಿಂದ ಮಂಜೂರಾಗಿ, ಈಗಾಗಲೇ ವಿಜಾಪುರ ಜಿಲ್ಲೆಯ ಮಾಧ್ಯಮಿಕ ಶಾಲೆಗಳಲ್ಲಿಯೂ, ಧಾರವಾಡ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿಯೂ ಉಪಯೋಗದಲ್ಲಿರುವ ಹಾಗೂ **ಕರ್ನಾಟಕ ವಿದ್ಯಾವರ್ಧಕ ಸಂಘ** ಧಾರವಾಡ ಇವರಿಂದ ಪಾರಿತೋಷಕ ಪಡೆದ ಗ್ರಂಥ.

ಮಹಾತ್ಮಾ ಗಾಂಧಿ

(ಮಹಾತ್ಮರ ಜೀವನ ಚರಿತ್ರೆ ಹಾಗೂ ವಿಚಾರ ಸಂಗ್ರಹ)

ದ್ವಿತೀಯ ಮುದ್ರಣ.

ಲೇಖಕರು:—**ಸ. ವೀ. ಹಂಜಿ,** ಎಂ. ಎ., ಬಿ. ಟಿ., ಡಿ. ಬಿ. ಈ.

೭೯ ವರ್ಷಗಳ ತ್ಯಾಗಪೂರ್ಣ, ತಪಸ್ಸಿನ ಹಾಗೂ ಸೇವಾಮಯ ಮಹಾನ್ ಜೀವನದ ಪ್ರಮಾಣ ಗ್ರಂಥ.

ಮಹಾತ್ಮರ ಸಮಗ್ರ ಜೀವನವನ್ನು ಸರಳ ಶೈಲಿಯಲ್ಲಿ ಚಿತ್ರಿಸುವ ಮೊದಲನೆಯ ಗ್ರಂಥ.

ಪ್ರೊ. **ಶಿ. ಶಿ. ಬಸವನಾಳ** ಅವರ ಮುನ್ನುಡಿ ಹಾಗೂ ಮಾನ್ಯ ಶ್ರೀ **ಆರ್. ಆರ್. ದಿವಾಕರ** ಅವರ ಅಭಿನಂದನೆಯೊಡನೆ ಮಿನುಗುವ ಗ್ರಂಥ.

ಪ್ರತಿಯೊಬ್ಬ ಕನ್ನಡಿಗನು ಅವಶ್ಯವಾಗಿ ಓದಬೇಕೆಂದು ವಿನ್ನಹ.

ಕ್ರೌನ್ ಅ. ಪ. ಪುಟ. ೧೮+೨೦೦

ಬೆಲೆ, ಉತ್ತಮ ಪ್ರತಿ. ರೂ ೨—೦—೦

ಸಾದಾ ಪ್ರತಿ ರೂ ೧—೮—೦ (ವಿದ್ಯಾರ್ಥಿಗಳ ಸಲುವಾಗಿ)

ಗ್ರಂಥಗಳು ಸಿಗುವ ವಿಳಾಸಃ—

ಎಸ್. ವ್ಹಿ. ಹಂಜಿ.

ಬಸವೇಶ್ವರ ಟ್ರೇನಿಂಗ ಕಾಲೇಜ, ಬಾಗಲಕೋಟೆ.

ಪುಟ ೨೬೦) **ಮೂಲ ಶಿಕ್ಷಣ** (ಬೆಲೆ: ೩-೦-೦

ಲೇಖಕರು:— **ಶ್ರೀ. ಮ. ಗು. ಹಂದ್ರಾಳ,** ಬಿ. ಎ., (ಆನರ್ಸ) ಬಿ. ಟಿ.

(ಪಿನ್ಸಿಪಾಲ, ಸರಕಾರಿ ಕ. ಗಂ. ಟ್ರೇ. ಕಾ. ಧಾರವಾಡ.)

ಮೂಲ ಶಿಕ್ಷಣದ ಬಗೆಗೆ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಪೊತ್ತಿಕೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ.

ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ.

ಆಕಳವಾಡಿ ಬುಕ್ ಡಿಪೋ, ಧಾರವಾಡ.

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ

ಸಂಚಾಲಕರು : **ಶ್ರೀ. ಡಿ. ವ್ಹಿ. ಚಿಕ್ಕರಮನೆ**, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ

ಪ್ರಧಾನ ಸಂಪಾದಕರು : **ಶ್ರೀ. ಎಂ. ಜಿ. ಹಂದ್ರಾಳ** ಬಿ.ಎ.(ಆನರ್ಸ)ಬಿ. ಟಿ., ಡಿ. ಪಿ. ಇಡಿ;ಡಿ. ಬಿ. ಇ
ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಸಹಸಂಪಾದಕರು:

ಶ್ರೀ ಯಮುನಾಬಾಯಿ ನಾಡಕರ್ಣಿ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನಪಲಗುಂಪ

ಸಂಪುಟ ೯೨	ಅಕ್ಟೋಬರ ೧೯೫೨	ಸಂಚಿಕೆ ೪

ಪರಿವಿಡಿ

ಅ. ನಂ.	ವಿಷಯ	ಪುಟ
೧.	ಸಂಪಾದಕೀಯ	೨
೨.	ಕಾರ್ಯಕ್ಷಮತೆಗೆ ಚಟಗಳ(ಅಭ್ಯಾಸಗಳ) ಅವಶ್ಯಕತೆ—ಶ್ರೀ ತಟ್ಟಿ ಶಾಮರಾಯರು....	೫
೩.	ಮಹರ್ಷಿ ಶ್ರೀ ಅರವಿಂದರು —ಶ್ರೀ. ಎಸ್. ವಾಯ್. ಶೀಲವಂತ	೮
೪.	ಶ್ರದ್ಧೆ – ಬುದ್ಧಿ(ಸಂಗ್ರಹ)—ಶ್ರೀ. ಆಯ್. ಎಸ್. ಬಿದರಿ.	೧೧
೫.	ಸಮವಾಯ ಪಾಠಪ ಟಿಪ್ಪಣಿ.	೧೩
೬.	ಭೂಗೋಲದಲ್ಲಿಯ ಮನೋರಂಜಕ ಮತ್ತು ಗರ್ಭಿತಾರ್ಥದ ಹೆಸರುಗಳು–ಶ್ರೀ. ಬ. ಮ. ಶಿಂತ್ರಿ.	೧೭
೭.	ಪುಸ್ತಕ ವಿಮರ್ಶೆ	೧೮
೮.	ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ	೧೯

ಮುಖಪೃಷ್ಠದ ಪಡಿಯಚ್ಚು "ಪ್ರತಿಭಾ ಗ್ರಂಥಮಾಲೆ"ಯ ಕೃಪೆಯಿಂದ

ಸಂಪಾದಕೀಯ

ಚರಖಾ ಜಯಂತಿ:— ಅಕ್ಟೋಬರ ಎರಡನೆಯ ದಿನಾಂಕ; ಭಾರತೀಯರೆಲ್ಲರಿಗೆ ಹೆಮ್ಮೆಯ ದಿನ; ಭಾರತದ ನಾಡಗುಡಿಯು ನಾಡಿನ ನಭೋಮಂಡಲದಲ್ಲಿ ನಲಿದು ನರ್ತಿಸುವ ದಿನ; ಭಾರತೀಯರೆಲ್ಲರೂ ಉತ್ಸವದಿಂದ ಆಚರಿಸುವ ದಿನ; ಭಾರತಕ್ಕೆ ಸ್ವಾತಂತ್ರ್ಯ ತಂದು ಕೊಟ್ಟು ವಿಧಾಯಕ ಕಾರ್ಯಗಳಲ್ಲಿ ತಮ್ಮ ದೇಹವನ್ನು ಸವಿಸಿ ಪುಣ್ಯ ಪುರುಷರಾಗಿ ಹೋದ ಪೂಜ್ಯ ಗಾಂಧೀಜಿಯವರ ಜನ್ಮದಿನ. ಈ ದಿನವನ್ನು ನಾಡಿನಲ್ಲೆಲ್ಲ ಆಚರಿಸುವದು ಭಾರತೀಯರೆಲ್ಲರಿಗೆ ಅತ್ಯಂತ ಆನಂದದ ಹಾಗೂ ಅಭಿಮಾನದ ಸಂಗತಿಯೆಂದು ಬೇರೆ ಹೇಳಬೇಕಿಲ್ಲ. ಇದು ಗಾಂಧೀಜಿಯವರ ಜನ್ಮ ದಿನವಾಗಿದ್ದರೂ ಅವರ ಹೆಸರಿನಿಂದ ಆಚರಿಸುವದಕ್ಕಿಂತ ಅವರ ಹಿರಿತತ್ವವಾದ ಅವರ ವಿಧಾಯಕ ಕಾರ್ಯಶ್ರೇಷ್ಠವಾದ 'ಚರಖಾ' ಎಂಬ ಹೆಸರಿನಲ್ಲಿ ಆಚರಿಸುವದೇ ಹೆಚ್ಚು ಯೋಗ್ಯವೆಂದು ಭಾರತೀಯರು ಕಂಡುಕೊಂಡುದರಿಂದ ಈ ಜಯಂತಿಗೆ ಚರಖಾ ಜಯಂತಿಯೆಂಬ ನವೀನ ಅಭಿದಾನವು ಪ್ರಾಪ್ತವಾಗಿದೆ. ವ್ಯಕ್ತಿಗಿಂತಲೂ ತತ್ವ ಶ್ರೇಷ್ಠ; ವ್ಯಕ್ತಿಯ ದೇಹವು ಮರೆಯಾದರೂ ಅವರು ಆಡಿ ಆಚರಣೆಯಲ್ಲಿ ತಂದ ತತ್ವಗಳು ಅಜರಾಮರವಾಗಿ ಉಳಿಯುವವು. ದೇಶದ ದಾರಿದ್ರ್ಯ, ದೀನತೆ, ದೈನ್ಯಾವಸ್ಥೆಗಳನ್ನು ಕಂಡು ಕರಗಿದ ಹೃದಯದವರಾದ ಮಹಾತ್ಮರು ಚರಖವೆಂಬ ರಾಮಬಾಣವನ್ನು ಮತ್ತೆ ಪ್ರಯೋಗಿಸಲು ಭೋಧಿಸಿದರು; ಬಿಡುವಿಲ್ಲದ ಕಾರ್ಯಕ್ರಮಗಳಿಂದ ಆವ್ಯತರಾಗಿದ್ದರೂ ಅವರು ಪ್ರತಿನಿತ್ಯ ನಿರ್ದಿಷ್ಟ ಪಡಿಸಿದ ಅವಧಿಯನ್ನು ನೂಲುವದರಲ್ಲಿ ಕಳೆಯದೆ ಬಿಡುತ್ತಿರಲಿಲ್ಲ; ಚರಖವೆಂದರೆ ಅವರಿಗೆ ಪಂಚ ಪ್ರಾಣ; ನಾಡಿಯಉಸಿರು; ಪ್ರಾಣವಾಯು, ಚರಖವನ್ನು ತಿರುಗಿಸುವದರಲ್ಲಿ ಅವರು ಪರಮಾನಂದವನ್ನು ಕಾಣುತ್ತಿದ್ದರಂತೆ. ಚರಖವು ಭಾರತದ ಭಾಗ್ಯದೇವತೆ; ಭಾಗ್ಯಚಕ್ರ; ಪತಿತರನ್ನು ಪಾವನಗೊಳಿಸುವ ಮಹಾಮಂತ್ರವೆಂದು ಅವರು ತಿಳಿದಿದ್ದರು. ಇಂತಿರುವ ಚರಖದ ಮಹತ್ವವನ್ನು ಅರಿತು ನಾವೆಲ್ಲರೂ ಈ ಜಯಂತಿಯ ದಿನದಿಂದಲಾದರೂ ನಿತ್ಯನೂಲುವ ಕಾರ್ಯಕ್ರಮವನ್ನು ನಮ್ಮ ಜೀವನರಂಗದಲ್ಲಿ ಅಳವಡಿಸಿಕೊಂಡು, ಅದರಂತೆ ಮಹಾತ್ಮರ ಉಳಿದ ವಿಧಾಯಕ ಕಾರ್ಯಕ್ರಮಗಳನ್ನು ಅಕ್ಟೋಬರ ೨ ರಿಂದ ಆರಂಭವಾಗುವ ಗ್ರಾಮೋದ್ಧಾರ ಸಪ್ತಾಹದಲ್ಲಿ ಕೈಕೊಂಡು ನಮ್ಮ ಅವಶ್ಯಕ ಬೇಡಿಕೆಗಳಾದ ಆಹಾರ, ಆಚ್ಛಾಡನ, ಆಶ್ರಯ ಇವುಗಳ ಪೂರೈಕೆಯತ್ತ ಮನಸ್ಸು ಹಾಕಿದುಡಿಯುತ್ತ ಮಹಾತ್ಮರ ನೆಚ್ಚಿನ ಕಾರ್ಯವಾದ ಹರಿಜನೋದ್ಧಾರ ಕಾರ್ಯವನ್ನೂ ಕೈಕೊಂಡು ಬಡತನದಿಂದ ಬಳಲುವ ಗ್ರಾಮಗಳ ಪುನರುತ್ಥಾನದ ಕಾರ್ಯವನ್ನೂ ಅಂದಿನಿಂದ ಆರಂಭಿಸಿ ನಾಡಿನ ಉನ್ನತಿಗೆ ಕಾರಣರಾಗಬೇಕು.

ಭೂದಾನಯಜ್ಞ:— ಮಹಾತ್ಮರ ಅಚ್ಚು ಮೆಚ್ಚಿನ ಶಿಷ್ಯಾಗ್ರಣಿಗಳಲ್ಲಿ ಓರ್ವರಾದ ಆಚಾರ್ಯ ವಿನೋಬಾ ಭಾವೆಯವರು ಎಂದಿನಿಂದಲೂ ಆವರ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು, ಸಾದಾಜೀವಿಗಳಾಗಿ ಉಚ್ಚ ವಿಚಾರಿಗಳಾಗಿ ಭಾರತದಲ್ಲಿ ನಿಬಿಡವಾಗಿ ಬೆಳೆದು ನಿಂತ ಬಡತನದ ಪೆಡಂಭೂತ ಅರಣ್ಯವನ್ನು ನಿರ್ನಾಮಗೊಳಿಸುವ ಒಂದು ರಾಜಬೀದಿಯನ್ನು ಕೊರೆಯಲಿಕ್ಕಿಸಿದ್ದಾರೆ. ಅದಾವುದೆಂದರೆ ಭೂದಾನಯಜ್ಞ. ರಾಷ್ಟ್ರದಲ್ಲಿಯ ಎಲ್ಲ ಕುಟುಂಬಗಳಿಗೆ ಭೂಮಿಯು ದೊರೆಯಬೇಕು. ವಿಶೇಷವಾಗಿ ಉಳುವವನಿಗೆ ಭೂಮಿ. ಸಾಗು ಮಾಡಿ ಎತ್ತಿ, ಬಿತ್ತಿ, ಬೆಳೆಯನ್ನು ಬೆಳೆಯುವ ರೈತನಿಗೆ ಭೂಮಿಯ ಒಡೆತನವಿರಲಿಕ್ಕೇ ಬೇಕು. ಹೀಗಾದಾಗ ಮಾತ್ರ ಎಲ್ಲರಿಗೂ ಭೂಮಿದೊರೆತು ಭಾರತದಲ್ಲಿ ಈಗ ಕಂಡುಬರುವ ಮೇಲು ಕೀಳುಗಳು, ಬಡತನ-ಶ್ರೀಮಂತಿಕೆಗಳು ಇಲ್ಲದಂತಾಗಿ ರಾಷ್ಟ್ರವು ಸಿರಿ-ಸಂಪತ್ತು ಸಮಾನತೆಯಿಂದ

ಮೆರೆಯಬಹುದೆಂಬ ಹೆಬ್ಬಕೆಯಿಂದ ಪೂಜ್ಯವಿನೋಬಾಜಯವರು ದೇಶದ ವಿವಿಧ ಪ್ರದೇಶಗಳನ್ನು ಸುತ್ತುತ್ತ ತಮ್ಮ ಯಜ್ಞದ ಭೇರಿಯನ್ನು ಮೊಳಗಿಸುತ್ತಿರುವರು. ಈ ಮಂಗಲಕರ ಭೇರಿಯ ನಿನಾದವು ರಾಷ್ಟ್ರದ ಮೂಲೆಮೂಲೆಗಳಲ್ಲಿ ಮೊಳಗುತ್ತಿದೆ. ಈಗಾಗಲೇ ಲಕ್ಷಾಂತರ ಎಕರೆ ಭೂಮಿಯು ಭೂಯಜ್ಞಕ್ಕೆ ದಾನವಾಗಿ ದೊರೆತಿದೆ. ಪೂಜ್ಯ ವಿನೋಬಾಜಿಯವರ ಈ ಭೂದಾನ. ಯಜ್ಞ ಕಾರ್ಯವು ಯಶಸ್ವಿಯಾಗಿ ಸಾಗಿ ನಾಡಿನ ಸುಖ-ಶಾಂತಿ-ಸಮೃದ್ಧಿಗಳಿಗೆ ಪೋಷಕವಾಗಿ ಪರಿಣಮಿಸಲೆಂದು ಹಾರೈಸುವೆವು.

ಶಿಕ್ಷಣ ಸಂಸ್ಥೆಗಳಲ್ಲಿ ಪತ್ರಿಕೆಗಳ ಪ್ರಗ್ರೋಜರ:—

ಇತ್ತೀಚೆಗೆ ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಹಾಗೂ ಪ್ರಾಥಮಿಕ ಸಾಲೆಗಳಲ್ಲಿ ಪತ್ರಿಕೆಗಳು ಪ್ರಕಟವಾಗುತ್ತಿರುವದು ಸಂತೋಷದ ಸಂಗತಿಯೆಂದು ಹೇಳಬಹುದು. ಸಾಲೆಗಳಲ್ಲಿ ಹಾಗೂ ತರಬೇತಿಸಂಸ್ಥೆಗಳಲ್ಲಿ ವಿದ್ಯಾರ್ಥಿಯ ವಿಕಸನವಾಗಬೇಕಾದರೆ, ತರಬೇತು ಹೊಂದುವವರಿಗೆ ಲೇಖನ ಕಲೆಯ ಜ್ಞಾನವಾಗಿ ಶಿಕ್ಷಣ ಪದ್ಧತಿಯಸಾದ್ಯಂತ ವಿನರಗಳೂ ಶಿಕ್ಷಣ ತತ್ವಗಳೂ ನುನದಟ್ಟಾಗಬೇಕಾದರೆ ಶೈಕ್ಷಣಿಕ ಪತ್ರಿಕೆಗಳು ಪ್ರಕಟವಾಗುವದು ಅತ್ಯಗತ್ಯ. ಅನೇಕ ಪ್ರಾಥಮಿಕ ಸಾಲೆಗಳಲ್ಲಿ ಶಿಕ್ಷಕರು ಮಕ್ಕಳ ಲೇಖಗಳನ್ನೊಳಗೊಂಡ ಕೈ ಬರೆಹದ ಪತ್ರಿಕೆಗಳನ್ನು ಹೊರಡಿಸುತ್ತಿರುವುದು ಕಂಡು ಬರುತ್ತಿದೆ. ಕೆಲವು ಸಾಲೆಗಳಲ್ಲಿ ಕಳಕಂತನ ಇನಿದಿಂಚರವು ಕೇಳಬರುತ್ತಿದ್ದರೆ ಬೇರೆ ಕೆಲವುಗಳಲ್ಲಿ ತಾಮ್ರ ತುಂಡನ ಸೊಲ್ಲು, ಮತ್ತೆ ಕೆಲವುಗಳಲ್ಲಿ ಭ್ರಮರಗಳ ಝೇಂಕಾರ ನಿನಾದವು; ಇನ್ನೂ ಕೆಲವು ಸಂಸ್ಥೆಗಳಲ್ಲಿ ಚಾತಕಗಳ-ಯೋಗಸಾಧನೆಯ ಅಂತರ್ಸ್ವರವು ತೇಲಿಬರುತ್ತಿದೆ. ನಾಡಿನ ವಿವಿಧ ದಿಶೆಗಳಲ್ಲಿ ಹಬ್ಬಿಕೊಂಡಿರುವ ಹಲವು ಸಾಲೆಗಳಲ್ಲಿ ಸಪ್ತಾಶ್ವಗಳ ಖುರಪುಟಗಳಸಪ್ಪಳದೊಂದಿಗೆ ಅರುಣನೂ, ಅರುಣೋದಯವೂ, ಸಪ್ತಾಶ್ವನೂ, ಹೊಂಬಿಸಲೂ, ಹೂಬಿಸಲೂ, ಪ್ರಭಾಕರನೂ ಕಂಗೊಳಿಸಿ ನಾಡ ಮಕ್ಕಳಲ್ಲಿ ಸ್ವತಂತ್ರ ವಿಚಾರಸರಣಿಯನ್ನೂ ಲೇಖನ ಕಲೆಯ ಹೆಚ್ಚಳವನ್ನೂ, ವಿವಿಧ ವಿಷಯಗಳ ಜ್ಞಾನವನ್ನೂ ಬೀರಹತ್ತಿದ್ದು ಸಂತೋಷದ ಮಾತಾಗಿದೆಯಲ್ಲದೆ ನಾಡ ಪುನರುತ್ಥಾನದ ಶುಭಚಿಹ್ನವೆಂದು ಹೇಳಬಯಸುವೆವು. ಕೆಲವು ಸಂಸ್ಥೆಗಳಲ್ಲಿ ಈ ಪತ್ರಿಕೆಗಳು ಮುದ್ರಿತವಾಗಿ ಪ್ರಕಟಿಸಲ್ಪಟ್ಟು ನಾಡಿನ ದಿಗಂತಗಳಲ್ಲಿ ಸಹ ಪಸರಿಸಿರುವದು ಕಂಡುಬರುತ್ತಿದೆ.

ಧಾರವಾಡ ವನಿತಾಸೇವಾ ಸಮಾಜದವರು ಶ್ರೀಮತಿ ಸರೋಜಿನಿ ಮಹಿಷಿ ಇವರ ಸಂಪಾದಕತ್ವದಲ್ಲಿ ಹೊರಡಿಸುತ್ತಿರುವ 'ವೀರಮಾತೆ' ಯನ್ನು ಇದಕ್ಕೆ ಒಂದು ವೀರವತ್ತಾದ ಉದಾಹರಣೆಯೆಂದು ಹೇಳಬಹುದು. ಕೇವಲ ಸ್ತ್ರೀಯರ ವಿಕಾಸಕ್ಕಾಗಿ ಮಿಸಲಾಗಿಟ್ಟ ಪತ್ರಿಕೆಯೊಂದು ಈಗ ಅವಶ್ಯವಿತ್ತು. ಸ್ತ್ರೀಶಿಕ್ಷಣ, ಸ್ತ್ರೀಯಬಹುಮುಖ ಹೊಣೆ, ಮೊದಲಾದ ವಿಷಯಗಳನ್ನು ಕುರಿತು ಚರ್ಚಿಸುತ್ತಿರುವ ಈ ಪತ್ರಿಕೆಗೆ 'ಪ್ರಾಥಮಿಕ ಶಿಕ್ಷಣ'ವು ಹಾರ್ದಿಕ ಸ್ವಾಗತವನ್ನು ಕೋರುತ್ತದೆ ಈ ಪತ್ರಿಕೆಯು ತಾನಿಟ್ಟುಕೊಂಡ ಉಚ್ಚತರ ಆದರ್ಶವನ್ನು ಸಾಧಿಸಲು ಯತ್ನಿಸಿ ಜಾಜ್ವಲ್ಯಮಾನವಾಗಿ ಬೆಳಗಲೆಂದೂ ಹಾರೈಸುತ್ತದೆ.

ಹಳ್ಳಿಯ ಪ್ರಾಥಮಿಕ ಸಾಲೆಗಳಲ್ಲಿ ಒಂಬಾಪ ಹುನಗುಂದದ ಗಂಡುಮಕ್ಕಳ ನಾಲೆಯಲ್ಲಿ ಮಕ್ಕಳು ತಮ್ಮ ಗುರುಗಳ ಮಾರ್ಗದರ್ಶಿತ್ವದಲ್ಲಿ 'ಬಾಲಸಾಹಿತ್ಯ' ವೆಂಬ ವಿಶೇಷ ಸಂಚಿಕೆಯನ್ನು ಭಾರತ ಸ್ವಾತಂತ್ರ್ಯದ ಈ ಸಲದ ವರ್ಧಂತ್ಯೋತ್ಸವದ ದಿನ ಪ್ರಕಟಿಸಿದ್ದು ಅಭಿನಂದನೀಯವಾದುದು. ಈ ಸಂಚಿಕೆಯು ಮಕ್ಕಳ ಲೇಖಗಳನ್ನು, ಕವನಗಳನ್ನು, ಕಥೆ ಮೊದಲಾದವುಗಳನ್ನು ಒಳಗೊಂಡು ಅವರ ವಿಚಾರಶಕ್ತಿಯ, ಬರಹಶಕ್ತಿಯ, ಜ್ಞಾನವನ್ನುದ್ದೀಪಿಸುವ ಅಂತಃಶಕ್ತಿಯು ಏಳ್ಗೆಯನ್ನು ಸಾಧಿಸಲು ಯತ್ನಿಸಿದೆ. ಪತ್ರಿಕೆಗೆ ನಮ್ಮ ಸಾದರದ ಸ್ವಾಗತವನ್ನು ನೀಡುವೆವಲ್ಲದೆ ಇಂತಹ ಸಂಚಿಕೆಗಳು ಇನ್ನು ಮುಂದೆಯೂ ಈ ಸಾಲೆಯಲ್ಲಿ ಪ್ರಕಟವಾಗಲೆಂದೂ ಉಳಿದ ಸಾಲೆಗಳಲ್ಲಿ ಸಹ ಉದಯೋನ್ಮುಖವಾಗಲೆಂದೂ ಹಾರೈಸುವೆವು.

ಕಂಬನಿ

ದಿನಾಂಕ ೯-೯-೧೯೫೨ ರಂದು ಹರಿಜನ ಪತ್ರಿಕೆಯ ಸಂಪಾದಕರೂ, ಗಾಂಧೀಜಿಯವರ ನಿಜವಾದ ಅನುಯಾಯಿಗಳೂ ಆಗಿದ್ದ ಶ್ರೀ ಕಿಶೋರಲಾಲ ಮಶ್ರುವಾಲಾ ಇವರು ನಿಧನ ಹೊಂದಿದರೆಂಬ ಸುದ್ದಿಯು ಅಖಂಡ ಭಾರತದಲ್ಲಿ ಖೇದವನ್ನುಂಟು ಮಾಡಿದೆ. ಭಾರತದ ರಾಜಕಾರಣ ಹಾಗೂ ಅರ್ಥ ಶಾಸ್ತ್ರ ಇವು ವಿಕೇಂದ್ರೀಕರಣ ತತ್ವದ ಮೇಲೆಯೇ ನಿಲ್ಲಬೇಕೆಂಬ ಗಾಂಧೀಜಿಯವರ ಹರಕೆಯನ್ನೇ ಹರಿಜನ ಪತ್ರಿಕೆಯಲ್ಲಿ ಹರಡಿದರು. ಗ್ರಾಮೋದ್ಯೋಗಗಳ ಪುನರುಜ್ಜೀವನವೇ ಭಾರತದ ಜೀವ-ಜೀವಾಳ ಎಂಬ ಸಂದೇಶವನ್ನೂ ಬೀರಿದರು. ಪತಿತೋದ್ಧಾರವೇ ದೇವ ದರ್ಶನದ ಸಾಧನವೆಂದು ಕೋರಿದರು. ಬಾಪೂಜಿಯವರ ಪಡಿನೆಳಲಾಗಿ, ಕರ್ಮಯೋಗಿಯಾಗಿ ಜಾಳಿ ಬೆಳಗಿ ಮರೆಯಾದ ಶ್ರೀ ಕಿಶೋರಲಾಲ ಮಶ್ರೂವಾಲಾ ಅವರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನೀಯಲಿ!

ಪ್ರಕಟನೆ.

ವಿಷಯ:— ಸ್ಕಾಲರಶಿಪ್ಪು ಪರೀಕ್ಷೆ, ೧೯೫೩ – ೫೪

"ಶಾಲಾ ವರ್ಷಾವಧಿಯಲ್ಲಿ ಆದ ಬದಲಾವಣೆಗೆ ಅನುಗುಣವಾಗಿ ಮೆ|| ಡಾಯರೆಕ್ಟರ ಸಾಹೇಬರವರು ಈ ಮೊದಲು ಡಿಸೆಂಬರ ತಿಂಗಳ ಮಧ್ಯದಲ್ಲಿ ನಡೆಯುತ್ತಿದ್ದ ಹಾಯಸ್ಕೂಲ ಮತ್ತು ಮಿಡಲ್ ಸ್ಕೂಲ ಸ್ಕಾಲರಶಿಪ್ಪು ಪರೀಕ್ಷೆಗಳನ್ನು ಫೆಬ್ರುವರಿ ಮಧ್ಯದವರೆಗೆ ಮೂಂದಾಡಿಹ್ಹಾರೆ.

ಬರಲಿರುವ ಪರೀಕ್ಷೆಗಳ ನಿಶ್ಚಿತ ದಿನಾಂಕುಸಳನ್ನು ಹಿಂದಿನಿಂದ ಪ್ರಕಟಿಸಲಾಗುವದು."

ಸಹಿ —ಡಿ. ಬ್ಲಿ ಚಿಕ್ಕರಮನೆ
ಎಜ್ಯುಕೇಶನಲ್ ಇನಸ್ಪೆಕ್ಟರ,
ಡಿ. ಡಿ. ಧಾರವಾಡ.

ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ

(೨೦ನೆಯ ಪುಟದಿಂದ ಮುಂದುವರಿದುದು)

ಧಾರವಾಡ: ಇಲ್ಲಿಯ ಕ. ಗಂ. ಸರಕಾರೀ ಟ್ರೇನಿಂಗ ಕಾಲೇಜದಲ್ಲಿ ಗಜಾನೋತ್ಸವದ ಅಂಗವಾಗಿ ಕರ್ನಾಟಕ ಕಾಲೇಜದ ಪ್ರಿನ್ಸಿಪಾಲರಾದ ಶ್ರೀ ವ್ಹಿ. ಕೆ. ಗೋಕಾಕ ಅವರ ಹಾಗೂ ಹುಬ್ಬಳ್ಳಿ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾದ ಶ್ರೀ ಎಸ್. ಡಿ. ಇಂಚಲ ಅವರ ವ್ಯಾಖ್ಯಾನಗಳೂ ಶ್ರೀ. ಗೋಸಾವಿಯವರ ಕೀರ್ತನ ಇವು ಜರುಗಿದವು. ದಿನಾಂಕ ೧ – ೯ – ೧೯೫೨ ರಂದು ಬಕ್ರೀಈದ ಹಬ್ಬವು ಆಚರಿಸಲ್ಪಟ್ಟು ಶ್ರೀ. ಎಮ್. ಎಮ್. ಸಯ್ಯದ ಅವರ ಸಮಯೋಚಿತ ಭಾಷಣವಾಯಿತು. ದಿನಾಂಕ ೧೦ – ೯ – ೫೨ ರಂದು ಕಾಲೇಜದ ವಿದ್ಯಾರ್ಥಿ-ಶಿಕ್ಷಕರೂ ಹಾಗೂ ಅಧ್ಯಾಪಕ ವರ್ಗದವರೂ ಸ್ಪ್ರಾಥನಾ ಮಂದಿರದಲ್ಲಿ ಕಲೆತು ಶ್ರೀ. ಕಿಶೋರಲಾಲ ಮಶ್ರುವಾಲಾ ಇವರ ನಿಧನದ ಬಗ್ಗೆ ದುಃಖವನ್ನು ವ್ಯಕ್ತಮಾಡಿದರು. ದಿನಾಂಕ ೧೧-೯-೫೨ ರಂದು ಭೂದಾನಯಜ್ಞವನ್ನು ಆಚರಿಸಿ ಆಚಾರ್ಯ ವಿನೋಬಾ ಭಾವೆಯವರ ಸಂದೇಶವನ್ನು ಕಾಲೇಜದ ಮುಖ್ಯಾಧ್ಯಾಪಕರು ಎಲ್ಲರಿಗೂ ತಿಳಿಸಿ ಹೇಳಿದರು. ದಿನಾಂಕ ೧೫-೯-೫೨ರಂದು ಸರ್. ಎಮ್. ವಿಶ್ವೇಶ್ವರಯ್ಯನವರ ಜಯಂತಿಯನ್ನು ಆಚರಿಸಲಾಯಿತು, ಶ್ರೀ, ಆರ್. ಎಫ್. ಪಾಟೀಲ ಬಿ. ಇ. ಸ್ಪ್ರಾಧ್ಯಾಪಕರು ಕೃಷಿ ಮಹಾವಿದ್ಯಾಲಯ ಧಾರವಾಡ ಅವರ ಉದ್ಬೋಧಕ ಭಾಷಣವಾಯಿತು.

ಸಾವಳಗಿ:— ಇಲ್ಲಿ ದಿನಾಂಕ ೧೪-೯-೫೨ ರಂದು ಶ್ರೀ ಬಿದರಿ ರಾಮಪ್ಪನವರು ಎಮ್, ಪಿ. ಅವರ ಹಿರಿಯತನದಲ್ಲಿ ಗ್ರುಪ್ ಶಿಕ್ಷಣ ಸಮ್ಮೇಲನವು ಒಳ್ಳೆಯ ವಿಜೃಂಭಣೆಯಿಂದ ಜರುಗಿತು. ಶ್ರೀ ಬಿ. ಡಿ. ಜತ್ತಿ ಆರೋಗ್ಯ ಖಾತೆಯ ಉಪಮಂತ್ರಿ ಇವರು ಸಮ್ಮೇಲನದ ಉದ್ಘಾಟನೆಯನ್ನೂ ಶ್ರೀ ಚೆನ್ನಬಸಪ್ಪ ಅಂಬಲಿ ಎಮ್. ಎಲ್. ಎ. ಅವರು ಪ್ರದರ್ಶನದ ಉದ್ಘಾಟನೆಯನ್ನೂ ಮಾಡಿದರು. ಮಾದರಿ ಪಾಠಗಳು, ವಿನೋದಾವಳಿ ಮೊದಲಾದವು ನಡೆದವು.

ಕಾರ್ಯಕ್ಷಮತೆಗೆ ಚಟಗಳ (ಅಭ್ಯಾಸಗಳ) ಅವಶ್ಯಕತೆ

ಲೇಖಕರು: ಶ್ರೀ ತಟ್ಟಿ ಶ್ಯಾಮರಾಯರು

ಮನುಷ್ಯನು ಪಶು ಪಕ್ಷಿಗಳಿಗಿಂತ ತನ್ನ ಬುದ್ಧಿಮತ್ತೆಯಿಂದ ಶ್ರೇಷ್ಠನಾಗಿದ್ದಾನೆಂದು ಹೇಳುವೆವು. ಯುಕ್ತಿಯಿಂದಲೂ ವಿಚಾರ ಸಾಮರ್ಥ್ಯದಿಂದಲೂ ತನ್ನ ಮನೋರಥ ಪೂರ್ತಿಗೆ ಬಂದ ಎಡರು-ತೊಡರುಗಳನ್ನು ಬಿಡಿಸಿಕೊಳ್ಳುವದೇ ಬುದ್ಧಿಯ ಲಕ್ಷಣ. ಇದು ಪಶು ಪಕ್ಷಿಗಳಲ್ಲಿಯೂ ಕೆಲವಂಶದಿಂದಿರುವದು. ಅವಕ್ಕೆ ತಮ್ಮ ಕೆಲಸಗಳನ್ನು ಸಾಧಿಸಿಕೊಳ್ಳುವದಕ್ಕೆ ಸ್ವಭಾವಸಹಜವಾಗಿ ಬಂದ ಪ್ರವೃತ್ತಿಗಳೇ ಸಾಕಾಗಿರುವವು. ಮನುಷ್ಯನಲ್ಲಿಯೂ ಪ್ರಾಣಿಸಾಮಾನ್ಯವಾದ ಈ ಸಹಜ ಪ್ರವೃತ್ತಿಗಳು ಇದ್ದೇ ಇರುವವು. ಶೈಶವಾವಸ್ಥೆಯಲ್ಲಿ ಇವೇ ಅವನ ಯೋಗಕ್ಷೇಮವನ್ನು ಬಹುಮಟ್ಟಿಗೆ ಸಾಧಿಸುವವು. ದೊಡ್ಡವರಾದ ಮೇಲೆ ಸಹ ಈ ಪ್ರವೃತ್ತಿಗಳೇ ನಮ್ಮ ಅನೇಕ ಕಾರ್ಮಕಲಾಪಗಳಿಗೆ ಪ್ರಚೋದಕಗಳಾಗಿರುತ್ತವೆ. ಆದರೆ ಮುಂದೆ ಅವುಗಳಲ್ಲಿ ಒಂದು ಬಗೆಯ ರೂಪಾಂತರವಾಗುತ್ತದೆ. ಹಸಿದಾಗ ಆಹಾರವನ್ನು ಬೇಡುವದು ನಮ್ಮ ಸ್ವಭಾವವಷ್ಟೆ. ಇಂತಹ ಸ್ಥಿತಿಯಲ್ಲಿ ನಮ್ಮ ಆಳವಿನಲ್ಲಿದ್ದ ಖಾದ್ಯಪದಾರ್ಥಗಳು ಬೇಗನೆ ಕಣ್ಣಿಗೆ ಬೀಳುವವು–ಮನಸ್ಸಿಗೆ ವಿಷಯವಾಗಿಯಾದರೂ ಕಂಗೊಳಿಸುವವು. ಅದರಿಂದ ಒಂದು ಬಗೆಯ ಆಸೆಯು ಉಂಟಾಗಿ ಮನಸ್ಸನ್ನು ಚಂಚಲವಾಗಿಸುವದು. ಈ ಚಾಂಚಲ್ಯದಿಂದ ಆಹಾರವನ್ನು ಪಡೆಯುವ ಕಾರ್ಯದಲ್ಲಿ ನಿರತರಾಗುವೆವು. ಹಾಗೆ ಈ ಸಹಜಪ್ರವೃತ್ತಿಯ ರೀತಿಯಲ್ಲಿ ಜ್ಞಾನದ ಭಾಗ, ಮನೋವಿಕಾರದ ಭಾಗ, ಕಾರ್ಯ ಪ್ರವೃತ್ತಿಯ ಭಾಗ, ಈ ಮೂರು ಎಳೆಗಳೂ ಕೂಡಿರುವವು. ಇವೇ ರೂಪಾಂತರವಾಗಿ (೧) ಧ್ಯೇಯಗಳು ಇಲ್ಲವೆ ಆದರ್ಶಗಳು (೨) ರಾಗದ್ವೇಷಾದಿ ಸ್ಥಿರಮನೋವೃತ್ತಿಗಳು, (೩) ಕೆಲಸಮಾಡುವ ಅಭ್ಯಾಸಗಳು ಆಗಿ ಪರಿಣಮಿಸುತ್ತವೆ. ಪಶುಗಳಂತೆ ಅಜ್ಞಾನದಲ್ಲಿದ್ದಾಗ ಹುಟ್ಟುಗುಣಗಳೇ ನಮ್ಮನ್ನು ಕಾರ್ಯನಿರತರನ್ನಾಗಿ ಮಾಡುತ್ತವೆ; ಅವೇ ಈ ದೇಹವೆಂಬ ರಥವನ್ನು ಹೊಡೆಯುವ ಮುಖ್ಯಶಕ್ತಿ. ಬುದ್ಧಿಯು ಬೆಳೆದ ಹಾಗೆ ಸನ್ನಿವೇಶದ ಅನೇಕ ವಿಷಯಗಳಲ್ಲಿ ನಮ್ಮ ಪ್ರೀತಿ—ಅಪ್ರೀತಿಗಳು ಸ್ಥಿರವಾಗಿ ನೆಲಸಿ ದೈನಂದಿನ ಕಾರ್ಯಗಳನ್ನು ಸುಗಮವಾಗಿ ಮಾಡುವಂತಹ ಅಭ್ಯಾಸಗಳು ಬಿದ್ದುಬಿಡುತ್ತವೆ. ಈ ಅಭ್ಯಾಸಗಳೇ ನಮ್ಮ ಎಲ್ಲ ಚಟುವಟಿಕೆಗಳಿಗೂ ಮೂಲ ಶಕ್ತಿ.

ನಮಗೆ ರೂಢಿಯಾಗಿ ಬಿಟ್ಟ ಪ್ರತಿನಿತ್ಯದ ಅನೇಕ ಕೆಲಸಗಳನ್ನು ನೆನೆದುಕೊಳ್ಳಿರಿ— ನಿದ್ದೆಯಿಂದ ಏಳುವದು, ಎದ್ದು ಕೈಕಾಲು-ಮೋರೆ ತೊಳೆಯುವದು, ಸ್ನಾನ, ಪ್ರಾರ್ಥನೆ, ನಾವು ಕೈಕೊಂಡ ವೃತ್ತಿಯಂತೆ ನಮ್ಮ ನಮ್ಮ ಕೆಲಸಗಳಿಗೆ ಹೋಗುವದು, ಬಟ್ಟೆ-ಬರಿಗಳನ್ನು ಹಾಕಿಕೊಳ್ಳುವದು, ಊಟ, ಆಟ, ವಿಶ್ರಾಂತಿ, ಮಲಗುವದು— ಈ ಎಲ್ಲ ಕೆಲಸಗಳು ಹೆಚ್ಚು ಕಡಿಮೆಯಾಗಿ ಯಂತ್ರದಂತೆ ಸಾಗುವುದಿಲ್ಲವೇ? ನಾವು ನಿಲ್ಲುವ, ಕೂಡುವ, ನಡೆಯುವ, ನುಡಿಯುವ ರೀತಿಗಳೆಲ್ಲವೂ ಒಂದು ಪಡಿಯಚ್ಚಿನಲ್ಲಿ ಹೊಯ್ದು ಹಾಗೆ ಇರುವವು. ಇವೆಲ್ಲವೂ ಅಭ್ಯಾಸದಿಂದ ಬಂದ ರೀತಿಗಳಾಗಿರುವವು. ಒಂದು ಕೆಲಸವನ್ನು ಪುನಃ ಪುನಃ ಮಾಡುವುದಕ್ಕೆ ಅಭ್ಯಾಸವೆನ್ನುತ್ತಾರೆ. ಇದರಿಂದ ಆ ಕೆಲಸವು ಅತ್ಯಲ್ಪ ಶ್ರಮದಿಂದ ಸಾಧ್ಯವಾಗುವದು. ಹಿಂಜುವದು, ನೂಲುವದು ಇಲ್ಲವೆ ಸಾಯಿಕಲ್ ಹತ್ತುವದು, ಈಜುವದು, ಟೈಪ್ ಹೊಡೆಯುವದು, ಇಂತಹ ಯಾವಾದರೂ ನೀವು ಕಲಿತ ಕೆಲಸಗಳನ್ನು ನೆನಪು ಮಾಡಿಕೊಳ್ಳಿರಿ. ಮೊದಲು ಆ ಒಂದು ಕೆಲಸಕ್ಕೆ ಎಷ್ಟು ಕಷ್ಟಪಡಬೇಕಾಗುತ್ತಿತ್ತು, ಎಷ್ಟು ಲಕ್ಷವನ್ನು ಪೂರಯಿಸಬೇಕಾಗುತ್ತಿತ್ತು ನೋಡಿರಿ. ಜೆನ್ನಾಗಿ ಕಲಿತುಕೊಂಡ ಮೇಲೆ ನಿಮ್ಮ ಮನಸ್ಸಿನ ಮೇಲಿನ ವಿಚಾರದ ಭಾರವು ಬಹಳ ಮಟ್ಟಿಗೆ ಕಡಿಮೆಯಾಗುತ್ತದೆ. ನಿತ್ಯ ಕರ್ಮದ ಆಚರಣೆಗೆ ನಿಮ್ಮ ಮನಸ್ಸು ಹೀಗೆ ಕಟ್ಟಿಬೀಳದೆ ಇರುವದರಿಂದ ಮಹತ್ತರವಾದ ಒಂದು ಪ್ರಯೋಜನವಿರುವದು— ಅದಾವುದೆಂದರೆ ಅನಿರೀಕ್ಷಿತವಾಗಿ ಬಂದ ಕಷ್ಟ-ನಷ್ಟಗಳು, ತೊಡಕು-ತೊಂದರೆಗಳು,

ಕಾರ್ಯಸಾಧನದ ಹಾದಿಯಲ್ಲಿ ಬಂದ ವಿಘ್ನಗಳು--- ಇವುಗಳನ್ನು ನಿವಾರಿಸಿಕೊಳ್ಳುವದಕ್ಕೆ ನಮ್ಮ ಬುದ್ಧಿ-ಶಕ್ತಿಯನ್ನು, ವಿಚಾರ ಸಾಮರ್ಥ್ಯವನ್ನು ಉಪಯೋಗಿಸಬೇಕಾಗುವದು. ನಿತ್ಯದ ರೂಢಿಯ ಕಾರ್ಯಾಚರಣೆಯಲ್ಲಿ ಬಳಸದೆ ಇಟ್ಟ ಈ ಮನಸ್ಸಿನ ಶಕ್ತಿಯು ಅನಿರೀಕ್ಷಿತ ಪ್ರಸಂಗಗಳಲ್ಲಿ ಉಪಯೋಗ ಬೀಳುವದು. ಹಾಗೆಯೇ, ಕೇವಲ ಶರೀರ ಶ್ರಮದಿಂದ ಸಾಧ್ಯವಾಗುವ ಕೆಲಸಗಳನ್ನು ಹೆಚ್ಚು ಕ್ಲೇಶವಿಲ್ಲದೆ ಮಾಡಲು ಕಲಿತದ್ದರಿಂದ ಬುದ್ಧಿಶಕ್ತಿ, ಹಾಗು ತದ್ದ್ವಾರಾ ಆತ್ಮಶಕ್ತಿಯ ವಿಕಾಸಕ್ಕೆ ಹೆಚ್ಚು ಸಮಯವು ದೊರಕುವದು. ಮಾನವ ಸಂಸ್ಕೃತಿಯ ವಿಕಾಸವೇ ಈ ರೀತಿಯಾಗಿ ನಡೆದು ಬಂದಿದೆ. ಶಾಸನ, ಶಾಸ್ತ್ರ ಇವುಗಳೆನ್ನರಿಯದ ಕಾಡು ಮನುಷ್ಯನ ಎಲ್ಲ ವೇಳೆಯೂ ಜೀವನವನ್ನು ಉಳಿಸಿಕೊಂಡು ಉಪಜೀವನವನ್ನು ಸಾಗಿಸುವದರಲ್ಲಿಯೇ ಖರ್ಚಾಗುತ್ತಿತ್ತು. ಕ್ರಮಬದ್ಧವಾದ ಸಮಾಜವನ್ನು ಕಟ್ಟಿಕೊಂಡು ಸುಧಾರಿಸಿದ ಹಾಗೆಲ್ಲ— ನಾಗರಿಕತೆಯಲ್ಲಿ ಮುಂದುವರಿದ ಹಾಗೆಲ್ಲ— ಕೇವಲ ಹೊಟ್ಟೆಯನ್ನು ಹೊರೆದುಕೊಳ್ಳುವದರಲ್ಲಿಯೇ ಅವನ ಎಲ್ಲ ಶಕ್ತಿಯೂ ವ್ಯಯವಾಗುವದು ನಿಂತಿತು. ಹೆಚ್ಚಿನ ವಿಚಾರಕ್ಕೆ ಅವಕಾಶವು ಸಿಕ್ಕಿತು. ಸೃಷ್ಟಿಯ ರಹಸ್ಯವನ್ನು ತನ್ನ ಸ್ವಭಾವದ ಹುಟ್ಟನ್ನೂ ಕುರಿತು ಅವನು ಆಲೋಚಿಸತೊಡಗಿದನು. ಯುಗಯುಗಾಂತರಗಳಿಂದ ನಡೆಯುತ್ತಿರುವ ಜಗತ್ತಿನ ಪರಿವರ್ತನಕ್ಕೆಲ್ಲ ಮೂಲವಾದ ದಿವ್ಯ ಅಪಾರ ಶಕ್ತಿಯೊಂದಿರುವದೆಂದು ಮನಗಂಡನು. ತನಗೂ ಎಲ್ಲ ಮಾನವ ಕುಟುಂಬಕ್ಕೂ ಆ ಶಕ್ತಿಗೂ ಇರುವ ನಿಕಟವಾದ ಸಂಬಂಧವನ್ನು ಅರಿತು ಹಿಗ್ಗಿದನು. ಅವನ ಹೃದಯವು ವಿಶಾಲವಾಯಿತು. ಆದರೆ ಹಾಗೆ ಹೃದಯ ಪರಿವರ್ತನವಾದ ಪುಣ್ಯವಂತರು ಮಾನವ ಸಮಾಜದಲ್ಲಿ ಬಹು ಅಪರೂಪವಾಗಿ ಅಗೊಬ್ಬರು ಈಗೊಬ್ಬರು ಅಲ್ಲೊಬ್ಬ ಇಲ್ಲೊಬ್ಬ ಮಾತ್ರ ರಾರಾಜಿಸುವರು. ನಾಗರಿಕತೆಯು ನಮಗೆ ಭೌತಿಕ ಜೀವನದ ಸೌಕರ್ಯಗಳನ್ನು ಹೆಚ್ಚು ಹೆಚ್ಚು ಒದಗಿಸಿಕೊಟ್ಟು ವಿರಾಮ ಕಾಲವನ್ನು ಹೆಚ್ಚಿಸಿ ಮಹದುಪಕಾರವನ್ನು ಮಾಡಿದೆ. ಪ್ರಯೋಜನ ವೇನೆಂದರೆ ಅದರಿಂದ ಉಳಿದ ವೇಳೆಯಲ್ಲಿ ನಮ್ಮ ಹೃದಯವನ್ನು ವಿಶಾಲಗೊಳಿಸಿ ವಿಶ್ವಬಂಧುತ್ವದ ಸಾಧನೆಗೆ ನಮ್ಮ ಅಳಿಲುಸೇವೆಯನ್ನು ಸಲ್ಲಿಸಬೇಕಾಗಿದೆ. ಹಾಗೆ ಮಾಡದೆ ವಿಶ್ವಸಂಹಾರಕ್ಕೆ ನಾವು ನಮ್ಮ ಬುದ್ಧಿಯ ಹಾಗು ವಿಜ್ಞಾನದ ಉಪಯೋಗವನ್ನು ಮಾಡಿಕೊಳ್ಳುತ್ತ ಹೋದರೆ ಅದು ನಾಗರಿಕತೆಯ ಅಥವಾ ಸಂಸ್ಕೃತಿಯ ವಿಕಾಸದ ತಪ್ಪಲ್ಲ. ಅದು ಸಮಾಜದ ಬಹು ಸಂಖ್ಯಾತ ವ್ಯಕ್ತಿಗಳ ತಪ್ಪಾಗುವದು.

ಅಭ್ಯಾಸಗಳಿಂದಾಗುವ ಹಾಗು ನಾಗರಿಕತೆಯ ಮುನ್ನಡೆಯಿಂದ ಆಗುವ ಪ್ರಯೋಜನವನ್ನು ಮೇಲೆ ವಿವರಿಸಿದ್ದಾಯಿತು. ಅಭ್ಯಾಸಗಳಲ್ಲಿ ಒಳ್ಳೆಯ ಅಭ್ಯಾಸಗಳೂ ಇರುವವು ದುರಭ್ಯಾಸಗಳೂ ಇರುವವು. ಒಳ್ಳೆಯ ಚಟಗಳು ನಮ್ಮಲ್ಲಿ ಉಂಟಾಗಿದ್ದರೆ ನಮ್ಮ ಕೆಲಸಗಳೆಲ್ಲವೂ ಸುಸೂತ್ರವಾಗಿ ಸುಲಲಿತವಾಗಿ ಸಾಗುವವು. ಜನರೊಡನೆ ಹೇಗೆ ನಡೆಯಬೇಕು, ಅವರನ್ನು ಹೇಗೆ ಕಾಣಬೇಕು. ನನ್ನ ಅಂತಃಕರಣದ ಸತ್ಯತೆಯನ್ನು ಮನಗಾಣಿಸುವಂತೆ ಹೇಗೆ ಮಾತನಾಡಬೇಕು-ಇವು ಸಹಜ ಸ್ಫೂರ್ತಿಯಿಂದ ನಮ್ಮಿಂದ ಹೊರ ಹೊಮ್ಮುತ್ತಿದ್ದರೆ ನಾವು ಕಾರ್ಯಕ್ಷಮರಾಗುವೆವು. ಅಭ್ಯಾಸದ ಅತ್ಯಧಿಕ ನಿಯಂತ್ರಣವೂ ಇಷ್ಟವಲ್ಲ. ನಮ್ಮ ಜೀವನವು ತೀರ ಯಾಂತ್ರಿಕವಾಗಿ ಬಿಟ್ಟರೆ- ಅಮೇರಿಕಾ ಮೊದಲಾದ ದೇಶಗಳಲ್ಲಿ ಹಾಗಿರಬಹುದೆಂದೆನಿಸುವದು-ಜೀವನದ ಆನಂದವೇ ಅದೃಶ್ಯವಾಗುವದು. ಪ್ರತಿಭೆಯೂ ಕಲಾದೃಷ್ಟಿಯೂ ಕುಂದುವವು. ಹೊಸ ಹೊಸ ಸನ್ನಿವೇಶಗಳಿಗೆ ಹೊಂದಿಕೊಳ್ಳುವಂತಹ ಪ್ರಸರಣಶೀಲತ್ವವು ಮನಸ್ಸಿಗೆ ಇರುವದು ಒಳ್ಳೆಯದು. ವಯಸ್ಸಾದ ಹಾಗೆ ಈ ಹಿಗ್ಗುವ ಶಕ್ತಿಯು ಕಡಿಮೆಯಾಗುವದು. ಹೊಸ ಯಾವ ವಿಚಾರವೂ ಹೊಳೆಯುವದಿಲ್ಲ. ಹೊಸ ಕೆಲಸವು ಅಪರಿಂದಾಗದು. ಹೊಸ ದೃಷ್ಟಿಯು ಅವರಲ್ಲಿ ಬಾರದು. ವೃದ್ಧರ ವಿಚಾರಗಳು ತರುಣರಿಗೆ ಒಮ್ಮೊಮ್ಮೆ ರುಚಿಸದಿರುವದಕ್ಕೆ ಇದೊಂದು ಕಾರಣ. ಸಾಂಪ್ರದಾಯಿಕ ಮತಾನುಯಾಯಿಗಳಿಗೂ ಬಹುಕಾಲದ ಯಾಂತ್ರಿಕರೂಢಿಯಿಂದ, ಅಂಥ ಪರಂಪರೆಯಿಂದ ಅನುಸರಿಸುತ್ತ ಬಂದ ಅನುಷ್ಠಾನದಿಂದ ಉಂಟಾದ ಈ ದೃಷ್ಟಿದೋಷವು ಸಹಜವಾದುದು ಎಂದೆನಿಸುವದು.

ಕಾರ್ಯಕ್ಷಮತೆಗೆ ಚಟಗಳ (ಅಭ್ಯಾಸಗಳ) ಅವಶ್ಯಕತೆ

ಆತ್ಮಸಂಯಮನದಿಂದ ದುರಭ್ಯಾಸಗಳನ್ನು, ದುಶ್ಚಟಗಳನ್ನು ಬಿಡಲು ಕಲಿಯಬೇಕು. ವುಯಿಲಿಯಂ ಜೇಮ್ಸ ಎಂಬ ಶ್ರೇಷ್ಠ ಮನೋವಿಜ್ಞಾನಿಯು ಇದಕ್ಕೆ ಕೆಲವು ವ್ಯಾವಹಾರಿಕ ಸೂಚನೆಗಳನ್ನು ಮಾಡಿದ್ದಾನೆ. (೧) ದುರ್ವ್ಯಸನವನ್ನು ಬಿಡುವದಕ್ಕೆ ಒಳ್ಳೆ ಒಂದು ಸಂಧಿಯನ್ನು, ಸಮಯವನ್ನು ಸಾಧಿಸಬೇಕು. ಯಾವದಾದರೊಂದು ದೊಡ್ಡ ಸಮಾರಂಭದಲ್ಲಿ ಇಲ್ಲವೆ ಉತ್ಸವ ಕಾಲಕ್ಕೆ ಇಲ್ಲವೆ ದೊಡ್ಡ ಹಬ್ಬದ ಕಾಲದಲ್ಲಿ ದುಶ್ಚಟವನ್ನು ಬಿಡುವ ದೃಢನಿಶ್ಚಯವನ್ನು ಮಾಡಬೇಕು (೨) ಅದಕ್ಕೆ ಪ್ರತಿಯಾಗಿ ಬೇರೆಯೊಂದು ಒಳ್ಳೆಯ ಅಭ್ಯಾಸವನ್ನು ಹಾಕಿಕೊಳ್ಳಬೇಕು. (೩) ಹೊಸದಾಗಿ ಮಾಡಿದ ನಿರ್ಧಾರಕ್ಕೆ ದ್ವಿತೀಯ ವಿಘ್ನವಾಗದಂತೆ ಪ್ರತಿದಿನವೂ ತಪ್ಪದೆ ಹೊಸರೂಢಿಯು ವೈಯುಣ್ಣುವ ತನಕ ಅದನ್ನು ನಡೆಸಿಕೊಂಡು ಹೋಗಬೇಕು. (೪) ಪಣ್ಣು ಪುಟ್ಟ ಯಾವದಾದರೊಂದು ಕ್ಷುಲ್ಲಕ ವಿಷಯದಲ್ಲಿ ಸ್ವಾರ್ಥತ್ಯಾಗವನ್ನು ಪ್ರತಿನಿತ್ಯ ಮಾಡುವ ವ್ರತವನ್ನು ಕೈಕೊಳ್ಳಬೇಕು.

ಎಲ್ಲದಕ್ಕೆ ಚಿಕ್ಕನರಿರುವಾಗಲೇ ಒಳ್ಳೆಯ ರೂಢಿಗಳನ್ನು ಹಾಕಿಕೊಳ್ಳಬೇಕು. ೩೫ ವರುಷ ವಯಸ್ಸಾದನಂತರ ಹೊಸ ಅಭ್ಯಾಸಗಳು ಹತ್ತುವದು ಕಷ್ಟಸಾಧ್ಯ. ಎಷ್ಟೋ ಖ್ಯಾತಿವೆತ್ತ ಮಹಾಪುರುಷರು ತಮ್ಮ ಪೂರ್ವವಯಸ್ಸಿನಲ್ಲಿಯೇ ಅಗಾಧವಾದ ಕಾರ್ಯಗಳನ್ನು ಮಾಡಿದ್ದಾರೆ. ೪೦ ವರ್ಷ ವಿುರಿದ ಮೇಲಂತೂ ಮನುಷ್ಯನಿಂದ ಸಾಮಾನ್ಯಮನುಷ್ಯನಿಂದ-ಯಾವ ಮಹತ್ಕಾರ್ಯ ಸಾಧಿಸದು ಎಂದು ವುಯಿಲಿಯಂ ಜೇಮ್ಸನು ಹೇಳಿದು ನಿಜವೆಂದೆನಿಸುವದು.

ಮುಲ್ಕೀ ಪರೀಕ್ಷೆ ಪಾಸಾಗಲು ಒಂದೇ ದಾರಿಯು

ಲೇಖಕರು :— ಕೃ. ಶ್ರೀ. ಕುಲಕರ್ಣಿಕೃತ

ಹೊಸ ಪುಸ್ತಕಗಳು

೧. ಪ್ರ. ಪೌರನೀತಿ(ರಾಜ್ಯದಾಡಳಿತ ಸಹಿತ)	೧ರೂ.	೧೦. ,, ಭಾರತೀಯ ರಾಜ್ಯಘಟನೆ	೦-೧೦-೦
೨. ,, ಭೂಗೋಲ	೧—೦—೦	೧೧. ,, ರಾಷ್ಟ್ರೀಯ ಮಹಾಪುರುಷರು	೦-೧೨-೦
೩. ,, ಇತಿಹಾಸ	೧—೦—೦	೧೨. ,, ಮಾದರಿಯ ಬರೆಹಗಳು	೦-೧೨-೦
೪. ,, ಭೂಮಿತಿ	೧—೦—೦	೧೩. ,, ಪ್ರಶ್ನೋತ್ತರ ಜಮಾಖರ್ಚ	೦-೧೨-೦
೫. ,, ಭಾಷಾಭ್ಯಸನ	೧—೦—೦	೧೪. ,, ಗಣಿತಪ್ರಕಾಶ	೦-೧೨-೦
೬. ,, ಭಾರತ ಇತಿಹಾಸ (ಕೈಪಿಡಿ)	೧—೮—೦	೧೫. ,, ಪ್ರ. ಗೃಹವಿಜ್ಞಾನ	ಅಚ್ಚಿನಲ್ಲಿ
೭. ,, ಸಂಗ್ರಹಗಳು	೧—೮—೦	೧೬. ,, ತತ್ಸಮತದ್ಭವಗಳ ಕೈಪಿಡಿ	,,
೮. ,, ಆರೋಗ್ಯ ವಿಜ್ಞಾನ	೦—೯—೦	೧೭. ,, ಸಚಿತ್ರ ಸಂಪೂರ್ಣ	,,
೯. ,, ಪ್ರ. ಶಾಸ್ತ್ರೀಯ ವಿಷಯ	೦—೯—೦	ಇತಿಹಾಸ ಇನೇ ಇಯತ್ತೆ	

N. B.— ಕನ್ನಡ ಶಾಲೆಯ ಹುಡುಗರ ಲೀವ್ವಿಂಗ ಸರ್ಟಿಫಿಕೇಟ್ ಪಾಮ್ರ್ಯುಗಳು ಸಿಗುತ್ತವೆ.

ಪ್ರಕಾಶಕರು:— ಕೆ. ಎಸ್. ಕುಲಕರ್ಣಿ

ಬುಕ್ ಡಿಪೋ ಸ್ಟೇಶನ್‌ರೋಡ, ಹುಬ್ಬಳ್ಳಿ.

ಮಹರ್ಷಿ ಶ್ರೀ ಅರವಿಂದರು

ವ್ಯಕ್ತಿತ್ವ ಹಾಗು ತತ್ತ್ವಗಳು

ಲೇಖಕರು:—ಶ್ರೀ. ಎಸ್. ವಾಯ್. ಶೀಲವಂತ, ಬಿ. ಎ., ಬಿ. ಟಿ., ಡಿ. ಪಿ. ಇಡಿ., ಡಿ. ಬಿ. ಇ.

ಬಹುಮುಖವುಳ್ಳ ಶ್ರೀ ಅರವಿಂದರ ಉಜ್ವಲವಾದ ವ್ಯಕ್ತಿತ್ವದ ಸರಿಯಾದ ಶಬ್ದಚಿತ್ರವನ್ನು ಅಲ್ಪದರಲ್ಲಿ ಕೊಡುವದು ಅಸಾಧ್ಯವು. ಆದರೆ ಯೋಗದ ಗೊತ್ತು ಗುರಿಗಳು, ರಾಜಕಾರಣ ಮತ್ತು ಶಿಕ್ಷಣ ಇವುಗಳ ವಿಷಯದಲ್ಲಿ ಅವರ ಹಲವು ವಿಚಾರಗಳನ್ನು ವಾಚಕರ ಮುಂದೆ ಇಡುವದು ಅಪ್ರಸ್ತುತವಾಗದು.

"ಮಾನವರು ತಮ್ಮ ಜೀವನದಲ್ಲಿ ಅರಸುವ ವಸ್ತುಗಳ ವೈವಿಧ್ಯವನ್ನನುಸರಿಸಿ ಅವರ ಗುರಿಗಳು ಭಿನ್ನವಾಗಿರುತ್ತವೆ. ಆದ್ದರಿಂದಲೇ ಯೋಗಸಾಧನೆಯನ್ನು ಕೈಕೊಳ್ಳುವವರಲ್ಲಿ ಅವರ ಉದ್ದೇಶಗಳೂ ಬೇರೆಬೇರೆಯಾಗಿರುತ್ತವೆ. ಜಗತ್ತು ಮಾಯೆಯೆಂದು ತಿಳಿದು ಹಲವರು ಕೇವಲ ವಿರಕ್ತಿಮಾರ್ಗವನ್ನು ಅನುಸರಿಸುತ್ತಾರೆ. ಇನ್ನು ಕೆಲವರು ಯೋಗದಿಂದ ನಿರರ್ಗಳವಾದ ಆನಂದವನ್ನು, ಸುಖವನ್ನು ಪಡೆಯಲು ಹಾತೊರೆಯುತ್ತಾರೆ. ಮತ್ತೆ ಹಲವರು ಜೀವನದ ಆಘಾತಗಳನ್ನು ಎದುರಿಸಲು ಬೇಕಾಗುವ ಶಕ್ತಿ, ಜ್ಞಾನ, ಮತ್ತು ಶಾಂತಿಯನ್ನು ಪಡೆಯಲು ಉತ್ಸುಕರಾಗಿರುತ್ತಾರೆ..... ಯೋಗದಿಂದ ಸಿದ್ಧಿಯನ್ನು ಹೊಂದಲು ಸ್ನೇಹ, ಪ್ರೇಮ ಬಾಂಧವ್ಯ ಮುಂತಾದ ಐಹಿಕ ಬಂಧನಗಳನ್ನು ಹರಿದೊಗೆಯುವ ಅವಶ್ಯಕತೆಯಿಲ್ಲ. ಆದರೆ 'ಅಹಂ'ದ ಪ್ರಾಬಲ್ಯದಿಂದ ಅವು ಮಲಿನವಾಗಿ, ಕೊಳೆತು ನಾಶಹೊಂದದಂತೆ ಎಚ್ಚರಪಡಬೇಕು. ಅವುಗಳ ವಿಷಯದಲ್ಲಿ ಮನುಷ್ಯನು ಅನಾಸಕ್ತನಾಗಿರಬೇಕು. ಅವು ಆತ್ಮದಲ್ಲಿ ಬೇರೂರುವಂತೆ ಮಾಡಿ, ಅವನ್ನು ಪವಿತ್ರಗೊಳಿಸಿ ಅವುಗಳ ತಳಹದಿಯನ್ನು ಭದ್ರಮಾಡಬೇಕು. ..... ಹಿಂಬಕ್ಕೆ ಅನುಸರಿಸಲಾದ ಮಾರ್ಗಗಳೆಲ್ಲವೂ ಮಾನವನನ್ನು ಅಗೋಚರನಾದ ಪರಮಾತ್ಮನ ಕೋಧನೆಯಲ್ಲಿ ತೊಡಗಿಸಿ ಅವನನ್ನು ನಿತ್ಯ ಜೀವನದಿಂದ ದೂರ ಸೆಳೆದೊಯ್ಯುತ್ತವೆ. ಆದರೆ ಪರಮಾತ್ಮನನ್ನು ಸಂಧಿಸಿ ಅವನಿಂದ ಬೆಳಕನ್ನು, ಶಕ್ತಿಯನ್ನು ಹೊಂದಿ ಮಾನವನ ಮನಸ್ಸು, ದೇಹ, ಜೀವನ ಇವನ್ನು ದೈವೀಕರಿಸುವದೇ ಯೋಗ ಸಾಧನೆಯ ಉಚ್ಚತಮವಾದ ಗುರಿ. ಅದಕ್ಕಾಗಿ ಮಾನಸಿಕಸ್ತರದ ಆಚೆಗಿನ ಮಾನಸಾತೀತ ತರದಲ್ಲಿ (Super-mind) ನಡೆಯುವ ವ್ಯಾಪಾರಗಳ ಬಲದಿಂದ ಆತ್ಮಸ್ವರೂಪದ ಜ್ಞಾನವನ್ನು ಮಾಡಿಕೊಂಡು ಪರಜೈವತದ ಕೂಡ ಸ್ಥಿರವಾದ ಅನುಸಂಧಾನವನ್ನು ಬೆಳಿಸಿ ಆದರಿಂದ ಪ್ರಾಪ್ತವಾದ ಶಕ್ತಿಯ ಬಲದಿಂದ ಮಾನವನು ಪರಿಪೂರ್ಣನಾಗಲು ಸಾಧ್ಯವಿದೆ. ..... ಜಗತ್ತು ಮಿಥ್ಯೆಯಲ್ಲ; ಮಾಯೆಯಲ್ಲ; ಮೋಕ್ಷವನ್ನು ಪಡೆಯಲೋಸುಗ ಅದನ್ನು ಬಿಸುಡಬೇಕಾಗಿಲ್ಲ. ಜಡದ ಜಡತ್ವವನ್ನು ಹೋಗಲಾಡಿಸಿ ಅದರಲ್ಲಿ ದೈವತ್ವವು ಒಡಮೂಡುವಂತೆ ಮಾಡಲು ಬೇಕಾಗುವ ಅಧ್ಯಾತ್ಮಿಕ ವಿಕಾಸದ ಸಾಧನರಂಗವು ಈ ಜಗತ್ತು.

× × × ×

ಶ್ರೀ ಅರವಿಂದರು ಪ್ರತ್ಯಕ್ಷವಾಗಿ ರಾಜಕಾರಣದಲ್ಲಿ ಭಾಗವಹಿಸಿದ್ದು ಬಹಳೇ ಅಲ್ಪ ಕಾಲದವರೆಗೆ. ಆದರೆ ಈ ಅಲ್ಪಾವಧಿಯಲ್ಲಿಯೇ ಅವರು ಮಾಡಿದ ಕಾರ್ಯವು ಫನತರವಾದುದು. ಆದರಿಂದ ಹಿಂದೀ ರಾಜಕಾರಣದ ಸ್ವರೂಪವೇ ಸಂಪೂರ್ಣವಾಗಿ ಬದಲಾಯಿತು. ಜನತೆಯಲ್ಲಿ ನವಚೈತನ್ಯವು ಅಂಕುರಿಸಿತು. ೧೯೦೬ ರಲ್ಲಿ ಕಲಕತ್ತೆಯಲ್ಲಾದ ಕಾಂಗ್ರೆಸ ಅಧಿವೇಶನದ ಅಧ್ಯಕ್ಷ ಸ್ಥಾನದಿಂದ ದಾದಾಭಾಯಿ ನವರೋಜಿಯವರು ಸಾಮಂತ ಸ್ವರಾಜ್ಯವೇ ರಾಜಕೀಯ ಹೋರಾಟದ ಗುರಿ ಎಂದು ಉಸುರಿದಾಗ ಶ್ರೀ ಅರವಿಂದರು ಅದನ್ನು

ತಿಭಟಿಸಿ ಸಂಪೂರ್ಣ ಸ್ವಾತಂತ್ರ್ಯವೇ ಅದರ ಗುರಿ ಎಂದು ಘಂಟಾಘೋಷವಾಗಿ ಸಾರಿದರು. ಹೀಗೆ ಯರ್ದಿಂದ ಬಹಿರಂಗವಾಗಿ ಸಾರಿದ ಹಿಂದೀ ರಾಜರಣೆಗಳಲ್ಲಿ ಶ್ರೀ ಅರವಿಂದರೇ ಮೊದಲಿಗರು ಎಂಬುದನ್ನು ನಾವು ಮರೆಯುವಂತಿಲ್ಲ. ಮತ್ತು ಈ ಧ್ಯೇಯವನ್ನು "ವಂದೇ ಮಾತರಂ" ಪತ್ರಿಕೆಯಲ್ಲಿ ಅವರು ನಃ ಪುನಃ ಒತ್ತಿ ಹೇಳಿದರು. ಹಿಂದೀಯರೂ ಇದಕ್ಕೆ ಹಾರ್ದಿಕ ಅನುಮೋದನೆಯಿತ್ತರು. ಆದರೆ ಅದು ಂಗ್ರೆಸಿನ ಧೋರಣೆಯಾಗಬೇಕಾದರೆ ಮತ್ತೆ ಕಾಲು ಕಮಾನ ಉರುಳಬೇಕಾಯಿತು.

ಅವರ ಮುಂದಾಳುತನದಲ್ಲಿ ಸಂಘಟಿತವಾದ ಾಷ್ಟ್ರೀಯ ಪಕ್ಷವು ಸ್ವಾತಂತ್ರ್ಯವನ್ನು ಸಂಪಾದಿಸಲು ೃತ್ವಿಕ ಪ್ರತಿಭಟನೆ (Passive resistence) ಮತ್ತು ಅಸಹಕಾರ (non-cooperation) ಇವೇ ಾಯೋಗ್ಯ ಮತ್ತು ಬಲಪಾದ ಅಸ್ತ್ರಗಳೆಂದು ಸಾರಿ ವನ್ನು ಹೇಗೆ ಪ್ರಯೋಗಿಸಬೇಕೆಂದು ತೋರಿಸುವ ಸಲು ಾಗಿ ಒಂದು ಕಾರ್ಯಕ್ರಮವನ್ನು ಸಿದ್ಧಪಡಿಸಿತು. ಆದರ ವಿವರಗಳನ್ನು ಕಳಿದ ಸಂಚಿಕೆಯಲ್ಲಿ ಕೊಡಲಾಗಿದೆ). ಈ ವಿಚಾರಗಳನ್ನು ಶ್ರೀ ಅರವಿಂದರು ಾಯರ್ಲಂಡದಲ್ಲಿ ನಡೆದ ಸಿನ್ ಫೆನ್ ಚಳುವಳಿಯಿಂದ ಾರವು ತಂದರೆಂದು ಹಲವರು ಅನ್ನುವದುಂಟು. ಾದರೆ ಇದು ನಿರಾಧಾರವಾದುದೆಂಬುದಕ್ಕೆ ಸಿನ್‌ಫೆನ್ ಚಳುವಳಿಯು ಶ್ರೀ ಅರವಿಂದರು ರಾಜಕೀಯವನ್ನು ಟ್ಟಮೇಲೆ ರೂಪುಗೊಂಡಿತೆಂಬುದೇ ಸಾಕ್ಷಿ.

ಶ್ರೀ ಅರವಿಂದರು ಹಿಂದೀ ರಾಜಕಾರಣದ ಮೇಲೆ ೀರಿದ ಪ್ರಭಾವವನ್ನು ಕುರಿತು ದೇಶಬಂಧು ಿತ್ತರಂಜನದಾಸರವರು ಆಡಿದ ಮಾತುಗಳು ಮಾರ್ಮಿಕವಾಗಿವೆ, ಮನನೀಯವಾಗಿವೆ:—"ಈ ವಾದವಿವಾದವು ಅಲಿಪೂರ ಒಳಸಂಚಿಗೆ ಸಂಬಂಧಿಸಿದ್ದು) ಮುಗಿದ ಮೇಲೆ' ಈ ಕೋಲಾಹಲವು ಶಾಂತವಾದನಂತರ, ಈ ಂದೋಲನವು ನಿಂತ ಮೇಲೆ, ಇಷ್ಟೇ ಏಕೆ ಶ್ರೀ ಅರವಿಂದರು ತೀರಿಕೊಂಡ ಮೇಲೆ ಸಹ, ಎಷ್ಟೋ ವರುಷಗಳ ವರೆಗೆ ಜನರು ಅವರನ್ನು ದೇಶಭಕ್ತಿಯ ಗೀತವನ್ನು ಾಡುವುದರಿಂದ ಮಹಾಕವಿಯೆಂದೂ, ರಾಷ್ಟ್ರೀಯತೆಯ ಪ್ರವಾದಿಯೆಂದೂ, ಮಾನವಕುಲದ ಹಿತಕರ್ತೃವೆಂದೂ ಭಾವಿಸದೆ ಇರಲಾರರು.....ಅವರು ಆಡಿದ ಮಾತುಗಳು ಕೇವಲ ಭಾರತದಲ್ಲಿ ಅಲ್ಲ, ಆದರೆ ಸಪ್ತಸಮುದ್ರಗಳಾಚೆ ಇರುವ ದೇಶಗಳಲ್ಲಿಯೂ ಮತ್ತೆ ಮತ್ತೆ ಪ್ರತಿಧ್ವನಿತವಾಗದೆ ಇರಲಾರವು"

ಇದಕ್ಕೂ ಹೆಚ್ಚಿಗೆ ಹೇಳುವದು ಸಾಧ್ಯವೂ ಇಲ್ಲ; ಅದರ ಆಗತ್ಯವೂ ಇಲ್ಲ.

× × × ×

"ಮಾನವನ ಮನಸ್ಸಿನ ಅಭ್ಯಾಸವೇ ಶಿಕ್ಷಣದ ಮೂಲಾಧಾರ. ಈ ತತ್ವವನ್ನು ಆಲ್ಲಗಳೆದು ಕೇವಲ ವಿಷಯಗಳ ಅಭ್ಯಾಸಕ್ಕೆ ಪ್ರಾಧಾನ್ಯ ಕೊಡುವ ಯಾವುದೇ ಯೋಜನೆಯು ಬುದ್ಧಿಯ ವಿಕಾಸವನ್ನು ಕುಂಠಿತಗೊಳಿಸುವದಲ್ಲದೆ ಮನಸ್ಸನ್ನು ಅಪರಿಪಕ್ವವನ್ನಾಗಿಸುವದು. ಏಕೆಂದರೆ ಶಿಕ್ಷಣ ತಜ್ಞನು ತನ್ನ ಕಾರ್ಯವನ್ನು ಮಾಡುವದು ನಿರ್ಜೀವ ವಸ್ತುಗಳ ಜೊತೆಯಲ್ಲಿ ಅಲ್ಲ; ಆದರೆ ಅತ್ಯಂತ ಸೂಕ್ಷ್ಮವಾದ ಮತ್ತು ಭಾವನಾಯುತವಾದ ಜೀವಿಯ ಜೊತೆಯಲ್ಲಿ."

"ನಮ್ಮ ರಾಷ್ಟ್ರಹಿತದ ದೃಷ್ಟಿಯಿಂದ ನಾವು ಪಡೆಯಬೇಕಾದ ಶಿಕ್ಷಣವು ಐರೋಪ್ಯ ಶಿಕ್ಷಣದಷ್ಟೇ ವ್ಯಾಪಕವಿರುವದರ ಜೊತೆಗೆ ಅದರ ಲೋಪದೋಷಗಳಿಂದ ಮುಕ್ತವಾಗಿರಬೇಕು. ಅದಕ್ಕಾಗಿ ಜ್ಞಾನಾರ್ಜನೆಯ ಸಾಧನಗಳ ಸರಿಯಾದ ಅಭ್ಯಾಸವನ್ನು ಮಾಡಬೇಕು. ಕಲಿಸುವ ವಿಧಾನವನ್ನು ಸ್ವಾಭಾವಿಕ, ಸುಲಭ ಮತ್ತು ಪರಿಣಾಮಕಾರಿಯಾಗಿ ಮಾಡಬೇಕು. ಮನಸ್ಸಿನ 'ಸ್ನಾಯು'ಗಳನ್ನು ಸಾದಾ ಮತ್ತು ಸುಲಭ ಉಪಾಯಗಳಿಂದ ಸಂಪೂರ್ಣವಾಗಿ ತರಬೇತಿಗೊಳಿಸಬೇಕು.

"ನಿಜವಾದ ಶಿಕ್ಷಣದ ಮೊದಲನೆಯ ತತ್ವವೆಂದರೆ ವಿದೇಶಿಯನ್ನೂ ಕಲಿಸಲು ಸಾಧ್ಯವಿಲ್ಲ. ಶಿಕ್ಷಕನು ಮಗುವಿನಿಂದ ಬಲುಮೆಯಿಂದ ಕೆಲಸ ತೆಗೆದುಕೊಳ್ಳುವ ಫ್ಯಾಕ್ಟರಿ ಮ್ಯಾನೇಜರನಲ್ಲ; ಆದರೆ ಅವನು ಮಗುವಿನ ಸಹಾಯಕನು, ಮಾರ್ಗದರ್ಶಕನು. ಜ್ಞಾನಸಾಧನೆಯ ಉಪಕರಣಗಳನ್ನು ಹೇಗೆ ಪರಿಪೂರ್ಣಗೊಳಿಸಬೇಕೆಂಬುದನ್ನು ಅವನು ಮಗುವಿಗೆ ತೋರಿಸಿಕೊಡುತ್ತಾನೆ. ತನ್ನಷ್ಟಕ್ಕೆ ತಾನು ಜ್ಞಾನವನ್ನು ಸಂಪಾದಿಸುವ ವಿಧಾನವನ್ನು ತಿಳಿಸಿ

ಕೊಡುತ್ತಾನೆ. ವಯೋಮಾನಕ್ಕನುಸರಿಸಿ ನೀಡಬೇಕಾದ ಸಹಾಯ ಮತ್ತು ಮಾರ್ಗದರ್ಶನ ಇವುಗಳ ಪ್ರಮಾಣವು ಹೆಚ್ಚು ಕಡಿಮೆಯಾಗಬಹುದು, ಇಷ್ಟೇ....

"ಎರಡನೆಯ ತತ್ವವೆಂದರೆ ಮನಸ್ಸಿನ ವಿಕಾಸದ ರೀತಿಯನ್ನು ಅನುಲಕ್ಷಿಸಿ ಶಿಕ್ಷಕನು ತನ್ನ ಕಾರ್ಯವನ್ನು ಸಾಗಿಸಬೇಕು. ತಂದೆತಾಯಿಗಳಾಗಲಿ ಶಿಕ್ಷಕರಾಗಲಿ ಮಕ್ಕಳ ಭವಿತವ್ಯವನ್ನು ತಮಗೆ ಸರಿದೋರಿದ ರೀತಿಯಲ್ಲಿ ರೂಪುಗೊಳಿಸಲು ಪ್ರಯತ್ನಿಸುವದು ಒಂದು ತರದ ಹಿಂಸೆಯಷ್ಟೇ ಅಲ್ಲದೆ ಅದು ನಿಸರ್ಗದ ವಿರುದ್ಧವೂ ಆಗಿದೆ. ಹಾಗೆ ಮಾಡುವದು ರಾಷ್ಟ್ರಕ್ಕೆ ವಿಘಾತಕವೂ ಆಗಿದೆ. ಪ್ರತಿಯೊಬ್ಬ ಮಾನವ ಪ್ರಾಣಿಯಲ್ಲಿ ಹುದುಗಿರುವ ದೈವೀ ಅಂಶವು ಸ್ಫುರಿಸಲು ಅನುವು ಮಾಡಿಕೊಡುವದೇ ಶಿಕ್ಷಣದ ಕಾರ್ಯವು.....

"ಶಿಕ್ಷಣದ ೩ನೆಯ ತತ್ವವೆಂದರೆ ವ್ಯಕ್ತದಿಂದ ಅವ್ಯಕ್ತದ ಕಡೆಗೆ ಸಾಗುವದು. ಮನುಷ್ಯಪ್ರಭಾವದ ತಳಹದಿಯು ಅವನ ಭೂತಕಾಲವಷ್ಟೇ ಅಲ್ಲದೆ, ಅವನ ಅನುವಂಶೀಯತೆ, ವಾತಾವರಣ, ರಾಷ್ಟ್ರೀಯತೆ, ಅವನನ್ನು ಪೋಷಿಸುವ ಭೂಮಿ, ಅವನು ಉಸಿರಾಡಿಸುವ ಹವೆ, ನೋಡುವ ದೃಶ್ಯ, ಕೇಳುವ ಸಪ್ಪಳ ಇವೆಲ್ಲವೂ ಆಗಿವೆ. ಇವೆಲ್ಲವು ಅವನನ್ನು ಅಗೋಚರವಾಗಿ ಆದ ಪ್ರಭಾವಿಯಾಗಿ ರೂಪುಗೊಳಿಸುತ್ತವೆ. ಸ್ವತಂತ್ರ ಮತ್ತು ಸ್ವಾಭಾವಿಕವಾದ ಬೆಳವಣಿಗೆಯೇ ನಿಜವಾದ ವಿಕಾಸದ ಮೂಲ. ಹಲವರು ತಮ್ಮ ವಾತಾವರಣಕ್ಕೆ ಹೊಂದಿಕೊಳ್ಳಲಾರದೆ ದೊಂಬೆ ಹೊಡುವರು. ಅಂಥವರನ್ನು ಹತ್ತಿಕ್ಕಿ, ಕೃತ್ರಿಮ ಜೀವನಕ್ಕೀಡುಮಾಡದೆ ಅವರನ್ನು ಅವರ ಪಾಡಿಗೆ ಬಿಟ್ಟು ಕೊಡಬೇಕು.....**ಗತಕಾಲವನ್ನು ನಮ್ಮ ತಳಹದಿ; ವರ್ತಮಾನವು ನಮ್ಮ ಸಾಧನ ಭವಿಷ್ಯತ್ತು ನಮ್ಮ ಗುರಿ.** ಯಾವುದೇ ರಾಷ್ಟ್ರೀಯ ಶಿಕ್ಷಣ ಯೋಜನೆಯಲ್ಲಿ ಪ್ರತಿಯೊಂದಕ್ಕೂ ಯೋಗ್ಯ ಮತ್ತು ನೈಸರ್ಗಿಕವಾದ ಸ್ಥಾನವಿರಲೇ ಬೇಕು. (ಈ ವಿಚಾರಗಳಲ್ಲಿ ಹೊಸತೇನೂ ಇಲ್ಲ ಎಂದು ಈಗಿನವರು ಅನ್ನಬಹುದು. ಶ್ರೀ ಅರವಿಂದರು ಈ ವಿಚಾರಗಳನ್ನು ೧೯೧೦ ರಲ್ಲಿ ಮೊದಲು ಬಾರಿ ಪ್ರಕಟಿಸಿದರು. ಆ ಪರಿಪೂರ್ಣವಾಗಿಲ್ಲವೆಂದೂ, ಭಾರತಕ್ಕೆ ಅನುಗುಣವಾದ ಬಹುದಾದ ರಾಷ್ಟ್ರೀಯ ಶಿಕ್ಷಣಕ್ಕೆ ಇವು ಕೇವಲ ಪೀಠಿಕೆಯಾಗಿವೆಯೆಂದೂ ಅವರೇ ಒಂದೆಡೆಗೆ ಒಪ್ಪಿದ್ದಾರೆ.)

ನಿಮಗೆ ದೊರೆತಿವೆಯೆ ?

೧೯೫೨ರ ಸುಧಾರಿಸಿದ ಆವೃತ್ತಿಗಳು

★ ನೂತನ ಗಣಿತ ★

- ೧ನೆಯ ವರ್ಗಕ್ಕಾಗಿ ೦—೬—೦
- ೨ನೆಯ ,, ೦—೮—೦
- ೩ನೆಯ ,, ೦—೧೦—೦
- ೪ನೆಯ ,, ೦—೧೨—೦

(ಭೂಮಿತಿ, ಜಮಾಖರ್ಚು ಆಲೇಖ ಸಹ)

- ೫ನೆಯ ವರ್ಗಕ್ಕಾಗಿ ೦—೧೩—೦
- ೬ನೆಯ ,, ೧—೦—೦
- ೭ನೆಯ ,, ೧—೧೨—೦

ಸುಧಾರಿಸಿದ ಕೃತಿಗಳನ್ನು ತಮಗೆ ನೀಡಲು ಸಂತೋಷವೆನಿಸುತ್ತದೆ. ಪ್ರಾ. ಶಾ. ಪ್ರ. ಪ. ಪರೀಕ್ಷೆಗೆ ಬೀಜಗಣಿತ ವಿಷಯ ಇದ್ದುದು ಗೊತ್ತಿದೆಯೆ ? ೬ನೆಯ ಗಣಿತ ಎಲ್ಲ ವಿಭಾಗಗಳನ್ನು ಒಳಗೊಂಡು ಹೊರಡಿಸಲಾಗಿದೆ. ಸಂಗ್ರಹದಿಂದ ಈಗಲೇ ಪಡೆಯಿರಿ.

ಆಕಳವಾಡಿ ಬುಕ್‌ಡಿಪೋ, ಧಾರವಾಡ.

ಶ್ರದ್ಧೆ-ಬುದ್ಧಿ

ಸಂಗ್ರಾಹಕರು:—ಶ್ರೀ. ಆರ್ಯ್. ಎಸ್. ಬಿದರಿ

[ಗಜಾನನೋತ್ಸವದ ಆಂಗವಾಗಿ ದಿನಾಂಕ ೨೬-೮-೧೯೫೨ರಂದು ನಮ್ಮ ಕಾಲೇಜಿನಲ್ಲಿ ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ. ಪ್ಹಿ. ಕೆ. ಗೋಕಾಕ ಅವರು ಮಾಡಿದ ಭಾಷಣದ ತಿರುಳನ್ನು ಇಲ್ಲಿ ಕೊಡಲಾಗಿದೆ]

ಮುಖ್ಯಾಧ್ಯಾಪಕರಾದ ಶ್ರೀ ಹಂದ್ರಾಳರವರೇ ಮತ್ತು ಶಿಕ್ಷಕ-ಬಾಂಧವರೇ,

ಗಜಾನನನ ಸಮ್ಮುಖದಲ್ಲಿ ಉತ್ತರ ಕರ್ನಾಟಕದ ಶಿಕ್ಷಕ–ಬಂಧುಗಳೆದುರಿನಲ್ಲಿ ನಿಂತು ಮಾತನಾಡುವದು ಯೋಗಾಯೋಗವೆಂದೇ ಭಾವಿಸುವೆನು. ಸ್ವಾರ್ಥ, ಸಂಕಟ, ಅನನುಕೂಲತೆಗಳಿಂದ ತುಂಬಿದ ಇಂದಿನ ಸಮಾಜದಲ್ಲಿ ಭಾವಿ ನಾಗರಿಕರಾಗಲಿರುವ, ಇಂದಿನ ಎಳೆಯ ಮಕ್ಕಳ ಮನಸ್ಸಿನಲ್ಲಿ ಹೊಸ ಜೀವನ, ಹೊಸ ಸಾಹಿತ್ಯ, ಹೊಸ ದೃಷ್ಟಿ ಇವುಗಳ ಯಥಾರ್ಥ ಕಲ್ಪನೆಯನ್ನೂ ಜ್ಞಾನವನ್ನೂ ಮೂಡಿಸಿ ನಿಜವಾದ ಮಾನವೀ ಸಂಸ್ಕೃತಿಯನ್ನು ಅಚ್ಚೊತ್ತುವಂತೆ ಮಾಡುವದು ಶಿಕ್ಷಕರಾದವರ ಆದ್ಯಕರ್ತವ್ಯವೆಂದು ಬೇರೆ ಹೇಳಬೇಕಿಲ್ಲ. ವ್ಯಕ್ತಿಗಳಲ್ಲಿ ಭಿನ್ನತೆಯಿದ್ದು ಮೂರು ತರಹದ ವ್ಯಕ್ತಿಗಳನ್ನು ನಾವು ಎಲ್ಲೆಡೆಗೆ ಕಾಣುತ್ತೇವೆ. ಗತಾನುಗತಿಕರ ಹಾದಿಯನ್ನು ಹಿಡಿದು ತಮ್ಮ ಪಾಲಿಗೊದಗಿದ ಕರ್ತವ್ಯವನ್ನು ಯಥಾವತ್ತಾಗಿ ನಿರ್ವಹಿಸುತ್ತ ತನ್ನ ಜತ, ತನ್ನನವಲಂಬಿಸಿದವರ ಹಿತ ಇಷ್ಟೊಂದನ್ನು ಮಾತ್ರ ನೋಡುತ್ತ ಹೊಟ್ಟೆಯ ಪಾಡಿಗಾಗಿ ಹಿಡಿದ ಉದ್ಯೋಗವನ್ನು ಮಾಡುತ್ತ ಸಾಗುವವರು ಕೆಲವರಾದರೆ ಸಂಕಲ್ಪದ ಕುದುರೆಯ ಬೆನ್ನೇರಿ ಒಂದು ಉಚ್ಚ ಆದರ್ಶವನ್ನು ತಮ್ಮ ಗುರಿಯಾಗಿಟ್ಟುಕೊಂಡು ಆ ಗುರಿಯನ್ನು ಪ್ರಯತ್ನವಾದಿಯಾಗಿ ಸಾಗುವವರು ಬೇರೆ ಕೆಲವರು, ಜಗತ್ತು ನಾಯಿಯ ಬಾಲದಂತೆ ಡೊಂಕು ತರತಕ್ಕದೇ ಆದ್ದರಿಂದ ಅದರ ಸುಧಾರಣೆಗೇಕೆ ಯತ್ನಿಸುವದು ಎಂದು ಸೇರಿಗೆ ಸವ್ವಾ ಸೇರು ಆಗಿ ವ್ಯಾವಹಾರಿಕ ದೃಷ್ಟಿಯನ್ನಿಟ್ಟುಕೊಂಡು ಸ್ವಾರ್ಥಪರಾಯಣರಾಗಿ ಸಾಗುವಾ ಎಂದು ತಿಳಿದು ಅದರಂತೆ ಆಚರಿಸುವವರು ಮಿಕ್ಕವರು—ಹೀಗೆ ಸಮಾಜದಲ್ಲಿ ಈ ಮೂರು ತರಹದ ಗುಂಪುಗಳನ್ನು ನಾವು ಕಾಣುತ್ತೇವೆ. ಸತ್ಯವಾದಿಯಾಗಿ ನಾಗಿದಂಥವರಿಗೆ ಅ ಸತ್ಯ ಯ ವು ಪ್ರಬಲವಾಗಿ ಕಂಡರೂ, ವಿಜಯಿಯಾಗಿ ಪರಿಣಮಿಸುವಂತೆ ತೋರಿದರೂ ಅವರು ಎದೆಗುಂದದೆ ಶ್ರದ್ಧೆಯನ್ನು ಅವಲಂಬಿಸಿ ಬುದ್ಧಿಯನ್ನು ಶ್ರದ್ಧೆಗೆ ಸಮನ್ವಯಗೊಳಿಸಿ ಮುಂದೆ ಸಾಗಿದರೆ ನ್ಯಾಯ, ಸತ್ಯ ಇವುಗಳಿಗೇ ಅಂತಿಮ ಜಯವೆಂಬುದು ಜೊಳೆಯದೆ ಇರದು.

ಶ್ರದ್ಧೆಯು ಯಾವದೇ ಕೆಲಸದಲ್ಲಿ ಊರುಂಗೋಲಿವಿದ್ದಂತೆ; ಕಾರ್ಯಸಿದ್ಧಿಯೆಂಬ ನೌಕೆಗೆ ಚುಕ್ಕಾಣಿಯಿದ್ದಂತೆ, ಜೀವನ ನೌಕೆಯು ಶ್ರದ್ಧೆಯೆಂಬ ಚುಕ್ಕಾಣಿಯಿಂದ ಹೂತ್ರ ಸುಗಮವಾಗಿ ದಂಡೆಯನ್ನು ಸೇರಬಲ್ಲುದು. ಶ್ರದ್ಧೆಯು ಮಾನವ ಜೀವನದ ಮೂಲ ಧನವಿದ್ದಂತೆ. ವ್ಯಕ್ತಿಗಳಲ್ಲಿ ಶ್ರದ್ಧೆಯನ್ನಿಡಲು ಸೇರದಿದ್ದರೆ ಪ್ರತಿಯೊಬ್ಬನು ತನ್ನ ಆತ್ಮದಲ್ಲಿಯಾದರೂ ಶ್ರದ್ಧೆಯನ್ನಿಟ್ಟುಕೊಂಡು ಕಾರ್ಯಪ್ರವೃತ್ತನಾಗಬೇಕು. ಕಾರ್ಯ ಸಾಧುತ್ವ, ದ್ವೇಷ, ಕಪಟ ನಟನೆಗಳಿಂದ ಕೂಡಿದ ನರಕಪ್ರಾಯವಾದ ಸಮಾಜದಲ್ಲಿಯಂತೂ ಆತ್ಮಶ್ರದ್ಧೆಯೇ ಏಕಮಾತ್ರವಾದ ಆಧಾರ.

ಹೀಗೆ ಶ್ರದ್ಧೆಯನ್ನು ಅವಲಂಬಿಸಿ ಸಾಗುವ ಸಾಧಕನಿಗೆ ಬುದ್ಧಿಯ ಬೆಳಕೂ ಅಷ್ಟೇ ಅವಶ್ಯವಾಗಿದೆ. ಸಂಕುಚಿತ ದೃಷ್ಟಿ, ಕುರುಡ ನಂಬಿಕೆ, ಬೌದ್ಧಿಕ ಗುಲಾಮಗಿರಿ ಇವೆಲ್ಲವುಗಳನ್ನು ತೊಡೆದು ಹಾಕಿ ನಮ್ಮ ವಿಚಾರ ಶಕ್ತಿಯ ಒರೆಗಲ್ಲಿಗೆ ತಿಕ್ಕಿ, ಬುದ್ಧಿಯ ಬೆಳಕಿನ ಹೊಂಪ್ರಕಾಶದಲ್ಲಿ ದೃಷ್ಟಿಸಿ ನೋಡಿ ಪರಿಶುದ್ಧನಾಗಿ, ಸ್ಫುಟವಾಗಿ

ಸೋಚರಿಸಿದಂಥ ಭಾವನೆಗಳನ್ನು, ವಿಚಾರಧಾರೆಗಳನ್ನು ಎತ್ತಿಕೊಂಡು ಅವುಗಳ ಸಹಾಯದಿಂದ ಕಾರ್ಯದಲ್ಲಿ ಸುಂದುವರಿಯಬೇಕು. ಹೀಗೆ ಶ್ರದ್ಧೆಯು ಮಾನವನಿಗೆ ಅವನ ಕಾರ್ಯದಲ್ಲಿ ಮೂಲ ಬಂಡವಾಳವಾದರೆ ಬುದ್ಧಿಯು ಗಂಜಲಿಸುವ ಕುಶಲ ಸಾರಥಿಯಂತೆ ಸಹಾಯವಾಗುವದು. ಶ್ರದ್ಧೆ-ಬುದ್ಧಿಗಳ ಸಮನ್ವಯವು ಜೀವನವನ್ನು ಸರ್ವಸುಂದರವನ್ನಾಗಿ ಮಾಡಬಲ್ಲುದು.

ಬುದ್ಧಿಯು ಬೆಳವಣಿಗೆಯ ಅತಿರೇಕವು ಮನುಷ್ಯನನ್ನು ಮಂಗಪನಕ್ಕೂ ಒಮ್ಮೊಮ್ಮೆ ಒಯ್ಯುವದುಂಟು; ಬುದ್ಧಿಯು ಸ್ವಾರ್ಥವರಾಯಣತೆಯತ್ತ ಸಾಗಿ ವೈಜ್ಞಾನಿಕ ಶೋಧಗಳನ್ನು ಮಾನವ ಕುಲದ ಉಚ್ಚಾಟಣೆಗೆ ಉಪಯೋಗಿಸಿದ್ದನ್ನು ನಾವು ನೋಡುತ್ತಿದ್ದೇವೆ. ವಿಶಾಲವಾದ ಜಗತ್ತಿನಲ್ಲಿ ಇಲ್ಲದ ವಿಷಮತೆಯನ್ನು ಸೃಷ್ಟಿಸಿಕೊಂಡು ಅಜ್ಞಾನದ ಪ್ರತೀಕವಾದ, ವ್ಯರ್ಥಜಲ-ಸಂತಿರುವ ಕೀರ್ತಿಯೆಂಬ ಕನಕನಯ್ಯಗವನ್ನು ಬೆನ್ನಟ್ಟಿ ಒಡಿ, ಓಡಿ, ದಣಿದು, ಬಾಯಾರಿ ಬಿಳಲಿ, ಬೆಂಡಾಗಿ, ತೀರಕ್ಕೆ ಉಪ್ಪಳಿಸಿ ಛಿನ್ನ-ವಿಚ್ಛಿನ್ನವಾಗಿ ಹೋಗುವ ಕರಸ್ಸಿನ ತರಂಗದಂತೆ, ಬಾಯ್ಬಿಡುವ ಮಾನವರಿಗೆ ಏನೆನ್ನಬೇಕು? ಆದದರಿಂದ ತಪ್ಪಿತಪ್ಪಿ ಮಂಗತನ-ಪಿಡೆಗೆ ಇಲ್ಲವೆ ವಿನಾಶದಿಡೆಗೆ ಅಥವಾ ಮಿಥ್ಯಕೀರ್ತಿಯ ನಿಸಿಲ್ಲುದರೆಯತ್ತ ಒಯ್ದು ಮಾನವನ ಅಧೋಗತಿಗೆ ಕಾರಣವಾಗಬಹುದಾದ ಸಂದರ್ಭಗಳಲ್ಲಿ ಬುದ್ಧಿಯ ಕೆರದಾಟಕ್ಕೆ ಕಡಿವಾಣವನ್ನು ಹಾಕಿ ಶ್ರದ್ಧೆಯೊಡನೆ ಸಮನ್ವಯಗೊಳಿಸಿ ವ್ಯಕ್ತಿತ್ವವನ್ನು ವರ್ಧಿಸಿಕೊಂಡು ಜೀವನವನ್ನು ಸಫಲಗೊಳಿಸಬೇಕು.

ಸ್ವತಂತ್ರ ಭಾರತದ ಭಾವೀ ನಾಗರಿಕರನ್ನು ಸಜ್ಜುಗೊಳಿಸಲಿರುವ ವ್ಯಾಥಮಿಕ ಶಿಕ್ಷಕರಾದ ನಿಮ್ಮಲ್ಲಿ ಶ್ರದ್ಧೆ-ಬುದ್ಧಿಗಳ ಈ ಹಿತ--ಮಿತ ಸಮನ್ವಯವು ಅತ್ಯವಶ್ಯವಾಗಿ ಇರಬೇಕೆಂಬ ಮಾತನ್ನು ಹೇಳಲವಶ್ಯವಿಲ್ಲ. ನೀವು ಮೈ ಮನಗಳ ಸಾಮರಸ್ಯವನ್ನು ಮಾಡಿಕೊಂಡು ಎಳೆಯರ ಮನಸ್ಸನ್ನು ತಿದ್ದಿ ನಾಡಿನ ಭದ್ರವಾದ ಅಸ್ತಿವಾರವನ್ನು ಹಾಕಬೇಕು. ಕೇವಲ ದುಡಿಮೆಗಾಗಿ ದುಡಿಮೆಯೆಂದು ಭಾವಿಸದೆ ಜೀವನದ ಆದರ್ಶವನ್ನೂ ಕಲ್ಪಿಸಿಕೊಳ್ಳಬೇಕು. ಅದನ್ನು ಸಾಧಿಸಲೋಸುಗ ಸಮಾಜವನ್ನು ವೈಜ್ಞಾನಿಕ ದೃಷ್ಟಿಯಿಂದ ವಿಮರ್ಶಿಸಿ ನೆಪೋಲಿಯನ್, ಗಾಂಧಿಜಿಯವರಂತೆ ಅಸಾಧ್ಯತೆಯ ಭೂತಕ್ಕೆ ಎಡೆಗೊಡದೆ ನಿಸ್ವಾರ್ಥ, ನಿಸ್ಪೃಹ, ನಿರಂತರ ಪ್ರಯತ್ನದಿಂದ ಸಿದ್ಧಿಯನ್ನು ಪಡೆಯಬೇಕು. ಹೀಗೆ ಹೊರಟರೆ ಸಜೀವ ಸುಂದರ ಸಮಾಜವನ್ನು ಭಾರತದಲ್ಲಿ ನಿರ್ಮಿಸಲು ನಿಮಗೆ ಸಾಧ್ಯವಾಗುವದು. ಇಂಥ ಸಮಾಜವು ಭಾರತೀಯ ಸಂಸ್ಕೃತಿಗನುಗುಣವಾಗಿ; ಪ್ರಕೃತಿಯೊಡನೆ ಸೆಣಸಾಟವಾಡದೆ ಅದರ ಸಹಜತೆಯೊಡನೆ ತಾದಾತ್ಮ್ಯವನ್ನು ಹೊಂದಿದರೆ ಸುಖ ಸಾಮ್ರಾಜ್ಯವನ್ನು ಅನುಭವಿಸುವದು. ವಿಜ್ಞಾನಯುಗದಲ್ಲಿ ನಂಬಿಗೆಯಿಟ್ಟು ಭೌತಿಕ ಶಾಸ್ತ್ರದಲ್ಲಿಯೇ ತನ್ಮಯರಾಗಿ ಪಾರಮಾರ್ಥಿಕ ದೃಷ್ಟಿಯನ್ನು ಕಳೆದುಕೊಂಡು ಸತ್ಯದ ಸೌಂದರ್ಯಕ್ಕೆ ಎರವಾದ ಪಶ್ಚಿಮದೇಶಗಳ ಅನುಕರಣೆಯು ಬೇಡ. ವೈಜ್ಞಾನಿಕ ದೃಷ್ಟಿಯೊಂದಿಗೆ ಧರ್ಮ, ಅಹಿಂಸೆ, ನೀತಿಗಳನ್ನು ಬೆರೆಸಿ ನಿತ್ಯ ಕಾರ್ಯದಲ್ಲಿ ಅಳವಡಿಸಿ, ಇಳಿಸಿ ವ್ಯಕ್ತಿಯು ತನ್ನ ಹಿತವನ್ನೂ ಸಮಾಜದ ಹಿತವನ್ನೂ ಸಾಧಿಸಬೇಕು; ಹೀಗಾದರೆ ಸಮಾಜವು ವ್ಯಕ್ತಿಗಳ ಸಂಕಟಗಳ ಬಲಿಯಾಗದೆ ಅವರ ಜೀವನವನ್ನು ಪ್ರಫುಲ್ಲಗೊಳಿಸುವ ಉದ್ಯಾನವಾಗಿ ಪರಿಣಮಿಸುವದು; ಸ್ವಾತಂತ್ರ್ಯವು ವ್ಯಕ್ತಿಯ ಸ್ವಚ್ಛಂದ ವೃತ್ತಿಯಾಗದೆ ಸಂಯಮನ ಶಿಸ್ತುಗಳಿಂದೊಡಗೂಡಿದ ಸಹಕಾರ ಜೀವನವಾಗುವದು; ಇಂಥ ಸಹಕಾರ ಜೀವನದಿಂದ ಕೂಡಿದ ಜೀವಿಗಳ ಸಚ್ಛಕ್ತಿಗಳ ವಿಕಸನವೇ ಸುಧರ್ಮವಾಗಿ ಅಂತಿಮದಲ್ಲಿ ನಿತ್ಯಜೀವನದ ತಳಹದಿಯಾಗುವದು. ಶಿಕ್ಷಣವು ಈ ಮಹತ್ತರ ಉದ್ದೇಶವನ್ನು ಸಾಧಿಸಲು ಏಕಮೇವ ಸಾಧನೆಯು. ಈ ಕಾರ್ಯವನ್ನು ವ್ರತಬದ್ಧವಾಗಿ ಎಸಗುವ ನೀವೇ ಧನ್ಯರು.

ತಮ್ಮೆದುರಿನಲ್ಲಿ ನಿಂತು ಈ ಕೆಲವು ಮಾತುಗಳನ್ನಾಡಲು ಆಸ್ಪದಕೊಟ್ಟದ್ದಕ್ಕೆ ನಿಮ್ಮ ಪ್ರಾಧ್ಯಾಪಕರಿಗೂ ನಿಮಗೂ ಧನ್ಯತೆಗಳು.

ಕ್ರ.ಸಂ.	ಮೆಟ್ಟುಗಳು ಹಾಗೂ ಅವುಗಳ ವಿವರ	ಆವಶ್ಯಕ ಜ್ಞಾನ	ಕಲಿಸುವ ಕ್ರಮ	ಕರಿಹಲಿಗೆ ಬರಹ
	ಬ) ಕಾರ್ಮಿಕ ತಪ್ಪುಗಳು:—	——	ಆರೆಯುವಾಗ ಕಾಳುಗಳು ಒಡೆದವೋ ? ಆರಳೆಯನ್ನು ಮುದ್ದಿ ಮಾಡಿದಿರೋ ? ಮುಂತಾದ ಪ್ರಶ್ನೆಗಳಿಂದ ಕಾರ್ಯಮಾಡುತ್ತಿರುವಾಗ ಮಾಡಿದ ತಪ್ಪುಗಳನ್ನು ಬಾಲಕರ ಲಕ್ಷ್ಯಕ್ಕೆ ತಂದು ಕೊಡುವದು.	
	ಕ) ಕೆಲಸದ ಪ್ರಮಾಣ:—	ಆರೆದ ಆರಳೆಯ ಹಾಗು ಹತ್ತಿಕಾಳುಗಳ ಪ್ರಮಾಣವನ್ನು ತೂಗಿ ಕಂಡುಹಿಡಿಯುವದು.	ಪ್ರತಿಯೊಬ್ಬರು ಆರೆದ ಹತ್ತಿಕಾಳುಗಳನ್ನು ತೂಕಮಾಡಿಸಿ, ತೂಕವನ್ನು ಕರಿ ಹಲಿಗೆಯ ಮೇಲೆ ಬರೆಯುವದು.	(ಬೇರೆ ಬೇರೆ ಗುಂಪುಗಳನ್ನುಮಾಡಿ ತೂಕಗಳನ್ನು ಬರೆಯುವದು)
೫	ದೃಢೀಕರಣ:—	ಅ) ಆರೆದ ಆರಳೆಯ ಲಕ್ಷಣಗಳು. ಆರಳೆಯು ಶುಭ್ರವಾಗಿರಬೇಕು. ಆರಳೆಯ ತಂತುಗಳು ಗಟ್ಟಿ ಇರಬೇಕು. ಆರಳೆಯಲ್ಲಿ ಒಡೆದ ಕಾಳುಗಳು ಉಳಿದಿರಬಾರದು. ಆರೆಯದೆ ಉಳಿದ ಕಾಳುಗಳು ಇರಬಾರದು.	ಬಾಲಕರಿಂದ ಅವರು ಮಾಡಿದ ಕೆಲಸದ ವರದಿಯನ್ನು ಒಪ್ಪಿಸಿಕೊಳ್ಳುವದು. ಆರೆದ ಆರಳೆಯ ಲಕ್ಷಣಗಳ ಬಗ್ಗೆ ಸಂಗತಿಗಳನ್ನು ಬರೆಯಿಸುವದು.	(ಲಕ್ಷಣಗಳನ್ನು ಬರೆಯುವದು)
		ಬ)	ನಿನಗೆ ಕೊಟ್ಟ ಹತ್ತಿ ಎಷ್ಟು ? ಹತ್ತಿಕಾಳುಗಳ ತೂಕವೆಷ್ಟು ? ಹಾಗಾದರೆ ಆರಳೆ ಎಷ್ಟು ಇರಬೇಕು ? ಬಾಲಕರಿಗೆ ತೂಕ ಮಾಡಲು ಹಚ್ಚಿ ಕೊಟ್ಟ ಹತ್ತಿಯ ತೂಕದಲ್ಲಿ ಹತ್ತಿ ಕಾಳಿನ ತೂಕವನ್ನು ಕಳೆದರೆ ಆರಳೆಯ ತೂಕ ಬರುವದೆಂದು ತಿಳಿಸಿ ಹೇಳುವದು. ಇವುಗಳ ಸಹಾಯದಿಂದ ವಜಾಬಾಕಿ ಕಲಿಸುವದು.	

ಕೊಟ್ಟ ಹತ್ತಿ	ಹತ್ತಿಕಾಳು	ಆರಳೆ
೨ ತೊಲೆ	೧ ತೊ. ೮ ಆ.	೮ ಆ.
೨ ತೊಲೆ	೧ ತೊ. ೭ ಆ.	?
೨ ತೊಲೆ	೧ ತೊ. ೭೧ ಆ.	?

೬	ಗೃಹಪಾಠ:—	ಹತ್ತಿಯನ್ನು ಹೇಗೆ ಆರೆದಿರಿ ಎಂಬ ಬಗ್ಗೆ ಬರೆದುಕೊಂಡು ಬನ್ನಿ.	

ಗೋಚರಿಸಿದಂಥ ಭಾವನೆಗಳನ್ನು, ವಿಚಾರಧಾರೆಗಳನ್ನು ಎತ್ತಿಕೊಂಡು ಅವುಗಳ ಸಹಾಯದಿಂದ ಕಾರ್ಯದಲ್ಲಿ ಮುಂದುವರಿಯಬೇಕು. ಹೀಗೆ ಶ್ರದ್ಧೆಯು ಮಾನವನಿಗೆ ಅವನ ಕಾರ್ಯದಲ್ಲಿ ಮೂಲ ಬಂಡವಾಲವಾದರೆ ಬುದ್ಧಿಯು ಗಂಜಲಿಸುವ ಕುಶಲ ಸಾರಥಿಯಂತೆ ಸಹಾಯವಾಗುವದು. ಶ್ರದ್ಧೆ–ಬುದ್ಧಿಗಳ ಸಮನ್ವಯವು ಜೀವನವನ್ನು ಸರ್ವಸುಂದರವನ್ನಾಗಿ ಮಾಡಬಲ್ಲುದು.

ಬುದ್ಧಿಗು ಬೆಳವಣಿಗೆಯ ಅತಿರೇಕವು ಮನುಷ್ಯನನ್ನು ಮಂಗಪನಕ್ಕೂ ಒಮ್ಮೊಮ್ಮೆ ಒಯ್ಯುವದುಂಟು; ಬುದ್ಧಿಯು ಸ್ವಾರ್ಥಪರಾಯಣತೆಯತ್ತ ಸಾಗಿ ವೈಜ್ಞಾನಿಕ ಶೋಧಗಳನ್ನು ಮಾನವ ಕುಲದ ಉಚ್ಚಾಟಣೆಗೆ ಉಪಯೋಗಿಸಿದ್ದನ್ನು ನಾವು ನೋಡುತ್ತಿದ್ದೇವೆ. ವಿಶಾಲವಾದ ಜಗತ್ತಿನಲ್ಲಿ ಇಲ್ಲದ ವಿಷಮತೆಯನ್ನು ಕಲ್ಪಿಸಿಕೊಂಡು ಅಜ್ಞಾನದ ಪ್ರತೀಕನಾದ, ವ್ಯಗಜಲದಂತಿರುವ ಕೀರ್ತಿಯೆಂಬ ಕನಕಮೃಗವನ್ನು ಬೆನ್ನಟ್ಟಿ ಓಡಿ, ಓಡಿ, ದಣಿದು, ಬಾಯಾರಿ ಬಿಳಲಿ, ಬೆಂಡಾಗಿ, ತೀರಕ್ಕೆ ಅಪ್ಪಳಿಸಿ ಛಿನ್ನ–ವಿಚ್ಛಿನ್ನವಾಗಿ ಹೋಗುವ ಸರಸ್ಸಿನ ತರಂಗದಂತೆ, ಬಾಯ್ಬಿಡುವ ಮಾನವರಿಗೆ ಏನೆನ್ನಬೇಕು? ಆದದರಿಂದ ತಪ್ಪಿತಪ್ಪಿ ಮುಂಗತನ ಬೆಡಿಗೆ ಇಲ್ಲದೆ ವಿನಾಶನೆಡೆಗೆ ಅಥವಾ ಮಿಥ್ಯಕೀರ್ತಿಯ ಬಿಸಿಲ್ಗುದರೆಯತ್ತ ಒಯ್ದು ಮಾನವನ ಅಧೋಗತಿಗೆ ಕಾರಣವಾಗಬಹುದಾದ ಸಂದರ್ಭಗಳಲ್ಲಿ ಬುದ್ಧಿಯ ಹರಿದಾಟಕ್ಕೆ ಕಡಿವಾಣವನ್ನು ಹಾಕಿ ಶ್ರದ್ಧೆಯೊಡನೆ ಸಮನ್ವಯಗೊಳಿಸಿ ವ್ಯಕ್ತಿತ್ವವನ್ನು ವರ್ಧಿಸಿಕೊಂಡು ಜೀವನವನ್ನು ಸಫಲಗೊಳಿಸಬೇಕು.

ಸ್ವತಂತ್ರ ಭಾರತದ ಭಾವೀ ನಾಗರಿಕರನ್ನು ಸಜ್ಜುಗೊಳಿಸಲಿರುವ ಪ್ರಾಥಮಿಕ ಶಿಕ್ಷಕರಾದ ನಿಮ್ಮಲ್ಲಿ ಶ್ರದ್ಧೆ-ಬುದ್ಧಿಗಳ ಈ ಹಿತ–ಮಿತ ಸಮನ್ವಯವು ಅತ್ಯಗತ್ಯವಾಗಿ ಇರಬೇಕೆಂಬ ಮಾತನ್ನು ಹೇಳಲವಶ್ಯವಿಲ್ಲ. ನೀವು ಮೈ ಮನಗಳ ಸಾಮರಸ್ಯವನ್ನು ಮಾಡಿಕೊಂಡು ಎಳೆಯರ ಮನಸ್ಸನ್ನು ತಿದ್ದಿ ನಾಡಿನ ಭದ್ರವಾದ ಆಸ್ತಿಭಾರವನ್ನು ಹಾಕಬೇಕು. ಕೇವಲ ದುಡಿಮೆಗಾಗಿ ದುಡಿಮೆಯೆಂದು ಭಾವಿಸದೆ ಜೀವನದ ಆದರ್ಶವನ್ನೂ ಕಲ್ಪಿಸಿಕೊಳ್ಳಬೇಕು. ಅದನ್ನು ಸಾಧಿಸಲೋಸುಗ ಸಮಾಜವನ್ನು ವೈಜ್ಞಾನಿಕ ದೃಷ್ಟಿಯಿಂದ ವಿಮರ್ಶಿಸಿ ನೆಪೋಲಿಯನ್, ಗಾಂಧಿಜಿಯವರಂತೆ ಅಸಾಧ್ಯತೆಯ ಭೂತಕ್ಕೆ ಎಡೆಗೊಡದೆ ನಿಸ್ವಾರ್ಥ, ನಿಸ್ಸೀಮ, ನಿರಂತರ ಪ್ರಯತ್ನದಿಂದ ಸಿದ್ಧಿಯನ್ನು ಪಡೆಯಬೇಕು. ಹೀಗೆ ಹೊರಟರೆ ಸಜೀವ ಸಂದರ ಸಮಾಜವನ್ನು ಭಾರತದಲ್ಲಿ ನಿರ್ಮಿಸಲು ನಿಮಗೆ ಸಾಧ್ಯವಾಗುವದು. ಇಂಥ ಸಮಾಜವು ಭಾರತೀಯ ಸಂಸ್ಕೃತಿಗನುಗುಣವಾಗಿ; ಪ್ರಕೃತಿಯೊಡನೆ ಸೆಣಸಾಟವಾಡದೆ ಅದರ ಸಹಜತೆಯೊಡನೆ ತಾದಾತ್ಮ್ಯವನ್ನು ಹೊಂದಿದರೆ ಸುಖಸಾಮ್ರಾಜ್ಯವನ್ನು ಅನುಭವಿಸುವದು. ವಿಜ್ಞಾನಯುಗದಲ್ಲಿ ನಂಬಿಗೆಯಿಟ್ಟು ಭೌತಿಕ ಶಾಸ್ತ್ರದಲ್ಲಿಯೇ ತನ್ಮಯರಾಗಿ ಪಾರಮಾರ್ಥಿಕ ದೃಷ್ಟಿಯನ್ನು ಕಳೆದುಕೊಂಡು ಸತ್ಯದ ಸೌಂದರ್ಯಕ್ಕೆ ಎರವಾದ ಪಶ್ಚಿಮದೇಶಗಳ ಅನುಕರಣೆಯು ಬೇಡ. ವೈಜ್ಞಾನಿಕ ದೃಷ್ಟಿಯೊಂದಿಗೆ ಧರ್ಮ, ಅಹಿಂಸೆ, ನೀತಿಗಳನ್ನು ಬೆರೆಸಿ ನಿತ್ಯ ಕಾರ್ಯದಲ್ಲಿ ಆಳವಡಿಸಿ, ಇಳಿಸಿ ವ್ಯಕ್ತಿಯು ತನ್ನ ಹಿತವನ್ನೂ ಸಮಾಜದ ಹಿತವನ್ನೂ ಸಾಧಿಸಬೇಕು; ಹೀಗಾದರೆ ಸಮಾಜವು ವ್ಯಕ್ತಿಗಳ ಸಂಕಟಗಳ ಬಲಿಯಾಗದೆ ಅವರ ಜೀವನವನ್ನು ಪ್ರಫುಲ್ಲಗೊಳಿಸುವ ಉದ್ಯಾನವಾಗಿ ಪರಿಣಮಿಸುವದು; ಸ್ವಾತಂತ್ರ್ಯವು ವ್ಯಕ್ತಿಯ ಸ್ವಚ್ಛಂದ ವೃತ್ತಿಯಾಗದೆ ಸಂಯಮನ ಶಿಸ್ತುಗಳಿಂದೊಡಗೂಡಿದ ಸಹಕಾರ ಜೀವನವಾಗುವದು; ಇಂಥ ಸಹಕಾರ ಜೀವನದಿಂದ ಕೂಡಿದ ಜೀವಿಗಳ ಸಚ್ಛಕ್ತಿಗಳ ವಿಕಸನವೇ ಸುಧರ್ಮವಾಗಿ ಅಂತಿಮದಲ್ಲಿ ನಿತ್ಯಜೀವನದ ತಳಹದಿಯಾಗುವದು. ಶಿಕ್ಷಣವು ಈ ಮಹತ್ತರ ಉದ್ದೇಶವನ್ನು ಸಾಧಿಸಲು ಏಕಮೇವ ಸಾಧನೆಯು. ಈ ಕಾರ್ಯವನ್ನು ವ್ರತಬದ್ಧವಾಗಿ ಎಸಗುವ ನೀವೇ ಧನ್ಯರು.

ತಮ್ಮೆದುರಿನಲ್ಲಿ ನಿಂತು ಈ ಕೆಲವು ಮಾತುಗಳನ್ನಾಡಲು ಅವಕಾಶಕೊಟ್ಟದ್ದಕ್ಕೆ ನಿಮ್ಮ ಪ್ರಾಧ್ಯಾಪಕರಿಗೂ ನಿಮಗೂ ಧನ್ಯತೆಗಳು.

ಕ್ರ.ಸಂ.	ಮೆಟ್ಟಿಗಳು ಹಾಗೂ ಅವುಗಳ ವಿವರ	ಆವಶ್ಯಕ ಜ್ಞಾನ	ಕಲಿಸುವ ಕ್ರಮ	ಕರಿಹಲಿಗೆ ಬರಹ
	ಬ) ಕಾರ್ಮಿಕ ತಪ್ಪುಗಳು:—	———	ಅರೆಯುವಾಗ ಕಾಳುಗಳು ಒಡೆದವೋ ? ಅರಳೆಯನ್ನು ಮುದ್ದಿ ಮಾಡಿದಿರೋ ? ಮುಂತಾದ ಪ್ರಶ್ನೆಗಳಿಂದ ಕಾರ್ಯಮಾಡುತ್ತಿರುವಾಗ ಮಾಡಿದ ತಪ್ಪುಗಳನ್ನು ಬಾಲಕರ ಲಕ್ಷ್ಯಕ್ಕೆ ತಂದು ಕೊಡುವದು.	
	ಕ) ಕೆಲಸದ ಪ್ರಮಾಣ:—	ಅರೆದ ಅರಳೆಯ ಹಾಗು ಹತ್ತಿಕಾಳುಗಳ ಪ್ರಮಾಣವನ್ನು ತೂಗಿ ಕಂಡುಹಿಡಿಯುವದು.	ಪ್ರತಿಯೊಬ್ಬರು ಅರೆದ ಹತ್ತಿಕಾಳುಗಳನ್ನು ತೂಕಮಾಡಿಸಿ, ತೂಕವನ್ನು ಕರಿ ಹಲಿಗೆಯ ಮೇಲೆ ಬರೆಯುವದು.	(ಬೇರೆ ಬೇರೆ ಗುಂಪುಗಳನ್ನುಮಾಡಿ ತೂಕಗಳನ್ನು ಬರೆಯುವದು)
೫	ದೃಢೀಕರಣ:—	ಆ) ಅರೆದ ಅರಳೆಯ ಲಕ್ಷಣಗಳು. ಅರಳೆಯು ಶುಭ್ರವಾಗಿರಬೇಕು. ಅರಳೆಯ ತಂತುಗಳು ಗಟ್ಟಿ ಇರಬೇಕು. ಅರಳೆಯಲ್ಲಿ ಒಡೆದ ಕಾಳುಗಳು ಉಳಿದಿರಬಾರದು. ಅರೆಯದೆ ಉಳಿದ ಕಾಳುಗಳು ಇರಬಾರದು.	ಬಾಲಕರಿಂದ ಆವರು ಮಾಡಿದ ಕೆಲಸದ ವರದಿಯನ್ನು ಒಪ್ಪಿಸಿಕೊಳ್ಳುವದು. ಅರೆದ ಅರಳೆಯ ಲಕ್ಷಣಗಳ ಬಗ್ಗೆ ಸಂಗತಿಗಳನ್ನು ಬರೆಯಿಸುವದು.	(ಲಕ್ಷಣಗಳನ್ನು ಬರೆಯುವದು)
		ಬ)	ನಿನಗೆ ಕೊಟ್ಟ ಹತ್ತಿ ಎಷ್ಟು ? ಹತ್ತಿಕಾಳುಗಳ ತೂಕವೆಷ್ಟು ? ಹಾಗಾದರೆ ಅರಳೆ ಎಷ್ಟು ಇರಬೇಕು ? ಬಾಲಕರಿಗೆ ತೂಕ ಮಾಡಲು ಹಚ್ಚಿ ಕೊಟ್ಟ ಹತ್ತಿಯ ತೂಕದಲ್ಲಿ ಹತ್ತಿ ಕಾಳಿನ ತೂಕವನ್ನು ಕಳೆದರೆ ಅರಳೆಯ ತೂಕ ಬರುವದೆಂದು ತಿಳಿಸಿ ಹೇಳುವದು. ಇವುಗಳ ಸಹಾಯದಿಂದ ವಜಾಬಾಕಿ ಕಲಿಸುವದು.	

ಕೊಟ್ಟ ಹತ್ತಿ	ಹತ್ತಿಕಾಳು	ಅರಳೆ
೨ ತೊಲೆ	೧ ತೊ. ೮ ಆ.	೮ ಆ.
೨ ತೊಲೆ	೧ ತೊ. ೭ ಆ.	?
೨ ತೊಲೆ	೧ ತೊ. ೭½ ಆ.	?

೬	ಗೃಹಪಾಠ:—	ಹತ್ತಿಯನ್ನು ಹೇಗೆ ಅರೆದಿರಿ ಎಂಬ ಬಗ್ಗೆ	ಬರೆದುಕೊಂಡು ಬರ್ರಿ.	

ಕ್ರ.ಸಂ.	ಮೆಟ್ಟಿಲುಗಳು ಹಾಗೂ ಅವುಗಳ ವಿವರ	ಅವಶ್ಯಕ ಜ್ಞಾನ	ಕಲಿಸುವ ಕ್ರಮ	ಕರಿಹಲಗೆಗೆ ಬರಹ
		ಹತ್ತಿಯನ್ನು ತೆಗೆದುಕೊಂಡು ಹಲಿಗೆಯ ಹಿಂಬದಿಯಲ್ಲಿಡಬೇಕು. ಅದರ ಮೇಲೆ ಕುಡವನ್ನಿಟ್ಟು ಒತ್ತಿ ಮುಂದುಗಡೆ ಉರುಳಿಸಬೇಕು. ಅರೆದ ಅರಳೆಯನ್ನು ಹಿಂಬದಿಗೆ ಕಾಗದದ ಮೇಲೆ ಇಡಬೇಕು.		
	ನೆನಪಿನಲ್ಲಿಡತಕ್ಕ ಸಂಗತಿಗಳು:—	ಗಮನಿಸ ಬೇಕಾದ ಸಂಗತಿಗಳು:— ಹತ್ತಿಯನ್ನು ಜಾಡಿಸಿ ಇಡಬೇಕು. ಕಾಳು ಒಡೆಯದಂತೆ ನೋಡಿಕೊಳ್ಳಬೇಕು. ಅರಳೆಯು ಮುದ್ದಿಯಾಗದಂತೆ ಇಡಬೇಕು.	ಈ ಸಂಗತಿಗಳನ್ನು ಬಾಲಕರ ಲಕ್ಷ್ಯಕ್ಕೆ ತಂದು ಕೊಡುವದು. ಹತ್ತಿಯನ್ನು ಅರೆಯುವಾಗ ಯಾವ ಯಾವ ಸಂಗತಿಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು ?	ಲಕ್ಷ್ಯದಲ್ಲಿಡಬೇಕಾದ ಸಂಗತಿಗಳು:— ಹತ್ತಿಯನ್ನು ಜಾಡಿಸಿ ಇಡಬೇಕು. ಕಾಳು ಒಡೆಯದಂತೆ ನೋಡಿಕೊಳ್ಳಬೇಕು ಅರಳೆಯು ಮುದ್ದಿಯಾಗದಂತೆ ಇಡಬೇಕು.
	ಬ) ವೇಳೆಯ ಕಲ್ಪನೆ	ಬಾಲಕರೊಡನೆ ಚರ್ಚಿಸಿ ವೇಳೆಯನ್ನು ನಿರ್ಧರಿಸುವದು.	ನಾನು ೨ ತೊಲೆ ಹತ್ತಿಯನ್ನು ಎಷ್ಟು ವೇಳೆಯಲ್ಲಿ ಅರೆದೆನು ? ಅಷ್ಟೇ ಹತ್ತಿಯನ್ನು ಅರೆಯಲು ನಿಮಗೆ ಎಷ್ಟು ವೇಳೆ ಬೇಕಾಗಬಹುದು ? ಈ ಪ್ರಕಾರ ಚರ್ಚಿಸಿ ವೇಳೆಯನ್ನು ನಿರ್ಧರಿಸುವದು.	
	ಕ) ಕಾರ್ಯಾರಂಭ:	ಬಾಲಕರಿಗೆ ಕೆಲಸ ಆರಂಭ ಮಾಡಲು ತಿಳಿಸುವದು.	ಮೇಲೆ ಗೊತ್ತು ಪಡಿಸಿದ ರೀತಿಯಿಂದ ಸಾಮಾನುಗಳನ್ನು ಶಿಸ್ತಿನಿಂದ ಹಂಚಲು ಹಚ್ಚುವದು. ಬಾಲಕರನ್ನು ನಿರ್ದಿಷ್ಟಗೊಳಿಸಿದ ಅವಧಿಯ ವರೆಗೆ ಅರೆಯುವ ಕೆಲಸದಲ್ಲಿ ತೊಡಗಿಸುವದು. ಶಿಕ್ಷಕರು ಮೇಲ್ವಿಚಾರಣೆ ಮಾಡುತ್ತ ಅವರು ತಪ್ಪಿದಲ್ಲಿ ಮಾರ್ಗದರ್ಶನ ಮಾಡುವದು. (ಅವಧಿಯು ಮುಗಿದ ನಂತರ ಸಾಧನಗಳನ್ನು ಕೂಡಿಸಲು ಹೇಳುವದು)	
೪	ಪರಿಶೀಲನೆ:—			
	ಅ)ಮಾಡಿದ ಕೆಲಸದ ವಿಮರ್ಶೆ:—	ಬಾಲಕರು ಮಾಡಿದ ಕೆಲಸದ ಮೇಲಿಂದ ಕಾರ್ಯದ ಬಗ್ಗೆ ಕೆಲವು ಸಂಗತಿಗಳನ್ನು ಬಾಲಕರಿಂದ ಹೊರಡಿಸುವದು.	ನಾವು ಎಷ್ಟು ಹತ್ತಿಯನ್ನು ಅರೆಯಬೇಕೆಂದಿದ್ದೆವು ? ಎಷ್ಟು ಎಷ್ಟು ಅರೆದಿರುವಿರಿ ? ಯಾವ ಹುಡುಗನು ಹತ್ತಿಯನ್ನು ಚನ್ನಾಗಿ ಅರೆದಿರುತ್ತಾನೆ ? ಯಾರು ಹೆಚ್ಚು ಹತ್ತಿಯನ್ನು ಅರೆದಿರಿ ? ಇದನ್ನು ಹೇಗೆ ಗೊತ್ತು ಪಡಿಸುವಿರಿ ?	

ಕ್ರ.ಸಂ.	ಮೆಟ್ಟುಗಳು ಹಾಗೂ ಅವುಗಳ ವಿವರ	ಅವಶ್ಯಕ ಜ್ಞಾನ	ಕಲಿಸುವ ಕ್ರಮ	ಕರಿಹಲಿಗೆ ಬರಹ
		ಹತ್ತಿಯು ಸ್ವಚ್ಛಮಾಡಿದ್ದಿರಬೇಕು. ಅವಶ್ಯ ವಿದ್ದಷ್ಟೇ ತೆಗೆದುಕೊಂಡು ಹಲಿಗೆಯ ಮೇಲೆ ಇಡಬೇಕು. ಹಲಿಗೆಯ ಮೇಲೆ ಇಟ್ಟ ನಂತರ ಕುಡದಿಂದ ಅರೆಯಬೇಕು.		
	ಬ) ಕಾರ್ಯ ಸಂಘಟನೆ:–	ಈ ಕೆಲಸವನ್ನು ಬಾಲಕರು ವೈಯಕ್ತಿಕವಾಗಿ ಮಾಡಬೇಕಾಗುವದು. ೭–೮ ವರುಷದ ಬಾಲಕರು ೩೦ ನಿಮಿಷಗಳಲ್ಲಿ ೨ ತೊಲೆ ಹತ್ತಿಯನ್ನು ಅರಿಯಬಲ್ಲರು. ಪ್ರತಿಯೊಬ್ಬನಿಗೆ ಒಂದು ಹಲಿಗೆ, ಒಂದು ಕುಡ, ಕಾಗದದ ೨ ತುಂಡುಗಳು ಮತ್ತು ೨ ತೊಲೆ ಹತ್ತಿ ಬೇಕಾಗುತ್ತವೆ. ಕೆಲವು ವಿದ್ಯಾರ್ಥಿಗಳನ್ನು ಆರಿಸಲು ಹಚ್ಚಿ ಅವರಿಂದ ಒಂದೊಂದು ಸಾಮಾನವನ್ನು ಸರಿಯಾಗಿ ಹಂಚುವದು.	ಪ್ರತಿಯೊಬ್ಬನಿಗೆ ಯಾವ ಯಾವ ಸಾಧನಗಳು ಎಷ್ಟು ಎಷ್ಟು ಬೇಕಾಗುವವು ? ಕೆಲವು ಬಾಲಕರ ಸಹಾಯದಿಂದ ಸಾಧನಗಳನ್ನು ಹಂಚುವದನ್ನು ನಿರ್ದಿಷ್ಟ ಪಡಿಸುವದು.	(ಸಾಧನಗಳನ್ನು ಹಂಚುವವರ ಹೆಸರುಗಳನ್ನು ಬರೆಯುವದು)
೧	ಕಾರ್ಯ ನಿರ್ವಹಣೆ:— ಅ) ಶಿಕ್ಷಕರ ಮಾದರಿ ಕೃತಿ:—	ಶಿಕ್ಷಕರು ಮಾದರಿ ಕೃತಿಯನ್ನು ಮಾಡಿ ತೋರಿಸುತ್ತಿರುವಾಗ ಬಾಲಕರ ಗಮನಕ್ಕೆ ಕೆಳಗಿನ ಸಂಗತಿಗಳನ್ನು ತಂದು ಕೊಡಬೇಕು:— ಕೊಟ್ಟ ಹತ್ತಿಯನ್ನು ಬಿಡಿಬಿಡಿ ಮಾಡಿ ಬಲಗಡೆಗೆ ಕಾಗದದ ಮೇಲೆ ಇಟ್ಟುಕೊಳ್ಳಬೇಕು. ಹಲಿಗೆಯನ್ನು ನಮ್ಮ ಕಡೆಗೆ ಅಗಲವು ಬರುವಂತೆ ಇಟ್ಟುಕೊಳ್ಳಬೇಕು. ಸರತಿಗೆ ಒಂದು ಕಾಳು ಬರುವಂತೆ	ಶಿಕ್ಷಕರು ಮಾದರಿ ಕೃತಿಮಾಡಿ ತೋರಿಸಬೇಕು. ವಿದ್ಯಾರ್ಥಿಗಳು ನಿರೀಕ್ಷಿಸಬೇಕು; ಹುಡುಗರ ಅವಧಾನವನ್ನು ಸೆಳೆಯುವದಕ್ಕಾಗಿ ಕೃತಿ ಮಾಡುತ್ತಿರುವಾಗ ಆಗಾಗ ಅವಶ್ಯವಿದ್ದ ಪ್ರಶ್ನೆಗಳನ್ನು ಕೇಳುವದು.	

ಸಮವಾಯ ಪಾಠದ ಟಿಪ್ಪಣಿ

ದಿನಾಂಕ:—

ವೇಳೆ:—೭೦ ನಿಮಿಷಗಳು

ಶಿಕ್ಷಕರ ಹೆಸರು:—ಶ್ರೀ ವಿರುಪಾಕ್ಷ ಆಂ: ಉಮರಾಣಿ

ಇಯತ್ತೆ:— ೨ ಚಟುವಟಿಕೆ:—ಕುಡ ಹಲಿಗೆಯಿಂದ ಹತ್ತಿಯನ್ನು ಅರೆಯುವದು. ಸಮವಾಯ ಜ್ಞಾನ:—

(೧) ಭಾಷೆ—ವಾಚಾ ನಿಬಂಧ ಮತ್ತು ಬರಿಜ

(೨) ಗಣಿತ—ವಜಾಬಾಕಿ.

ಕ್ರ. ಸಂ.	ಮೆಟ್ಟುಗಳು ಹಾಗೂ ಅವುಗಳ ವಿವರ	ಆವಶ್ಯಕ ಜ್ಞಾನ	ಕಲಿಸುವ ಕ್ರಮ	ಕರಿಹಲಿಗೆಯ ಬರಹ
೧	ಯೋಜನೆ:— ಅ) ಪ್ರೇರಣೆ	೭-೮ ವರುಷದ ಬಾಲಕರು ತಮಗೆ ಬೇಕಾಗುವ ಅರಿವೆಯನ್ನು ತಯಾರಿಸುವ ಕೆಲಸದಲ್ಲಿ ನೂಲುವ ವರೆಗಿನ ಎಲ್ಲ ಕೆಲಸಗಳನ್ನು ಮಾಡ ಬಲ್ಲರು. ಈಗಾಗಲೇ ಹತ್ತಿಯನ್ನು ಸ್ವಚ್ಛ ಮಾಡಿದ್ದರಿಂದ ಹತ್ತಿಯನ್ನು ಈಗ ಅರೆಯುವದವಶ್ಯ.	ನೀವು ಈ ಮೊದಲು ಯಾವ ಕೆಲಸವನ್ನು ಮಾಡಿರುವಿರಿ ? ಹತ್ತಿಯನ್ನು ಏಕೆ ಸ್ವಚ್ಛ ಮಾಡಿದಿರಿ ? ಅದನ್ನು ಹೇಗೆ ಅರೆಯುವಿರಿ ? ಈ ಹೊತ್ತಿನ ದಿವಸ ಕುಡ ಹಲಿಗೆಯಿಂದ ಹತ್ತಿಯನ್ನು ಅರೆಯೋಣ.	ಚ:— ಕುಡಹಲಿಗೆಯಿಂದ ಹತ್ತಿಯನ್ನು ಅರೆಯುವದು.
	ಬ) ಕೆಲಸದ ಮುನ್ನೋಟ:—	ಅರೆಯುವ ಕೆಲಸದಲ್ಲಿ ಕೆಳಗೆ ಕಾಣಿಸಿದ ಉಪಕ್ರಿಯೆಗಳು ಇರುವವು:— (೧) ಹತ್ತಿಯನ್ನು ಬಿಡಿ ಬಿಡಿ ಮಾಡುವದು. (೨) ಹತ್ತಿಯನ್ನು ಅರೆಯುವದು. (೩) ಅರೆದ ಅರಳೆಯ ಜತನ ಮಾಡುವದು.	ನಿಮಗೆ ಹತ್ತಿಯನ್ನು ಅರೆಯಲಿಕ್ಕೆ ಬರುತ್ತದೆಯೋ ? ಹೇಗೆ ಅರೆಯಬೇಕು ? ಅರೆಯುವದಕ್ಕಿಂತ ಮೊದಲು ಏನು ಮಾಡಬೇಕು ? ಅರೆದ ನಂತರ ಅರಳೆಯನ್ನು ಹೇಗೆ ಇಡಬೇಕು ?	ಉಪಕ್ರಿಯೆಗಳು: ೧) ಹತ್ತಿಯನ್ನು ಬಿಡಿ ಬಿಡಿ ಮಾಡುವದು. ೨) ಹತ್ತಿಯನ್ನು ಅರೆಯುವದು. ೩) ಅರಳೆಯ ಜತನ ಮಾಡುವದು.
೨	ಪೂರ್ವಸಿದ್ಧತೆ:— ಅ) ಬೇಕಾದ ಸಾಧನಗಳ ಸಂಗ್ರಹ ಹಾಗೂ ಅವುಗಳ ಉಪಯೋಗ.	ಅರೆಯಲು ಬೇಕಾಗುವ ಸಾಧನ ಸಾಮಗ್ರಿಗಳು:— ೧) ಹತ್ತಿ ೨ ತೊಲೆ × ೨೦. (೨) ಹಲಿಗೆ ೨೦. ೩) ಕುಡ ೨೦ (೪) ಕಾಗದ ತುಂಡುಗಳು. ೨೦ ೫) ತಕ್ಕಡಿ ೨.	ಹತ್ತಿಯನ್ನು ಅರೆಯಲು ಎಂಥ ಹತ್ತಿಯನ್ನು ತೆಗೆದುಕೊಳ್ಳಬೇಕು? ಅರೆಯುವದಕ್ಕಿಂತ ಮುಂಚೆ ಹತ್ತಿಯನ್ನು ಏನು ಮಾಡಬೇಕು ?	ಸಾಧನಗಳು:— ಹತ್ತಿ ೨೦ × ೨ ತೊ. ಹಲಿಗೆ ೨೦. ಕುಡ ೨೦. ಕಾಗದ ೨೦.

ಭೂಗೋಲದಲ್ಲಿಯ ಮನೋರಂಜಕ ಮತ್ತು ಗರ್ಭಿತಾರ್ಥದ ಹೆಸರುಗಳು

ಲೇಖಕರು:— **ಶ್ರೀಯುತ ಬ. ಮು. ಶಿಂಪ್ರಿ.** ಬಿ. ಎ. ಬಿ. ಟಿ. ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ.

ಜಜಿಪ್ತದ ಕೊಡುಗೆ — ನೈಲ
ಅಜ್ಞಾತ ಖಂಡ — ಆಫ್ರಿಕಾ
ಬಿಳಿ ಮನುಷ್ಯನ ಗೋರಿ — ಗಿನಿ ದೇಶದ ಸಮುದ್ರ ತೀರ (ಆಫ್ರಿಕಾ)
ಚೀನದ ಗೋಳು — ಹೋ-ಆಂಗ-ಹೋ
ನೀಲಿ ಬಣ್ಣದ ಪರ್ವತ — ನೀಲಗಿರಿ
ಮಧ್ಯರಾತ್ರಿ ಸೂರ್ಯನನ್ನು ಕಾಣುವ ನಾಡು — ಹ್ಯಾಮರ ಫೆಸ್ಟ (ನಾರ್ವೇ)
ಯುರೋಪದ ನಂದನವನ — ಸ್ವಿತ್ಸರ್ಲ್ಯಂಡ
ಭಾರತದ ನಂದನವನ — ಕಾಶ್ಮೀರ
ಸಮುದ್ರದಲ್ಲಿಯ ನದಿ — ಗಲ್ಫ ಸ್ಟ್ರೀಮ
ಏಳು ಗುಡ್ಡಗಳ ಪಟ್ಟಣ — ರೋಮ
ಆಡ್ರಿಯಾಟಿಕ್ ಸಮುದ್ರದ ರಾಣಿ — ವೆನೀಸ್
ಭೂಮಧ್ಯ ಸಮುದ್ರದ ಕೇಲಿ ಕೈ — ಜಿಬ್ರಾಲ್ಟರ
ಜಗತ್ತಿನ ಚಪ್ಪರ — ಪಾಮೀರ
ದಕ್ಷಿಣದ ಬ್ರಿಟನ್ನವು — ನ್ಯೂ ಝೀಲಂಡ
ಉದಯಿಸುವ ಸೂರ್ಯನ ನಾಡು — ಜಪಾನ
ಹಸಿರು ನಡುಗಡ್ಡೆ — ಅಯರ್ಲಂಡ
ಮೇಪಲ್ ವೃಕ್ಷಗಳ ನಾಡು — ಕ್ಯಾನಡಾ
ಬಿದುರು-ರಟ್ಟುಗಳ ಪಟ್ಟಾದ ಊರಣ್ಯ — ಟೋಕಿಯೋ
ಪೃಥ್ವಿಯ ಮಾನುಷ ವಿಷುವ ವೃತ್ತ — ಹಿಮಾಲಯ
ಯುರೋಪದ ರೋಗಿಯು — ತುರ್ಕಸ್ತಾನ (ಯುರೋಪ)
ದಕ್ಷಿಣ ಭಾರತದ ತೋಟ — ತಂಜಾವರ
ಭಾರತದ ಹಳವುಗಳ ಅರಸು — ತೇಗು
ಐದು ಹೊಳೆಗಳ ನಾಡು — ಪಂಜಾಬ
ಭೂತಗಳ ಮತ್ತು ದೇಗುಲ ಗಳ ಪಟ್ಟಣ — ಕಾಶಿ
ಸುದೀರ್ಘ ಅಂತರಗಳುಳ್ಳ ಪಟ್ಟಣ — ಮದ್ರಾಸ
ಕಣ್ಣೀರುಗಳ ಹೆಬ್ಬಾಗಿಲು — ಬಾಬೆಲ್ಬ್-ಮಾಂಡೇ
ಮುತ್ತುಗಳ ನಡುಗಡ್ಡೆ — ಬಹರೆಯಿನ್ (ಇರಾಣದ ಆಖಾತ)
ಪ್ರವೇಶಿಸಲು ಪ್ರತಿಬಂಧಿಸಲ್ಪಟ್ಟ ನಾಡು — ತಿಬೇಟ
ಹಿಂದೀ ಮಹಾಸಾಗರದ ಜಿಬ್ರಾಲ್ಟರ — ಏಡನ್
ಮೋಟರ ವಾಹನ (Motor Cars) ಗಳ ಪಟ್ಟಣ — ಡೆಟ್ರಾಯಿಟ್
ಪಾಸಿಫಿಕದಲ್ಲಿಯ ಗ್ರೇಟ ಬ್ರಿಟನ್ನವು — ಜಪಾನ
ವಜ್ರಗಳ ಪಟ್ಟಣ — ಕಿಂಬರ್ಲೀ (ದಕ್ಷಿಣ ಆಫ್ರಿಕಾ)
ಕರಿಕಲ್ಲುಗಳ ಪಟ್ಟಣ — ಅಬರ್ಡೀನ (ಸ್ಕಾಟ ಲಂಡ

ಸೂಚನೆ:— ಪ್ರಾಥಮಿಕ ಸಾಲೆಗಳ ಮೇಲಿನ ಇಯತ್ತೆಗಳ ಮಕ್ಕಳಿಗೆ ಮತ್ತು ಟ್ರೇನಿಂಗ ಕಾಲೇಜಗಳಲ್ಲಿ ಓದುವ ಶಿಕ್ಷಕ-ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಬಹಳ ಉಪಯುಕ್ತವಾಗಿವೆ. ಆದುದರಿಂದ, ಅವುಗಳನ್ನೆಲ್ಲ ಶೇಖರಿಸಿ, ಅಚ್ಚು ಕಟ್ಟಾಗಿ ಹೊಂದಿಸಿ ಕೊಡಲಾಗಿದೆ. ಶಿಕ್ಷಕ-ಶಿಕ್ಷಕಿಯರು ತಮ್ಮ ಕ್ಲಾಸಿನ ಮಕ್ಕಳಿಗೆಲ್ಲ ಇದರ ಪೂರ್ಣಲಾಭವನ್ನು ಮಾಡಿಕೊಡುವರೆಂದು ನಮ್ಮ ಹಾರೈಕೆ.

——

ಪುಸ್ತಕ ವಿಮರ್ಶೆ

ಪುಸ್ತಕದ ಹೆಸರು:— **ಶರಣ ನುಲಿಯ ಚಂದಯ್ಯ**
ಲೇಖಕರು:— **ಶ್ರೀ. ವ್ಹಿ. ಕೆ. ಕರಡಿ ಹಾಗೂ ಸಂಗಡಿಗರು.**
ಪ್ರಕಾಶಕರು:— **ಶ್ರೀ. ಬಿ. ಜಿ. ಇಂಗಳೇಶ್ವರ**
ಪುಟಗಳು:— ೪೪ ಬೆಲೆ:— **ಎಂಟಾಣೆ**

ಇದೊಂದು ಭಕ್ತಿ ರಸ ಪ್ರಧಾನವಾದ ರಮ್ಯ ನಾಟಕ. ಸಮಾಜದಲ್ಲಿ ನೀತಿಯನ್ನು ಹರಡುವದರಲ್ಲಿ ಶಿವಶರಣರ ಚಾರಿತ್ರ್ಯಗಳು ಅಮೋಘವಾದ ಕಾರ್ಯವನ್ನು ಮಾಡಿವೆ. ಕಾಯಕದಿಂದ ಬಂದ ಯೋಗ್ಯ ಹಣದ ಸೇವೆಯೇ ಗುರು–ಲಿಂಗ–ಜಂಗಮರಿಗಾಗಬೇಕು. ಮೂರು ಕಾಸಿನ ಬೆಲೆಯ ನುಲಿಗೆ ಸಾವಿರ ಹೊನ್ನುಗಳನ್ನು ಕೊಟ್ಟರೆ ಚಂದಯ್ಯನು ಸ್ವೀಕರಿಸದೆ ಹೋದ. ಇಂಥ ಅಯೋಗ್ಯ ಬೆಲೆಯ ಹಣದಿಂದ ಮಾಡಿದ ಜಂಗಮ ಸೇವೆಯು ವ್ಯರ್ಥವೆಂದ. ಭಾವಶುದ್ಧಿಯಿಂದ ಕಾಯಕಮಾಡಿ ಅಂಗದ ಮೇಲೆ ಲಿಂಗವ ಧರಿಸಿ ಕಾಯಕದಿಂದ ಬಂದ ಯೋಗ್ಯ ಜೀವಿಯಲ್ಲಿ ಜಂಗಮ ದಾಸೋಹ ಮಾಡಿ ಮುಕ್ತಿಪಡೆಯಲಣಿಯಾದ ಚಂದಯ್ಯ. ನಾಗರಿಕರಾಗಲಿರುವ ಮಕ್ಕಳಿಗೆ ದುಡಿಮೆಯೇ ದೇವರೆಂಬ ಭಾವನೆಯನ್ನು ಕಲ್ಪಿಸುವ ನಾಟಕವಿದು. ಹಿರಿಯರು ಕಿರಿಯರು ಕೂಡಿಯೇ ಆದರದಿಂದ ಈ ಚಿಕ್ಕ ನಾಟಕವನ್ನು ಸ್ವಾಗತಿಸುವರಾಗಿ ಆಶಿಸಲಾಗಿದೆ.

ಪುಸ್ತಕದ ಹೆಸರು:— **ಪಠ್ಯೇತರ ಚಟುವಟಿಕೆಗಳು.**
ಲೇಖಕರು:— **ಶ್ರೀ.ಶಿ. ಲಿಂ. ನಾಗನೂರ**
ಪ್ರಕಾಶಕರು:— **ತೋಂಟದಾರ್ಯ ಮುದ್ರಣಾಲಯ ಧಾರವಾಡ**
ಪುಟಗಳು:— ೧೨೬ ಬೆಲೆ:— ೧—೮—೦

ಪ್ರಚಲಿತ ಶಿಕ್ಷಣದ ಒಲವು ಹಾಗೂ ಓಘಗಳನ್ನರಿತುಕೊಂಡು ಶ್ರೀ ನಾಗನೂರ ಅವರು ಹಲವು ವರ್ಷಗಳ ಶಿಕ್ಷಣವೃತ್ತಿಯ ಅನುಭವದ ಆಳವನ್ನು ಹಿನ್ನೆಲೆಯಾಗಿಟ್ಟುಕೊಂಡು ಈ ಪುಸ್ತಕದಲ್ಲಿ ವಿಷಯಾಂಗಗಳನ್ನು–ಬರೆಯಲಿಳಸಿದ್ದಾರೆ. ಇದರಲ್ಲಿ ನನೂದಿಸಲಾದ ಚಟುವಟಿಕೆಗಳು ಮಾರ್ಗದರ್ಶನಕ್ಕಾಗಿ ಎಂದು ಭಾವಿಸಿ ಪರಿಸ್ಥಿತಿಗೆ ತಕ್ಕಂತೆ ಇತರ ಚಟುವಟಿಕೆಗಳಲ್ಲಿ ಕೇಂದ್ರವಾಗಿಟ್ಟುಕೊಂಡು ಪಠ್ಯಕ್ರಮದೊಡನೆ ಸಮನ್ವಯಗೊಳಿಸಿ ಸಮರಸಗೊಳಿಸಿ ಶಾಲೆಯ ಅಭ್ಯಾಸ ಕ್ರಮವನ್ನು ಸಾಗಿಸಲಿಕ್ಕೆ ಹಾಗೂ ಮಕ್ಕಳಿಗೆ ತಮ್ಮದೆ ಆದ ಮಂತ್ರಿ ಮಂಡಲವನ್ನು ಸ್ಥಾಪಿಸಿಕೊಂಡು ನಾಗರಿಕತೆಯ ಪ್ರಥಮ ಪಾಠಗಳನ್ನು ಕಲಿಸಲಿಕ್ಕೆ ಶಿಕ್ಷಕರಿಗೆ ಈ ಪುಸ್ತಕವು ಸಹಾಯಕಾರಿಯಾಗಬಹುದೆಂದು ಆಶಿಸಲಾಗಿದೆ.

ಪುಸ್ತಕದ ಹೆಸರು:— **"ನೂಲುವ ಶಿಕ್ಷಕ"**
ಲೇಖಕರು:— **ಶ್ರೀ. ಸಿದ್ಧನಾಥ ಹೂಲಿ.**
ಪ್ರಕಾಶಕರು:— ,,
ಪುಟಗಳು:— ೨೩೫ ಬೆಲೆ:— ೨—೮—೦

ಈ ಪುಸ್ತಕದಲ್ಲಿ ಲೇಖಕರು ಮೂರು ಭಾಗಗಳನ್ನು ಮಾಡಿ ನೂಲುವ ಕಲೆಯ ತಾತ್ವಿಕತೆಯನ್ನು ಮೊದಲು ಮಾಡಿಕೊಂಡು ನೂಲುವ ಕ್ರಿಯೆಯ ಕಚ್ಚಾ ಸಾಮಗ್ರಿಯಾದ ಹತ್ತಿಯ ವಿವಿಧತೆಗಳನ್ನು ಒಳಪಡಿಸಿಕೊಂಡ ನೂಲುವ ಪೂರ್ವ ಕ್ರಿಯೆಗಳಾದ ಹತ್ತಿಯ ಸ್ವಚ್ಛತೆ ಆರೆಯುವದು, ಹಿಂಜುವದು, ಹೆಂಜಿಹಾಕುವದು, ಇ ಲ್ಲವುಗಳನ್ನು ಶೇಖರಿಸಿಕೊಂಡು, ನೂಲುವ ಕ್ರಿಯೆಯ ಸಾಧನ – ಸಲಕರಣೆಗಳ ವರ್ಣನೆಯನ್ನು ವಿವರಿಸಿ ಪ್ರದರ್ಶನೀಯ ಪಟಗಳನ್ನು ಮಾದರಿಗಾಗಿ ಎಲ್ಲ ಮುಂದಿಟ್ಟು ವಿವರಿಸಿದ್ದಾರೆ. ವಿವಿಧ ವಿಧಾನ ಕ್ರಮಗಳನ್ನು ಸೂಕ್ತ ಚಿತ್ರಗಳಿಂದ ವಿವರಿಸಲಾಗಿದೆ. ವಿಷಯ ನಿರೂಪಣೆಗೂ ಇದರಿಂದ ಕಳೆಬಂದಿದೆ. - ನೂಲಿನ ನಂಬರು ತೆಗೆಯುವ ಸೂತ್ರ, ಶಕ್ತಿಯನ್ನು ಕಂಡು ಹಿಡಿಯುವ ರೀತಿ ಮೊದಲಾದುವನ್ನು ಸಹ ಕೊಡಲಾಗಿದೆ. ಹೀಗೆ ಈ ಪುಸ್ತಕವು ನೂಲುವ ಮೂಲೋದ್ಯೋಗದ ತೊಡಗುವವರಿಗೆ ಬಹಳ ಉಪಯುಕ್ತವಿದೆ.

ಪುಸ್ತಕದ ಹೆಸರು:— **ಕೆಳದಿಯ ಚೆನ್ನಮ್ಮ**
ಲೇಖಕರು:— **ಶ್ರೀ. ಎನ್. ಡಿ. ಬಗರಿ**
ಪ್ರಕಾಶಕರು: — **ಶ್ರೀ. ಜಿ. ಕೆ. ಬೆಕ್ಕಿನಕೇರಿ**
ಪುಟಗಳು:— ೨೦ ಬೆಲೆ:— ೦—೩—೦

ಇದೊಂದು ವೀರರಸ ಪ್ರಧಾನ ಏಕಾಂಕ ನಾಟಕ. ಐತಿಹಾಸಿಕ ಏಕಾಂಕ ನಾಟಕ. ೧೭ನೆಯ ಶತಮಾನದ ಅಂತ್ಯ ಭಾಗದಲ್ಲಿ ಕೆಳದಿಯ ರಾಣಿಯಾದ ವೀರ ಚೆನ್ನಮ್ಮಾಜಿಯು ಮಹಾರಾಷ್ಟ್ರ ಅರಸ ರಾಜಾರಾಮನಿಗೆ ಮೊಗಲರ ಕಾಟವನ್ನು ತಪ್ಪಿಸಲೋಸುಗ ಆಶ್ರಯ ಕೊಟ್ಟದ್ದಕ್ಕಾಗಿ ಮೊಗಲರು ಕೆಳದಿ ಸಂಸ್ಥಾನವನ್ನು ಹಾಳಿಯಿಡಲು ಅವರ ಶೌರ್ಯ-ಪರಾಕ್ರಮವನ್ನು ಘೋಷಿಸಿದ ಒಂದು ವೀರರಸ ಸನ್ನಿವೇಶವನ್ನು ಸುಂದರ ಸರಳ ಭಾಷೆಯಲ್ಲಿ ನಾಟಕಕಾರರು ಹೆಣೆದಿದ್ದಾರೆ. ನಾವು ನುಷ್ಯಳಿಗೆ ಪೂರ್ವದ ಪರಂಪರೆಯನ್ನು ಮನದಟ್ಟು ಮಾಡಿಕೊಟ್ಟದು ಸ್ತುತ್ಯವೆಂದು ಬೇರೆ ಹೇಳಬೇಕಿಲ್ಲ

ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ

ಬೆಳವಣಿಕೆ— ಇಲ್ಲಿಯ ತರುಣ ಸಂಘದ ವತಿಯಿಂದ ಶ್ರೀ ಆ.ಸೋ.ಸಜ್ಜನ ಇವರ ಅಧ್ಯಕ್ಷತೆಯಲ್ಲಿ ಗಣೇಶೋತ್ಸವವು ಆರಂಭವಾಗಿ ಡಾ। ಹಣ್ಣಿಯವರ ಹಿರಿಯತನದಲ್ಲಿ ಮುಕ್ತಾಯವಾಯಿತು. ೪೦ ರೂಪಾಯಿ ಬೆಲೆಯ ೧೧ ದೇಶಭಕ್ತರ ಭಾವಚಿತ್ರಗಳು ಸ್ಥಳಿಕ ಸಾಲೆಗಳಿಗೆ ಕೊಡಲ್ಪಟ್ಟವು.

ಆರ್ಜುನಗಿ— ದಿನಾಂಕ ೨೭-೮-೩೨ ರಂದು ಶ್ರೀ ಅಂಬಲಿಯವರ ಅಧ್ಯಕ್ಷತೆಯಲ್ಲಿ ಗ್ರುಪ ಶಿಕ್ಷಕರ ಸಮ್ಮೇಲನವು ಜರುಗಿತು. ಬಾಲಕರ ಸಂಭಾಷಣೆ ವಿವಿಧ ವಿನೋದಾವಳಿ ಹಾಗೂ ಬೀಟ ಆಫೀಸರ ರಾದ ಶ್ರೀ ಜೆ.ಬ. ಪಾವಟಿಯವರ ಭಾಷಣಗಳು ಜರುಗಿದವು.

ಬಂಕಾಪುರ— ದಿನಾಂಕ ೨೮-೮-೩೨ ರಂದು ಶ್ರೀಮತಿ ಡಿ। ಸಿದ್ದಮ್ಮ ಆ. ಎ. ಓ. ಧಾರವಾಡ ಅವರ ಹಿರಿಯತನದಲ್ಲಿ ಇಲ್ಲಿಯ ಕನ್ಯಾ ಸಾಲೆಯಲ್ಲಿ ಗಜಾನನ ವಿಸರ್ಜನೋತ್ಸವ ಹಾಗೂ ಪಾಲಕೆಯರ ದಿನಾಚರಣೆ ಇವು ಜರುಗಿದವು.

ಲೋಕಾಪುರ:— ಇಲ್ಲಿಯ ಕ. ಗಂ. ಸಾಲೆಯಲ್ಲಿ ಗಜಾನನೋತ್ಸವದ ಅಂಗವಾಗಿ ದಿನಾಂಕ ೨೬-೮-೩೨ ರಂದು ಪಾಲಕರ ದಿನಾಚರಣೆಯು ಶ್ರೀ ಗಣಪತ ರಾವ ಲಾಟಕರ ಅವರ ಹಿರಿಯತನದಲ್ಲಿ ನಡೆಯಿತು; ಅಂದೇ ಮಧ್ಯಾಹ್ನ ಗ್ರುಪ್ ಶಿಕ್ಷಕರ ಸಮ್ಮೇಲನವೂ ರಾತ್ರಿ ಬಾಲಕರ ವಿನೋದಾವಳಿಗಳೂ ನಡೆದವು. ಇಲ್ಲಿಯ ಪಾಟಿ ಕಾರಖಾನೆಯ ಮ್ಯಾನೇಜರರು ಬಡ ವಿದ್ಯಾರ್ಥಿಗಳಿ ಪುಕ್ಕಟೆ ಪಾಟಿ ಓದಗಿಸುವ ಆಶ್ವಾಸನವಿತ್ತರು.

ಗದಗ:— ಇಲ್ಲಿಯ ಸೆಟಲ್‌ಮೆಂಟ ಕನ್ನಡ ಸಾಲೆಯಲ್ಲಿ ಸಮಾಜ ಶಿಕ್ಷಣ ವರ್ಗ ಹಾಗೂ ಸರ್ವೋದಯ ಹಿಂದುಳಿದ ಸಮಾಜ ಇವುಗಳ ಪರವಾಗಿ ಗಜಾನನೋತ್ಸವವನ್ನು ಆಚರಿಸಲಾಯಿತು. ಅನೇಕ ಶಿಕ್ಷಣ ಪ್ರೇಮಿಗಳು ಭಾಗವಹಿಸಿದ್ದರು. ಆಜಾದ ಹಿಂದ ಸೇವಾ ಸಂಘದಿಂದ ಸಮಾಜ ಶಿಕ್ಷಣದ ಅಂಗವಾಗಿ ಜೆಟಗೇರಿಯ ಶ್ರೀ ಹುಚ್ಚನಗೌಡರ ಓಣಿಯಲ್ಲಿ ಶ್ರೀ ಗಜಾನನೋತ್ಸವವು ಆಚರಿಸಲ್ಪಟ್ಟಿತು.

ವಿಜಾಪುರ:— ಇಲ್ಲಿಯ ಮರಾಠಿ ಸಾಲೆಯ ಶ್ರೀ ಗಜಾನನೋತ್ಸವವು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು.

ನೆಲ್ಲೀಕೇರಿ:— ಇಲ್ಲಿಯ ಕನ್ನಡ ಸಾಲೆಯ ೨೪-೮-೩೨ ರಿಂದ ೩೦-೮-೩೨ ರವರೆಗೆ ಶ್ರೀ ಗಣೇಶೋತ್ಸವವು ಆಚರಿಸಲ್ಪಟ್ಟಿತು. ಪ್ರತಿ ದಿನ ಶಿಕ್ಷಕ ತಜ್ಞರ ಭಾಷಣಗಳಾದವು.

ಬೆಳಗಾಂವಿ:— ಇಲ್ಲಿಯ ಕರ್ನಾಟಕ ಶಿಕ್ಷಣ ಸಂಸ್ಥೆಯ ಪರವಾಗಿ ಆ ಸಂಸ್ಥೆಯ ಸನ್ಮಾನ್ಯ ಅಧ್ಯಕ್ಷರಾದ ಶ್ರೀ ದಾತಾರ ಬಳವಂತರಾಯರಿಗೆ ಅವ

ಕೇಂದ್ರ ಸಕಲಾರದ ಗೃಹಶಾಖೆಯ ಉಪ ಮಂತ್ರಿಗಳಾಗಿ ನೇಮಕ ಹೊಂದಿದ್ದಕ್ಕಾಗಿ ದಿನಾಂಕ ೨೯-೮-೧೯೫೨ ರಂದು ಸತ್ಕಾರ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಲಚ್ಯಾಣ:— ದಿನಾಂಕ ೨೩-೮-೧೯೫೨ ರಂದು ಇಲ್ಲಿಯ ಟ್ರೇನಿಂಗ ಕಾಲೇಜದಲ್ಲಿ ಶ್ರೀ ಮೇದಿ ಹುಚ್ಚೇಶ್ವರ ಅವರು ಆ ಕಾಲೇಜದ ಪ್ರಿನ್ಸಿಪಾಲರಾದ ಶ್ರೀ ಮೆಂಚ ಅವರ ಅಧ್ಯಕ್ಷತೆಯಲ್ಲಿ ನೆರೆದ ವಿದ್ಯಾರ್ಥಿ ವೃಂದಕ್ಕೆ "ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳು" ಎಂಬ ವಿಷಯವನ್ನು ಕುರಿತು ಉದ್ಬೋಧಕ ಭಾಷಣ ಮಾಡಿದರು. ಇಲ್ಲಿ ಆಚರಿಸಿದ ಸ್ವಾತಂತ್ರ್ಯೋತ್ಸವಕ್ಕೆ ಪ್ರೊ. ಗಣಾಚಾರಿಯವರು ಅತಿಥಿಗಳಾಗಿ ಆಗಮಿಸಿದ್ದರು.

ಜಾಲಿಹಾಳ:— ದಿನಾಂಕ ೨೩-೮-೫೨ ರಂದು ಇಲ್ಲಿ ಗ್ರುಪ್ ಶಿಕ್ಷಕರ ಸಮ್ಮೇಲನವು ಜರುಗಿ ಒತ್ತಾಯದ ಶಿಕ್ಷಣ, ಸಮಾಜ ಶಿಕ್ಷಣ, ಮೂಲೋದ್ಯೋಗ ಈ ವಿಷಯಗಳ ಬಗ್ಗೆ ಚರ್ಚೆ ನಡೆಯಿತು.

ಒಕ್ಕುಂದ:— ಇಲ್ಲಿಯ ಕ. ಗಂ. ಸಾಲೆಯ ಶಿಕ್ಷಕರು ಬೀಟ ಆಫೀಸರ ಶ್ರೀ ಸಂಗೊಳ್ಳಿಯವರ ಆಶ್ರಯದಿಂದ ಹಾಗೂ ಊರ ಪ್ರಮುಖರ ಸಹಕಾರದಿಂದ ಒಂದು ಸಮಾಜ ಶಿಕ್ಷಣ ವರ್ಗವನ್ನು ತೆರೆದಿದ್ದಾರೆ. ಸಾಲೆಯ ಬಾಲಕರು 'ಬಾಳಿನ ಬೆಳಕು' ಎಂಬ ಚಿಕ್ಕ ನಾಟಕವನ್ನು ಸಮಾಜ ಶಿಕ್ಷಣದ ಉನ್ನತಿಗಾಗಿ ಹುರುಪಿನಿಂದ ಆಡಿದರು.

ಹೆಬ್ಬಾಳ:— (ತಾ-ನವಲಗುಂದ). ತಿಗಡೊಳ್ಳಿ, ಮಹಾಲಿಂಗಪುರ, ವೋದಗಿ, ಮುಧೋಳ, ಗೋಪನಕೊಪ್ಪ, ಬಮ್ಮಿಗಟ್ಟಿ, ಐರಣಿ, ಹಲಗೇರಿ, ಈ ಗ್ರಾಮಗಳ ಸಾಲೆಗಳಲ್ಲಿ ಸ್ವಾತಂತ್ರ್ಯೋತ್ಸವವು ಆಚರಿಸಲ್ಪಟ್ಟಿತು.

ವಿಜಯಪುರ:— ದಿನಾಂಕ ೫-೯-೫೨ ರಂದು ಇಲ್ಲಿಯ ಕ. ಗಂ. ಸಾಲೆ ನಂ. ೭ ಹಾಗೂ ಕನ್ಯಾ ಸಾಲೆ ನಂ. ೮ ಈ ಸಾಲೆಗಳ ಪಾಲಕರ ದಿನಾಚರಣೆಯು ಶ್ರೀಮಾನ್ ಸುರಪುರ ಮಲ್ಲಪ್ಪನವರು ಎಮ್. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಶ್ರೀ. ಅಂಬಲಿ ಚನಬಸಪ್ಪನವರು ಮುಖ್ಯ ಅತಿಥಿಗಳಾಗಿ ಬಂದಿದ್ದರು. ವಸ್ತು ಪ್ರದರ್ಶನಾಲಯದ ಉದ್ಘಾಟನೆ, ಬಾಲ-ಬಾಲಿಕೆಯರ ಮನರಂಜನೆ ಕಾರ್ಯಕ್ರಮ ಮೊದಲಾದುವು ಜರುಗಿದವು.

ಹಾವೇರಿ:— ದಿನಾಂಕ ೩೦-೮-೫೨ ನೆಯ ದಿನ ಇಲ್ಲಿಯ ಕ. ಗಂ. ೧ ನೆಯ ನಂಬರಿನ ಸಾಲೆಯಲ್ಲಿ ಪಾಲಕರ ದಿನಾಚರಣೆಯು ಧಾರವಾಡ ಕ. ಗಂ. ಸರಕಾರೀ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾದ ಶ್ರೀ ಮು. ಗು. ಹಂದ್ರಾಳರವರ ಹಿರಿಯತನದಲ್ಲಿ ನಡೆಯಿತು. ಊರಲ್ಲಿಯ ಎಲ್ಲ ಶಾಲಾ ಶಿಕ್ಷಕ-ಶಿಕ್ಷಕಿಯರು ಆಗಮಿಸಿ ನಗರ ಸಂಕೀರ್ತನೆ, ಧ್ವಜವಂದನೆ, ಬಾಲಕರ ಶಾರೀರಿಕ ಚಟುವಟಿಕೆಗಳು, ವಿವಿಧ ವಿನೋದಾವಳಿಗಳೂ ಹಾಗೂ ತಜ್ಞರ ಭಾಷಣಗಳೂ ಜರುಗಿದವು. ಅಂದು ರಾತ್ರಿ ೮ ಘಂಟೆಗೆ ಅಧ್ಯಕ್ಷರು ಆ ಶಾಲೆಯ ಆಂಗವಾಗಿ ತೆರೆಯಲ್ಪಟ್ಟ ಸಮಾಜ ಶಿಕ್ಷಣದ ಪುರ ಸಿದ್ಧೇಶ್ವರ ಸಭಾ ಮಂದಿರ ಶಾಲೆಗೆ ಭೇಟ್ಟಿಯಿತ್ತು ಸಂತೋಷ ವ್ಯಕ್ತ ಮಾಡಿದರು.

ಕಡಕೋಳ—ದಿನಾಂಕ ೭-೯-೫೨ ರಂದು ಇಲ್ಲಿಯ ಸಾಲೆಯಲ್ಲಿ ಗ್ರುಪ್ ಶಿಕ್ಷಕರ ಸಮ್ಮೇಲನವು ಶ್ರೀ ಅಜ್ಜಪ್ಪಣ್ಣ ಬಟಕುರ್ಕಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಮುಂಬರಡ್ಡಿ ಎಮ್. ಎಲ್. ಎ. ಅವರು ಸಮ್ಮೇಲನವನ್ನು ಉದ್ಘಾಟಿಸಿದರು; ಗಾಂಧೀಜಿಯವರ ಚಿತ್ರಪಟ ಅನಾವರಣ ಸಮಾರಂಭವೂ ಆಯಿತು. 'ಶಿಕ್ಷಕ ಪರಿಚಯ' ಎಂಬ ಪುಸ್ತಕದ ಪ್ರಕಾಶನವು ಜರುಗಿತು.

ಲಚ್ಯಾಣ:—ದಿನಾಂಕ ೭-೯-೫೨ ರಂದು ಶ್ರೀ ಬಂಥನಾಳ ಶಿವಯೋಗಿಗಳವರ ಸಾನ್ನಿಧ್ಯದಲ್ಲಿ ಇಲ್ಲಿಯ ಟ್ರೇ. ಕಾ. ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಸಭೆ ಸೇರಿ ಸಪ್ಟಂಬರ ತಿಂಗಳ ಮಂತ್ರಿಮಂಡಲದ ಪ್ರತಿಜ್ಞಾವಿಧಿ, ಹಿಂದೀ ಹಾಗು ಡ್ರಾಯಿಂಗ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಪ್ರಶಸ್ತಿಪತ್ರ ವಿತರಣ ಇವು ನಡೆದವು.

ಅಗಡಿ:—ದಿನಾಂಕ ೯-೯-೫೨ ರಂದು ಗ್ರುಪ್ ಗಾವಣ ಸಾಲೆಗಳ ಸಮ್ಮೇಲನವು ಬೀಟ ಆಫೀಸರರಾದ ಶ್ರೀ ಲಿಂಗೋಜಿಯವರ ಹಿರಿಯತನದಲ್ಲಿ ನಡೆಯಿತು. ಶ್ರೀ ಕರಿಯಪ್ಪ ಹುಚ್ಚಣ್ಣನವರ ಅವರು ಉದ್ಘಾಟಿಸಿ ಧರಲ್ಲವೆ 'ಪಾಶುಪತಾಸ್ತ್ರ' ಎಂಬ ನಾಟಕವನ್ನು ಆಡಿದ ಮಕ್ಕಳಿಗೆ ಒಂದು ರೌಪ್ಯ ಪದಕವನ್ನು ಮೆಚ್ಚುಕೊಟ್ಟರು.

ಪ್ರಾ. ಶಾ. ಪ್ರ. ಪ. ಪರೀಕ್ಷೆಯ ವಿದ್ಯಾರ್ಥಿಗಳಿಗೆ
ಅತ್ಯುಪಯುಕ್ತವಾದ ಹೊಸ ಪುಸ್ತಕಗಳು

೧. ಹೊಸ ಪ್ರಶ್ನೋತ್ತರ ಇತಿಹಾಸ

ಬರೆದವರು:— ಶ್ರೀ. ಭೀ. ಶಂ. ಪೂಜಾರ ಮಾಸ್ತರ, ಬೆಲೆ: ೧—೪—೦

ವಿದ್ಯಾರ್ಥಿಗಳು ಇತಿಹಾಸ ಪರೀಕ್ಷೆಯಲ್ಲಿ ಸಂಪೂರ್ಣ ಯಶಸ್ವಿಯಾಗುವಷ್ಟು ವಿಷಯವನ್ನು ಪ್ರಶ್ನೋತ್ತರ ರೂಪದಿಂದ ಬರೆದಿರುವರು. ೩೦೦-೪೦೦ ಪುಟದ ಇತಿಹಾಸ ಪಠ್ಯಪುಸ್ತಕ ಓದುವದ ಕ್ಕಿಂತಲೂ ಈ ಪುಸ್ತಕವನ್ನು ಓದಿದರೆ ವಿಶೇಷ ಸಹಾಯವಾಗುವದು.

ಈ ಪುಸ್ತಕದ ಕೊನೆಗೆ ರಾಜಕೀಯ ಮುಂದಾಳುಗಳ ಸಂಕ್ಷಿಪ್ತ ಚರಿತ್ರೆಯೂ ರಾಜ್ಯಘಟನೆಯ ಸಂಪೂರ್ಣ ವಿವರಣೆಯೂ ವಿವರಿಸಲ್ಪಟ್ಟಿದೆ. ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ತಕ್ಕ ಉತ್ತರಗಳನ್ನು ಕೊಡಲು ಸಮರ್ಥರಾಗುವಂತೆಯೂ ಪ್ರಶ್ನೆಗಳ ನಿಶ್ಚಿತ ಸ್ವರೂಪವನ್ನು ಚನ್ನಾಗಿ ತಿಳಿದುಕೊಳ್ಳುವಂತೆಯೂ ಬರೆಯಲ್ಪಟ್ಟಿದೆ. ಇಂದಿನ ವರೆಗೆ (ಐದು ವರ್ಷಗಳ) ಪರೀಕ್ಷೆಯ ಪ್ರಶ್ನೆಗಳನ್ನು ಬಿಡಿಸಿದ್ದಾರೆ. ಎಲ್ಲ ಪ್ರಶ್ನೋತ್ತರ ಇತಿಹಾಸ ಪುಸ್ತಕಗಳಿಗಿಂತಲೂ ಇದು ಹೊಸ ಪುಸ್ತಕವಾಗಿದೆ.

೨. ಹೊಸ ಪ್ರಶ್ನೋತ್ತರ ಜಮಾಖರ್ಚು

ಬರೆದವರು:— ಶ್ರೀ. ಭೀ. ಬಂ. ರಾಜಪುರೋಹಿತ ಮಾಸ್ತರ, ಬೆಲೆ ೧—೦—೦

'ಜಮಾಖರ್ಚು' ಈ ವಿಷಯವು ಬಹು ನೀರಸವಾದುದು. ಆದುದರಿಂದ ವಿದ್ಯಾರ್ಥಿಗಳು ಬಹಳ ತೊಂದರೆಗೊಳಗಾಗುವರು. ಈ ತೊಂದರೆ ನೀಗಿಸಲು ಈ ಪುಸ್ತಕವು ರಚಿಸಲ್ಪಟ್ಟಿದೆ. ವಿದ್ಯಾರ್ಥಿಗಳು ಇದೊಂದೆ ಪುಸ್ತಕ ಅಭ್ಯಸಿಸುವದರಿಂದ ಈ ವಿಷಯದ ಪರೀಕ್ಷೆಯಲ್ಲಿ ಇವರು ನಿಶ್ಚಿತವಾಗಿ ಯಶಸ್ವಿಯಾಗುವರು. ಇಂದಿನ ವರೆಗೆ ೫ ವರ್ಷಗಳ ಪರೀಕ್ಷೆಯ ಪ್ರಶ್ನೆಗಳ ಉತ್ತರಗಳನ್ನೂ ಕೆಲವು ಹೊಸ ಮಾದರಿಯ ಪ್ರಶ್ನೆಗಳನ್ನೂ ಈ ಪುಸ್ತಕದಲ್ಲಿ ನೋಡಬಹುದು.

ಪುಸ್ತಕ ಬೇಕಾದವರು ಕೂಡಲೇ ತರಿಸಿಕೊಳ್ಳಿರಿ.

ಪಿ. ಸಿ. ಶಾಬಾದಿಮಠ ಬುಕ್ಕಡಿಪೊ, ಗದಗ

ನಿಮ್ಮ ಸ್ಥಳಿಕ ಪುಸ್ತಕದ ಅಂಗಡಿಯಲ್ಲಿ ವಿಚಾರಿಸಿರಿ.

ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸುಸಂಧಿ!

೧೯೫೧ ಮತ್ತು ೧೯೫೨ನೆಯ ಪರ್ಷಗಳ
ಮುಲ್ಕೀ ಪರೀಕ್ಷೆಯ ಎಲ್ಲ ವಿಷಯಗಳ
ಪ್ರಶ್ನೆಗಳನ್ನು ಬಿಡಿಸಿದ

"ಪ್ರಶ್ನೋತ್ತರ ದರ್ಪಣ"ವು

ಲೆ: ಆಯ್. ಎಸ್. ಅರಳಗುಪ್ಪಿ
ಬಿ. ಜಿ. ಸಿದ್ದನಗೌಡರ
ಎನ್. ಎಸ್. ಸವದಿ

ಸಿದ್ಧವಾಗಿದೆ. ಅನುಭವಿಕ ಶಿಕ್ಷಕರಿಂದ ಬರೆದು,
ಶಿಕ್ಷಣ ತಜ್ಞರಿಂದ ಪರಿಶೋಧಿಸಿದೆ.
ತ್ವರೆ ಮಾಡಿರಿ.

ವಿಳಾಸ: ಎಲ್. ಜಿ. ಹೊಸಮನಿ
ದೀಕ್ಷಿತವಾಡೆ, ಲೈನಬಜಾರ, ಧಾರವಾಡ.

ಬೆಲೆ: ೧—೧೨—೦

೭ನೆಯ ಇಯತ್ತೆಯ ಹೊಸ ಅಭ್ಯಾಸಪತ್ರಿಕೆ
ಯಂತೆ ಹೊಸ ಮಾದರಿಯಿಂದ ರಚಿಸಿದ

ಭಾರತ ರಾಜ್ಯ ಘಟನೆ

(ಸಚಿತ್ರ)

ಸುಧಾರಿಸಿದ ಎರಡನೆಯ ಆವೃತ್ತಿ
ಫೆಬ್ರುವರಿ ೧೯೫೨
ಲೇಖಕರು:— ವಿ. ಕ. ನಂದಗಾಂವ

ಬೆಲೆ ೦—೧೨—೦

ಮಾನ್ಯರಾದ ಎಸ್.ಎನ್. ಆಂಗಡಿ, ಪ್ರಿ ರೆಡ್ಡಿ, ಪ್ರಿ. ಜೋಶಿ, ಪ್ರಿ. ಇಂಚಲ, ಪ್ರಿ. ವರ್ಟಿ, ಪ್ರಿ. ಚಿಕ್ಕರಮನೆ, ಶ್ರೀ. ಗೋಖಲೆ ಕೇಶವರಾಯರು, ಶ್ರೀ. ಶಾನಭಾಗ (ಡಿ.ಎಸ್.ಪಿ.) ಮುಂತಾದವರಿಂದಲೂ ಪಠ್ಯ ಪುಸ್ತಕ ಸಮಿತಿಯವರಿಂದಲೂ ಮಾನ್ಯ ಮಾಡಲ್ಪಟ್ಟಿದೆ.

ಪ್ರಕಾಶಕರು: ನಿ. ವಿ. ನಂದಗಾಂವ
೬೧೯ ಮಠಗಲ್ಲಿ, ಬೆಳಗಾಂವ

ಅವಶ್ಯವಾಗಿ ಸಂಗ್ರಹಿಸಲೇಬೇಕಾದ ಪುಸ್ತಕಗಳು!

ಲೇಖಕ: ಗಲಗಲಿ

ನಮ್ಮ ರಾಜ್ಯಘಟನೆ

(ಬೆಲೆ: ೧೨ ಆಣೆ)

ಇಂದಿನ ಪರೀಕ್ಷೆಯ ಹೊಸ ಧೋರಣೆಯಂತೆ ಪುಸ್ತಕ ರಚಿಸಲಾಗಿದೆ. ಹೊಸ ಅಭ್ಯಾಸಪತ್ರಿಕೆಯ ಪ್ರಕಾರ ಎಲ್ಲ ವಿಷಯಗಳನ್ನು ಮಕ್ಕಳಿಗೆ ತಿಳಿಯುವಂತೆ ತಿಳಿಯಾದ ಭಾಷೆಯಲ್ಲಿ ನಿವೇಚಿಸಲಾಗಿದೆ. ಪ್ರತಿ ಪ್ರಕರಣದ ಕೊನೆಗೆ ಉಪಯುಕ್ತ ಹಾಗೂ ಮಹತ್ವದ ಪ್ರಶ್ನೆಗಳನ್ನೂ ಕೊಟ್ಟಿದೆ. ಕಾರಣ ಈ ಪುಸ್ತಕವನ್ನು ಪ್ರಾ. ಶಾ. ಪ್ರ. ಪ. ಪರೀಕ್ಷೆಯ ವಿದ್ಯಾರ್ಥಿಗಳು ಕೂಡಲೇ ಸಂಗ್ರಹಿಸುವದು ಜಾಣತನವೆಂದು ಬೇರೆ ಹೇಳಬೇಕಿಲ್ಲ.

ಪ್ರಶ್ನೋತ್ತರ-ಕರ್ನಾಟಕ ಇತಿಹಾಸ

(ಬೆಲೆ: ೧೨ ಆಣೆ)

ಎಲ್ಲ ವಿಷಯಗಳನ್ನೊಳಗೊಂಡ ಇಂಥ ಪುಸ್ತಕ ಕರ್ನಾಟಕದಲ್ಲಿ ಇನ್ನೂವರೆಗೆ ಹೊರಬರಲಿಲ್ಲ. ವಿ. ಸ್ಕೂಲ ಸ್ಕಾಲರಶಿಪ್ ಪರೀಕ್ಷೆಯ ವಿದ್ಯಾರ್ಥಿಗಳು ಈ ಪುಸ್ತಕವನ್ನು ಅಭ್ಯಸಿಸಿ ತಮ್ಮ ಯಶದ ಮಾರ್ಗವನ್ನು ಸುಗಮ ಮಾಡಿಕೊಳ್ಳುವರೆಂದು ಆಶಿಸಿದರೆ ಅದೇನೋ ಅತಿಶಯೋಕ್ತಿಯಲ್ಲ. ಪ್ರಾಥಮಿಕ ಶಿಕ್ಷಣದ ತರಗತಿಯ ಮಕ್ಕಳಿಗೆ ಇದು ಮಾರ್ಗದರ್ಶನ ಮಾಡಬಲ್ಲದು. ಆದ್ದರಿಂದ ಈ ಪುಸ್ತಕ ನಿಮ್ಮಲ್ಲಿರದಿದ್ದರೆ ಕೂಡಲೇ ಸಂಗ್ರಹಿಸಿರಿ.

ಇಂದೇ ನಿಮ್ಮ ಪ್ರತಿಗಳನ್ನು ತರಿಸಿಕೊಂಡು ಯಶಸ್ಸನ್ನು ಗಳಿಸಿರಿ!!

ವ್ಯಾಪಾರಸ್ಥರಿಗೆ ಧಾರಳ ಕಮೀಶನ್

ಆಕಳವಾಡಿ ಬುಕ್ ಡಿಪೋ, (ವಿಜಯ ರೋಡ) ಧಾರವಾಡ

ಶಿಕ್ಷಕ ಬಂಧುಗಳೇ ತೊಂದರೆ ಪಡುವಿರೇಕೆ ನಿಮ್ಮ ಸಲುವಾಗಿಯೇ ತಯಾರ ಮಾಡಲಾಗಿದೆ.
ಇಂದೇ ತರಿಸಿರಿ! ಮರೆಯಬೇಡಿರಿ!

ಮೆ| ಗ. ಜ. ಗುಂಜೀಕರ, ಏ. ಓ. ಜಿಲ್ಲಾ ಸ್ಕೂಲ್‌ಬೋರ್ಡ, ವಿಜಾಪುರ
ಮೆ| ಎ. ಎಚ್. ದಳವಾಯಿ, ಡೆ. ಎ. ಇ. ಜಿಲ್ಲಾ, ವಿಜಾಪುರ

ಇವರುಗಳ ಮುನ್ನುಡಿ ಮತ್ತು ಪ್ರೋತ್ಸಾಹಗಳಿಂದ ಪ್ರಾಥಮಿಕ, ಮಾಧ್ಯಮಿಕ ಹಾಗೂ ಮೂಲ ಶಿಕ್ಷಣ ಬೋರ್ಡುಗಳಿಂದ ಸಂಯುಕ್ತವಾಗಿ ಪರಿಷ್ಕರಿಸಲ್ಪಟ್ಟು ಸ್ವೀಕೃತವಾದ

ಅಭ್ಯಾಸ ಪತ್ರಿಕೆಗಳು

೧ರಿಂದ ೪ನೆಯ ಇಯತ್ತೆ ಪೂರ್ಣ. ೫೦ ಪುಟಗಳದ್ದು ಬೆಲೆ ೮ ಆಣೆ.
೫ರಿಂದ ಪ್ರಾ. ಶಾ. ಪ್ರ. ಪತ್ರ ಪರೀಕ್ಷಾಪೂರ್ಣ ೧೦೨ ಪುಟಗಳುಳ್ಳದ್ದು
ಬೆಲೆ ೧೨ ಆಣೆ

ಬ. ದು. ಹಿರೇಮಠ ಮಾಸ್ತರ, ವಿಜಾಪುರ

ಚಿಂತೆ! ಚಿಂತೆ!! ಚಿಂತೆ!!!

ಶಿಕ್ಷಕರಿಗೂ ಚಿಂತೆ!
ಪಾಲಕರಿಗೂ ಚಿಂತೆ!!
ಮಕ್ಕಳಿಗೂ ಚಿಂತೆ!!!

?

ಶಿಕ್ಷಕರ ಶ್ರಮ ಹಾಳು! ಮಕ್ಕಳ ಓದು ಹಾಳು!! ಪಾಲಕರ ಹಣ ಹಾಳು!!!

ಇವುಗಳ ನಿವಾರಣೋಪಾಯ ಬೇಕೆ? ಹಾಗಿದ್ದರೆ,

ಪರೀಕ್ಷೆಯ

ಸ್ಕಾಲರ್‌ಶಿಪ್ ಮತ್ತು ಮುಲ್ಕೀ ವಿದ್ಯಾರ್ಥಿಗಳಿಗಾಗಿ
ಹೊಸ ಅಭ್ಯಾಸ ಪತ್ರಿಕೆಯಂತೆ ಬರೆದ

ಪ್ರಶ್ನೋತ್ತರ ದೀಪಿಕೆ

ಇತಿಹಾಸ

ಬೆಲೆ ೦—೧೪—೦ (ಪೌರನೀತಿ ಸಹಿತ) (ಅಂಚೆ ವೆಚ್ಚ ಪ್ರತ್ಯೇಕ)

ಇದನ್ನು ತಪ್ಪದೇ ಓದಿರಿ. ಭಾರತದ ನಿರ್ಮಾತೃಗಳ ಜೀವನ ಚರಿತ್ರೆ, ರಾಜ್ಯಘಟನೆ, ಮಂತ್ರಿಮಂಡಲಗಳ ವಿವರಣೆಯನ್ನೊಳಗೊಂಡಿರುವ ಏಕೈಕ ಹೊತ್ತಿಗೆ.

ಇಂದೇ ಬರೆಯಿರಿ ಅಥವಾ ಭೆಟ್ಟಿಯಾಗಿರಿ.

ವೀಣಾ ಬುಕ್ ಡಿಪೋ, ಮಾರುತಿ ಬೀದಿ, ಬೆಳಗಾವಿ

ತ್ವರೆ ಮಾಡಿರಿ! ಇಂದೇ ಸಂಗ್ರಹಿಸಿರಿ!

ಹಬ್ಬ—ಹುಣ್ಣಿವೆಗಳು

ಬೆಲೆ: ೦—೧೨—೦

ಎಲ್ಲರಲ್ಲಿಯೂ ಇರಬೇಕಾದ ಪುಸ್ತಕ. ಹಬ್ಬಗಳು ರೂಢಿಯಲ್ಲಿ ಏಕೆ ಬಂದವು? ಆವುಗಳಿಗಿರತಕ್ಕ ಐತಿಹಾಸಿಕ ಹಿನ್ನೆಲೆ ಮತ್ತು ಮಹತ್ವ ಕುರಿತು ಸರಳ ಶೈಲಿಯಲ್ಲಿ ವಿವೇಚಿಸಲಾಗಿದ.

ತ್ವರೆ ಮಾಡಿರಿ! ಇದೀಗ ತಯಾರಾಗಿವೆ.

ಲಘುಪಾಠಮಾಲೆ–೧ ಇತಿಹಾಸ ಬೆಲೆ ೦-೬-೦

,, ೨ ಭೂಗೋಲ ಬೆಲೆ ೦-೬-೦

,, ೩ ಭೂಮಿತಿ-ಜವಮಾಖರ್ಚ ೦-೬-೦

,, ೪ ವ್ಯಾಕರಣ (ಅಚ್ಚಿನಲ್ಲಿ)

ಈ ಚಿಕ್ಕ ಪುಸ್ತಕಮಾಲೆಯು ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೂ ೫–೬ನೇ ಇಯತ್ತೆ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯುಕ್ತವಾಗಿವೆ. ಈ ಗಾಗಲೆ ಈ ಮಾಲೆಯು ಬಹುಜನರಿಂದ ಮನ್ನಣೆ ಪಡೆದಿದೆ.

ಅಕಳವಾಡಿ ಬುಕ್-ಡಿಪೋ, ಧಾರವಾಡ

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ–

ಜನಪ್ರಿಯವೆಂದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು ಶ್ರೀ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಿಗಳ ಹತ್ತರ ದೊರೆಯುವದು. **ಬೆಲೆ ೦–೧೨–೦**, ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಅಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

ವ್ಯಾವಹಾರಿಕ ಗಣಿತವು

(ಭಾಗ ೧, ೨, ೩)

೫, ೬, ೭ನೆಯ ಇಯತ್ತೆಯವರಿಗಾಗಿ

"ಅನೇಕ ವರ್ಷಗಳಿಂದ ನನಗೆ ಚೆನ್ನಾಗಿ ಪರಿಚಿತರಾದ ಶ್ರೀಮಾನ್ ಅನಂತರಾವ ಜೋಶಿಯವರ "**ವ್ಯಾವಹಾರಿಕ ಗಣಿತ**"ದ ಎಲ್ಲ ಭಾಗಗಳನ್ನು ನಾನು ಕೂಲಂಕುಷವಾಗಿ ಓದಿ ನೋಡಿದೆನು. ಈ ಪುಸ್ತಕವು ಅವರ ೩೫ ವರ್ಷಗಳ ಶಿಕ್ಷಣಕಾರ್ಯದ ಮತ್ತು ಅನುಭವದ ಪರಿಪಕ್ವವಾದ ಫಲವಾಗಿರುವದೆಂದು ಹೇಳಲಿಕ್ಕೆ ನನಗೆ ಸಂತೋಷವಾಗುತ್ತದೆ. ಇದು ಒಕ್ಕೆಯ ಯೋಜನೆಯ ತಳಹದಿಯ ಮೇಲೆ ರಚಿಸಿದ್ದಾಗಿದೆ; ಮತ್ತು ಹೊಸ ಅಭ್ಯಾಸಪತ್ರಿಕೆಯಂತೆ ಎಲ್ಲ ಅಂಶಗಳನ್ನು ಒಳಗೊಂಡಿದೆ. ಅಲ್ಲದೆ ಸರಿಯಾಗಿ ಅನುಕ್ರಮದಲ್ಲಿ ಕೊಡಲಾಗಿರುವ, ಉತ್ತಮವಾಗಿ ಆರಿಸಿದ ನಿತ್ಯಜೀವನದಿಂದ ಆಯ್ದುಕೊಂಡ ಉದಾಹರಣೆಗಳನ್ನು ಕೊಡಲಾಗಿದೆ. ಇದು ಇಂದು ಯೋಜನೆಯ ತಳಹದಿಯ ಮೇಲೆ ರಚಿಸಲಾದ ಪಠ್ಯಪುಸ್ತಕಗಳ ವಿರಲತೆಯಿಂದ ಉಂಟಾಗಿರುವ ಪ್ರತಿಕೂಲತೆಯನ್ನು ಹೋಗಲಾಡಿಸಿ ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿ ಕಂಡುಬರುವದರಲ್ಲಿ ಸಂಶಯವಿಲ್ಲ." ಎಂದು ಎಸ್. ಟಿ. ಕಾಲೇಜಿನ ಗಣಿತ ವಿಷಯದ ಪ್ರಾಧ್ಯಾಪಕರಾದ ಶ್ರೀಮಾನ್ **ಪಿ. ಎಸ್. ಮಳಗಾವಕರರು** M. A., B. T., M. Ed. ಇವರು ಹೇಳುತ್ತಾರೆ.

ಪ್ರತಿಗಳು ದೊರೆಯುವ ಸ್ಥಳ: ಎ. ವ್ಹಿ. ಬೋತೆ ಪುಲಬಾಗ ೨೨೪/೪೭ ಬೆಳಗಾವಿ

ಮಕ್ಕಳ ಸಚಿತ್ರ ಅಂಕಗಣಿತ

ಪ್ರಾಥಮಿಕ ೧, ೨, ೩ನೆಯ ತರಗತಿಗಳಿಗೆ

ಹೊಸ ಅಭ್ಯಾಸಪತ್ರಿಕೆಯಂತೆ ಬರೆಯಲ್ಪಟ್ಟಿವು! ಹೊಸ ಶಿಕ್ಷಣಪದ್ಧತಿಗೆ ಹೊಂದಿಕೊಳ್ಳುವಂತೆ ವಿಷಯ ವಿವೇಚನೆಯನ್ನೊಳಗೊಂಡುವು! ದಿನ ನಿತ್ಯದ ಜೀವನಕ್ಕೆ ಸಂಬಂಧಿಸಿದ ಉದಾಹರಣೆಗಳು! ಸುಲಭವಾದ ಶೈಲಿ, ಮಕ್ಕಳ ಮನಸೆಳೆಯುವ, ಕಣ್ಣೆಳೆಸುವ ಸುಂದರ ಚಿತ್ರಗಳು !! ಮಕ್ಕಳಿಗೆ ಅತ್ಯುಪಯುಕ್ತ!

೧ನೆಯ ತರಗತಿಯ ಅಂಕಗಣಿತ: ಬೆಲೆ ೦-೫-೦

೨ನೆಯ ತರಗತಿಯ ಅಂಕಗಣಿತ: ಬೆಲೆ ೦-೭-೦

೩ನೆಯ ತರಗತಿಯ ಅಂಕಗಣಿತ: ಬೆಲೆ ೦-೧೦-೦

ರಾಮಾಶ್ರಯ ಬುಕ್-ಡಿಪೊ, ಧಾರವಾಡ.

ಸ್ವತಂತ್ರ ಭಾರತೀಯ ರಾಜ್ಯತಂತ್ರ

(ಸಚಿತ್ರ)

ಲೇಖಕರು: ಶ್ರೀ. ನಾರಾಯಣ ಕರ್ಮಿ

ಎಸ್. ಎಸ್. ಸಿ (ಮ್ಯಾಟ್ರಿಕ್), ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ (ಮುಲ್ಕಿ) ಹಾಗು ಪ್ರಾಥಮಿಕ ಶಿಕ್ಷಕರ ಪ್ರಮಾಣಪತ್ರ ಪರೀಕ್ಷೆ (ಪಿ. ಟಿ. ಸಿ.) ಗಳ ಹೊಸ ಅಭ್ಯಾಸ ಪತ್ರಿಕೆಗಳಿಗೆ ಅನುಸಾರವಾಗಿ ಬರೆಯಲ್ಪಟ್ಟಿದು. ಇದೊಂದೇ ಪುಸ್ತಕದಲ್ಲಿ ಮೂರು ಪರೀಕ್ಷೆಗಳಿಗೆ ಅವಶ್ಯವಾದ ಭಾರತೀಯ ರಾಜ್ಯತಂತ್ರದ ತ್ರಿವೇಣೀ ಸಂಗಮ! ವಿಷಯಕ್ಕನುಗುಣವಾದ ಸುಂದರ ಚಿತ್ರಗಳು! ನಕಾಶಗಳು! ಚಿತ್ರಪಟಗಳು! ಗಹನವಾದ ವಿಷಯವನ್ನು ಸುಲಭವಾಗಿ ತಿಳಿಯುವ ಶೈಲಿಯಲ್ಲಿ ಪ್ರತಿಪಾದಿಸಲಾಗಿದೆ.

ಬೆಲೆ: ೧—೦—೦ ಮಾತ್ರ

ಪ್ರಕಾಶಕರು:

ರಾಮಾಶ್ರಯ ಬುಕ್-ಡಿಪೊ, ಧಾರವಾಡ.

Regd. No, B. 5375

ಗೌರೀಶ ಗ್ರಂಥ ಪ್ರಕಟನಾಲಯದಿಂದ ಪ್ರಕಟವಾದ
ಹೊಸ ಹೊತ್ತಿಗೆಗಳು

೧. **ಕರ್ನಾಟಕದ ಐತಿಹಾಸಿಕ ಕಥೆಗಳು.** ೪ನೇ ಇಯತ್ತಿಗೆ — ಬೆಲೆ ೦-೧೪ ೦

ಲೇಖಕರು :- ಶ್ರೀಯುತ ಬಸಪ್ಪ ಮಲ್ಲಪ್ಪ ಶಿಂತ್ರಿ ಬಿ.ಎ.ಬಿ.ಟಿ.
ರಿಟಾಯರ್ಡ ಅ. ಎ. ಇ. ದಕ್ಷಿಣ ಭಾಗ, ಧಾರವಾಡ.

೨. **ಭೂಮಂಡಲ ಬೋಧಿನಿ ಭಾಗ ೧.** ೪ನೆಯ ಇಯತ್ತಿಗೆ — ಬೆಲೆ ೦-೧೨-೦

ಲೇಖಕರು :- ಕೈ. ಶಿ. ಸೋ. ಕುಲಕರ್ಣಿ.

೩. ಭೂಮಂಡಲ ಬೋಧಿನಿ ಭಾಗ ೨. ೫ನೆಯ ಇಯತ್ತಿಗೆ — ಬೆಲೆ ೧ ೪ ೦

ಲೇಖಕರು :- ಶ್ರೀಯುತ ಎ. ಜಿ. ಕುಲಕರ್ಣಿ ಬಿ.ಎ.ಬಿ.ಟಿ.
ಮತ್ತು ಶ್ರೀಯುತ ಕಾರಡಗಿ ಬಿ.ಎ.

೪. ಭೂಮಂಡಲ ಬೋಧಿನಿ ಭಾಗ ೩. ೬ನೆಯ ಇಯತ್ತಿಗೆ — ಬೆಲೆ ೧-೧೦-೦

ಲೇಖಕರು :- ಪದರೀಯವರು

೫. ಭೂಮಂಡಲ ಬೋಧಿನಿ ಭಾಗ ೪. ೭ನೆಯ ಇಯತ್ತಿಗೆ — ಬೆಲೆ ೨-೨-೦

ಲೇಖಕರು :- ಪದರೀಯವರು

೬. **ಸ್ವತಂತ್ರ ಭಾರತದ ಗಣರಾಜ್ಯ ಘಟನೆ.** ೭ನೆಯ ಇಯತ್ತಿಗೆ — ಬೆಲೆ ೦-೧೨-೦

ಲೇಖಕರು :- ಆದ್ಯ ರಂಗಾಚಾರ್ಯ ಎಂ. ಎ. (ಅಂಡನ)

೭. **ಭಾರತ ರಾಜ್ಯಘಟನೆಯ ತಿಳಿನೋಟ.** ೬ನೆಯ, ೭ನೆಯ ಇಯತ್ತಿಗಳಿಗೆ — ಬೆಲೆ ೦-೪-೦

ಲೇಖಕರು :- ಶ್ರೀ. ಗ. ಸ. ಹಾಲಪ್ಪ ಎಂ. ಎ. ಮಹಾರಾಜಾ
ಕಾಲೇಜ, ಮೈಸೂರ.

ಮೇಲಿನ ಎಲ್ಲ ಪುಸ್ತಕಗಳು ಅವುಗಳ ಮುಂದೆ ಕಾಣಿಸಿದ ಇಯತ್ತಿಗಳಿಗೆ ೧೯೫೪ರ ವರೆಗೆ **ಪಠ್ಯ ಪುಸ್ತಕಗಳೆಂದು ಸರಕಾರದವರಿಂದ ಮಂಜೂರಾಗಿವೆ.**

೮. **ಮನಸ್ಸು ಮತ್ತು ಶಿಕ್ಷಣ ಸಮಸ್ಯೆ.** ಟ್ರೇನಿಂಗ ಕಾಲೇಜದ ೨ನೆಯ ವರ್ಷದವರಿಗೆ ಪೂರಕ ವಾಚನವೆಂದು ಮಂಜೂರಾಗಿದೆ. — ಬೆಲೆ ೦-೧೨-೦

ಲೇಖಕರು:- ಶ್ರೀ. ಕಾರಡಗಿ ವೀರಭದ್ರಪ್ಪನವರು ಎಂ. ಎ. ಎಲ್ ಎಲ್. ಬಿ.

೧. **ಮಾತಿನ ಮುನ್ನಡೆ.** ೪ನೆಯ ಇಯತ್ತಿಗೆ
೨. **ಮಾತಿನ ಮುನ್ನಡೆ.** ೫ನೆಯ ಇಯತ್ತಿಗೆ
೩. **ಮಾತಿನ ಮುನ್ನಡೆ.** ೬ನೆಯ ಇಯತ್ತಿಗೆ
೪. **ಮಾತಿನ ಮುನ್ನಡೆ.** ೭ನೆಯ ಇಯತ್ತಿಗೆ

೫. ಪತ್ರಗಳ ಪರಿಚಯ. ೬-೭ನೆಯ ಇಯತ್ತಿಗಳಿಗೆ.

ಇವೆಲ್ಲವೂ ಪೂರಕ ವಾಚನಗಳೆಂದು ಮಂಜೂರಾಗಿವೆ.

ಪ್ರಕಾಶಕರು :
ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ, ಧಾರವಾಡ.

Printed by M. A. Kamat, B. Sc. at Jai Hind Art Press, Javlipeth, Dharwar. Edited and Published by M. G. Handral B. M. Shintri, S. R. Tahi, & Y. D. Nadkarni Jointly at the Kannada Pathamik Shikshan Office, Govt. Training College for Men, Dharwar.

ಪ್ರಭುದ್ಧ ಕರ್ನಾಟಕ

ರಾಷ್ಟ್ರಪತಿ ರಾಜೇಂದ್ರಪ್ರಸಾದರು
ಭಾರತದ ಸಮಾಜವಿಕಾಸ ಯೋಜನೆಗಳ ಉಸ್ತುವಾರಿಯನ್ನು
ದಿಲ್ಲಿ ಕೇಂದ್ರದ ಜಾನುಲಿಯಲ್ಲಿ ನಾಡಿದರು.

ಪರಿವಿಡಿ

ವಿಷಯ	ಪುಟ
ಸಂಪಾದಕೀಯ . . .	೧
ಮಾನಸರಾಸ್ತ್ರದ ಅಭ್ಯಾಸದಿಂದ ಶಿಕ್ಷಕರಿಗಾಗುವ ಪ್ರಯೋಜನ .	೫
ಒಂದು ಚಿತ್ರ . . .	೬
ಡಾ. ಸರ್ವಪಲ್ಲಿ ರಾಧಾಕೃಷ್ಣನ್ .	೧೦
ಸರ್. ಎಂ. ವಿಶ್ವೇಶ್ವರಯ್ಯನವರು .	೧೩
ಮುಂಬಯಿ ಸರಕಾರದ ಕನ್ನಡ ಸ್ಕೂಲ್ ಬುಕ್ ಕಮೀಟಿಯಿಂದ ಸಂಜೂರಾದ ಪುಸ್ತಕಗಳು . . .	೧೬
ಪ್ರಾಥಮಿಕ ಶಿಕ್ಷಣದ ಪ್ರಗತಿಯ ನೋಟ	೨೧

ನವಂಬರ
೧೯೫೨

ಬಿಡಿಪ್ರತಿ	ವಾ. ಚಂದಾ
೦—೬—೦	೪—೦—೦

ಸಂಪಾದಕ ಮಂಡಲ

ಸಂಚಾಲಕರು:
ಶ್ರೀ ಡಿ. ಪ್ಹಿ. ಚಿಕ್ಕರಮನೆ,

ಪ್ರಧಾನ ಸಂಪಾದಕರು:
ಶ್ರೀ. ಎಂ. ಜಿ. ಹಂದ್ರಾಳ

ಸಹಸಂಪಾದಕರು:
ಶ್ರೀ. ಎಸ್. ಆರ್. ತಟ್ಟಿ.

ಹೊಸ ಪುಸ್ತಕವು! ತಯಾರಾಗಿ ಬಂದಿದೆ! ತ್ವರೆ ಮಾಡಿರಿ!

—ಕನ್ನಡ-ಕನ್ನಡ ಶಬ್ದಕೋಶ—

ಬರೆಹಗಾರರು:—H. V. ರಮಾಕಾಂತರಾವ್. B. A. (Hons)

ಬೆಲೆ:—ಆರು ರೂಪಾಯಿಗಳು ಮಾತ್ರ.

ಈ ಪುಸ್ತಕದಲ್ಲಿ ೩೫ ಸಾವಿರ ಶಬ್ದಗಳ ಸಂಗ್ರಹವು, ಒಂದುವರೆಲಕ್ಷ ಅರ್ಥ ವಿವರಣೆಯೊಳಗೂಡಿ ತಯಾರಾಗಿದೆ. ಮಂಗಳೂರಿನ ಅಂದವಾದ ಮುದ್ರಣದ ೬೬೫ ಪುಟಗಳ ಈ ಪುಸ್ತಕವು ಮೇಲ್ತರದ ಕೋಶ ಗ್ರಂಥವಾಗಿದೆ. ಇದರಷ್ಟು ದೊಡ್ಡ ಕೋಶಗ್ರಂಥವು ಇನ್ನೊಂದಿಲ್ಲವೆಂದರೂ ಅತಿಶಯೋಕ್ತಿಯಾಗಲಾರದು. V. P. ಯಿಂದ ಬೇಡುವವರು ೫ ಹಣವನ್ನು ಮುಂಗಡೆ ಕಳಿಸಬೇಕು.

ಇದಲ್ಲದೆ ನಮ್ಮಲ್ಲಿ ಶಾಲೋಪಯೋಗದ ಎಲ್ಲ ಬಗೆಯ ಪುಸ್ತಕಗಳು,
ಕಥೆಯ ಪುಸ್ತಕಗಳು, ಶಾಲೆಯ ಹಾಜರಿ ಪುಸ್ತಕಗಳು ಸಿಗುತ್ತವೆ.

ಪ್ರಕಾಶಕರು:— ಕೇ. ಎಸ್. ಕುಲಕರ್ಣಿ ಬುಕ್‌ಡಿಪೋ
ಸ್ಟೇಶನ್‌ರೋಡ್, ಹುಬ್ಬಳ್ಳಿ.

ಪುಟ ೨೬೦) ಮೂಲ ಶಿಕ್ಷಣ (ಬೆಲೆ: ೩-೦-೦

ಲೇಖಕರು:— ಶ್ರೀ. ಮ. ಗು. ಹಂದ್ರಾಳ, ಬಿ. ಎ., (ಆನರ್ಸ) ಬಿ. ಟಿ.
(ಪಿನ್ಸಿಪಾಲ, ಸರಕಾರಿ ಕ. ಗಂ. ಟ್ರೇ. ಕಾ. ಧಾರವಾಡ.)

ಮೂಲ ಶಿಕ್ಷಣದ ಬಗೆಗೆ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಪೊತ್ತಿಕೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ. ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ.

ಆಕಳವಾಡಿ ಬುಕ್ ಡಿಪೋ, ಧಾರವಾಡ.

ಸಂಪಾದಕೀಯ

ಅಖಿಲ ಭಾರತ ಮೂಲ ಶಿಕ್ಷಣ ಸಮ್ಮೇಲನ

ದಿನಾಂಕ ೨೭-೧೦-೧೯೫೨ರಿಂದ ೧-೧೧-೧೯೫೨ರ ವರೆಗೆ ಅಖಿಲ ಭಾರತ ಮೂಲಶಿಕ್ಷಣ ಸಮ್ಮೇಲನವು ಸೇವಾಗ್ರಾಮದಲ್ಲಿ (ವರ್ಧಾ) ಒಳ್ಳೆಯ ಯಶಸ್ವಿಯಾಗಿ ಜರುಗಿದ್ದುದು ನಾಡಿನ ಮುನ್ನಡೆಯ ಮಾರ್ಗದ ಶುಭ ಚಿಹ್ನವಾಗಿದೆ. ಅಲ್ಲದೆ ಹಿಂದ ದೇಶದ ಪ್ರತಿಯೊಂದು ರಾಜ್ಯದಲ್ಲಿಯೂ ಮೂಲ ಶಿಕ್ಷಣ ಯೋಜನೆಯು ಕಾರ್ಯ ರಂಗಕ್ಕಿಳಿದುದು ಈ ಯೋಜನೆಯ ಕ್ಷೇತ್ರ ವಿಸ್ತಾರ, ಧ್ಯೇಯ-ಧೋರಣೆಗಳ ಪ್ರಸಾರ, ಕೇಂದ್ರ ಹಾಗೂ ರಾಜ್ಯ ಸರಕಾರಗಳ ನಿರ್ಧಾರ, ಜನತೆಯ ಸಹಕಾರ ಇವುಗಳ ಸಾಕ್ಷಿಯಾಗಿದೆ. ಸೇವಾಗ್ರಾಮದಲ್ಲಿ ಪೂರ್ವ ಬುನಿಯಾದಿ (Pre-Basic), ಬುನಿಯಾದಿ (Basic) ಉತ್ತರ ಬುನಿಯಾದಿ (Post-Basic) ಇವುಗಳ ಪರಿಮಿತಿಯನ್ನು ದಾಟಿ, ಉಚ್ಚ ಶಿಕ್ಷಣದ ಸ್ಥೂಲ ಪಾಠ ಕ್ರಮವು ನಿರ್ಮಾಣವಾಗಿ, ಅದರ ಪ್ರಯೋಗವನ್ನು ಮಾಡಲು ನಿಶ್ಚಯಿಸಿ ನಮ್ಮ ನಾಡಿನ ನೆಚ್ಚಿನ ನಾಯಕರಾದ ಪಂಡಿತ ಜವಾಹರಲಾಲ ನೆಹರು ಅವರ ಅಮೃತ ಹಸ್ತದಿಂದ 'ಗ್ರಾಮೀಣ ವಿಶ್ವವಿದ್ಯಾಲಯ' (Rural University) ವನ್ನು ದಿನಾಂಕ ೧-೧೧-೧೯೫೨ ರಂದು ಸ್ಥಾಪಿಸಲಾಯಿತು. ಮೂಲ ಶಿಕ್ಷಣದ ವ್ಯಾಪ್ತಿಯು ೩ ವರುಷದ ಮಗುವಿನಿಂದ ಆರಂಭವಾಗಿ, ಉಚ್ಚ ಶಿಕ್ಷಣದ ಮಟ್ಟವನ್ನು ಮುಟ್ಟಲು ಬಯಸುವ ವ್ಯಕ್ತಿಗೆ ಅನುಗುಣವಾಗುವಂತೆ ರೂಪುಗೊಂಡುದು ನಮ್ಮ ನಾಡಿನ ಉಜ್ವಲ ಭವಿಷ್ಯವನ್ನು ತೋರಿಸುವದು.

ಈ ಸಮ್ಮೇಲನದಲ್ಲಿ ಉದ್ದ ಭಾಷಣ ಹಾಗೂ ನಾನಾ ಮುಖ ತರಾವುಗಳಿಗೆ ಮಾತ್ರ ಪ್ರಾಶಸ್ತ್ಯವಿರಲಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿರುವ ಕಾರ್ಯಕರ್ತರ ಅನುಭವವನ್ನು ಸಂಗ್ರಹಿಸಲು ವಿವಿಧ ವಿಷಯಗಳನ್ನೊಳಗೊಂಡ ಅಭ್ಯಾಸ ಮಂಡಲಗಳನ್ನು ಏರ್ಪಡಿಸಲಾಗಿತ್ತು. ಹಿಂದಿನ ಅನುಭವದ ಆಧಾರದ ಮೇಲೆ ಮುಂದಿನ ಕೆಲಸವನ್ನು ನಿಶ್ಚಿತಗೊಳಿಸಲಾಯಿತು. ಬೇರೆ ಬೇರೆ ರಾಜ್ಯಗಳಲ್ಲಿಯ ಕಾರ್ಯಕರ್ತರಿಗೆ ಪರಸ್ಪರ ವಿಚಾರವಿನಿಮಯ ಮಾಡುವದಕ್ಕಾಗಿ ತಕ್ಕ ಸಂಧಿಗಳನ್ನು ಕಲ್ಪಿಸಿಕೊಡಲಾಗಿತ್ತು. ಅಭ್ಯಾಸ ಮಂಡಲಗಳ ವರದಿಗಳು ಸಾಮೂಹಿಕ ಸಭೆಯಲ್ಲಿ ಚರ್ಚಿಸಲ್ಪಟ್ಟವು. ನಾಡಿನ ತುಂಬ ಮೂಲ ಶಿಕ್ಷಣ ಯೋಜನೆಯು ಅಧಿಕ ಪ್ರಮಾಣದಲ್ಲಿ ಬೇಗ ಬಳಕೆಗೆ ಬರುವಂತಾಗಲೆಂಬ ಆಶಯವು ಪ್ರತಿನಿಧಿಗಳ ಪ್ರಸನ್ನ ಮುಖಗಳಲ್ಲಿ ಪ್ರತಿಬಿಂಬಿತವಾಗಿತ್ತು. ಮೊದಲಿನ ಮೂರು ದಿನಗಳ ಕಾರ್ಯಕಲಾಪಗಳು ಶ್ರೀ ಆರ್ಯನಾಯಕಂ ಅವರ ಅಧ್ಯಕ್ಷತೆಯಲ್ಲಿ ನಡೆದವು. ಕೊನೆಯ ಮೂರು ದಿನಗಳ ಕಾರ್ಯಕಲಾಪಗಳುಡಾ। ಪಟ್ಟಾಭಿ ಸೀತಾರಾಮಯ್ಯನವರ ನೇತೃತ್ವದಲ್ಲಿ ಪ್ರಾರಂಭವಾಗಿ, ಡಾ। ಝಾಕೀರ ಹುಸೇನ ಅವರ ಅಧ್ಯಕ್ಷತೆಯಲ್ಲಿ ಪೂರ್ತಿಗೊಂಡವು. ವಿವಿಧ ರಾಜ್ಯಗಳ ಶಿಕ್ಷಣ ಮಂತ್ರಿಗಳೂ, ಅಧಿಕಾರಿಗಳೂ ಉಪಸ್ಥಿತರಿದ್ದು ಚರ್ಚೆಯಲ್ಲಿ ಭಾಗವಹಿಸಿದರು. ಈ ಸಮ್ಮೇಲನದಲ್ಲಿ ಚರ್ಚೆಗೆ ಬಂದ ವಿಷಯಗಳ ಯೋಜನೆ, ಕಾರ್ಯ ನಿರ್ವಹಣ, ಪ್ರತಿನಿಧಿಗಳ ಉತ್ಸಾಹ ಇವು ಮುಪ್ಪುರಿಗೊಂಡು, ಹೊಸ ಶಿಕ್ಷಣ, ಹೊಸ ಜೀವನ, ಹೊಸ ಸಮಾಜ ಇವುಗಳಲ್ಲಿಯ ಸಮರಸತೆಯು ಒಡಮೂಡಿತ್ತು.

ಸಮಾಜ ಶಿಕ್ಷಣ

ಶಿಕ್ಷಣವು ನಾಡಿನ ಸರ್ವತೋಮುಖ ಅಭಿವೃದ್ಧಿಯ ಅಡಿಗಲ್ಲು. ಗಳಿಸಿದ ಸ್ವಾತಂತ್ರ್ಯವನ್ನು ಭದ್ರಪಡಿಸಬೇಕಾದರೆ ದೇಶದಲ್ಲಿಯ ಎಲ್ಲ ಪ್ರಜೆಗಳು ಶಿಕ್ಷಣವನ್ನು ಪಡೆಯಲಿಕ್ಕೇಬೇಕು ಎಂಬ ಸಂಗತಿಯನ್ನು ಮನದಂದು ಮಕ್ಕಳ ಸಕ್ತಿ ಶಿಕ್ಷಣದ ಜೊತೆಗೆ ನಿರಕ್ಷರಿ ಪ್ರಬುದ್ಧರ ಶಿಕ್ಷಣವನ್ನೂ ಸರಕಾರದವರು ಕೈಕೊಂಡರು. ಪ್ರೌಢರಿಗೆ ಸಾಕ್ಷರತೆಯ ಅಭ್ಯಾಸವಲ್ಲದೆ ಅವರ ರೀತಿ, ನೀತಿಗಳ ವಿಕಸನ, ಸಂಸ್ಕೃತಿಯ ನಿಳ್ಗೆ, ಆರೋಗ್ಯ ಮತ್ತು ನಿತ್ಯದಂಧೆಗಳ ಹೆಚ್ಚಳ ಇವೇ ಮೊದಲಾದವುಗಳ ಬಗೆಗೆ ಜ್ಞಾನ ಮಾಡಿಕೊಡುವ ಧ್ಯೇಯವನ್ನೂ ಇಟ್ಟುಕೊಂಡು ಇಂತಹ ಶಿಕ್ಷಣಕ್ಕೆ ಸಾಮಾಜಿಕ ಶಿಕ್ಷಣವೆಂದು ಕರೆಯಲಾಯಿತು. ಸಾಮಾಜಿಕ ಶಿಕ್ಷಣ ಕಾರ್ಯಕರ್ತರಿಗೆ

ಖಾತೆಯ ನಿಯಮಗಳಂತೆ ಸಾಕ್ಷರತಾ ಸಹಾಯ ಧನವನ್ನು ಕೊಡುವರು. ಸಾಮಾಜಿಕ ಶಿಕ್ಷಣದ ಮೇಲ್ವಿಚಾರಣೆ ಹಾಗೂ ಪ್ರಸಾರಕ ಕಾರ್ಯವನ್ನು ಉಪಶಿಕ್ಷಣಾಧಿಕಾರಿಗಳು ಮಾಡುವರು.

ಕಳೆದ ಸಲದಂತೆ ಈ ವರ್ಷವಾದರೂ ಹಿಂದುಸ್ತಾನ ಸರಕಾರವು ಸಾಮಾಜಿಕ ಶಿಕ್ಷಣವನ್ನು ಜನಪ್ರಿಯ ಮಾಡುವ ಕುರಿತು ದಿನಾಂಕ ೧-೧೧-೧೯೫೨ ಶನಿವಾರ ದಿನವನ್ನು ಸಮಾಜ ಶಿಕ್ಷಣದ ದಿನವೆಂದು ದೇಶದಲ್ಲೆಲ್ಲ ವಿಜೃಂಭಣೆಯಿಂದ ಆಚರಿಸಬೇಕೆಂದು ಗೊತ್ತುಪಡಿಸಿದರು. ಪ್ರಭಾತಫೇರಿ, ಸಮಾಜ ಶಿಕ್ಷಣದ ಬಗ್ಗೆ ನಿಧಿ ಕೂಡಿಸುವದು, ಆರೋಗ್ಯ ಶಿಕ್ಷಣ, ಸ್ತ್ರೀಪ್ರೌಢ ಶಿಕ್ಷಣ, ಸಮಾಜ ವಿಕಾಸಯೋಜನೆ ಇವುಗಳ ಬಗ್ಗೆ ತಿಳಿಸಿ ಹೇಳುವದು ಇವೇ ಮೊದಲಾದ ಕಾರ್ಯಕ್ರಮಗಳಿಂದ ಕನ್ನಡ ನಾಡಿನಲ್ಲಿ ಹಾಗೂ ಅಖಿಲ ಭಾರತದ ಮೂಲೆ-ಮೂಲೆಗಳಲ್ಲಿ ಸಮಾಜ ಶಿಕ್ಷಣದ ಬಗ್ಗೆ ಜನತೆಯಲ್ಲಿ ವಿಶೇಷ ಆಸ್ಥೆ, ಅಭಿರುಚಿಗಳು ಹುಟ್ಟಿರಲಿಕ್ಕೆ ಸಾಕು.

ಸಂಯುಕ್ತರಾಷ್ಟ್ರ ಸಂಘ

ವಿಶ್ವದಲ್ಲಿ ಶಾಶ್ವತ ಶಾಂತಿ ಸ್ಥಾಪನೆಯನ್ನುಂಟುಮಾಡಿ ಹಿಂದುಳಿದ ರಾಷ್ಟ್ರಗಳ ಸರ್ವಾಂಗೀಣ ಉನ್ನತಿಯನ್ನುಂಟುಮಾಡುವ ಉದ್ದೇಶದಿಂದ ಜಗತ್ತಿನ ಸುಮಾರು ೬೦ ರಾಷ್ಟ್ರಗಳು ಸೇರಿ ಸಂಯುಕ್ತರಾಷ್ಟ್ರ ಸಂಘವೆಂಬ ಒಂದು ಸಂಸ್ಥೆಯನ್ನು ಮಾಡಿಕೊಂಡಿವೆ. ೧೯೪೫ ಅಕ್ಟೋಬರ ೨೪ನೆಯ ದಿನ ಈ ಸಂಘವು ಜನ್ಮತಾಳಿ ಇದೇ ಅಕ್ಟೋಬರ ೨೪ನೆಯ ತಾರೀಖಿಗೆ ತನ್ನ ಏಳು ವರ್ಷಗಳನ್ನು ಕಳೆದು ಎಂಟನೆಯ ವರುಷದಲ್ಲಿ ಹೆಜ್ಜೆಯಿಡುತ್ತಿದೆ. ರಾಷ್ಟ್ರದ ಮೂಲೆ-ಮೂಲೆಗಳಲ್ಲಿ ಈ ಸಂಘದ ಜಯಂತಿಯು ಆಚರಿಸಲ್ಪಟ್ಟು ಸಂಘದ ಕಾರ್ಯವು ಯಶಸ್ವಿಯಾಗಿ ಮುಂದುವರಿಯಲೆಂಬ ಶುಭ ಕೋರಿಕೆಗಳು ಘೋಷಿಸಲ್ಪಟ್ಟಿರಬಹುದೆಂದು ಆಶಿಸುವೆವು.

ಈ ಸಂಘದಲ್ಲಿ ಭದ್ರತಾ ಮಂಡಳ, ವಿಶ್ವಸ್ಥ ಮಂಡಳ ಶಿಕ್ಷಣ-ವಿಜ್ಞಾನ-ಸಂಸ್ಕೃತಿ ಮಂಡಳ ಮೊದಲಾದ ಕೆಲವು ಉಪಸಮಿತಿಗಳಿವೆ. ನಿರಕ್ಷರತೆಯನ್ನು ನಿರ್ಮೂಲಗೊಳಿಸಿ ಈಗಿನ ಹಾಗೂ ಭಾವೀ ನಾಗರಿಕರಾಗಲಿರುವವರಿಗೆ ನಿಃಶುಲ್ಕ ಮತ್ತು ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನಿತ್ತು ಜಗತ್ತಿನ ಪ್ರಜಾಪ್ರಭುತ್ವದ ಅಸ್ತಿತ್ವ ಹಾಗೂ ಹಿತರಕ್ಷಣೆಯನ್ನು ಕಾಯ್ದುಕೊಳ್ಳುವ ಸಮಸ್ಯೆಯನ್ನು ಬಿಡಿಸುವದವಶ್ಯವಿದೆ. ಅಂತರರಾಷ್ಟ್ರೀಯ ತಳಹದಿಯ ಮೇಲೆ ಈ ಪ್ರಶ್ನೆಯನ್ನು ಬಿಡಿಸಬೇಕು; ಎಲ್ಲ ದೇಶಗಳ ಶಿಕ್ಷಣ ತಜ್ಞರು ಇದರಲ್ಲಿ ಭಾಗವಹಿಸಬೇಕು. ಯುಕ್ತರಾಷ್ಟ್ರ ಸಂಘದ ಶೈಕ್ಷಣಿಕ ಉಪಸಂಸ್ಥೆಯಾದ ಶಿಕ್ಷಾ-ವಿಜ್ಞಾನ-ಸಂಸ್ಕೃತಿ ಸಂಘವು ಈ ಸಮಸ್ಯೆಯನ್ನು ಕೈಕೊಂಡಿದೆ; ಇದೇ ಡಿಸೆಂಬರ ೧೫ರಿಂದ ೨೨ನೆಯ ದಿನಾಂಕದ ವರೆಗೆ ೧೮ ರಾಷ್ಟ್ರಗಳ ಪ್ರಾದೇಶಿಕ ಸಮ್ಮೇಲನವನ್ನು ಮುಂಬಯಿಯಲ್ಲಿ ಕರೆದಿದೆ. ಪ್ರಪಂಚದಲ್ಲಿಯ ಎಲ್ಲ ದೇಶಗಳ ಸುವಿಖ್ಯಾತ ಶಿಕ್ಷಣತಜ್ಞರು ಈ ಸಮ್ಮೇಲನದಲ್ಲಿ ಭಾಗವಹಿಸಲಿರುವರು; ಪಠ್ಯ ಪುಸ್ತಕಗಳ ಹಾಗೂ ಇತರ ಶೈಕ್ಷಣಿಕ ವಸ್ತುಗಳ ಪ್ರದರ್ಶನವು ಏರ್ಪಡಿಸಲ್ಪಡಲಿದೆ. ವಿದೇಶಗಳಲ್ಲಿಯ ಕಡ್ಡಾಯದ ಶಿಕ್ಷಣದ ಬಗ್ಗೆ ಹಾಗೂ ಈ ದಿಶೆಯಲ್ಲಿ ನಾವು ಅನುಸರಿಸಬೇಕಾದ ಮಾರ್ಗ ಇವೆಲ್ಲವನ್ನು ಈ ಸಮ್ಮೇಲನದಿಂದ ಆರಿತುಕೊಳ್ಳಬಹುದಾಗಿದೆ. ಪ್ರತಿ ವರ್ಷ ಇಂತಹ ಸಮ್ಮೇಲನಗಳನ್ನು ಜಗತ್ತಿನ ಬೇರೆ ಬೇರೆ ಸ್ಥಳಗಳಲ್ಲಿ ಜರುಗಿಸಬೇಕೆಂದು ಶಿಕ್ಷಾ-ವಿಜ್ಞಾನ-ಸಂಸ್ಕೃತಿ ಸಂಘವು ನಿರ್ಧರಿಸಿದೆ. ೧೯೫೩ರಲ್ಲಿ ಅರಬದೇಶಗಳಲ್ಲಿ, ೧೯೫೪ರಲ್ಲಿ ಲ್ಯಾಟಿನ ಅಮೇರಿಕೆಯಲ್ಲಿ, ೧೯೫೫ರಲ್ಲಿ ದಕ್ಷಿಣ ಆಫ್ರಿಕೆಯಲ್ಲಿ, ೧೯೫೬ರಲ್ಲಿ ಅತಿಪೂರ್ವದಲ್ಲಿ ಈ ಸಮ್ಮೇಲನಗಳು ಜರುಗಲಿವೆ.

ಶ್ರೀ. ಯಮುನಾಬಾಯಿ ನಾಡಕರ್ಣಿಯವರು

ಧಾರವಾಡದ ಹೆಣ್ಣು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜದ ಲೇಡಿ ಸುಪರಿಂಟೆಂಡೆಂಟರಾಗಿದ್ದ ಶ್ರೀಮತಿ ಯಮುನಾಬಾಯಿ ನಾಡಕರ್ಣಿಯವರು ಇದೇ ತಿಂಗಳ ೪ನೆಯ ದಿನಾಂಕ ಸೇವಾನಿವೃತ್ತರಾದರು. ಇವರಿಗೆ ಇವರ ವಿದ್ಯಾರ್ಥಿನಿಯರೂ, ಸಹೋದ್ಯೋಗಿಗಳೂ, ಮಿತ್ರಮಂಡಳಿಯವರು ಬೀಳ್ಕೊಡುವ ಸಮಾರಂಭಗಳನ್ನು ಏರ್ಪಡಿಸಿದ್ದರು. ಶ್ರೀಮತಿ ನಾಡಕರ್ಣಿಯವರು

೨. ಯಮುನಾಬಾಯಿ ನಾಡಕರ್ಣಿಯವರು.

ಪಟ್ಟ ಸೇವಾವಧಿಯಲ್ಲಿ ಎಲ್ಲರಿಗೂ ಕರ್ತವ್ಯದಕ್ಷತೆ, ಸಚತೋದ್ಯೋಗ, ಸಹಕಾರ ಮುಂತಾದ ಗುಣಗಳಿಂದ ಬೇಕಾಗಿದ್ದರು. ಅಭ್ಯಾಸ ಪ್ರೀತಿ, ಸದಾ ಸ್ವತಃ ಕಾರ್ಯ ಮಾಡುವ ಪ್ರವೃತ್ತಿ, ಸೌಜನ್ಯ, ಸರಳ ನಿರಾಡಂಬರ ಜೀವನ, ಲಲಿತ ಕಲೆಗಳಲ್ಲಿ ನಿಸ್ಪೃಹತೆ ಮುಂತಾದ ಗುಣಗಳಿಂದ ಆದರ್ಶ ಮುಖ್ಯಾಧ್ಯಾಪಿಕೆ, ಆಡಳಿತ-ಗಾರ್ತಿಯೆಂದು ಹೆಸರನ್ನು ಗಳಿಸಿದರು.

ಇದಲ್ಲದೆ ಇವರು ೧೯ವರ್ಷಗಳಿಂದ ಕನ್ನಡ ಪ್ರಾಥಮಿಕ ಶಿಕ್ಷಣ ಸಂಪಾದಕ ಮಂಡಳದಲ್ಲಿದ್ದುಕೊಂಡು ಕಾರ್ಯ ಮಾಡಿದ್ದಾರೆ. ಇವರು ಧಾರವಾಡದಲ್ಲಿ ವನಿತಾ ಸೇವಾ ಸಮಾಜದಿಂದ ಸಂಚಾಲಿತವಾದ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜದ ಮುಖ್ಯಾಧ್ಯಾಪಿಕೆಯ ಸ್ಥಾನವನ್ನು ಅಲಂಕರಿಸಿ ಮಹಿಳಾ ವರ್ಗದ ಉನ್ನತಿಗಾಗಿ ಪಡಿಯುತ್ತಲಿದ್ದಾರೆ. ಇವರಿಗೆ ಪರಮಾತ್ಮನು ದೀರ್ಘಾಯು ಆರೋಗ್ಯವನ್ನು ಕೊಡಲೆಂದೂ ಇವರಿಂದ ಕನ್ನಡ ನಾಡಿನ ಮಹಿಳೆಯರ ಸರ್ವಾಂಗೀಣ ಉನ್ನತಿಯಾಗಲೆಂದೂ ಹಾರೈಸುತ್ತೇವೆ.

ಯು. ರಾ. ದಿನಾಚರಣೆ

ಧಾರವಾಡ:— ದಿನಾಂಕ ೩೦-೧೧-೧೯೫೪ ಇಲ್ಲಿಯ ಕ. ಗಂ ಸರಕಾರೀ ಟ್ರೇನಿಂಗ ಕಾಲೇಜಬಲ್ಲಿ ಸಂಯುಕ್ತ ರಾಷ್ಟ್ರ ಸಂಘದ ದಿನಾಚರಣೆಯು ಧಾರವಾಡ ವಿಭಾಗದ ವಿದ್ಯಾಕಾರಿಗಳಾದ ಡಾ। ಡಿ. ವ್ಹಿ. ಚಿಕ್ಕರಮನೆಯವರ ಹಿರಿಯತನದಲ್ಲಿ ಯಶಸ್ವಿಯಾಗಿ ಸಂಪನ್ನವಾಯಿತು. ಈ ದಿನಾಚರಣೆಗೆ ಸ್ಥಳಿಕ ಎಲ್ಲ ಟ್ರೇನಿಂಗ ಕಾಲೇಜುಗಳ ಶಿಕ್ಷಕ-ವಿದ್ಯಾರ್ಥಿಗಳು ಹಾಗೂ ಅಧ್ಯಾಪಕ ವರ್ಗದವರೂ ಬಂದಿದ್ದರು. ಮಾನ್ಯ ಅತಿಥಿಗಳು ಯು. ರಾ. ಸಂಘದ ಧ್ಯೇಯ-ಧೋರಣೆಗಳ ಬಗ್ಗೆ ಸವಿಸ್ತಾರವಾಗಿ ಹೇಳಿದರು. ಬಳಿಕ ಯು. ರಾ. ಸಂಘದ ಕಾರ್ಯಕಲಾಪಗಳಿಗೆ ಸಂಬಂಧಿಸಿದ ಚಿತ್ರ ಹಾಗೂ ಜಾರ್ಟುಗಳಲ್ಲಿಯ ಮಾಹಿತಿಯನ್ನು ನೆರೆದ ಶಿಕ್ಷಕ-ವಿದ್ಯಾರ್ಥಿಗಳು ಮಾಡಿಕೊಂಡರು. ಈ ರೀತಿಯಾಗಿ ಕಾರ್ಯಕ್ರಮವು ಕೊನೆಗಂಡಿತು.

ಸ್ಕಾಲರಶಿಪ್ ಪರೀಕ್ಷೆಗಳು

(೧೯೫೫)

ಹೈಸ್ಕೂಲು ಮತ್ತು ಮಿಡಲ್‌ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆಗಳು ೧೯೫೫ ಫೆಬ್ರುವರಿ ೯ ಮತ್ತು ೧೦ನೆಯ ತಾರೀಖಿನ ದಿನಗಳಲ್ಲಿ ನಡೆಯುವವು. ಆಯಾ ಕೇಂದ್ರಗಳ ಪ್ರೆಸಿಡೆಂಟರ ಕಡೆಗೆ ಅರ್ಜಿಗಳನ್ನು ಕಳಿಸಬೇಕಾದ ದಿನವು ೧೫—೧೨—೧೯೫೪. ಈ ಮೊದಲು ೧೯೫೪ ಅಕ್ಟೋಬರದ ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟವಾದ ಸುದ್ದಿಯು ರದ್ದು ಎಂದು ತಿಳಿಯಬೇಕು.

ಧಾರವಾಡ.
೧೬—೧೦—೧೯೫೪

(ಸಹಿ) ಡಿ. ವ್ಹಿ. ಚಿಕ್ಕರಮನೆ
ಎಜ್ಯುಕೇಶನಲ್ ಇನಸ್ಪೆಕ್ಟರ
ಧಾರವಾಡ ಭಾಗ, ಧಾರವಾಡ.

೧೯೫೩ ನೆಯ ಸಾಲಿನ ಪ್ರಾ. ಪ್ರ. ಪರೀಕ್ಷೆ

ಪಾರಿತೋಷಕ ವಿತರಣೆ

೧೯೫೩ನೆಯ ಸಾಲಿನ ಪ್ರಾಥಮಿಕ ಶಾಲಾ ಪ್ರ. ಪರೀಕ್ಷೆಯಲ್ಲಿ ಕೆಳಗೆ ತೋರಿಸಿದ ವಿದ್ಯಾರ್ಥಿಗಳು ಇಡೀ ಪರೀಕ್ಷೆಯಲ್ಲಿ, ಗಣಿತ ವಿಷಯದಲ್ಲಿ ಹಾಗೂ ಭಾಷಾ ವಿಷಯದಲ್ಲಿ ಧಾರವಾಡ ಜಿಲ್ಲಾ ಸ್ಕೂಲಬೋರ್ಡ ಶಾಲೆಗಳಿಂದ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳಲ್ಲಿ ಮೊದಲನೆಯ ನಂಬರು ಪಡೆದಿರುತ್ತಾರೆ. ಕಾರಣ ಅವರು ಮತ್ತು ಅವರ ವರ್ಗಗಳನ್ನು ಹಾಗೂ ವಿಷಯಗಳನ್ನು ಕಲಿಸಿದ ಶಿಕ್ಷಕರು ಈ ಬೋರ್ಡಿನಿಂದ ಇಡಲ್ಪಟ್ಟ ಬಹುಮಾನಗಳನ್ನು ಪಡೆದು ಶ್ರೇಯೋಭಾಗಿಗಳಾಗಿರುತ್ತಾರೆ.

ಅ. ನಂ.	ಹೆಸರು	ವಿದ್ಯಾರ್ಥಿ/ಶಿಕ್ಷಕ	ಶಾಲೆ	ವಿಷಯ; ಪಡೆದ ಗುಣಗಳು	ಬಹುಮಾನ
೧ (ಅ)	ಶಿವಪ್ಪ ಮಲ್ಲಪ್ಪ ಈರೇಶನವರ	ವಿದ್ಯಾರ್ಥಿ	ಕ. ಗಂ ಶಾಲೆ ಅಳಗವಾಡಿ (ತಾ. ನವಲಗುಂದ)	೪೭೮/೬೦೦	ರೂ. ೫೦/—
(ಬ)	ಶ್ರೀ ಬಸಪ್ಪ ಎಲ್ಲಪ್ಪ ಕುಂಬಾರ	ಶಿಕ್ಷಕ	,,	—	ರೂ. ೫೦/—
(ಆ)	(i) ಫಕ್ಕೀರಪ್ಪ ಉಜ್ಜಪ್ಪ ಗಡ್ಡದವರ	ವಿದ್ಯಾರ್ಥಿ	ಕ. ಗಂ.ಶಾಲೆ ಕುರುಬಗೊಂಡ (ತಾ. ಹಾವೇರಿ)	ಗಣಿತ ೧೬೪/೨೦೦	ರೂ. ೨೫/-
	(ii) ಸಕ್ಕರಗೌಡ ತಿರಕನಗೌಡ ಪಾಟೀಲ	,,	,,	೧೬೪/೨೦೦	
(ಬ)	ಶ್ರೀ ಚಿನ್ನಪ್ಪ ಬಸಪ್ಪ ಕೋಟಿ	ಶಿಕ್ಷಕ	,,	ಗಣಿತ	ರೂ. ೨೫/-
(ಅ)(i)	ರೇವಣಶಿದ್ಧಯ್ಯ ಅಡಿವೆಯ್ಯ ಹಿರೇಮಠ	ವಿದ್ಯಾರ್ಥಿ	ಕ. ಗಂ. ಶಾಲೆ ಡ.ಸ. ಸಹಡಗಲಿ (ತಾ. ರೋಣ)	ಭಾಷಾ ೧೪೨/೨೦೦	ರೂ. ೨೫/-
	(ii) ಸೋಮರಡ್ಡಿ ಲಿಂಗರಡ್ಡಿ ಕಾತರಕಿ	,,	ಕ. ಗಂ. ಶಾ. ಹಲರ್ವಾಪುರ (ತಾ ಗದಗ)	೧೪೨/೨೦೦	
(ಬ)(i)	ಶ್ರೀ ಸಂಗನಬಸಪ್ಪ ಬಸಪ್ಪ ಜಾಲಣ್ಣನವರ	ಶಿಕ್ಷಕ	ಕ. ಗಂ ಶಾಲೆ ಡ. ಸ. ಹಡಗಲಿ (ತಾ. ರೋಣ)	ಭಾಷಾ	ರೂ. ೨೫/-
( )	ಶ್ರೀ. ಹನುಮಪ್ಪ ಹನುಮಪ್ಪ ಹಲರ್ವಾಪೂರ	ಶಿಕ್ಷಕ	ಕ. ಗಂ. ಶಾಲೆ ಹಲರ್ವಾಪೂರ (ತಾ. ಗದಗ)		

ರಾ. ರು. ಕುಪ್ಪಸದ,
A. O., D. S. B, Dharwar.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ

(ಮುಲ್ಕೀ ಪರೀಕ್ಷೆ ೧೯೫೩)

೧೯೫೩ ರಲ್ಲಿ ಜನೇವರಿ ತಿಂಗಳಲ್ಲಿ ಜರುಗುವ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯು ೧೯೫೪ ಏಪ್ರಿಲ್ ತಿಂಗಳಲ್ಲಿ ನಡೆಯುವದು. ಇದರ ಬಗ್ಗೆ ವಿಶೇಷ ನಿಯಮಾವಲಿಯನ್ನು ಮುಂದಿನ ತಿಂಗಳ ಪ್ರಾಥಮಿಕ ಶಿಕ್ಷಣದಲ್ಲಿನೋಡಿರಿ.

—ಪ್ರಧಾನ ಸಂಪಾದಕರು.

ಮಾನಸಶಾಸ್ತ್ರದ ಅಭ್ಯಾಸದಿಂದ ಶಿಕ್ಷಕರಿಗಾಗುವ ಪ್ರಯೋಜನ

ಲೇಖಕರು:—ಶ್ರೀ. ತಟ್ಟ ಶಾನುಣ್ಣ

ಮಕ್ಕಳು ತೋಟದೊಳಗಿನ ಸಸಿಗಳು; ಶಿಕ್ಷಕನು ತೋಟಿಗ ಎಂಬ ಉಪಮೆಯು ಶಿಕ್ಷಕರಿಗೆ ಒಳ್ಳೆಯ ಮಾರ್ಗದರ್ಶಕವಾಗಿದೆ. 'ಬಾಲೋದ್ಯಾನ' ಪದ್ಧತಿಯ ಮೂಲದಲ್ಲಿರುವ ಅರ್ಥವು ಇದೇ. ಈಗಿನ ದಿನದಲ್ಲಿ ಸಾಲೆಗೆ ಬರುವ ಮಕ್ಕಳ ಸ್ಥಿತಿಯನ್ನು ನೋಡಿದರೆ ಕಸಿಕರವಾಗುವದು. ವರ್ಗದಲ್ಲಿ ಕುಳಿತ ಹುಡುಗರ ಮುಖದ ಮೇಲೆ ಪ್ರಫುಲ್ಲಿತವಾದ ಕಳೆ ಇರುವದಿಲ್ಲ. ಸಾಲೆಯಲ್ಲಿ ಬಹು ಸಂಖ್ಯಾಕರಾದ ಹುಡುಗರು ತಮ್ಮ ವೇಳೆಯನ್ನು ಸುಖದಿಂದ ಕಳೆಯುವದಿಲ್ಲ. ಎಷ್ಟೋ ಹುಡುಗರ ಗೃಹಶಿಕ್ಷಣವು ಸಮಾಧಾನಕರವಿರದ್ದರಿಂದ ಅವರು ನಿರುತ್ಸಾಹಿಗಳೂ, ಜೋಲು ಮೋರೆಯವರೂ, ಅನೇಕಸಾರೆ ಕಿಡಿಗೇಡಿಗಳೂ ಆಗಿ ಸಾಲೆಗೆ ಬಂದಿರುತ್ತಾರೆ. ಇಂಥವರಿಗೆ ವಿದ್ಯೆ ಕಲಿಯುವ ಅಭಿರುಚಿಯನ್ನು ಹಚ್ಚಬೇಕಾಗುವದು. ಈ ಸ್ಥಿತಿಯನ್ನನುಲಕ್ಷಿಸಿದರೆ ಶಿಕ್ಷಕನು ಒಳ್ಳೆಯ ವೈದ್ಯನಂತೆ ಇರಬೇಕೆಂದೆನಿಸುವದು. ವೈದ್ಯನು ಹೇಗೆ ರೋಗಿಯ ಆರೋಗ್ಯವು ಕೆಡುವುದಕ್ಕೆ ಏನು ಕಾರಣವಿರಬೇಕೆಂಬುದನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ತಿಳಿದುಕೊಳ್ಳುವನೋ ಹಾಗೆಯೆ ತನ್ನ ವರ್ಗದಲ್ಲಿಯ ಪ್ರತಿಯೊಬ್ಬ ಹುಡುಗನ ಬೆಳವಣಿಗೆಯಲ್ಲಿ ಏನು ದೋಷವು ಕಂಡುಬರುತ್ತಿದೆ, ಅವನ ಬುದ್ಧಿಯಲ್ಲಿ, ತಿಳುವಳಿಕೆಯಲ್ಲಿ ಏನು ಲೋಪದೋಷಗಳಿವೆ, ಸ್ವಭಾವದಲ್ಲಿ ಯಾವ ದುರ್ಗುಣಗಳು ಹಣಿಕೆಹಾಕುತ್ತಿವೆ ಎಂಬುದನ್ನು ಚೆನ್ನಾಗಿ ಅತ್ಯಂತ ಪ್ರಯಾಸಪೂರ್ವಕವಾಗಿ ಅಭ್ಯಸಿಸಬೇಕು. ವೈದ್ಯಶಾಸ್ತ್ರದ ಜ್ಞಾನವಿಲ್ಲದೆ ಹೇಗೆ ವೈದ್ಯನು ರೋಗಿಯನ್ನು ಗುಣಪಡಿಸಲಾರನೋ ಹಾಗೆಯೆ ಶಿಕ್ಷಕನು ಮನಸ್ಸಿನ ಸ್ವಭಾವ, ರೀತಿನೀತಿಗಳ ಜ್ಞಾನವನ್ನು ಮಾಡಿಕೊಳ್ಳದೆ ಮಕ್ಕಳಲ್ಲಿ ಆನಂದೋತ್ಸಾಹಗಳನ್ನು ಉಂಟುಮಾಡಲಾರನು.

ಯಾವ ಶಾಸ್ತ್ರವಾದರೂ ಅನುಭವದ ಆಧಾರದ ಮೇಲೆಯೇ ಪ್ರಣೀತವಾದುದು. ಶಾಸ್ತ್ರದಲ್ಲಿ ಹೇಳಿದ ಎಷ್ಟೋ ವಿಷಯಗಳು ಬುದ್ಧಿವಂತರಾದವರಿಗೆ ತಿಳಿದೇ ಇರುತ್ತವೆ. ಶಾಸ್ತ್ರವು ಅನುಭವದಲ್ಲಿ ಕಾಣದ ಹೊಸಮಾತನ್ನೇನು ಹೇಳುವದಿಲ್ಲ. ಆದರೆ ಎಲ್ಲರಿಗೂ ತಮ್ಮ ಅನುಭವವನ್ನು ಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳುವ ಶಕ್ತಿಯಿರುವದಿಲ್ಲ. ಶಾಸ್ತ್ರವು ಈ ಅಭ್ಯಾಸವನ್ನು ಅವರಿಗೆ ಮಾಡಿಸುತ್ತದೆ. ಪದಾರ್ಥಗಳ ನಿಜವಾದ ರೂಪಲಕ್ಷಣತೆಗಳೂ ಪ್ರತ್ಯಕ್ಷ ಕಣ್ಣಿಗೆ ಕಂಡ ರೂಪಲಕ್ಷಣತೆಗಳಿಂದ ಭಿನ್ನವಾಗಿರುವವು; ಚಿತ್ರತೆಗೆಯಲಿಕ್ಕೆ ಕೊಟ್ಟ ಒಂದು ಕೊಡದ ವೃತ್ತಾಕಾರವಾದ ಬಾಯಿಯು ಪ್ರತ್ಯಕ್ಷ ಕಂಣಿಗೆ ಹಾಗೆ ಕಾಣಿಸುವದೇನು ? ಇಲ್ಲ; ದೀರ್ಘವರ್ತುಲಾಕಾರವಾಗಿ ಕಾಣುವದು. ದೂರದ ವರೆಗೆ ಹೋಗಿರುವ ಉಗಿಬಂಡಿಯ ಮಾರ್ಗದ ಕಂಬಿಗಳು ನಿಜವಾಗಿ ಸಮಾಂತರವಾಗಿದ್ದರೂ ಪ್ರತ್ಯಕ್ಷ ಕಣ್ಣಿಗೆ ಸ್ವಲ್ಪದೂರದಲ್ಲಿ ಕೂಡಿಕೊಂಡ ಹಾಗೆ ಕಾಣಿಸುವದಿಲ್ಲವೇ ? ಈ ಅನುಭವಗಳನ್ನು ಸರಿಯಾಗಿ ಅರ್ಥಮಾಡಿಕೊಂಡರೆ ತಿಳಿಯುವದೇನೆಂದರೆ ನಾವು 'ಪ್ರತ್ಯಕ್ಷ ಇಂದ್ರಿಯಜನ್ಯಜ್ಞಾನ' ಎಂದು ಹೇಳುವದರಲ್ಲಿ ಸಹ ಊಹೆ, ಸ್ಮರಣೆ ಸೇರಿರುತ್ತವೆ ಎಂಬ ಮಾತು ಕಣ್ಣಿಗೆ ಕಾಣುವ ಕೆಲವು ಲಕ್ಷಣಗಳ ಮೇಲಿಂದ ನಿಜವಾದ ಸ್ಥಿತಿಯನ್ನು ಊಹಿಸುತ್ತೇವೆ. ಹಾಗೆ ಪ್ರತಿಯೊಂದು ದೈನಂದಿನದ ಅನುಭವದಲ್ಲಿಯೂ ಹಿಂದಿನ ಅನುಭವಗಳ ಸ್ಮರಣೆಯು ಕೂಡಿರುತ್ತದೆ. ಅದೇ ಆಗ ಜನಿಸಿದ ಶಿಶುವಿಗೂ ಚಲನೆಯ ಹಾಗೂ ಸ್ಥಳಕಾಲಗಳ ಅಸ್ಪಷ್ಟ ಹಾಗೂ ಅಂಧುಕವಾದ ಕಲ್ಪನೆಯು ಇರುವದು. ಇದು ಅದಕ್ಕೆ ಗರ್ಭವಾಸದ ಅನುಭವದಿಂದಲೇ ಬಂದಿರುವದು. ಹೀಗೆ ರೂಪ, ರಸ, ಗಂಧ, ಸ್ಪರ್ಶ, ಶಬ್ದಾದಿ ಅನುಭವಗಳ ದ್ವಾರಾ ಸರಿಯಾಗಿ ವಸ್ತುಗಳ ಪ್ರತ್ಯಕ್ಷಜ್ಞಾನವಾಗ-

ಬೇಕಾದರೆ ಸ್ಮರಣೆ ಸಾದೃಶ್ಯ ಹಾಗು ಗುಣಗಳ ತರತಮ ಭಾವದ ನಿರೀಕ್ಷಣೆ, ದೇಶ, ಕಾಲ, ಆಚೇತನ ನಿಜೇತನ ವರ್ಗಗಳು ಮುಂತಾದ ಹಲವು ಮೂಲಭೂತವಾದ ಕಲ್ಪನೆಗಳು ಇವು ಅವಶ್ಯವೆಂಬ ಮಾತನ್ನು ಮಾನಸ-ಶಾಸ್ತ್ರದಿಂದ ಚೆನ್ನಾಗಿ ತಿಳಿದುಕೊಳ್ಳುತ್ತೇವೆ. ಹುಡುಗರಿಗೆ ವನಸ್ಪತಿಗಳು, ಪ್ರಾಣಿಗಳು, ಸೂರ್ಯ, ಚಂದ್ರ, ಪೃಥ್ವಿ, ಮುಂತಾದ ಸೃಷ್ಟಿಯ ಪರಿಚಯವನ್ನು ಮಾಡಿಕೊಡಬೇಕಾದರೆ ಜ್ಞಾನದೊರೆಯುವ ಈ ಮಟ್ಟಿಗಳನ್ನು ಪದ್ಧತಿಯನ್ನು ಅನುಸರಿಸಬೇಕಾಗುವದು.

ಮಕ್ಕಳಲ್ಲಿರುವ ಮೂಲಭೂತ ಪ್ರವೃತ್ತಿಗಳನ್ನು ಹತ್ತಿಕ್ಕ ಬಾರದು. ಆದರೆ ಅವುಗಳಿಗೆ ಶಿಕ್ಷಣದಿಂದ ಬೇರೆ ಮಾರ್ಗಗಳನ್ನು ತೋರಿಸಿಕೊಡಬೇಕು. ಹಸಿದಾಗ ಕೂಡಲೇ ತಿನ್ನುವದಕ್ಕೆ ಹವಣಿಸುತ್ತಿದ್ದರೂ, ದೇವರಿಗೆ ಎಡೆ ತೋರಿಸಿ ಪ್ರಾರ್ಥನೆಯನ್ನು ಸಲ್ಲಿಸುವವರೆಗೆ ಮನಸ್ಸನ್ನು ಬಿಗಿ ಹಿಡಿಯಲಿಕ್ಕೆ ಕಲಿಸುವದರಿಂದ ಆಹಾರ ಪ್ರವೃತ್ತಿಗೆ ಸರಿಯಾದ ಹಾದಿಯನ್ನು ಹಾಕಿಕೊಟ್ಟಂತಾಗುವದು.

ಸಂಗ್ರಹ ಪ್ರವೃತ್ತಿ ಒಡೆತನದ ಪ್ರವೃತ್ತಿಗಳಿಗಾಗಿ ನಮ್ಮ ಮನೋಭಿಲಾಷೆಗಳನ್ನು ಪೂರ್ತಿಗೊಳಿಸಲಿಕ್ಕೆ ನಾವು ಪ್ರಯತ್ನಿಸುತ್ತೇವೆ. ಇವು ನ್ಯಾಯವಾದ ಮಾರ್ಗದಿಂದ ಸಂದಿಸದೇ ಹೋದರೆ ಮೋಸ, ಕಳವು, ಮುಂತಾದ ಸಾಧನೆಗಳನ್ನು ಉಪಯೋಗಿಸಹತ್ತುವೆವು. ಹಾಗಾಗಬಾರದಿದ್ದರೆ ಆ ಮೂಲಭೂತ ಪ್ರವೃತ್ತಿಗಳಿಗೆ ಸರಿಯಾದ ಬೇರೆ ಕ್ಷೇತ್ರಗಳನ್ನು ಕಲ್ಪಿಸಿಕೊಡಬೇಕು. ಮನೆಯಲ್ಲಿ ಮಕ್ಕಳಿಗೆ ಯೋಗ್ಯ ವೇಳೆಗೆ ಹಿತಮಿತವಾದ ತಿಂಡಿತಿನಸುಗಳನ್ನು ಒದಗಿಸಬೇಕು. ಮನೋರಂಜಕ ಸಾಧನಗಳನ್ನು ಕೊಂಡುಕೊಡಬೇಕು. ಹಾಗೆ ಮಾಡದಿದ್ದರೆ ಮಕ್ಕಳ ಸಹಜ ಪ್ರವೃತ್ತಿಗಳಿಗೆ ಅನುವು ದೊರೆಯದ್ದರಿಂದ ಅವರು ಸುಳ್ಳು, ಮೋಸ, ಮುಂತಾದ ಮಾರ್ಗಗಳನ್ನು ಹಿಡಿಯುವರು. ಇಂತಹ ನಮ್ಮ ಮನಸ್ಸಿನ ಸ್ವಭಾವವನ್ನು, ಮೂಲಭೂತ ಸ್ವರೂಪವನ್ನು ಮನಃಶಾಸ್ತ್ರವು ಕಲಿಸುತ್ತದೆ. ನನ್ನವರು, ನನ್ನ ಗೆಳೆಯರು, ನನ್ನ ಊರವರು, ಮುಂತಾದ ಬಂಧುತ್ವದ ಭಾವನೆ, ಅಭಿಮಾನ, ತಾಯಿಯ ವಾತ್ಸಲ್ಯ, ನಿರ್ವ್ಯಾಜಪ್ರೇಮ ಈ ಪ್ರವೃತ್ತಿಗಳೂ ಪ್ರತಿಯೊಬ್ಬ ವ್ಯಕ್ತಿಯ ಹೃದಯದಲ್ಲಿಯೂ ಅವ್ಯಕ್ತವಾಗಿರುವವು. ಅವುಗಳಿಗೆ ಜೀವನದಲ್ಲಿ ಸರಿಯಾದ ಅಭಿವ್ಯಕ್ತಿ ಮಾರ್ಗವು ದೊರೆತರೆ ಆ ವ್ಯಕ್ತಿಯು ಶ್ರೇಷ್ಠ ವ್ಯಕ್ತಿಯಾಗಿ ತನ್ನ ಜೀವನವನ್ನು ಸಾರ್ಥಕಗೊಳಿಸುವನು. ವ್ಯಕ್ತಿವಿಕಾಸದ ಅಂತಸ್ತುಗಳು ಯಾವವು ಜೀವನಸಂಗ್ರಾಮದಲ್ಲ ಧೀರನಾಗಿ ಹೊರಡುವದೇ ನಮ್ಮ ಆದರ್ಶವಾಗಿರಬೇಕು. ನ್ಯಾಯಾಧೀಶನ ನಿಷ್ಠುರನಿಷ್ಪಕ್ಷಪಾತ ಬುದ್ಧಿಯೂ, ತಾಯಿಯ ನಿರ್ನಿಮಿತ್ತ ಅತಃಕರಣವೂ—ಇವೆರಡರೂ ನಮ್ಮಲ್ಲಿ ಅಳವಡಬೇಕು ಮನೋವಿಕಾಸದ ಈ ಸರಿಯಾದ ಕಲ್ಪನೆಗೆ ಮಾನಸಶಾಸ್ತ್ರದ ಅಭ್ಯಾಸವು ಅಗತ್ಯವಾಗಿಲ್ಲವೇ? ಮಕ್ಕಳಲ್ಲಿಯ ಸುಗುಣಗಳೆಂಬ ಪುಷ್ಪಗಳು ಅರಳಿ ತಮ್ಮ ಸುಗಂಧವನ್ನು ದಶದಿಕ್ಕಿಗೂ ಬೀರುವಂತೆ ಗೈಯುವವನೇ ನಿಜಶಿಕ್ಷಕನಲ್ಲವೇ?

ಇನ್ನು ವಿಚಾರ, ಮಾತು, ಕೃತಿ ಈ ಮೂರರಲ್ಲಿಯು ಸಾಮರಸ್ಯ ಉಂಟಾಗಬೇಕಾದರೆ ವ್ಯಕ್ತಿಯು ವಿಚಾರಮಾಲೆಗೆ ತಕ್ಕ ಕೃತಿಯನ್ನು ಎಸಗಬೇಕು. ಅದಕ್ಕೆ ನಿರೋಗಿಯಾದ, ಶುದ್ಧವಾದ, ಸದ್ಬಲಿಷ್ಠವಾದ ಶರೀರವು ಅತ್ಯವಶ್ಯ. ಗೃಹ ಶಿಕ್ಷಣವು ಸರಿಯಾಗಿದ್ದರೆ ಈ ದೇಹ ಶಕ್ತಿಗಳೂ ಅದರ ತಕ್ಕವೋಷಣೆಗೆ ಅನುಕೂಲವಾಗಿರುತ್ತವೆ. ಇಲ್ಲದೇ ಹೋದರೆ ಆಲಸ್ಯ, ಅನವಧಾನ ಚಿತ್ತಕ್ಷೋಭೆ ಮುಂತಾದ ಬೇನೆಗಳಿಗೆ ಮೊದಲು ಶಿಕ್ಷಕನೆಂಬ ವೈದ್ಯನು ತಕ್ಕ ಔಷಧೋಪಚಾರವನ್ನು ಮೊದಲು ಕೈಕೊಳ್ಳಬೇಕಾಗುವದು. ಹೀಗೆ ಮೊದಲು ಶಾಲೆಗೆ ಬಂದ ಮಕ್ಕಳನ್ನೆಲ್ಲ ಮೊದಲು ಪರೀಕ್ಷಿಸಿ ಅವರವರಲ್ಲಿ ಕಂಡುಬರುವ ದೋಷಗಳ ಕಾರಣವನ್ನು ನಿಶ್ಚೈಸಿ-ಮಾನಸಿಕ ರೋಗಗಳು ದೈಹಿಕ ರೋಗಗಳು ಎರಡರ ಕಾರಣವನ್ನೂ ನಿಶ್ಚಯಿಸಿ ಧನ್ವಂತರಿಯಂತೆ ದಿವ್ಯೌಷಧಿಯನ್ನು ಒದಗಿಸುವವನಾಗಬೇಕು. ಅಂತೂ ಮಾನಸಶಾಸ್ತ್ರವು ಶಿಕ್ಷಕನ ಚರಕ ಸುಶ್ರುತ ಗ್ರಂಥಗಳಿದ್ದಂತೆ.

ಸಾಮಾನ್ಯವಾಗಿ ಶಿಕ್ಷಕನು ಮಕ್ಕಳ ಮನಸ್ಸನ್ನು ತನ್ನ ಕಡೆಗೆ ಬೇಗೆ ಆಕರ್ಷಿಸಿಕೊಳ್ಳಬೇಕು, ಅವರ ಲಕ್ಷವನ್ನು ತನ್ನ ಮಾತಿನಕಡೆಗಿ ಹೇಗೆ ಹೊರಳಿಸಿಕೊಳ್ಳಬೇಕು ಎಂಬುವನ್ನು-ಎಂದರೆ ಅದರ ಗುಟ್ಟನ್ನು ಅರಿತಿರಬೇಕಾದವನೆ ವಿಷಯವನ್ನು ಹೇಗೆ ಹೇಳಿದರೆ ಹೇಗೆ ಕಲಿಸಿದರೆ ಮಕ್ಕಳ ಕುತೂಹಲವು ಕೆರಳುವದು, ಅವರಲ್ಲಿ ವಿಚಾರಶಕ್ತಿಯು ಜಾಗ್ರತವಾಗುವದು, ಸತ್ಸಂಧತೆ, ಸದಭಿರುಚಿ ಮತ್ತು

ಸತ್ಕಾರ್ಯದಲ್ಲಿ ನೊದಲು ಹೆಜ್ಜೆಯಿಕ್ಕುವ ಸಾಹಸ ಇವು ಶೀಲಸ್ವಭಾವದಲ್ಲಿ ಮೈಗೂಡುವವು ಮುಂತಾದ ಸಂಗತಿಗಳನ್ನು ಕೆಲಮಟ್ಟಿಗೆ ಶಾಸ್ತ್ರೋಕ್ತವಾಗಿ ಅಭ್ಯಾಸಮಾಡಿ ತಿಳಿದುಕೊಳ್ಳಬೇಕಾಗುವದು.

ಇದಲ್ಲದೆ ಮಕ್ಕಳ ಬೇರೆ ಬೇರೆ ವಯಸ್ಸಿನಲ್ಲಿಯ ಸ್ವಾಭಾವಿಕ ಬುದ್ಧಿಮತ್ತೆಯನ್ನು ಅಳೆಯುವದು, ಕೆಲವೊಂದು ಸಾಮಾನ್ಯ ಶಿಕ್ಷಣವನ್ನು ಪಡೆದನಂತರ ಅವರು ಯಾವ ವಿಶೇಷ ಪರಿಶ್ರಮಕ್ಕೆ ಉದ್ಯಮಕ್ಕೆ ಯೋಗ್ಯರಾಗಿರುವರು, ಮಕ್ಕಳು ತಾವು ಕಲಿತ ವಿಷಯಗಳಲ್ಲಿ ನಿಜವಾಗಿಯೂ ಯಾವ ಮಟ್ಟವನ್ನು ಮುಟ್ಟಿರುವರು, ಇದನ್ನು ಅಳೆಯುವ ರೀತಿ ಇಂತಹ ಎಲ್ಲ ಹೊಸ ಸಾಧನಗಳು ಮನೋವಿಜ್ಞಾನದ ಪ್ರಗತಿಯಿಂದ ಮತ್ತು ಅದರ ಅಭ್ಯಾಸದಿಂದಲೇ ಸಾಧ್ಯವಾಗಿವೆ ಎಂಬುದನ್ನು ವಿಚಾರ ಮಾಡಿದರೆ ಮಾನಸಶಾಸ್ತ್ರದ ಮೂಲತತ್ವಗಳ ಅಲ್ಪ ಪರಿಚಯವಾದರೂ ಶಿಕ್ಷಕರಿಗೆ ಎಷ್ಟು ಆವಶ್ಯಕವಾಗಿದೆ ಎಂಬುದರ ಮನವರಿಕೆಯಾಗದೆ ಇರದು.

ಒಂದು ಚಿತ್ರ

(ಏ. ಓ. ರವರು ಕಂಡ ಸ್ವಾತಂತ್ರ್ಯೋತ್ಸವ ದಿನ)



ಲೇಖಕರು:—ಶ್ರೀ. ಆರ್. ಆರ್. ಕುಪ್ಪಸದ ಎಂ.ಎ. ಬಿ. ಟಿ., ಎ. ಓ. ಡಿ. ಎಸ್. ಬಿ. ಧಾರವಾಡ

ಒಂದು ಚಿತ್ರ * * * * * * *

ನಾಳೆ ಆಗಸ್ಟ ೧೫; ಶಾಲೆಗೆ ಸೂಟಿಯಿದೆ, ನಮಗೆ ಹಬ್ಬವಿದೆ ಎಂದು ಮನೆಯಲ್ಲಿ ಮಕ್ಕಳು ದಿನಾಂಕ ೧೪ ರಲ್ಲಿಯೇ ಸಂಭ್ರಮದಿಂದಲೂ, ಉತ್ಸುಕತೆಯಿಂದಲೂ ನುಡಿಬಾಡಹತ್ತಿದರು. "ನಮ್ಮ ಶಾಲೆಯಲ್ಲಿ ಮುಕ್ಕೇ ನೇ ಧ್ವಜವಂದನೆಯಿದೆ; ನಮ್ಮ ಶಾಲೆಯಲ್ಲಿ ಮುಕ್ಕೆ ನಾವು ಹಾಜರ ಇರಲೇ ಬೇಕು; ಆ ಶಾಲೆಯಲ್ಲಿ ಬಡ ಮಕ್ಕಳಿಗೆ ಪಾಟಿ-ಪುಸ್ತಕಗಳನ್ನು ಕೊಡುವರಂತೆ; ಈ ಶಾಲೆಯಲ್ಲಿ ಮುಂಜಾನೆ ಸಭೆಯಿದೆ." ಮುಂತಾಗಿ ಮಾತಾಡುತ್ತ ಸ್ನಾನಾದಿಗಳನ್ನು ತೀರಿಸಿಕೊಂಡು, ಮಡಿ ಆರಿವೆ ಧರಿಸಿಕೊಂಡು ದಿ. ೧೫ನೆಯ ಬೆಳಗಿನ ೪ಘಂಟೆಗೇನೇ ಮನೆಯ ಮಕ್ಕಳೆಲ್ಲ ಸಿದ್ಧರಾಗಿ ನಿಂತು, "ಅಪ್ಪಾ, ನಾವು ಸಿದ್ಧರಾಗಿದ್ದೇವೆ, ಹೊರಡೋಣವೇ?" ಎಂದು ಕೇಳಿದಾಗ್ಗೆ ನನಗಾದ ಆನಂದವನ್ನು ಅಷ್ಟಿಷ್ಟೆಂತಲ್ಲ! ಅನೇಕ ಚಿತ್ರಗಳು ನನ್ನ ಕಣ್ಮುಂದೆ ಬಂದವು. ಅನೇಕ ನೋಟಗಳು ನನ್ನ ದೃಷ್ಟಿಪಥದಲ್ಲಿ ಗಮನಿಸಹತ್ತಿದವು. ಸ್ವಾತಂತ್ರ್ಯೋತ್ಸವವು ಮಕ್ಕಳನ್ನು ಬೇಗ ಎಬ್ಬಿಸಿತಲ್ಲವೇ! ಆವರಲ್ಲಿ ಇಷ್ಟೊಂದು ಉತ್ಸಾಹವನ್ನು ತುಂಬಿತಲ್ಲವೇ!! ಮಕ್ಕಳು ಉತ್ಸಹಕ್ಕಾಗಿ ಬೇಗ ಸಿದ್ಧರಾಗಿ ನಿಂತರಲ್ಲವೇ!!! "ಹೊರಡೋಣವೇ" ಎಂಬ ಮಾತು ಎಷ್ಟು ಅರ್ಥಗರ್ಭಿತವಾಗಿದೆಯಲ್ಲ!

(ಅ) ಮುಂಜಾನೆ ೪ ಘಂಟೆಗೆ ಸರಿಯಾಗಿ ಕಚೇರಿಗೆ ಬಂದೆನು. ಕಚೇರಿಯ ಕಟ್ಟಡವು ಆಗಲೇ ತಳಿರು ತೋರಣಗಳಿಂದ ಸುಶೋಭಿತವಾಗಿದ್ದಿತು. ಮತ್ತಲಿನ ಆಂಗಳವೆಲ್ಲ ನೀರಿನ ಚಳಿಯಿಂದ ಹೊಡೆಯಲ್ಪಟ್ಟಿತ್ತು. ಮಹಾತ್ಮಾ ಗಾಂಧೀಜಿಯವರ, ಪಂಡಿತ ಜವಾಹಿರರ ಭಾವಚಿತ್ರಗಳಿಗೆ ಹಾರಗಳನ್ನರ್ಪಿಸಿ, ಪೂಜೆ ಪುನಸ್ಕಾರಗಳಿಂದ ಧ್ವಜವಂದನೆಗೈಮ ಕಚೇರಿಯ ಸಿಬ್ಬಂದಿ ನಾವೆಲ್ಲ ರಾಷ್ಟ್ರಧ್ವಜದಡಿಯಲ್ಲಿ ನಿಂತು ಸ್ವಾತಂತ್ರ್ಯ ಸಿಕ್ಕ ನಂತರ ೫ ವರುಷಗಳ ಅವಧಿಯನ್ನು ನೆನೆದು ಇನ್ನು ಮುಂದೆ ನಾವು ಹೇಗೆ ಸಾಗಿ, ರಾಷ್ಟ್ರದ ಬೆಳವಣಿಗೆಗೆ ಹೇಗೆ ಸಹಾಯಕರಾಗೋಣ ಎಂಬುದನ್ನು ವಿಚಾ-

ರಿಸಿದೆವು. ನಾಡಿನ ಪ್ರಗತಿಗಾಗಿ ದುಡಿಯುವ ಶಕ್ತಿಯನ್ನು ನಮಗೆ ಪರಮೇಶನು ದಯಪಾಲಿಸಲೆಂದೇ ಪ್ರಾರ್ಥಿಸಿದೆವು.

(ಆ) ಮುಂಜಾನೆ ೯ ಘಂಟೆಗೆ ಪೋಲಿಸ ಹೆಡ್‌ಕ್ವಾರ್ಟರ್ಸ ಕಡೆಗೆ ಜನಜಂಗುಳಿ ಸಾಗಿತ್ತು. ದಾರಿಯಲ್ಲೆಲ್ಲ ಎಡಕ್ಕೂ ಬಲಕ್ಕೂ ಅಲ್ಲಲ್ಲಿ ಪುಷ್ಪಗಳಿಂದ ಅಲಂಕೃತವಾದ ರಾಷ್ಟ್ರಧ್ವಜಗಳು ಕಟ್ಟಡಗಳ ಮೇಲೆ ಹಾರಾಡುತ್ತಿದ್ದವು. ಪೋಲಿಸ ಹೆಡ್‌ಕ್ವಾರ್ಟರ್ಸಿನ ಮಹಾದ್ವಾರದಲ್ಲಿ ಮೆ। ಡಿ. ಎಸ್. ಪಿ. ಸಾಹೇಬರವರು ಬಂದ ಅಭ್ಯಾಗತರನ್ನು, ನಸು ನಗೆಯಿಂದ ಸ್ವಾಗತಿಸುತ್ತಿದ್ದರು. ಮೆ। ಕಲೆಕ್ಟರರು ಆಗಮಿಸಿದೊಡನೆ ಸರಿಯಾಗಿ ೯-೫ ಘಂಟೆಗೆ ಧ್ವಜವಂದನೆಯಾಗಿ ಬ್ಯಾಂಡಿನ "ಜನಗಣ ಮನ"ವು ಬಂದ ಎಲ್ಲ ಜನಗಣದ ಮನ ಹೊಕ್ಕಿತು. ಪೋಲಿಸ ಪರೇಡದ ದೃಶ್ಯವು ಎಲ್ಲರಲ್ಲಿ ನವ ಚೈತನ್ಯವನ್ನು ತಂದಿತು.

(ಇ) ಮು. ೯–೩೦ ಘಂಟೆ. ನವಲೂರ ಶಾಲೆಯ ವಿದ್ಯಾರ್ಥಿಗಳೂ, ಶಿಕ್ಷಕರೂ, ಊರ ಜನರೂ ಧ್ವಜವಂದನೆಗೆ ಸಜ್ಜಾಗಿದ್ದಾರೆ. ನಾನು ಹೋದ ಕ್ಷಣವೇ ಶಿಸ್ತಿನಿಂದಲೂ, ಹುರುಪಿನಿಂದಲೂ ಧ್ವಜವಂದನೆಯ ಕಾರ್ಯ ಸಾಂಗವಾಗಿ, ಮುಂದೆ ಗಿಡ ನೆಡುವ, ವಾಚನಾಲಯ ಸ್ಥಾಪನೆಯ ಸಮಾರಂಭಗಳು ಜರಗಿಸಲ್ಪಟ್ಟವು. ಗ್ರಾಮ ಪಂಚಾಯಿತಿಯವರು ಕೊಟ್ಟ ಪಾಟಿ, ಪುಸ್ತಕಗಳನ್ನು ಬಡ ಮಕ್ಕಳಿಗೆ ಹಂಚಲಾಯಿತು.

(ಈ) ಮು. ೧೦–೩೦ ಘಂಟೆ. ಉಣಕಲ್ಲ ಶಾಲೆಯ ಪಟಾಂಗಣದಲ್ಲಿ ರಾಷ್ಟ್ರಧ್ವಜದಡಿಯಲ್ಲಿ ಸಭೆಗೂಡಿದೆ. ರಾಷ್ಟ್ರಧ್ವಜವು ಪೂಜಿಸಲ್ಪಟ್ಟು, ಢಾಲು, ಕತ್ತಿಗಳನ್ನು ಹಿಡಿದು ಆತ್ಯೊಬ್ಬರು ಇತ್ಯೊಬ್ಬರು ನಿಂತುಕೊಂಡು ರಾಷ್ಟ್ರಧ್ವಜವನ್ನು ರಕ್ಷಿಸಲು ನಿಂತಿದ್ದಾರೆ. ಎಂತಹ ಗಂಭೀರ ದೃಶ್ಯವಿದು. ಸ್ವಾತಂತ್ರ್ಯೋತ್ಸವದ ಮಹತ್ವವನ್ನು ಶಾಲೆಯ ಮಕ್ಕಳಿಗೂ, ಊರ ಜನರಿಗೂ ತಿಳಿಸಿ ಹೇಳಲಾಯಿತು. ವಿದ್ಯಾರ್ಥಿ – ವಿದ್ಯಾರ್ಥಿನಿಯರು ಸಂಭಾಷಣೆ, ಪ್ರಹಸನ, ಚಿಕ್ಕ ನಾಟಕ, ನೃತ್ಯ ಮುಂತಾದ ವಿವಿಧ ಏನೋದಾವಳಿಗಳನ್ನು ಮಾಡಿ ಸಭಿಕರನ್ನೆಲ್ಲ ತಣಿಸಿದರು. ಗ್ರಾಮಪಂಚಾಯಿತಿಯವರು ಕೊಟ್ಟ ಪಾಟಿ, ಪುಸ್ತಕ, ಉಪಕರಣಗಳನ್ನು ಬಡ ಮಕ್ಕಳಿಗೆ ಹಂಚಲಾಯಿತು. ಮಕ್ಕಳು ಆನಂದಿತರಾದರು.

ಮತ್ತೊಂದು ಚಿತ್ರ * * * * * *

(ಉ) ಉತ್ಸವದ ಚಟುವಟಿಕೆಗಳನ್ನು ಅಲ್ಲಲ್ಲಿ ನೋಡಿಕೊಂಡು ಮ. ೨ ಘಂಟೆಗೆ ಹಬ್ಬದೂಟ ಮಾಡಿಕೊಂಡು ವಿಶ್ರಾಂತಿಗಾಗಿ ಹಾತೊರೆಯುತ್ತಿದ್ದೆ.

"ಸಾಹೇಬರು ಮನೆಯಲ್ಲಿರುವರೇ ?"

"ಏಕೆ ?"

"ನಾವು H....ಯವರು. ಸಾಹೇಬರಿಗೆ ತಿಳಿಸಿರಿ"

"ಬರ್ರಿ. ಬಂದ ಕಾರಣವೇನು ?"

"ಏನ್ರಿ. ಬಹಳ ದಣಿದಂತೆ ಕಾಣುವದಲ್ಲ ?"

"ಹೌದು, ಹೌದು. ಆನಂದದ ದಣಿವು. ಈ ದಣಿವು ದಣಿವಲ್ಲ. ಇರಲಿ. ನೀವು ಬಂದ ಕಾರಣವೇನು ? ಇಂದು ಸ್ವಾತಂತ್ರ್ಯ ದಿನದ ಹಬ್ಬವನ್ನು ಆಚರಿಸಿದಿರಾ?"

"T ಯವರನ್ನು M ಕ್ಕೆ ವರ್ಗಮಾಡುವ ವಿಚಾರವೇನಾಯಿತು ?"

"ಆ ವಿಚಾರ ಇವತ್ತು ಯಾಕೆ ? ಬಿಡಿರಿ."

"ಇಲ್ಲ, ಇಲ್ಲ; ನಮ್ಮೂರಿಂದ ೩–೪ ಶಿಕ್ಷಕರಿಗೆ ವರ್ಗವಾಗಿದೆ. ಈಗ T....ಯವರನ್ನೂ ವರ್ಗ ಮಾಡಿ ಅಂತಾ ಹೇಳಲಿಕ್ಕೆ ಬಂದಿದ್ದೇನೆ."

"T....ಯವರೇ ಏಕೆ ಹೇಳಬಾರದಿತ್ತು ? ನೀವೇ ಬಂದಿರುವಿರಿ ?"

"T....ಯವರೇ ನನ್ನನ್ನು ಕಳಿಸಿಕೊಟ್ಟಿದ್ದಾರೆ. ಧಾರವಾಡದಲ್ಲಿ ಸ್ವಾತಂತ್ರ್ಯೋತ್ಸವವನ್ನೂ ನೋಡಿದಂತಾಯಿತು; ತಮ್ಮನ್ನು T....ಯವರ ವರ್ಗದ ಬಗ್ಗೆ ಕೇಳಿದಂತಾಯಿತು ಅಂತಾ ಬಂದೆನು."

"ಸಾಧ್ಯವಿಲ್ಲದ ಮಾತು ಹೇಳುವಿರಲ್ಲ. ಈ ವಿಷಯವನ್ನು T....ಯವರಿಗೆ ಈಗಾಗಲೇ ತಿಳಿಸಿ ಹೇಳಿಯೂ ಆಯಿತು. ಮತ್ತು ಅವರ ವಿಚಾರವೇಕೆ? ಶಾಲೆಯ ಹಿತದ ದೃಷ್ಟಿಯಿಂದ ಶಿಕ್ಷಕರು ಹುಡಿಯಬೇಕಲ್ಲವೇ"

"ಶಾಲೆಯ ಹಿತವನ್ನು ತಕ್ಕೊಂಡು ಮಾಡುವದೇನು ನಾವು ಬಂದ ಕೆಲಸವೆಂದರೆ T....ಯವರಿಗೆ ವರ್ಗವಾಗುವ ಬಗ್ಗೆ. ಆಷ್ಟಾದರೆ ನಮ್ಮ ಕೆಲಸವಾಯಿತು."

(ಊ) ಈ ಮಹಾಶಯರನ್ನು ಬೀಳ್ಕೊಟ್ಟು ೫ ನಿಮಿಷಗಳಾಗಿರಬಹುದು. ಮತ್ತೊಬ್ಬರ ಕರೆ ಬಂತು

"S....ಶಾಲೆಯ ಮಾಸ್ತರರು ಬಂದಿದ್ದಾರೆಂದು ತಿಳಿಸಿರಿ"

"ಯಾಕೆ, ನೀವು ಈಗ ಬಂದ ವಿಷಯವೇನು? ಸ್ವಾತಂತ್ರ್ಯ ದಿನವನ್ನು ಆಚರಿಸಿದಿರಷ್ಟೇ?"

"ನಮ್ಮ ಶಾಲೆಯ ಒಂದು ವಿಷಯದ ವಿಚಾರಕ್ಕೆ ಬಂದಿದ್ದೇನೆ. ಇಲ್ಲಿ ನಿಂತಿರುವ H....ಶಿಕ್ಷಕರನ್ನು ನನ್ನೂರಿಗೆ ವರ್ಗ ಮಾಡಬೇಕು."

"ಅವರಿಗೆ ನಿನ್ನೆಯೇ ಈ ಬಗ್ಗೆ ತಿಳಿಸಿರುವೆನಲ್ಲ! ಮತ್ತೇಕೆ ಈಗ ಆ ವಿಷಯ?"

"ಆದಾಗ್ಯೂ ಮತ್ತೆ ನಾನು ಹೇಳಲಿಕ್ಕೆ ಅವರನ್ನು ಕರಕೊಂಡು ಬಂದಿದ್ದೇನೆ."

"ಪುನಃ ಪುನಃ ಅದೇ ವಿಷಯವನ್ನು ಹೇಳುವದರಲ್ಲಿ ಏನಿದೆ? ಹೀಗೆ ನೀವು ಹೇಳುವದಾದರೆ ನಿಮ್ಮ ಈ ವಿಷಯವನ್ನು ವಿಚಾರಕ್ಕೇ ನಾನು ತಕ್ಕೊಳ್ಳುವದಿಲ್ಲ. ದಯಮಾಡಿ ಸಾಗಿರಿ. ನನಗೆ ಈಗ ವಿಶ್ರಾಂತಿಯು ಅವಶ್ಯ ಬೇಕಾಗಿದೆ."

ಇಷ್ಟು ಅಂದದ್ದೇ ತಡ. ನಿಂತಿರುವ H....ಶಿಕ್ಷಕರು ಧೊಪ್ಪನೆ ನೆಲಕ್ಕೆ ಬಿದ್ದು ಕಣ್ಣು ಮೇಲೆ ಕೆಳಗೆ ಮಾಡಹತ್ತಿದರು. ಅಲಾ! ಇದೇನು!! ನಾನೇಕೆ ಇವರಿಗೆ ಹೀಗೆ ಅಂದೆನು. ವಿಶ್ರಾಂತಿ ಬೇಕೆಂದು ಹೆಂಬಲಿಸಿದಾಗ ಅವಿಶ್ರಾಂತಿಯು ಸಿಕ್ಕಿತಲ್ಲ ಎಂದು ಒಂದು ನಿಮಿಷ ವಿಚಾರಿಸಿದೆನು. ಆಗಿಂದಾಗಲೇ ಶ್ರೀ H....ರವರ ತಲೆಗೆ ನೀರು ಬಡಿದೆನು. "ಆರಾಮ ಆಯಿತೇ? ಹೀಗೇಕೆ ಮಾಡುವಿರಿ ಗುರುಗಳೇ? ತಕ್ಕೊಳ್ಳಿರಿ, ಕಾಫಿ ಕುಡಿಯಿರಿ."

ಕಾಫಿ ಕುಡಿಯುತ್ತ, "ಹಾ, ಹಾ .... ಹಾಯ್ ಹಾಯ್ ನನಗೆ ವರ್ಗವಾಗಲಿಲ್ಲವಲ್ಲ .... ನಾನೇನು ಮಾಡಲಿ?"

"ಸ್ವಾಮಿ, ನಿಮಗೆ ವರ್ಗವಾಗಿದೆ. ಇವತ್ತೇ ಅಲ್ಲಿ ಹಾಜರ ಆಗಿರಿ. ಇವತ್ತು ಸ್ವಾತಂತ್ರ್ಯ ದಿನದ ಬಿಡುವಿದೆ. ನಾಳಿನ ದಿನವೇ ಕಜೇರಿಗೆ ಹೋಗಿ ನಿಮಗೆ ವರ್ಗದ ಅಪ್ಪಣೆ ಕಳಿಸುವೆ. ಶಾಂತರಾಗಿರಿ; ಸಮಾಧಾನ ತಾಳಿಕೊಳ್ಳಿರಿ. ಈಗ ಸಮಾಧಾನವಾಗಿದೆಯಲ್ಲವೇ? ಶಾಂತರಾಗಿ ಸಾಗಿರಿ."

(೩) ಮೇಲಿನ ಪ್ರಸಂಗವನ್ನು ಪ್ರಸಂಗಾವಧಾನದಿಂದ ದಾಟಿ, "ಇದೇನು ಇಂದು ಒಂದರ ಹಿಂದೆ ಒಂದು ಸಮಸ್ಯೆ ಬಂತಲ್ಲ!" ಎಂದು ಏನೇನೋ ವಿಚಾರಗಳು ತಲೆಯಲ್ಲಿ ಒಂದರ ಹಿಂದೆ ಒಂದು ಅಲೆದಾಡತೊಡಗಿದವು. ರಾತ್ರಿ ೯ ಘಂಟೆ ಸಮೀಪಿಸಿತು. "ಕಟ್ ಕಟ್" ಎಂದು ಬಾಗಿಲ ತಟ್ಟುವ ಸಪ್ಪಳವಾಯಿತು.

"ಯಾರವರು?"

"ನಾವು ಶಿಕ್ಷಕರು M....ಮತ್ತು C....ಹಳ್ಳಿಗಳಿಂದ ಬಂದಿರುವೆವು"

"ಇಂದು ಹಬ್ಬವಲ್ಲವೇ. ಸ್ವಾತಂತ್ರ್ಯ ದಿನವನ್ನು ಆಚರಿಸಿದಿರಾ?"

"ನಮಗೆ ವರ್ಗವಾಗಿದೆ. ನಮ್ಮ ವರ್ಗವನ್ನು ದಯವಿಟ್ಟು ರಹಿತಪಡಿಸಬೇಕಾಗಿ ಬೇಡುವೆವು."

"ಈಗ ಇಷ್ಟೊಂದು ರಾತ್ರಿಯಲ್ಲಿ ಏಕೆ ಬಂದಿರಿ? ಈ ದಿನ ಈ ವಿಷಯವೇಕೆ? ಇದು ತರವಲ್ಲ. ಏನು ಗುರುಗಳೇ, ನಿಮಗೆ ಎಷ್ಟು ಅನುಕೂಲಮಾಡಿಕೊಟ್ಟರೂ ತೀರುವದಿಲ್ಲ. ಇಷ್ಟು ಹೊತ್ತಿನ ವರೆಗೆ ನಿಮ್ಮಂಥ ಶಿಕ್ಷಕರೊಬ್ಬರಿಬ್ಬರನ್ನು ಸಮಾಧಾನಮಾಡಿ ಕಳಿಸಿ ಸಾಕಾಗಿ ಸುಮ್ಮನೆ ಕುಳಿತಿದ್ದೇನೆ. ಒಬ್ಬರ ತಲೆಗೆ ನೀರು ಬಡಿದು ಶಾಂತ ಮಾಡುವ ಪ್ರಸಂಗವೂ ಬಂತು. ನಿಮ್ಮ ಕಾಲಿಗೆ ನೀರು ಹಾಕಲೇ?"

ಒಬ್ಬ ಶಿಕ್ಷಕರಿಗೆ ನನ್ನ ಈ ಮಾತಿನಿಂಗ ಅದೇನೋ ಕಳವಳವಾಯಿತೆಂದು ಕಾಣುತ್ತದೆ.

"ಸಾಹೇಬರೇ, ನಿಮಗೆ ನಾವು ತ್ರಾಸು ಕೊಟ್ಟಂತಾಯಿತು. ದಯವಿಟ್ಟು ಕ್ಷಮಿಸಬೇಕು. ನಿಮಗೆ ಈಗ ಬಹಳ ತ್ರಾಸಾದಂತೆ ಕಾಣುವದು. ನೀವು ದೊಡ್ಡವರು, ದಯಾವಂತರು. ಶಿಕ್ಷಕರ ಅನಾನುಕೂಲತೆಗಳ ನಿವಾರಣೆಗಾಗಿ ಎಷ್ಟೊಂದು ದುಡಿಯುತ್ತಿರುವಿರೆಂಬುದು ನಮಗೆ ಗೊತ್ತಿದೆ, ನಮ್ಮಂಥ ದೀನ ಮನುಷ್ಯರಿಗೆ ಹೀಗೆ ಅನ್ನಬೇಡಿರಿ. ನಮ್ಮ ತಪ್ಪಾಯಿತು. ನಿಮ್ಮ ಕಾಲು ಹಿಡಿಯುತ್ತೇನೆ. ನಾಳೆ ನಿಮ್ಮನ್ನು ಕಾಣುವೆವು" ಎನ್ನುತ್ತ ಮೆಲ್ಲನೆ ಹೊಸ್ತಿಲ ದಾಟಿ ಮುಂಬೆ ಸಾಗಿದರು.

ಇಷ್ಟಾಗುವದರೊಳಗಾಗಿ ರಾತ್ರಿ ಸುಮಾರು ೧೧ ಘಂಟೆಯಾಗಿತ್ತು. ಮಕ್ಕಳು ಸ್ವಾತಂತ್ರ್ಯೋತ್ಸವದ ದಣಿವಿನಿಂದ ಆಗಲೇ ನಿದ್ದೆ ಹೋಗಿದ್ದರು. ನಾನೂ ಆ....ಈ....ದಣಿವಿನಿಂದ ವಿಶ್ರಾಂತಿಗಾಗಿ ತೆರಳಿದೆನು.

ಡಾಕ್ಟರ ಸರ್ವಪಲ್ಲಿ ರಾಧಾಕೃಷ್ಣನ್

ಲೇಖಕರು:—ಶ್ರೀಯುತ ಶಿಂತ್ರಿ ಬಸಪ್ಪನವರು. ಬಿ. ಎ. ಖಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ.

ಮೊದಲ ಮಾತು.

ಜಗದ್ವಂದ್ಯ ವಿಭೂತಿಗಳು ಹಿಂದ ಮಾತೆಯ ಉದರದಲ್ಲಿ ಆಗಾಗ ಜನಿಸಿದುದು ಭಾರತೀಯರೆಲ್ಲರ ಪುಣ್ಯವೇ ಸೈ. ಈ ಪರಂಪರೆಯು ಎಂದಿನಿಂದಲೋ ಇಂದಿನ ವರೆಗೆ ನಡೆದು ಬಂದಿದೆ. ಬುದ್ಧ, ಬಸವ, ಗಾಂಧೀಯವರಂತಹ ವಿಭೂತಿಗಳು ತಮ್ಮಲ್ಲಿ ಎಂತಹ ಕ್ರಿಯಾತ್ಮಕ ಶಕ್ತಿಯಿತ್ತೆಂಬುದನ್ನು ತಮ್ಮ ನಡೆ-ನುಡಿಗಳಿಂದ ಭಾರತಕ್ಕೇ ಏಕೆ, ಇಡಿಯ ಜಗತ್ತಿಗೆ ತೋರ್ಪಡಿಸಿದ್ದಾರೆ. ತಾವು ಒಡನುಡಿದ ವೇದಾಂತ-ತತ್ವಜ್ಞಾನಗಳನ್ನು ತಮ್ಮ ನಡೆವಳಿಗಳಲ್ಲಿ ಅಳವಡಿಸಿಕೊಂಡಿದ್ದರು. ಆದುದರಿಂದ, ಇಡಿಯ ಜಗತ್ತಿನ ಜನರು ಅವರಿಗೆ ತಲೆವಾಗಿ ಮನ್ನಣೆಯನ್ನೀಯುತ್ತ ಬಂದಿದ್ದಾರೆ ಮತ್ತು ಮುಂದಾದರೂ ಈಯುವವರಲ್ಲಿ ಸಂದೇಹವಿಲ್ಲ. ಇಂತಹ ಪರಂಪರೆಯನ್ನು ಹಿಂದ ಮಾತೆಯು ಇಂದಿನ ವರೆಗೂ ಕಾಯ್ದುಕೊಂಡು ಬಂದಿರುವಳೆಂಬುದು ನಾವೆಲ್ಲ ಭಾರತೀಯರು ಹೆಮ್ಮೆಪಡತಕ್ಕ ಮಾತಾಗಿದೆ. ಬಾಪೂಜಿಯ ಉತ್ತರಾಧಿಕಾರಿಯಾದ ಪಂಡಿತ ಜವಾಹರಲಾಲ ನೆಹರೂರವರು ಈಗ ಜಗತ್‌ಪ್ರಸಿದ್ಧ ರಾಜಕಾರಣಿಗಳಾಗಿರುವರು. ಗಾಂಧೀಜಿಯವರ ಪಟ್ಟಶಿಷ್ಯರಾದ ಬಾಬು ರಾಜೇಂದ್ರ ಪ್ರಸಾದರವರು ಒಳ್ಳೇ ಮೇಧಾವಿಗಳೂ ಧರ್ಮರಾಜನಂತೆ ಅಜಾತ ಶತ್ರುವೂ ಎಂದು ಹೆಸರಾಗಿದ್ದಾರೆ. ಮೂರನೆಯವರಾದ ಡಾಕ್ಟರ ಸರ್ವಪಲ್ಲಿ ರಾಧಾಕೃಷ್ಣನ್ನರು ಜಗದ್ವಿಖ್ಯಾತ ವೇದಾಂತಿಗಳೂ ತತ್ವಜ್ಞಾನಿಗಳೂ ಆಗಿದ್ದಾರೆ. ಈ ರತ್ನತ್ರಯಗಳು ಈಗ ಭಾರತದ ಕೀರ್ತಿಯನ್ನು ಜಗತ್ತಿನ ತುಂಬೆಲ್ಲ ಬೆಳಗುತ್ತಲಿವೆ ವೇದಾಂತ ತತ್ವಜ್ಞಾನಗಳ ಬಗೆಗೆ ನಮ್ಮ ದೇಶವು ಎಂದಿನಿಂದಲೋ ಪ್ರಸಿದ್ಧಿಯನ್ನು ಪಡೆದಿದೆ. ನಮ್ಮ ದೇಶದ ಇತಿಹಾಸವನ್ನು ತಕ್ಕೊಳ್ಳಿರಿ. ಆರ್ಯರ ಕಾಲದಿಂದ ಮಧ್ಯ ಯುಗದ ವರೆಗಿನ ಇತಿಹಾಸವೆಂದರೆ ವೇದಾಂತಿಗಳ ಮತ್ತು ತತ್ವಜ್ಞಾನಿಗಳ ಚರಿತ್ರೆಗಳೇ ಆಗಿವೆಯನ್ನಲು ಸಂದೇಹವೀನಿದೆ? ಯಾಕಂದರೆ, ಆಗಿನ ಕಾಲದ ಐತಿಹಾಸಿಕ ಪುರುಷರೆಂದರೆ ಬುದ್ಧ, ಶಂಕರಾಚಾರ್ಯ, ಬಸವೇಶ್ವರ, ಮಧ್ವಾಚಾರ್ಯ, ರಾಮಾನುಜಾಚಾರ್ಯ, ತುಕಾರಾಮ, ರಾಮದಾಸ ಮೊದಲಾದ ವೇದಾಂತಿ-ತತ್ವಜ್ಞಾನಿಗಳಲ್ಲವೇ? ಭಾರತದ ಇತಿಹಾಸದಲ್ಲಿ ಅವರಿಗೆ ಹೆಚ್ಚಿನ ಸ್ಥಾನ ದೊರೆತಿದೆ. ಇಂತಹ ಪರಂಪರೆಯುಳ್ಳ ಭಾರತಕ್ಕೆ ಈಗೊಬ್ಬ ವೇದಾಂತಿಗಳೂ ತತ್ವಜ್ಞಾನಿಗಳೂ ದೊರೆತಿದ್ದಾರೆ. ಅವರೇ ಡಾಕ್ಟರ ಸರ್ವಪಲ್ಲಿ ರಾಧಾಕೃಷ್ಣನ್ನರು. ಜಗದ್ವಂದ್ಯ ವೇದಾಂತಿಗಳೂ ತತ್ವಜ್ಞಾನಿಗಳೂ ಆದಂಥ ಬಸವಣ್ಣನವರು ಬಿಜ್ಜಳನ ಮುಖ್ಯಮಂತ್ರಿಯ ಪದಕ್ಕೆ ಆಯ್ಕೆಯನ್ನು ಹೊಂದಿದಂತೆ ಈ ಕಾಲದ ಹೆಸರಾದ ವೇದಾಂತಿಗಳೂ ತತ್ವಜ್ಞಾನಿಗಳೂ ಆದಂಥ ರಾಧಾಕೃಷ್ಣನ್ನರವರು ಮೊನ್ನೆ ಮೊನ್ನೆ ಭಾರತದ ಉಪಾಧ್ಯಕ್ಷ ಸ್ಥಳಕ್ಕೆ ಆಯ್ಕೆಯನ್ನು ಅವಿರೋಧವಾಗಿ ಹೊಂದಿದ್ದಾರೆ.

ಬಾಲ್ಯ ಮತ್ತು ಶಿಕ್ಷಣ.

ರಾಧಾಕೃಷ್ಣನ್ನರು ಸರ್ವಪಲ್ಲಿ ಎಂಬ ಅಡ್ಡಹೆಸರಿನದೊಂದು ಮಧ್ಯಮ ವರ್ಗದ ಮನೆತನದಲ್ಲಿ ೧೮೮೮ನೆಯ ಇಸವಿಯಲ್ಲಿ ಜನಿಸಿದರು. ಇವರ ಜನ್ಮಸ್ಥಳವಾದ ತಿರುಥನಿ, ಎಂಬ ಗ್ರಾಮವು ಮದ್ರಾಸ ಪಟ್ಟಣದಿಂದ ವಾಯವ್ಯಕ್ಕೆ ನಾಲ್ವತ್ತು ಮೈಲು ದೂರದಲ್ಲಿದೆ. ಇವರು ಮನೆತನದಿಂದ ಬಡವರಾದರೂ ಎಮ್.ಎ. ಪರೀಕ್ಷೆಯ ವರೆಗೆ ತಮ್ಮ ಸ್ವಂತ ಪರಿಶ್ರಮದಿಂದ ಕಲಿತರು. ಎಮ್.ಎ.ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದಾಗ ಅವರ ವಯಸ್ಸು ಸುಮಾರು ಇಪ್ಪತ್ತೊಂದು ವರುಷಗಳಾಗಿರಬಹುದು.

ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆ.

ಎಮ್.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಕೂಡಲೆ ಇವರು ಮದ್ರಾಸ ಪ್ರೆಸಿಡೆನ್ಸಿ ಕಾಲೇಜದಲ್ಲಿ ಪ್ರಾಧ್ಯಾಪಕ (professor) ರಾದರು. ಅಲ್ಲಿ ಏಳೆಂಟು ವರುಷ ಕೆಲಸ ಮಾಡಿದ ಬಳಿಕ ಮೈಸೂರ ವಿಶ್ವವಿದ್ಯಾಲಯದಲ್ಲಿ ತತ್ವಜ್ಞಾನ (philosophy)ದ ಪ್ರಾಧ್ಯಾಪಕರೆಂದು ನೇಮಕವನ್ನು ಹೊಂದಿದರು. ಇಂಗ್ಲಂಡದ ವಿಶ್ವವಿದ್ಯಾಲಯಗಳು ಅವರ ಆಗಾಧವಾದ ವಿದ್ವತ್ತಿಗೆ ಮೆಚ್ಚಿ ಇವರನ್ನು ವಿಲಾಯತಿಗೆ ಪ್ರೇಮಾದರದಿಂದ ಬರಮಾಡಿಕೊಂಡವು. ೧೯೩೬ರಲ್ಲಿ ಆಕ್ಸಫರ್ಡದಲ್ಲಿ, ೧೯೨೯ರಲ್ಲಿ ಮ್ಯಾಂಚೆಸ್ಟರ ಮತ್ತು ಲಂಡನ್ ವಿಶ್ವವಿದ್ಯಾಲಯಗಳಲ್ಲಿ ಎಲ್ಲರು ತಲೆದೂಗುವಂತೆ ಉಪನ್ಯಾಸ ಗಳನ್ನಿತ್ತರು. ಅಲ್ಲಿಂದ ಸ್ವದೇಶಕ್ಕೆ ಮರಳಿದ ಬಳಿಕ ೧೯೩೦ರಿಂದ ೧೯೩೬ರ ವರೆಗೆ ಅಂದರೆ ಐದು ವರುಷಗಳ ವರೆಗೆ ಆಂಧ್ರ ವಿಶ್ವವಿದ್ಯಾಲಯದ ಉಪಕುಲಪತಿ (Vice-Chancellor)ಗಳಾಗಿ ಕೆಲಸ ಮಾಡಿದರು. ಆ ಮೇಲೆ ಕೆಲ ಕಾಲ ಬನಾರಸ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಕೆಲಸ ಮಾಡಿದರು. ಹೀಗಾಗಿ ವಿಶ್ವವಿದ್ಯಾಲಯಗಳೆಲ್ಲ ಇವರನ್ನು 'ನಮ್ಮಲ್ಲಿ ಬನ್ನಿರಿ, ನಮ್ಮಲ್ಲಿ ಬನ್ನಿರಿ' ಎಂದು ಕಚ್ಚಾಡಿದಂತೆ ಮಾಡಿದರು. ರಾಷ್ಟ್ರದ ಜೀವನವನ್ನು ಸುಖಮಯವನ್ನಾಗಿ ಮಾಡುವದೇ ಶಿಕ್ಷಣದ ಧ್ಯೇಯವೆಂದು ಇವರು ಮೇಲಿಂದ ಮೇಲೆ ಸಾರುತ್ತಿದ್ದರು. ಮಹಾತ್ಮಾಜಿಯವರ ಅಭಿಪ್ರಾಯವಾದರೂ ಇದೇ ಆಗಿತ್ತು. ಈ ಸದುದ್ದೇಶವನ್ನಿಟ್ಟುಕೊಂಡೇ ಪೂಜ್ಯ ಬಾಪೂಜಿಯವರು ಮೂಲ ಶಿಕ್ಷಣವನ್ನು ಪ್ರಾರಂಭಿಸಿದರಲ್ಲವೇ? ನಮ್ಮ ರಾಷ್ಟ್ರದ ಮಕ್ಕಳನ್ನೆಲ್ಲ ಕಾರ್ಯಕುಶಲರನ್ನಾಗಿಯೂ ಸುಸ್ವಭಾವಿಗಳನ್ನಾಗಿಯೂ ವಿಜ್ಞಾನಿಗಳನ್ನಾಗಿಯೂ ರೂಪುಗೊಳಿಸುವದು ಈಗಿನ ನಮ್ಮ ಶಿಕ್ಷಣದ ಎದುರಿಗಿರುವ ಬಹು ದೊಡ್ಡ ಸಮಸ್ಯೆಯಾಗಿದೆಯೆಂದು ಇವರ ಮತವಿದೆ. ವಿಶ್ವವಿದ್ಯಾಲಯಗಳಲ್ಲಿ ನಮ್ಮ ರಾಷ್ಟ್ರದ ತರುಣ-ತರುಣಿಯರಿಗೆ ಲಭಿಸುವ ಶಿಕ್ಷಣದಲ್ಲಿ ಸುಧಾರಣೆಗಳನ್ನು ಮಾಡಲು ಅವಿಶ್ರಾಂತವಾಗಿ ಹೆಣಗಾಡಿದ್ದಾರೆ. ವಿಶ್ವವಿದ್ಯಾಲಯಗಳ ಶಿಕ್ಷಣ ಕ್ರಮಗಳನ್ನೆಲ್ಲ ಪರಿಶೀಲಿಸಿ ಅವುಗಳಲ್ಲಿ ಯಾವ ಯಾವ ತಿದ್ದುಪಡೆಗಳನ್ನು ಮಾಡಬೇಕೆಂಬ ಬಗೆಗೆ ವರದಿಯೊಂದನ್ನೊಪ್ಪಿಸಲು ಇವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದು ನಮ್ಮ ಸರಕಾರದವರಿಂದ ನಿಯಮಿಸಲ್ಪಟ್ಟಿತ್ತಷ್ಟೇ. ಆ ಸಮಿತಿಯ ಅಧ್ಯಕ್ಷಸ್ಥಾನದಿಂದ ಮಹತ್ವಪೂರ್ಣವಾದ ಸೂಚನೆಗಳಿಂದೊಡಗೂಡಿದ ವರದಿಯೊಂದನ್ನು ಸರಕಾರಕ್ಕೆ ಒಪ್ಪಿಸಿದ್ದಾರೆ.

ರಾಜಕೀಯ ಕ್ಷೇತ್ರದಲ್ಲಿ ಸಗಿದ ಸೇವೆ.

ಶಿಕ್ಷಣ ಕ್ಷೇತ್ರದಲ್ಲಿ ಅವರು ಸಲ್ಲಿಸಿದ ಸೇವೆಯು ಅಪಾರವಾದುದಂತೆ, ರಾಜಕೀಯ ರಂಗದಲ್ಲಿಯೂ ಅವರಿಂದ ಅರ್ಪಿಸಲ್ಪಟ್ಟ ಸೇವೆಯು ಅಷ್ಟಿಷ್ಟಲ್ಲ. ಭಾರತದ ಈಗಿನ ಏಕಮೇವ ವೇದಾಂತಿಗಳೂ ತತ್ವಜ್ಞಾನಿಗಳೂ ಎಂಬ ಕೀರ್ತಿಯನ್ನು ಅಂತರ್ರಾಷ್ಟ್ರೀಯ ರಂಗದಲ್ಲಿ ಗಳಿಸಿಟ್ಟುಕೊಂಡಿದ್ದಾರೆ. ಪೂರ್ವ-ಪಶ್ಚಿಮ ರಾಷ್ಟ್ರಗಳಲ್ಲಿ ಪರಸ್ಪರ ಪ್ರೇಮ-ಸಹಕಾರಗಳ ಭಾವನೆಯನ್ನುಂಟುಮಾಡಲು ಈಗಿನಂತಹ ಉದ್ವೇಗದ ಮತ್ತು ಉಲ್ಬಣಾವಸ್ಥೆಯ ಪರಿಸ್ಥಿತಿಯಲ್ಲಿ ಯಾರಿಗಾದರೂ ಶಕ್ಯವಿದ್ದರೆ ಅವರು ಡಾಕ್ಟರ ಸರ್ವಪಲ್ಲಿ ರಾಧಾಕೃಷ್ಣನ್ನರೇ ಎಂಬ ನಂಬಿಕೆಯು ಎಲ್ಲ ರಾಷ್ಟ್ರಗಳ ಮುತ್ಸದ್ದಿಗಳಲ್ಲಿ ಹುಟ್ಟಿ ದಿನದಿನಕ್ಕೆ ಬೆಳೆಯತೊಡಗಿದೆ. ಮೊನ್ನೆ ಮೊನ್ನೆ ತಮ್ಮ ರಶಿಯದ ರಾಯಭಾರಿತ್ವದ ಕೊನೆಯ ಗಳಿಗೆಯಲ್ಲಿ ಮಾರ್ಶಲ್ ಸ್ಟಾಲಿನ್ನರೊಡನೆ ಶಾಂತಿ-ಸಂಧಾನದ ಮಾತು-ಕತೆಗಳನ್ನು ನಡೆಯಿಸಿ ಜಗತ್ತಿಗೇ ಕೌತುಕವನ್ನುಂಟುಮಾಡಿದುದನ್ನು ಓದುಗರು ಮರೆತಿರಲಿಕ್ಕಿಲ್ಲ. ವಷ್ಟೇ. ಅವರು ಕೈಕೊಂಡ ಈ ಸಾಹಸವನ್ನು ನೋಡಿ ಯುಕ್ತರಾಷ್ಟ್ರಸಂಘದ ಪ್ರತಿನಿಧಿಗಳೆಲ್ಲರು ಬೆರಳು ಕಚ್ಚಿ ಇವರ ಯೋಗ್ಯತೆಯನ್ನು ಬಹಳಷ್ಟು ಮುಕ್ತಕಂಠದಿಂದ ಹೊಗಳಿದರು. ಅವರಲ್ಲಿ ಹುದುಗಿಕೊಂಡಿದ್ದ ಈ ಪ್ರತಿಭೆಯನ್ನೂ ಚಾಣಾಕ್ಷತೆಯನ್ನೂ ಮನದಂದು ರಾಷ್ಟ್ರಾಧ್ಯಕ್ಷರಾದ ಬಾಬು ರಾಜೇಂದ್ರಪ್ರಸಾದರವರೂ ಪ್ರಧಾನಾಮಾತ್ಯರಾದ ಪಂಡಿತ ಜವಾಹರಲಾಲ ನೆಹರೂರವರೂ ಅವರನ್ನು ರಶಿಯದಲ್ಲಿ ಭಾರತದ ರಾಯಭಾರಿಗಳೆಂದು ೧೯೪೯ನೆಯ ಇಸವಿ ಜುಲಾಯ ತಿಂಗಳಲ್ಲಿ ನಿಯಮಿಸಿದ್ದರು. ಭಾರತದತ್ತ ಮಾರ್ಶಲ್ ಸ್ಟಾಲಿನ್ನರ ವಕ್ರದೃಷ್ಟಿಯು ಹೊರಳಿದಾಗ ಈ ರಾಯಭಾರಿತ್ವದ ಹೊಣೆಯನ್ನು ಹೊತ್ತುಕೊಳ್ಳುವದು ಎಂತಹ ಕಷ್ಟಕರವಾದ ಕೆಲಸವೆಂಬುದನ್ನು ಓದುಗರೇ ಊಹಿಸುವದೊಳಿತು

ಇಂತಹ ಪ್ರಯಾಸದ ರಾಯಭಾರಿತ್ವವನ್ನು ತಮ್ಮ ತಲೆಯ ಮೇಲೆ ಹೊತ್ತುಕೊಂಡು ಮಾಸ್ಕೋ ಪಟ್ಟಣಕ್ಕೆ ಹೋಗಿ ಭಾರತ-ರಶಿಯಗಳ ನಡುವೆ ನಿಬಿಡವಾಗಿ ಆವರಿಸಿದ್ದ ತಪ್ಪು ತಿಳಿವಳಿಕೆಗಳನ್ನೆಲ್ಲ ಬೇರು ಸಹಿತ ಕಿತ್ತೊಗೆದು ಪರಸ್ಪರರಲ್ಲಿ ಸಖ್ಯತ್ವವನ್ನೂ ಸಹಕಾರವನ್ನೂ ಹುಟ್ಟಿಸಿ ಬೆಳೆಯಿಸುವದರಲ್ಲಿ ಅವರಿಂದ ಹೊರ ಹೊಮ್ಮಿದ ಕೈಜಳಕವು ನಿಜಕ್ಕೂ ಹೊಗಳತಕ್ಕಂಶಹದಿದೆಯೆಂಬುದರಲ್ಲಿ ಸಂದೇಹವಿದೆಯೇ? ಒಳ್ಳೇ ಆಯಕಟ್ಟಿನ ಸಮಯದಲ್ಲಿ ಅವರು ತೋರ್ಪಡಿಸಿದ ಮುತ್ಸದ್ದಿತನಕ್ಕೆ ತಲೆದೂಗಿ ಲೋಕಸಭೆ (Parliament)ಯ ಸದಸ್ಯರೂ ವಿವಿಧ ರಾಜ್ಯಗಳ ಶಾಸನಸಭೆಯ ಸದಸ್ಯರೂ ಅವರನ್ನು ರಾಷ್ಟ್ರದ ಉಪಾಧ್ಯಕ್ಷರನ್ನಾಗಿ ಚುನಾಯಿಸಿದ್ದಾರೆ. ಈ ಚುನಾವಣೆಯಲ್ಲಿ ಅವರು ಅವಿರೋಧವಾಗಿ ಆಯ್ಕೆಯನ್ನು ಹೊಂದಿರುವರೆಂಬ ಸಂಗತಿಯು ಗಮನಾರ್ಹವಾಗಿದೆ. ಈ ಉಪಾಧ್ಯಕ್ಷಪದದ ಚುನಾವಣೆಯಲ್ಲಿ ಸ್ಪರ್ಧಿಸಲು ಅವರು ತಮ್ಮ ಮಾಸ್ಕೋ ಪಟ್ಟಣದಲ್ಲಿಯ ರಾಯಭಾರಿತ್ವಕ್ಕೆ ರಾಜೀನಾಮೆಯನ್ನಿತ್ತು ಸ್ವದೇಶಕ್ಕೆ ಮರಳಿ ಬರುವ ಭಾಗ ಬಿತ್ತು.

ಭಾರತವು ಅವರ ಬಗೆಗೆ ತಳೆದ ಆಶೆ-ಆಕಾಂಕ್ಷೆಗಳು.

ಹೊಸ ಜಗತ್ತಿನ ನಿರ್ಮಾಣಕ್ಕಾಗಿ ಇಲ್ಲವೆ ಕಲ್ಯಾಣಕ್ಕಾಗಿ ಉಗಮ ಹೊಂದಿದ ಇಲ್ಲವೆ ಹೊಂದುತ್ತಿರುವ ಸಂಸ್ಥೆಗಳಾಗಲಿ ಇಲ್ಲವೆ ಕಾಯಿದೆಗಳಾಗಲಿ ಬಂಡವಲುಗಾರರ ಹಿತಕ್ಕಾಗಿಯೇ ಆಗಿವೆಯಲ್ಲದೆ ಕೂಲಿಕಾರರ ಹಿತಕ್ಕಾಗಿ ಆಗಿಲ್ಲ; ಬಲಶಾಲಿಗಳ ಬಲವನ್ನು ಹೆಚ್ಚಿಸುತ್ತಿವೆಯಲ್ಲದೆ ದುರ್ಬಲರನ್ನು ಮತ್ತಿಷ್ಟು ದುರ್ಬಲರನ್ನಾಗಿ ಮಾಡುತ್ತಿವೆ; ಸ್ಥಾನ-ಮಾನಗಳೆಲ್ಲ ಸಿರಿವಂತರಿಗೆ ಮೀಸಲಾಗಿವೆ, ಆದರೆ ಬಡವರಿಗಾಗಿ ಯಾವ ಸ್ಥಾನ-ಮಾನಗಳೂ ಇಲ್ಲ; ಮೈಮುರಿದು ದುಡಿದು ಬೆವರ ಹನಿಗಳನ್ನು ಸುರಿಸಿ ಜೀವಿಸುವಂತಹ ದರಿದ್ರರಿಗೆ ಸುದಿನಗಳಿಲ್ಲ, ಆದರೆ ಆಲಸ್ಯಜೀವನದಿಂದ ಹೊಟ್ಟೆ ಮೈ ಬಂದಂತಹ ಧನಿಕರಿಗೆ ಮಾತ್ರ ಸುದಿನಗಳಿವೆ; ಬಂಡವಲುಗಾರ-ಕೂಲಿಕಾರ, ಶ್ರೀಮಂತ-ಬಡವ, ಸಬಲ-ದುರ್ಬಲ, ಮೊದಲಾದ ವರ್ಗ-ವರ್ಗಗಳಲ್ಲಿ ನೆಲಸಿರುವ ವೈಷಮ್ಯಭಾವನೆಗಳನ್ನಳಿದು, ಎಲ್ಲರೂ ಸರಿಸಮಾನರು, ಎಲ್ಲರೂ ಸುಖ-ಶಾಂತಿಗಳನ್ನು ಸಮನಾಗಿ ಹೊಂದಬೇಕು, ~~ಸಾಗಿ ಹೊಂದಬೇಕು~~, ಜೀವನದ ಸೌಕರ್ಯಗಳು ಎಲ್ಲರಿಗೂ ಸಮನಾಗಿಯೇ ಸಿಗಬೇಕು, ಕೆಲವರಿಗೆ ಸೌಲಭ್ಯಗಳು ಹೆಚ್ಚು ಕೆಲವರಿಗೆ ಕಡಿಮೆ ಇರಕೂಡದು, ಎಂಬ ಸ್ಪಷ್ಟಾಭಿಪ್ರಾಯಗಳನ್ನು ಆಚಾರ್ಯ ವಿನೋಬಾ ಭಾವೆಯವರಂತೆ ಹೊರಹೊಮ್ಮಿಸುತ್ತಲಿದ್ದಾರೆ. ಹೊಸ ಜಗತ್ತಿನ ನಿರ್ಮಾಣವು ಕೂಲಿಕಾರರ, ದುರ್ಬಲರ, ಬಡವರ ಉದ್ಧಾರದಲ್ಲಿಯೇ ಅಡಗಿದೆಯೆಂಬ ಮಹಾಮಂತ್ರವನ್ನು ಹಗಲಿರುಳೂ ಪಠಿಸುತ್ತಲಿರುವರು. ಇಂತಹ ಉದಾರ ಸ್ವಭಾವದ, ಸತ್ವಸ್ಥ, ಸಮರ್ಥ, ಪ್ರತಿಭಾವಂತ ವ್ಯಕ್ತಿಯು ನಮ್ಮ ರಾಷ್ಟ್ರಕ್ಕೆ ಉಪಾಧ್ಯಕ್ಷರಾಗಿ ಈಗ ದೊರೆತಿದುದು ನಿಜಕ್ಕೂ ಆನಂದದ ಸಂಗತಿಯು! ಭಾರತವು ಅವರಿಂದ ಈ ದಿಶೆಯಲ್ಲಿ ಎಷ್ಟೋ ಮಹತ್ಕಾರ್ಯಗಳು ಜರುಗಬಹುದೆಂದು ಹಾರೈಸಿದೆ. ಅವರು ವಿಖ್ಯಾತ ವೇದಾಂತಿಯೂ ಆಹುದು; ಪ್ರಸಿದ್ಧ ತತ್ವಜ್ಞಾನಿಯೂ ಆಹುದು; ಚಾಣಾಕ್ಷ ಮುತ್ಸದ್ದಿಯೂ ಆಹುದು. ವೇದಾಂತಿ-ತತ್ವಜ್ಞಾನಿಗಳಿದ್ದವರು ಮುತ್ಸದ್ದಿಗಳಾಗಿರುವದಿಲ್ಲ: ಮುತ್ಸದ್ದಿಗಳಾಗಿದ್ದವರು ವೇದಾಂತಿ-ತತ್ವಜ್ಞಾನಿಗಳಾಗಿರುವದಿಲ್ಲ. ಒಂದಕ್ಕೊಂದು ವಿರೋಧವಾದ ಇವೆರಡೂ ಗುಣಗಳ ಸಮ್ಮಿಲನವು ಅವರಲ್ಲಾಗಿರುವದರಿಂದ, ಭಾರತವು ಅವರಿಂದ ಈಗಿನ ಸಂಕಟ ಕಾಲದಲ್ಲಿ ಲೋಕಕಲ್ಯಾಣಕ್ಕಾಗಿ ಮಹತ್ಕಾರ್ಯಗಳು ಜರಗುವವೆಂಬ ಆಶೆ-ಆಕಾಂಕ್ಷೆಗಳನ್ನು ತಳೆದಿದೆಯೆಂಬುದರಲ್ಲೇನಾಶ್ಚರ್ಯ? ಕೂಲಕಾರ-ಬಡವ-ದೀನ-ದರಿದ್ರರ ಸುಖ-ಶಾಂತಿಗಳ ಸಲುವಾಗಿ ಅವರು ಹೆಣಗಾಡುವರೆಂದು ಹಾರೈಸಿದೆ. ಅವರಿಗೆ ಈಗ ೬೪ ವರುಷಗಳಾಗಿವೆ. ವಯಸ್ಸಿನಿಂದ ಮುಪ್ಪಾಗಿದ್ದರೂ ಅವರಲ್ಲಿ ಮನೆಮಾಡಿಕೊಂಡಿರುವ ಕ್ರಿಯಾತ್ಮಕ ಶಕ್ತಿಯು ಮುಪ್ಪಾಗಿಲ್ಲ; ಅದು ಕುಗ್ಗದ ಹಿಗ್ಗುತ್ತ ನಡೆದಿದೆ. ಅವರ ಬಗೆಗೆ ಭಾರತೀಯರೆಲ್ಲರು ಮನದಲ್ಲಿಟ್ಟುಕೊಂಡಿರುವ ಹೆಬ್ಬಯಕೆಗಳನ್ನೆಲ್ಲ ಈಡೇರಿಸಲು ಡಾಕ್ಟರ ಸರ್ವಪಲ್ಲಿ ರಾಧಾಕೃಷ್ಣನ್ನರಿಗೆ ಹೊಸ ಹುರುಪನ್ನೂ ಹೊಸ ಹುಮ್ಮಸವನ್ನೂ ಹೊಸ ಶಕ್ತಿಯನ್ನೂ ದಯಪಾಲಿಸಲೆಂದು ಆ ದಯಾಘನನಾದ ಪರಮಾತ್ಮನನ್ನು ಪ್ರಾರ್ಥಿಸಿ ನಮಗೆ ಗೊತ್ತಿದ್ದ ಮಟ್ಟಿಗೆ ಅವರ ಈ ಅಲ್ಪ ಚರಿತ್ರವನ್ನು ಇಲ್ಲಿಗೆ ವಿರಮಿಸುತ್ತೇವೆ.

ಕೊನೆಯ ಮಾತು.

ನಮ್ಮ ಪ್ರಾಥಮಿಕ ಶಾಲೆಗಳ ಅಭ್ಯಾಸ ಪತ್ರಿಕೆಯ ಪ್ರಕಾರ ಏಳನೆಯ ಇಯತ್ತೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರು ನಮ್ಮ ರಾಷ್ಟ್ರದ ಪ್ರಚಲಿತ ಅಧ್ಯಕ್ಷರು, ಉಪಾಧ್ಯಕ್ಷರು, ಪ್ರಧಾನಾಮಾತ್ಯರು, ಮೊದಲಾದವರ ಚರಿತ್ರೆಯ ಮುಖ್ಯಾಂಶಗಳನ್ನು ಅರಿತಿರಬೇಕೆಂಬುದಿದೆ. ಈ ತಿಂಗಳ ೯ನೆಯ ದಿನಾಂಕದ 'ನವಯುಗ' ದೈನಿಕ-ವರ್ತಮಾನ ಪತ್ರದಲ್ಲಿ ಅಕಸ್ಮಾತ್ತಾಗಿ ದೊರೆತ ವಿವರಗಳನ್ನೆಲ್ಲ ಕಲೆ ಹಾಕಿ ಅಯಾ ಶಿರೋನಾಮೆಗಳಪ್ರಕಾರ ಅಚ್ಚುಕಟ್ಟಾಗಿ ಹೊಂದಿಸಿ ಶಾಲೆಯ ಮಕ್ಕಳಿಗೆ ಸಹಾಯವಾಗಲೆಂಬ ಸದುದ್ದೇಶದಿಂದ ಈ ಲೇಖನವನ್ನು ಬರೆದಿದ್ದಾಗಿದೆ. ಆದುದರಿಂದ, ಶಿಕ್ಷಕ-ಶಿಕ್ಷಕಿಯರು ಜನ್ಮಾಗಿ ಈ ಲೇಖನವನ್ನೋದಿಕೊಂಡು ತಮ್ಮ ತಮ್ಮ ಶಾಲೆಯಲ್ಲಿ ಕಲಿಯುವ ಮಕ್ಕಳಿಗೆಲ್ಲ ಇವರ ಪ್ರಾಥಮಿಕ ಲಾಭವನ್ನು ಮಾಡಿಕೊಡಬೇಕೆಂಬುದು ನಮ್ಮ ಮನವಿ.

ಜೈ ಹಿಂದ

ಸರ್ ಎಮ್. ವಿಶ್ವೇಶ್ವರಯ್ಯನವರು

ಲೇಖಕರು:— ಶ್ರೀ ಆರ್. ಎಸ್. ಪಾಟೀಲ; ಕೃಷಿ ಮಹಾವಿದ್ಯಾಲಯ, ಧಾರವಾಡ

ವಿಶ್ವೇಶ್ವರಯ್ಯನವರು ೧೮೬೧ ಸಪ್ಟೆಂಬರ ೧೫ನೆಯ ದಿವಸ ಜನಿಸಿದರು. ಅವರ ಶಿಕ್ಷಣವು ಮೈಸೂರಿನ ಸೆಂಟ್ರಲ್ ಕಾಲೇಜ ಹಾಗೂ ಪುಣೆಯ ವಿಜ್ಞಾನ ಕಾಲೇಜ ದಲ್ಲಿಯೂ ಆಯಿತು. ಈ ಕಾಲೇಜದಿಂದ ಅವರು L. C. E ಪರೀಕ್ಷೆಯನ್ನು ಮೊದಲನೇ ನಂಬರು ಪಡೆದು ಪಾಸಾದ ಮೇಲೆ ಕೇವಲ ೨೩ ವರ್ಷದವರಿದ್ದಾಗ ಪಿ. ಡಬ್ಲ್ಯೂ. ಖಾತೆಯಲ್ಲಿ ಅಸಿಸ್ಟೆಂಟ ಎಂಜನಿಯರೆಂದು ೧೮೮೪ರಲ್ಲಿ ನೇಮಕ ಹೊಂದಿದರು. ಅವರು ಒಳ್ಳೇ ಕರ್ತೃತ್ವ ಶಾಲಿಗಳೂ ಮಹತ್ವಾ ಕಾಂಕ್ಷಿಗಳೂ ಕುಶಲರೂ ಇದ್ದದರಿಂದ ಎಕ್ಸಿಕ್ಯೂಟಿವ್ ಎಂಜನಿಯರರಾಗಿಯೂ ಮುಂದೆ ಅಂದರೆ ೧೯೦೪ರಲ್ಲಿ ಸುವರಿಂಟೆಂಡಿಂಗ ಎಂಜನಿಯರರಾಗಿಯೂ ನೇಮಕ ಹೊಂದಿದರು. ಮುಂಬಯಿ ಸರಕಾರದ ನೌಕರಿಯಿಂದ ೧೯೦೮ರಲ್ಲಿ ನಿವೃತ್ತರಾದ ಮೇಲೆ ಹೈದರಾಬಾದ ನಿಜಾಮ ಸರಕಾರದವರು ಅವರನ್ನು ೧೯೦೯ರಲ್ಲಿ ಸ್ಪೆಶಲ್ ಕನ್ಸಲ್ಟಿಂಗ ಎಂಜನಿಯರರೆಂದು ನೇಮಿಸಿದರು. ಆಷ್ಟರಲ್ಲಿಯೇ ಮೈಸೂರ ಸರಕಾರದವರು ತಮ್ಮವರೇ ಆದ ಇವರ ಪ್ರತಿಭೆಯನ್ನು ಕಂಡು ಅದೇ ವರುಷ ಅವರನ್ನು ಮುಖ್ಯ ಎಂಜನಿಯರ ಹಾಗೂ ಲೋಕೋಪಯೋಗಿ ಮತ್ತು ಕಂದಾಯ ಖಾತೆಗಳ ಸೆಕ್ರಟರಿ ಎಂದು ನೇಮಿಸಿದರು. ಮುಂದೆ ೧೯೧೨ರಿಂದ ೧೯೧೮ರ ವರೆಗೆ ಮೈಸೂರ ಸಂಸ್ಥಾನದ ದಿವಾಣರಾದರು. ದಿವಾಣರಾಗಿದ್ದಾಗ ಸಂಸ್ಥಾನದಲ್ಲಿಯ ಹಳೆಯವ್ಯವಸ್ಥಿತಿಗಳನ್ನು ತೆಗೆದು ಅಭಿವೃದ್ಧಿಯ ಹೊಸ ಯೋಜನೆಗಳನ್ನು ಬಳಕೆಯಲ್ಲಿ ತರಲು ಯತ್ನಿಸಿದರು.

ದೇಶವು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಬೇಕೆಂದು ಇವರು ಹಲವಾರು ಕೆಲಸಗಳನ್ನು ಮಾಡಿದ್ದಾರೆ. ಇವರು ಬೆಂಗಳೂರಿನಲ್ಲಿ ಸೆಂಚುರಿ ಕ್ಲಬ್ಬನ್ನು ಸ್ಥಾಪಿಸಿದರು. ನಂದೀ ಬೆಟ್ಟವನ್ನು ಆರೋಗ್ಯಧಾಮವನ್ನಾಗಿ ಮಾಡಿದರು. ಜೋಗದ ಜಲಪಾತವನ್ನು ನೋಡಿ ಸಂತುಷ್ಟರಾದರಲ್ಲದೆ ಅದರಲ್ಲಿರುವ ಅದ್ಭುತ ಶಕ್ತಿಯನ್ನು ಮಾನವ ಕಲ್ಯಾಣಕ್ಕಾಗಿ ಹೇಗೆ ಉಪಯೋಗಿಸಬೇಕೆಂದು ವಿಚಾರಿಸಿ ಅಲ್ಲಿ ವಿದ್ಯು-

ಶಕ್ತಿಯ ಯೋಜನೆಯ ಬೀಜಾರೋಪಣ ಮಾಡಿದರು. ಸರ್ ವಿಶ್ವೇಶ್ವರಯ್ಯನವರು ಮೈಸೂರ ಬ್ಯಾಂಕ ಮತ್ತು ಮೈಸೂರು ವಿದ್ಯಾಲಯಗಳನ್ನು ಸ್ಥಾಪಿಸಿದರು. ಕಾವೇರಿ ತದಿಗೆ ಆಣೆಕಟ್ಟನ್ನು ಕಟ್ಟಿ ಲಕ್ಷಾಂತರ ಎಕರೆ ಭೂಮಿಗೆ ನೀರನ್ನು ಒದಗಿಸಿ ಕೊಟ್ಟು ದೇಶದ ಆಹಾರ ಹಾಗೂ ಸಂಪತ್ತಿಯನ್ನು ಹೆಚ್ಚಿಸಲಿಕ್ಕೆ ಕಾರಣರಾದರು. ಇವರು ಮೈಸೂರು ಸರ್ವತೋಮುಖವಾದ ಅಭಿವೃದ್ಧಿಯನ್ನು ಹೊಂದಬೇಕೆಂದು ವಿಚಾರಿಸಿ ಅನೇಕ ಕೈಗಾರಿಕೆ ಹಾಗೂ ಉದ್ಯೋಗಗಳನ್ನು ಪ್ರಾರಂಭಿಸಿದರು. ಭದ್ರಾವತಿಯಲ್ಲಿರುವ ಕಬ್ಬಿಣ ಕಾರಖಾನೆಯನ್ನು ಸುರುವು ಮಾಡಿದರು. ಬೆಂಗಳೂರ ಮೈಸೂರ ಪಟ್ಟಣಗಳು ಇಡೀ ಹಿಂದುಸ್ಥಾನದಲ್ಲಿ ಮಾದರಿಯ ಪಟ್ಟಣಗಳಾಡುದು ವಿಶ್ವೇಶ್ವರಯ್ಯನವರ ಸಲಹೆಗಳಿಂದ.

ಇವರ ಸೇನೆಯು ಬರೇ ಮೈಸೂರ ದೇಶಕ್ಕಷ್ಟೇ ಮೀಸಲಾಗಿರದೆ ಇಡೀ ಹಿಂದುಸ್ಥಾನಕ್ಕೂ ಲಭಿಸುತ್ತದೆ. ಮುಂಬೈ ಸರಕಾರದವರು ೧೯೨೧–೨೨ರಲ್ಲಿ ಔದ್ಯೋಗಿಕ ಹಾಗೂ ಯಾಂತ್ರಿಕ ಶಿಕ್ಷಣದ ಸಲುವಾಗಿ ಒಂದು ಸಮಿತಿಯನ್ನು ನೇಮಿಸಿ ಇವರನ್ನು ಅವರ ಕಾರ್ಯಾಧ್ಯಕ್ಷರನ್ನಾಗಿ ನೇಮಿಸಿದರು. ಹಿಂದುಸ್ಥಾನ ಸರಕಾರದವರು ೧೯೨೫ರಲ್ಲಿ ಹಿಂದುಸ್ಥಾನದ ಆರ್ಥಿಕ ವಿಚಾರಣಾ ಸಮಿತಿಯ ಅಧ್ಯಕ್ಷರನ್ನಾಗಿಯೂ ಮತ್ತು ೧೯೩೪ರಲ್ಲಿ ಮುಂಬೈ ಸರಕಾರದವರು ನೀರಾವರೀ ವಿಚಾರಣಾ ಸಮಿತಿಯ ಚೇರಮನ್‌ರನ್ನಾಗಿಯೂ ನೇಮಿಸಿದರು. ಆಯಾ ಸರಕಾರಗಳಿಗೆ ಈ ಸಮಿತಿಗಳು ಉಪಯುಕ್ತ ಸಲಹೆಗಳನ್ನು ನೀಡಿವೆ. ೧೯೪೧ರಿಂದ ಇವರು ಅಧ್ಯಕ್ಷರಿರುವರು.

ವಿಶ್ವೇಶ್ವರಯ್ಯನವರು ಇಂದಿಗೆ ೯೫ ವರ್ಷದವರಾದರೂ ಯುವಕರಂತೆ ಸದಾ ಕೆಲಸ ಮಾಡುತ್ತಾರೆ. ಅವರು ಒಳ್ಳೇ ಆರೋಗ್ಯವಂತರೂ ಇದ್ದಾರೆ. ಹಾಗೆಯೇ ಉತ್ಸಾಹಿಗಳೂ ಇದ್ದಾರೆ. ಈ ಬಗೆಯಾಗಿ ಮುಪ್ಪಿನ ವಯಸ್ಸಾದರೂ ಮುಪ್ಪು ಅವರನ್ನು ಆಕ್ರಮಿಸಿಲ್ಲ, ಶತಶತೋದ್ಯೋಗಿಗಳಾಗಿ ದುಡಿಯುತ್ತಾರೆ.

ಒಮ್ಮೆ ಅವರ ಗೆಳೆಯರೊಬ್ಬರು ಈ ನಿಮ್ಮ ನಿತ್ಯ ಹೊಸನದ ಗುಟ್ಟೇನು ಎಂದು ಕೇಳಿದರು. ಅದಕ್ಕೆ ವಿಶ್ವೇಶ್ವರಯ್ಯನವರು 'ಕೆಲಸ' ಎಂದು ಉತ್ತರ ಕೊಟ್ಟರು. ಮನುಷ್ಯನಿಗೆ ಆಹಾರ, ನಿದ್ರೆ, ಹೇಗೆ ಅವಶ್ಯಕವೋ, ಹಾಗೇ ಆಯುಷ್ಯವನ್ನು ಆರೋಗ್ಯವನ್ನು ಕಾಪಾಡಿಕೊಳ್ಳಲು ನಿರ್ದಿಷ್ಟವಾದ ಉಪಯುಕ್ತ ಕೆಲಸವೂ ಅವಶ್ಯಕ. ನೋಮಾರಿತನವೇ ಮುಪ್ಪಿಗೆ ಕಾರಣ. ಇದು ಇವರ ಮತ.

ಭಾರತೀಯರಲ್ಲಿ ಪ್ರತಿಯೊಬ್ಬರೂ ವ್ಯವಹಾರ ಜೀವನದಲ್ಲಿ ಮುಖ್ಯವಾಗಿ ನಾಲ್ಕು ನಿಯಮಗಳನ್ನು ಅನುಸರಿಸಿ ವರ್ತಿಸಬೇಕೆಂದು ಅವರ ಆಕಾಂಕ್ಷೆ.

(೧) ಪ್ರತಿಯೊಬ್ಬರೂ ಕಷ್ಟಪಟ್ಟು ಶ್ರದ್ಧೆಯಿಂದ ಕೆಲಸ ಮಾಡಬೇಕು. ದೇಶದ ಲಕ್ಷ್ಮಿಯ ಸಂಪತ್ತು ಬೆಳೆದು ನಮ್ಮ ದೇಶದ ಬಡತನವು ಹೋಗಬೇಕಾದರೆ ಪ್ರತಿಯೊಬ್ಬನೂ ದಿನಕ್ಕೆ ಎಂಬು ಘಂಟೆಗಳ ಕಾಲವಾದರೂ ಕೆಲಸ ಮಾಡಿಯೇ ತೀರಬೇಕೆಂದು ಅವರು ಒತ್ತಿ ಒತ್ತಿ ಹೇಳುತ್ತಾರೆ.

(೨) ಅಚ್ಚುಕಟ್ಟಾಗಿ ಶಿಸ್ತಿನಿಂದ ಕೆಲಸ ಮಾಡಬೇಕೆಂಬುದು ಇವರ ಎರಡನೆಯ ನೇಮ. ಅವರು ಮಾಡುವ ಪ್ರತಿಯೊಂದು ಕೆಲಸವನ್ನು ಶಿಸ್ತಿನಿಂದ ಮಾಡುತ್ತಾರೆ. ಉಡುವು, ವ್ಯಾಯಾಮ, ಊಟ, ನಿದ್ರೆ, ಕೆಲಸ, ಮುಂತಾದ ಪ್ರತಿಯೊಂದು ಕೆಲಸದಲ್ಲಿ ಕೂಡ ಅವರು ಶಿಸ್ತನ್ನು ಪಾಲಿಸುತ್ತಾರೆ. ಪ್ರತಿದಿನವೂ ತಾವು ನೆರವೇರಿಸಬೇಕಾದ ಕಾರ್ಯಗಳನ್ನೆಲ್ಲ ಮೊದಲೇ ನಿರ್ಧರಿಸಿಕೊಂಡ ಕಾರ್ಯಕ್ರಮದಂತೆ ಒಂದೊಂದಾಗಿ ಕಾಲಕಾಲಕ್ಕೆ ಸರಿಯಾಗಿ ನೆರವೇರಿಸಿ ಬಿಡುತ್ತಾರೆ.

(೩) ವಿಶ್ವೇಶ್ವರಯ್ಯನವರ ಮೂರನೆಯ ನಿಯಮವೆಂದರೆ ಕಾರ್ಯಗ್ರಸ್ತತೆ. ಪ್ರತಿಯೊಬ್ಬರೂ ಶ್ರೇಷ್ಠ ರೀತಿಯಲ್ಲಿ ವರ್ತಿಸುವ ಉತ್ಸಾಹದಿಂದ ಕೂಡಿಕೊಂಡು ತಮ್ಮ ಕೆಲಸಗಳನ್ನು ನಿಷ್ಠೆಯಿಂದಷ್ಟು ಒಳ್ಳೇ ರೀತಿಯಲ್ಲಿ ಮಾಡುತ್ತ ದಿನ ದಿನವೂ ಹೆಚ್ಚಿಚ್ಚು ಯೋಗ್ಯತಾವಂತರಾಗಬೇಕೆಂಬುದೇ ಅವರ ಆಸೆ. ಕೆಲಸವು ಎಷ್ಟೋ ಸಣ್ಣದಿದ್ದರೂ ಅದನ್ನು ಜಾಗರೂಕತೆಯಿಂದಲೂ ಕ್ರಮಬದ್ಧವಾಗಿಯೂ ಮಾಡಬೇಕೆಂದು ಅವರು ಯಾವಾಗಲೂ ಇಚ್ಛಿಸುತ್ತಾರೆಂಬ ಬಗ್ಗೆ ಒಂದು ಉದಾಹರಣೆಯನ್ನೂ ಇಲ್ಲಿ ಕೊಡಬಹುದು. ತಾವು ದಿವಾಣರಾಗಿದ್ದಾಗ ಲಕೋಟೆಯಲ್ಲಿ ಕಾಗದ ಹಾಕಿ ಅಂಟು ಹಚ್ಚುವಾಗ ಅದ ಒಳಗಿನ ಕಾಗದಕ್ಕೆ ಅಂಟಿಕೊಳ್ಳದಂತೆಯೂ ಹಾಗೂ

ಹೊರಗಿನ ಪಾಕೇಟನ್ನು ಹೊಲಸು ಮಾಡದಂತೆಯೂ ಹೇಗೆ ಹಚ್ಚಬೇಕೆಂಬುದನ್ನು ಕಛೇರಿಯ ಜನರಿಗೆ ತಾವೇ ತೋರಿಸಿಕೊಡುತ್ತಿದ್ದರು.

(೪) ಅವರ ನಾಲ್ಕನೆಯ ನಿಯಮವೆಂದರೆ:— ವಿನಯ ಸಹಿತವಾದ ಸೇವೆ ಸಲ್ಲಿಸಬೇಕು.

ಪ್ರತಿಯೊಬ್ಬರೂ ತಮ್ಮ ಸಂಗಡ ಕೆಲಸ ಮಾಡುವವರೊಡನೆ, ನೆರೆಹೊರೆಯವರೊಡನೆ ವಿನಯದಿಂದ ಸೇವಾ ಬುದ್ಧಿಯಿಂದ ಮತ್ತು ಸ್ನೇಹ ಸಂವಾದಗಳಿಂದ ವರ್ತಿಸುವದು ಅವಶ್ಯವೆಂದು ಅವರು ಸೂಚಿಸಿದ್ದಾರೆ. ಅವರು ಸ್ವತಃ ವಿನಯಧಾನರಾದ್ದಾರೆ ಇದಕ್ಕೆ ದೃಷ್ಟಾಂತವೆಂದರೆ ಒಮ್ಮೆ ಒಬ್ಬ ಗೆಳೆಯರು ಮತ್ತೊಬ್ಬರ ಪರಿಚಯವನ್ನು ವಿಶ್ವೇಶ್ವರಯ್ಯನವರಿಗೆ ಮಾಡಿಕೊಡುತ್ತಿರುವಾಗ ಅಭ್ಯಾಗತರು ನಾನು ಇವರ ಕೈಕೆಳಗೆ ಅವರು ದಿವಾಣರಾಗಿದ್ದಾಗ ಕೆಲಸ ಮಾಡಿದ್ದೇನೆಂದು ಹೇಳಿದಾಗ ವಿಶ್ವೇಶ್ವರಯ್ಯನವರು ತಟ್ಟನೆ ನನ್ನ ಕೈಕೆಳಗೆ ಕೆಲಸನಮಾಡಿದ. ಆದರೆ ಅವರು ನನಗೆ ನನ್ನ ಕೆಲಸದಲ್ಲಿ ಸಹಾಯ ಮಾಡಿದರು ಎಂದು ಉತ್ತರ ಕೊಟ್ಟರು.

ಇವರ ದೊಡ್ಡ ಗುಣಗಳಲ್ಲಿ ಇನ್ನೂ ಕೆಲವೆಂದರೆ ನಿಸ್ಪೃಹತೆ ಹಾಗೂ ಔದಾರ್ಯ. ದಿವಾಣರಾಗಿದ್ದಾಗ ಸರಕಾರೀ ಕೆಲಸದ ಮೇಲೆ ಹೋಗುವಾಗಷ್ಟೇ ಸರಕಾರೀ ಕಾರನ್ನು ಉಪಯೋಗಿಸಿ ಖಾಸಗೀ ಕೆಲಸಗಳಿಗೆ ತಮ್ಮ ಸ್ವಂತ ಕಾರನ್ನು ಉಪಯೋಗಿಸುತ್ತಿದ್ದರು. ಅದೇ ರೀತಿ ತಮ್ಮ ವಾಸಕ್ಕೆಂದು ಕೊಟ್ಟಿದ್ದ ಬಂಗಲೆಗೆ ಎಂದೂ ಬಾಡಿಗೆಯನ್ನು ಸಲ್ಲಿಸುತ್ತಿದ್ದರು. ತಾವು ಅಷ್ಟು ದೊಡ್ಡ ಹುದ್ದೆಯಲ್ಲಿದ್ದರೂ ತಮ್ಮ ಅಪೇಕ್ಷರಿಗೆ ಒಂದೂ ಸೌಕರಿಯನ್ನು ಕೊಡಲಿಲ್ಲ. ಅದಕ್ಕೆ ಬದಲಾಗಿ ತಮ್ಮ ಸಂಬಳದಲ್ಲಿಯ ಕೆಲವಂಶವನ್ನು ಜನರಿಗೆ ಹಂಚುತ್ತಿದ್ದರು.

ಇವರು ಕೆಲಸದಿಂದ ನಿವೃತ್ತರಾದ ಮೇಲೆ ಭದ್ರಾವತಿ ಕಬ್ಬಿಣ ಖಾರಕಾನೆಯ ಸ್ಥಿತಿಯನ್ನು ಉತ್ತಮಪಡಿಸುವ ಉದ್ದೇಶದಿಂದ ನಾಲ್ಕಾರು ವರುಷಕಾಲ ಜನರ ಕ್ಷೇಮಕ್ಕಾಗಿ ಮನಃರಾಗಿ ಕೆಲಸಮಾಡಿದರು. ಆಗ ಸರಕಾರದವರು ಅವರಿಗೆ ಮಂಜೂರ ಮಾಡಿದ ಸಂಬಳವು ಒಂದು ಲಕ್ಷಕ್ಕೆ ಮೇಲ್ಪಟ್ಟಿತ್ತು. ಅದನ್ನು ಅವರು ಸ್ವೀಕರಿಸಲಿಲ್ಲ ಆದರೆ ಸರಕಾರದವರು ಒತ್ತಾಯಪಡಿಸಿದ ಮೇಲೆ ಮಹಾರಾಜರ ಹೆಸರಿನಲ್ಲಿ ಜಯಚಾಮರಾಜೇಂದ್ರ ಆಕ್ಯುಪೇಶನ್ ಇನ್‌ಸ್ಟಿಟ್ಯೂಟ್ ಎಂಬ ಔದ್ಯೋಗಿಕ ಶಾಲೆಯ ಸ್ಥಾಪನೆಗಾಗಿ ಆ ಹಣವನ್ನು ದಾನಮಾಡಿದರು.

ವಿಶ್ವೇಶ್ವರಯ್ಯನವರು ಜಾತಿಪಂಥಗಳಲ್ಲಿ ತಾರತಮ್ಯವನ್ನು ಮಾಡುವದಿಲ್ಲ. ಎಲ್ಲ ಜನರನ್ನು ಸರಿಯಾಗಿ ಕಾಣುವರು. ಪ್ರತಿ ವರುಷ ಮಹಾರಾಜರ ವರ್ಧಂತಿಯ ದಿನ ಮೈಸೂರಲ್ಲಿ ನಡೆಯುತ್ತಿದ್ದ ಉಂಟೆಯ ಏರ್ಪಾಟಿನಲ್ಲಿ ಮಾರ್ಪಾಟನ್ನುಂಟುಮಾಡಿ ಎಲ್ಲ ಮತಸ್ಥರಿಗೂ ಒಂದೇ ಕಡೆಗೆ ಒಂದೇ ಕಾಲಕ್ಕೆ ಊಟವಾಗುವಂತೆ ಏರ್ಪಾಟನ್ನು ಮಾಡಿದರು.

ಹೀಗೆ ವಿಜ್ಞಾನಶಾಸ್ತ್ರ ವಿಶಾರದರೂ ಅತ್ಯುಚ್ಚ ಮಾನವೀಯ ಗುಣಗಳಿಂದ ಕೂಡಿದವರೂ, ಅನುಭವಿಗಳೂ ಆದ ವಿಶ್ವೇಶ್ವರಯ್ಯನವರು ಇನ್ನೂ ಬಹುಕಾಲ ಬಾಳಿ ಸ್ವತಂತ್ರ ಭಾರತಕ್ಕೆ ಸೇವೆಯನ್ನು ಸಲ್ಲಿಸುವಂತಾಗಲಿ.

ವಿಶೇಷ ಪ್ರಕಟನೆ!

ಇಂದೇ ಸಂಗ್ರಹಿಸಿರಿ! ವಿದ್ಯಾರ್ಥಿ, ಶಿಕ್ಷಕರಿಗೆ ಅತ್ಯುಪಯುಕ್ತ!

೧. **ಮೂಲ ಶಿಕ್ಷಣ ವಿೀ ಮಾಂತೆ** ಲೇಖಕರು:—ಶ್ರೀ. ಹ. ಗ. ಜೋಶಿ. ಬೆಲೆ ೧–೧೨–೦

(ಮಾನ್ಯ ದಿವಾಕರರ ಮುನ್ನುಡಿ; ಮೂಲ ಶಿಕ್ಷಣದ ಪ್ರೇಮಿಗಳು ಇದನ್ನು ಅವಶ್ಯ ಸಂಗ್ರಹಿಸಲೇ ಬೇಕು)

೨. **ಹಿಂದೀ ಶಿಕ್ಷಣ ಮಾಲೆ–೧** ಲೇಖಕರು:–ಶ್ರೀ. ಗುರುನಾಥ ಜೋಶಿ. ಬೆಲೆ ೦–೧೪–೦

(ಮನೆಯಲ್ಲಿಯೇ ಶಿಕ್ಷಕರ ಸಹಾಯವಿಲ್ಲದೆ ಹಿಂದೀ ಕಲೆಯಲಿಕ್ಕೆ ಉತ್ತಮ)

ಇವಲ್ಲದೆ ಕಾದಂಬರಿಗಳು ಎನ್ನೆ ವಿಕಾಂಕ (೨—೦—೦) ಭೂಮಿಗಿಳಿದ ತಾರೆ (೧—೮—೦)

ಮಕ್ಕಳಿಗೆ:—ಚುಟುಕ (೦—೮—೦) ದಿವ್ಯ ಕಥೆಗಳು (೦—೮—೦)

ಪ್ರ. ಮತ್ತು ಮಾರಾಟಗಾರರು:-ಹಿಂದವಾಣಿ ಮುದ್ರಣಾಲಯ, ಗಾಂಧಿಚೌಕ, ಧಾರವಾಡ.

ಮುಂಬಯಿ ಸರಕಾರದ ಕನ್ನಡ ಸ್ಕೂಲ್‌ಬುಕ್ ಕಮೀಟಿಯಿಂದ ಮಂಜೂರಾದ ಪುಸ್ತಕಗಳು

ಪುಸ್ತಕದ ಹೆಸರು.	ಲೇಖಕರು	ಪ್ರಕಾಶಕರು ಮತ್ತು ಮಾರಾಟಗಾರರು.	ಬೆಲೆ	ಏತಕ್ಕಾಗಿ ಮಂಜೂರಾಗಿವೆ.
2	3	4	5	6
ಅಭಿನವ ಸಾಮಾನ್ಯವಿಜ್ಞಾನ	ಶ್ರೀ. ನರವನೆ ಮತ್ತು ಬಾವಡೀಕರ	ಮ್ಯಾಕ್‌ಮಿಲನ್ ಕಂಪನಿ, ಮುಂಬಯಿ	೦–೧೪–೦	ಪ್ರಾ. ಶಾಲೆಗಳ ೫ನೆಯತ್ತೆಗೆ ಪಠ್ಯ
ಸಂಸ್ಕೃತ ಭಾಷಾ ಪ್ರದೀಪ—೧	ಶ್ರೀ. ಎಸ್. ಆರ್. ಭಟ್	,,	೨–೨–೦	ಮಾಧ್ಯಮಿಕ ಶಾಲೆಗಳ ೬ನೆಯ ವರ್ಗಕ್ಕೆ ಪಠ್ಯ
ಸಂಸ್ಕೃತ ಭಾಷಾ ಪ್ರದೀಪ—೨	ಶ್ರೀ. ಎಸ್. ಆರ್. ಭಟ್ ಮತ್ತು ಎಸ್. ಎಲ್. ಬಾಪಟ	,,	೨–೧೨–೦	,, ೭ನೆಯ ವರ್ಗಕ್ಕೆ ಪಠ್ಯ
ನಮ್ಮ ಜಗತ್ತು—೧	ಶ್ರೀ. ಪರುಳೆಕರ ಮತ್ತು ಸಾನೆ	,,	೫–೦–೦	,, ೧೦, ೧೧ನೆಯ ವರ್ಗಕ್ಕೆ ಪಠ್ಯ
ನಮ್ಮ ವಿಶ್ವ—೩	ಶ್ರೀ. ಜೋಶಿ ಮತ್ತು ದೇಶಪಾಂಡೆ	,,	೧–೮–೦	ಮಾ. ಶಾ. ೮ನೆ ವರ್ಗಕ್ಕೆ ಪಠ್ಯ
ಭಾರತ ದೇಶದ ಸುಬೋಧ ಇತಿಹಾಸ-೩	ಶ್ರೀ. ಕುಲಕರ್ಣಿ ಮತ್ತು ವ್ಯಾಸ ಮತ್ತು ಸಾಲಿ ರಾಮಚಂದ್ರರಾವ	,,	೨–೮–೦	ಪ್ರಾ. ಶಾ. ೩ನೆಯ ವರ್ಗಕ್ಕೆ ಪಠ್ಯ
ಭಾರತ ದೇಶದ ಸುಬೋಧ ಇತಿಹಾಸ-೨	,,	,,	೨–೮–೦	ಪ್ರಾ. ಶಾ. ೬ ,, ,, ,,
ನವಭಾರತದ ಸಾಂಸ್ಕೃತಿಕ ಇತಿಹಾಸ	ಶ್ರೀ. ಚಿತಳೆ ಮತ್ತು ಲಕ್ಕುಂಡಿ	,,	೩–೦–೦	ಮಾ.ಶಾ.೧೦,೧೧ನೆ ವರ್ಗಕ್ಕೆ ,,
ಗಣಿತ—೬ನೆಯ ಇಯತ್ತೆಗೆ	ಶ್ರೀ. ಟಿ. ಬಿ. ಹರ್ಡೀಕರ	ಸ್ಟೂಡಂಟ್ಸ ಓನ್ ಬುಕ್ ಡಿಪೊ, ಧಾರವಾಡ	೧–೯–೦	ಪ್ರಾ. ಶಾ. ೬ನೆಯ ವರ್ಗಕ್ಕೆ ಪಠ್ಯ
ಭಾರತೀಯ ಇತಿಹಾಸ ಪ್ರಕಾಶ—೩	ಶ್ರೀ. ಆರ್. ಕೆ. ಲಕ್ಕುಂಡಿ	,,	೨–೨–೦	ಪ್ರಾ. ಶಾ. ೭ನೆಯ ,, ಪಠ್ಯ

1	2	3	4	5	6
೧೧.	ನೂತನ ಗಣಿತ—೪ನೆಯ ವರ್ಗಕ್ಕೆ	ಶ್ರೀ. ಕೆ. ಕೆ. ಗಲಗಲಿ	ಆಕಳವಾಡಿ ಬುಕ್‌ಡಿಪೊ, ಧಾರವಾಡ	೦–೧೪—೦ ಪ್ರಾ. ಶಾ. ೪ನೆಯ ವರ್ಗಕ್ಕೆ	ಪಠ್ಯ
೧೨.	ನೂತನ ಗಣಿತ—೫ನೆಯ ವರ್ಗಕ್ಕೆ	,,	,,	೧—೦—೦ ಪ್ರಾ. ಶಾ. ೫ನೆಯ ,,	ಪಠ್ಯ
೧೩.	ನೂತನ ಗಣಿತ—೬ನೇ ಇಯತ್ತೆಗೆ	,,	,,	೧—೬—೦ ಪ್ರಾ. ಶಾ. ೬ನೆಯ ,,	ಪಠ್ಯ
೧೪.	ನೂತನ ಗಣಿತ—೭ನೆಯ ಇಯತ್ತೆಗೆ	,,	,,	೧–೧೨—೦ ಪ್ರಾ. ಶಾ. ೭ನೆಯ ,,	ಪಠ್ಯ
೧೫.	ನಮ್ಮ ರಾಜ್ಯಘಟನೆ	,,	,,	— ಮಾ. ಶಾ. ೧೧ನೆಯ ,,	ಪಠ್ಯ
೧೬.	ಸಂಸ್ಕೃತಿ ಇತಿಹಾಸ	ಶ್ರೀ. ಎಸ್. ಎಮ್. ಹುಣಶ್ಯಾಳ	ರಾಮಾಶ್ರಯ ಬುಕ್‌ಡಿಪೊ, ಧಾರವಾಡ	೧–೧೪—೦ ಮಾ. ಶಾ. ೧೦ ,, ,,	ಪಠ್ಯ
೧೭.	ಇತಿಹಾಸ ಪರಿಚಯ	ಶ್ರೀ. ಎಸ್. ಆರ್. ಮೊಘಾಸಿ	,,	೧—೮—೦ ಪ್ರಾ. ಶಾ. ೭ನೆಯ ,,	ಪಠ್ಯ
೧೮.	ನಮ್ಮ ಭಾರತದ ಇತಿಹಾಸ (ಕಂಬಾಯಿನ್ಡ)	ಅನುಭವೀ ಶಿಕ್ಷಕರು	ಕನ್ನಡ ಸಾಹಿತ್ಯ ಪ್ರಕಾಶನ ಧಾರವಾಡ	೩—೪—೦ ಪ್ರಾ. ಶಾ. ೫ರಿಂದ ೭ನೆಯ ವರ್ಗಕ್ಕೆ	ಪಠ್ಯ
೧೯.	ನಮ್ಮ ಭಾರತದ ಇತಿಹಾಸ—ಭಾಗ ೧	,,	,,	೦–೧೪—೦ ಪ್ರಾ.ಶಾ. ೫ನೆಯ ವರ್ಗಕ್ಕೆ	ಪಠ್ಯ
೨೦.	ನಮ್ಮ ಭಾರತದ ಇತಿಹಾಸ—ಭಾಗ ೨	,,	,,	೧–೧೦—೦ ಪ್ರಾ. ಶಾ. ೬ ,, ,,	ಪಠ್ಯ
೨೧.	ನಮ್ಮ ಭಾರತದ ಇತಿಹಾಸ—ಭಾಗ ೩	,,	,,	೧–೧೨—೦ ಪ್ರಾ. ಶಾ. ೭ ,, ,,	ಪಠ್ಯ
೨೨.	ಗಣಿತ ಬೋಧೆ—೧	,,	,,	೧—೬—೦ ಪ್ರಾ. ಶಾ. ೫ ,, ,,	ಪಠ್ಯ
೨೩.	ಗಣಿತ ಬೋಧೆ—೨	,,	,,	೧–೧೨—೦ ಪ್ರಾ. ಶಾ. ೬ ,, ,,	ಪಠ್ಯ

ಮುಂಬಯಿ ಸರಕಾರದ ಕನ್ನಡ ಸ್ಕೂಲ್‌ಬುಕ್ ಕಮಿಟೀಯಿಂದ ಮಂಜೂರಾದ ಪುಸ್ತಕಗಳು

1	2	3	4	5	6
೨೪.	ಗಣಿತ ಬೋಧೆ—೩	ಅನುಭವಿ ಶಿಕ್ಷಕರು	,,	೨—೪—೦	ಪ್ರಾ. ಶಾ. ೭ನೆಯ ವರ್ಗಕ್ಕೆ ಪಠ್ಯ
೨೫.	ಗಣಿತ ಬೋಧೆ—೪ನೆಯ ವರ್ಷಕ್ಕೆ	,,	,,	೧—೦—೦	ಪ್ರಾ. ಶಾ. ೪ ,, ,, ಪಠ್ಯ
೨೬.	ನೂತನ ಸಾಮಾನ್ಯಜ್ಞಾನ	,,	,,	೦-೧೦—೦	ಪ್ರಾ. ಶಾ. ೪ ,, ,, ಪಠ್ಯ
೨೭.	ಸಚಿತ್ರ ವ್ಯಾಕರಣ, ವಿವಿಧ, ಸಾಹಿತ್ಯ-ಮಾಲೆ	ಶ್ರೀ. ವರದರಾಜ ಹುಯಿಲಗೋಳ	ರಾಮಾಶ್ರಯ ಬುಕ್ ಡಿಪೊ, ಧಾರವಾಡ	೦-೧೪—೦ ೧—೨—೦ ೧—೪—೦	ಪ್ರಾ. ಶಾ. ೫, ೬, ೭ನೆಯ ಇಯತ್ತೆಗಳಿಗೆ ಪಠ್ಯ
೨೮.	ಸಚಿತ್ರ ಸಾಮಾನ್ಯ ವಿಜ್ಞಾನ	ಶ್ರೀ. ಎಲ್. ಆಯ. ಆಕಳವಾಡಿ	,,	೧—೨—೦	ಪ್ರಾ. ಶಾ. ೭ನೆಯ ವರ್ಗಕ್ಕೆ ಪಠ್ಯ
೨೯.	ಮಕ್ಕಳ ಸಚಿತ್ರ ಗಣಿತ	ಪಂಡಿತ ಸಿ. ಎ. ಕವಲಿ	,,	೦-೧೨—೦	ಪ್ರಾ. ಶಾ. ೪ ,, ,, ಪಠ್ಯ
೩೦.	ಭೂಮಂಡಲ ಪರಿಚಯ—೪ (ಪರಿಶೋಧಿತ)	ಶ್ರೀ. ಎಲ್. ಆಯ್. ಆಕಳವಾಡಿ	,,	—	ಪ್ರಾ. ಶಾ. ೭ ,, ,, ಪಠ್ಯ
೩೧.	ಕರ್ನಾಟಕ ಇತಿಹಾಸ ಬೋಧಿನಿ (ಪರಿಶೋಧಿತ)	ಶ್ರೀ. ನಾರಾಯಣ ಶರ್ಮಾ	ಶ್ರೀ. ಎಸ್. ಎಸ್. ಕುಲಕರ್ಣಿ ಧಾರವಾಡ	೦-೧೪—೦	ಪ್ರಾ. ಶಾ. ೪ ,, ,, ಪಠ್ಯ
೩೨.	ನನ್ನ ತಾಯಿ	ಶ್ರೀ. ಶಿವರುದ್ರಪ್ಪ ಎಸ್. ಕುಲಕರ್ಣಿ	,,	೦—೬—೦	ಪ್ರಾ. ಶಾ. ೬ ,, ,, ಪಠ್ಯ
೩೩.	ನುಡಿಗಟ್ಟು (ಪರಿಶೋಧಿತ)	ಶ್ರೀ. ಡಿ. ಎನ್. ಮುಳಬಾಗಲ	,,	೧—೪—೦	ಪ್ರಾ. ಶಾ. ೫ರಿಂದ ೭ನೆಯ ವರ್ಗಗಳಿಗೆ ಮತ್ತು ಟ್ರೇ. ಕಾಲೇಜುಗಳಿಗೆ ಪಠ್ಯ
೩೪.	ಸಾಹಿತ್ಯವಿಹಾರ (ಭಾಗ ೧)	ಶಿಕ್ಷಣ ಪ್ರಚಾರ ಸಾಹಿತ್ಯ ಸಮಿತಿ	ಶಿಕ್ಷಣ ಪ್ರಚಾರ ಸಾಹಿತ್ಯ ಸಮಿತಿ, ವಿಜಾಪುರ	೧—೮—೦	ಮಾ. ಶಾ. ೮ನೆಯ ವರ್ಗಕ್ಕೆ ಪಠ್ಯ (ದೋಷಗಳನ್ನು ಸರಿಪಡಿಸಿದಲ್ಲಿ)
೩೫.	ಸಾಹಿತ್ಯ ವಿಹಾರ (ಭಾಗ ೨)	,,	,,	೧—೮—೦	ಮಾ. ಶಾ. ೯ನೆಯ ವರ್ಗಕ್ಕೆ ಪಠ್ಯ (ದೋಷಗಳನ್ನು ಸರಿಪಡಿಸಿದಲ್ಲಿ)
೩೬.	ಸಾಹಿತ್ಯ ವಿಹಾರ (ಭಾಗ ೩)	,,	,,	೨—೦—೦	ಮಾ.ಶಾ. ೧೦ನೆಯ ವರ್ಗಕ್ಕೆ ಪಠ್ಯ (ದೋಷಗಳನ್ನು ಸರಿಪಡಿಸಿದಲ್ಲಿ)
